

Scanned by CamScanner




Scanned by CamScanner

# 4ನೇ ತಾ. ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ

## • ಹಂಪಿ ಕನ್ನಡ ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ಡಾ। ಲಕ್ಕಪ್ಪಗೌಡ ಉದ್ಘಾಟನೆ •

- ಬಸವಕಲ್ಯಾಣ ತಾಲೂಕಿನ ಹುಲಸೂರಿನ ಗುರು ಬಸವೇಶ್ವರ ಸಂಸ್ಥಾನದಲ್ಲಿ ಮೂರು ದಿನಗಳ ಕಾಲ ನಡೆಯುತ್ತಿರುವ ತಾಲೂಕು ಸಮ್ಮೇಳನವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಎಚ್.ಜೆ ಲಕ್ಕಪ್ಪಗೌಡ್ ಚಾಲನೆ
- ಅನ್ಯ ಭ್ಾಷೆ ಸಂಸ್ಕೃತಿ ಪ್ರಭಾವದಿಂದಾಗಿ ಗಡಿ ಭಾಗದ ಜಿಲ್ಲೆಯಲ್ಲಿ ಕನ್ನಡ ಭಾಷೆ ಅವಸಾನ ಅಂಚಿನಲ್ಲಿದ್ದು ಈ ನಿಟ್ಟನಲ್ಲಿ ಕನ್ನಡ ಕೆಲಸಕ್ಕೆ ಜನ ಪ್ರತಿನಿಧಿಗಳು ಸಹಕಾರ ನೀಡಿದಲ್ಲಿ ಭಾಷೆ ಶಾಶ್ವತವಾಗಿಸುವ ಸಾಧನೆ ಪರಿಷತ್ ಮಾಡಲಿದೆ

ಕನ್ನಡಪ್ರಭ ವಾರ್ತೆ, ಬೀದರ್, ಜ.2
(ಶರಣ ಲದ್ದೆಯ ಸೋಮಣ್ಣ ವೇದಿಕೆ)

ಶರಣ ಸಂಸ್ಕೃತಿ ವೈಭವ ಮತ್ತು ವಚನ ಸಾಹಿತ್ಯದ ಮೇರುಗಿನ ನಡುವೆ 4ನೇ ತಾಲೂಕು ಕನ್ನಡ ತಾಲೂಕು ಸಾಹಿತ್ಯ ಸಮ್ಮೇಳನಕ್ಕೆ ಶನಿವಾರ ವಿದ್ಯುಕ್ತ ಚಾಲನೆ ನೀಡಲಾಯಿತು.

ಬಸವಕಲ್ಯಾಣ ತಾಲೂಕಿನ ಹುಲಸೂರಿನ ಗುರು ಬಸವೇಶ್ವರ ಸಂಸ್ಥಾನದಲ್ಲಿ ಮೂರು ದಿನಗಳ ಕಾಲ ನಡೆಯುತ್ತಿರುವ ತಾಲೂಕು ಸಮ್ಮೇಳನವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಎಚ್.ಜೆ ಲಕ್ಕಪ್ಪಗೌಡ್ ಚಾಲನೆ ನೀಡಿದರು.

ಪ್ರಸ್ತಾವಿಕವಾಗಿ ಮಾತನಾಡಿದ ಕಸಾಪ ಜಿಲ್ಲಾಧ್ಯಕ್ಷ ಪ್ರೊ. ಸಿದ್ರಾಮಪ್ಪ ಮಾಸಿಮಾಡೆ ಮಾತನಾಡಿ, ಮಹಾರಾಷ್ಟ್ರ ಮತ್ತು ಆಂಧ್ರದ ಗಡಿಯಲ್ಲಿರುವ ಅನ್ಯ ಭಾಷಿಕರನ್ನು ಕನ್ನಡ ಭಾಷೆಯ ಮುಖ್ಯ ವಾಹಿನಿಗೆ ತರುವಲ್ಲಿ ಪರಿಷತ್ ಕಾರ್ಯೋನ್ಮುಖವಾಗಲಿದೆ ಎಂದರು.

ರಾಜ್ಯ ಮಟ್ಟದ ಸಮ್ಮೇಳಗಳಿಗೆ ಸೀಮಿತವಾಗಿದ್ದ ಕಸಾಪ ಇದೀಗ ಜಿಲ್ಲೆಯ ಪ್ರತಿ ಗ್ರಾಮ ಮಟ್ಟದಲ್ಲಿ ಸಮ್ಮೇಳನಗಳು ಮಾಡುವ ಮೂಲಕ ಬುನಾದಿಯಿಂದಲೇ ಕನ್ನಡ ನಾಡು ನುಡಿ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡಲಾಗುತ್ತಿದೆ ಎಂದು ಹೇಳಿದರು.

ಅನ್ಯ ಭಾಷೆ ಸಂಸ್ಕೃತಿ ಪ್ರಭಾವದಿಂದಾಗಿ ಗಡಿ ಭಾಗದ ಜಿಲ್ಲೆಯಲ್ಲಿ ಕನ್ನಡ ಭಾಷೆ ಅವಸಾನ ಅಂಚಿನಲ್ಲಿದ್ದು ಈ ನಿಟ್ಟಿನಲ್ಲಿ ಕನ್ನಡ ಕೆಲಸಕ್ಕೆ ಜನ ಪ್ರತಿನಿಧಿಗಳು ಸಹಕಾರ ನೀಡಿದಲ್ಲಿ ಭಾಷೆ ಶಾಶ್ವತವಾಗಿಸುವ ಸಾಧನೆ ಪರಿಷತ್ ಮಾಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜಿ.ಪಂ ಉಪಾಧ್ಯಕ್ಷೆ ಮೀನಾಕ್ಷಿ ಸಂಗ್ರಾಮ್ ಮಾತನಾಡಿ, ಗಡಿ ಭಾಗದಲ್ಲಿ ಕನ್ನಡ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಸತತವಾಗಿ ಸಮ್ಮೇಳನಗಳು ಹಮ್ಮಿಕೊಳ್ಳುವುದು ಅಗತ್ಯವಾಗಿದೆ.

ಸಮ್ಮೇಳನ ನಿಮಿತ್ತ ಮೂರು ದಿನಗಳ ಕಾಲ ನಡೆಯಲಿರುವ ಚಿಂತನ ಗೋಷ್ಠಿಗಳು ಈ ಭಾಗದ ಸರ್ವಾಂಗೀಣ ಅಭಿವೃದ್ಧಿಯ ನಿರೀಕ್ಷೆ ಕಂಡು ಬರುತ್ತಿದೆ ಎಂದು ಹೇಳಿದರು.

ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕವಾಗಿ ಕನ್ನಡ ನಾಡು ತನ್ನ ವೈಭವವನ್ನು ಸಧೃಢವಾಗುವಲ್ಲಿ ಸಾಹಿತ್ಯ ಪ್ರಮುಖ ಪಾತ್ರ ವಹಿಸಿದೆ. ಹೀಗಾಗಿ ನಾಡು ನುಡಿ ವಿಚಾರ ಬಂದಾಗ ಪರಿಷತ್‌ಗೆ ಬಿಟ್ಟದ್ದು ಎನ್ನದಕ್ಕಿಂತ ಸಮರೋಪಾದಿಯಲ್ಲಿ ಹೋರಾಟಕ್ಕೆ ಸಿದ್ಧರಾಗುವುದು ಪ್ರತಿಯೊಬ್ಬ ಕನ್ನಡಿಗರ ಆದ್ಯ ಕರ್ತವ್ಯ ಎಂದು ತಿಳಿಸಿದರು.

ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾದ ಶಾಸಕ ಬಸವರಾಜ ಪಾಟೀಲ್ ಅಷ್ಟೂರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನದ ಸರ್ವಾಧ್ಯಕ್ಷ ಡಾ. ಜಯದೇವಿ ಗಾಯಕವಾಡ ಮಾತನಾಡಿದರು. ಶ್ರೀಮಠದ ಪೂಜ್ಯ ಶಿವಯೋಗಿಶ್ವರ ಮಹಾಸ್ವಾಮಿಗಳು ಸಾನಿಧ್ಯ ವಹಿಸಿದ್ದರು. ಹಾರಕೂಡ ಮಠದ ಪೂಜ್ಯ ಚನ್ನವೀರ ಶಿವಾಚಾರ್ಯರು ನೇತೃತ್ವ ವಹಿಸಿದ್ದರು.

ಗುಲಬರ್ಗಾದ ಪೂಜ್ಯ ಕಬೀರಸಿದ್ಧ ಬಸವ ಸ್ವಾಮಿಜೀ, ಮಂಠಾಳ ಮಠದ ಪೂಜ್ಯ ಸಿದ್ದಲಿಂಗ ಸ್ವಾಮಿಜೀ, ಮುಗಳಿ ಮಠದ ಅಭಿನವ ಕುಮಾರ ದೇವರು, ತ್ರಿಪುರಾಂತ ಮಠದ ಪೂಜ್ಯ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಅನುಭವ ಮಂಟಪದ ವಿ. ಸಿದ್ದರಾಮಣ್ಣ ಶರಣರು, ಪರಿಷತ್ ಕಾರ್ಯದರ್ಶಿ ಶಿವಕುಮಾರ ಕಟ್ಟೆ, ಮುಖಂಡರಾದ ಅಂಕುಶ ಢೋಲೆ, ಸೋಮನಾಥ ಮುದ್ದಾ, ಹುಮನಾಬಾದ್ ತಾಲೂಕು ಅಧ್ಯಕ್ಷ ವಿರಂತರೆಡ್ಡಿ ಜಂಪಾ, ನಿಕಟ ಪೂರ್ವ ಅಧ್ಯಕ್ಷ ಸಿದ್ದರಾಮಯ್ಯ ಹಿರೇಮಠ ಹಾಗೂ ತಾಲೂಕು ಅಧ್ಯಕ್ಷ ಪ್ರಭುಲಿಂಗ ಟಂಕಸಾಲಿಮಠ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.




ಬಸವಕಲ್ಯಾಣ ತಾಲೂಕಿನ ಹುಲಸೂರಿನಲ್ಲಿ ಶನಿವಾರ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನವನ್ನು ವಿಶ್ರಾಂತ ಕುಲಪತಿ ಡಾ. ಲಕ್ಕಪ್ಪ ಗೌಡ ಉದ್ಘಾಟಿಸಿದರು.



ಬಸವಕಲ್ಯಾಣ ತಾಲೂಕಿನ ಹುಲಸೂರಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಿಮಿತ್ತ ನಡೆದ ಮೆರವಣಿಗೆಯಲ್ಲಿ ಶರಣರ ವೇಷಧಾರಿ ಮಕ್ಕಳು ಗಮನ ಸೆಳೆದರು.

## ಸಾಹಿತ್ಯ ಸಮ್ಮೇಳನದಲ್ಲಿ ಭಾಷಾ ಸಾಮರಸ್ಯ

(ಶರಣ ಲದ್ದೆಯ ಸೋಮಣ್ಣ ವೇದಿಕೆ)

ಮಹಾರಾಷ್ಟ್ರ ಗಡಿಯಿಂದ 10 ಕಿ.ಮಿ ಅಂತರದಲ್ಲಿರುವ ಹುಲಸೂರಿನಲ್ಲಿ ಹಮ್ಮಿಕೊಂಡಿರುವ ತಾಲೂಕು ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನ ಕನ್ನಡ ಹಾಗೂ ಮರಾಠಿ ಭಾಷಿಕರಲ್ಲಿ ಭಾಷಾ ಸಾಮರಸ್ಯ ವೃದ್ಧಿಸುವಲ್ಲಿ ಪೂರಕವಾಗಿದಂತಾಗಿದೆ.

ಗಡಿಯಲ್ಲಿ ಭಾವೈಕ್ಯತೆ ಕಾಪಾಡುವಲ್ಲಿ ಯಶಸ್ವಿಯಾಗಿರುವುದಕ್ಕೆ ಶನಿವಾರ ಜರುಗಿದ ಸಮ್ಮೇಳನದಲ್ಲಿ ಬಹುಸಂಖ್ಯಾತ ಮರಾಠಿ ಭಾಷಿಕರು ಪಾಲ್ಗೊಂಡಿರುವುದು ಸಾಕ್ಷಿಯಾಯಿತು.

ಸಾಹಿತ್ಯ ಸಮ್ಮೇಳನ ನಿಮಿತ್ತ ಗ್ರಾಮದಲ್ಲಿ ಅಲ್ಲಲ್ಲಿ ಹಾಕಲಾದ ಕಟೌಟ್ ಹಾಗೂ ಬ್ಯಾನರ್‌ಗಳ ಮೇಲೆ ಕನ್ನಡ ಭಾಷೆಯಲ್ಲಿ ಹಾಗೂ ತೆಳಗೆ ಮರಾಠಿ ಭಾಷೆಯಲ್ಲಿ ಶುಭಾಶಯ ಕೋರುವ ಕನ್ನಡ ಮರಾಠಿ ಭಾಷಿಕರ ಅಪ್ಪಟ ಕನ್ನಡ ಪ್ರೇಮ ಸಮ್ಮೇಳನದಲ್ಲಿ ವಿಶೇಷವಾಗಿ ಕಂಡು ಬಂತು.

ಭಾಷೆಗಿಂತ ಭಾವ ಮುಖ್ಯ. ಕನ್ನಡ ಮಾತಾಡೊಲ್ಲು ಬರೋದಿದ್ದರು ಕನ್ನಡದ ಬಗ್ಗೆ ಅಪಾರ ಗೌರವವಿದೆ ಹೀಗಾಗಿ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪಾಲ್ಗೋಂಡಿದ್ದೆವೆ ಎಂದು ಕನ್ನಡದ ಮರಾಠಿ ಭಾಷಿಕ ಸಂಜೀವಕುಮಾರ ಒಳಸಂಗೆ ಅಭಿಪ್ರಾಯಪಟ್ಟರು. ಒಟ್ಟಿನಲ್ಲಿ ಮೂರು ದಿನಗಳ ಕಾಲ ನಡೆಯುತ್ತಿರುವ ಕನ್ನಡ ಸಾಹಿತ್ಯ ಸಮ್ಮೇಳನ ಈ ಭಾಗದಲ್ಲಿ ಮರಾಠಿ ಭಾಷಿಕರಲ್ಲಿಯೂ ಸಂತಸ ಮೂಡಿಸಿದೆ.

3-1-2010 ಕನ್ನಡ ಪ್ರಭಾ ದಿನಪತ್ರಿಕೆ

Scanned by CamScanner

# ಗಾಯನದ ಮೂಲಕ ಶ್ರದ್ಧಾಂಜಲಿ ಆಚರಣೆ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಈಚೆಗೆ ನಿಧನರಾದ ರಾಜ್ಯ ಸರ್ಕಾರದ ಕರ್ನಾಟಕ ಕಲಾಶ್ರೀ ಪ್ರಶಸ್ತಿ ಪಡೆದ ಹಿರಿಯ ಸಂಗೀತಗಾರ ಶೇಷಪ್ಪ ಗವಾಯಿ ಗಬ್ಬೂರ್ ಅವರ ಶ್ರದ್ಧಾಂಜಲಿ ಕಾರ್ಯಕ್ರಮ ಬುಧವಾರ ಸಂಜೆ ಇಲ್ಲಿನ ತ್ರಿಪುರಾಂತ ಕಲ್ಯಾಣ ಮಂಟಪದಲ್ಲಿ ನಡೆಯಿತು.

ಗುರು ಕುಮಾರೇಶ್ವರ ಸಂಗೀತ ವಿದ್ಯಾಲಯ, ಪಂ.ಪಂಚಾಕ್ಷರಿ ಸ್ಮರಣೋತ್ಸವ ಸಮಿತಿ ಮತ್ತು ಧರಿನಾಡು ಕನ್ನಡ ಸಂಘದ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಗವಾಯಿಗಳ ಶಿಷ್ಯರು, ಹಿರಿಯ ಸಂಗೀತಗಾರರು ಗಾಯನ ಪ್ರಸ್ತುತಪಡಿಸಿ ಶ್ರದ್ಧಾಂಜಲಿ ಅರ್ಪಿಸಿದರು.

ಗುರುಶಾಂತಯ್ಯ ಸ್ಥಾವರಮಠ ಗುಲ್ಬರ್ಗ, ಈಶ್ವರಯ್ಯ ಪಂಚಾಳ ಬೀದರ, ಡಾ.ಮಾರುತಿ ಪೂಜಾರಿ, ರಾಜಶೇಖರ ಶೀಲವಂತ, ನರೇಂದ್ರ ಜಾಧವ, ತ್ರಿವೇಣಿ ಮಠಪತಿ, ಸುನಿತಾ ಶೀಲವಂತ, ರಂಜನಾ ಭುಶೆಟ್ಟಿ, ಅಭಿಷೇಕ, ಸ್ಫೂರ್ತಿ, ಪವಿತ್ರಾ, ಮೇನಕಾ ಹಾಡಿದರು. ಜನಾರ್ದನ ವಾಘ್ಮಾರೆ, ರಾಮಚಂದ್ರ ಕಲ್ಲಹಿಪ್ಪರ್ಗಾ ತಬಲಾ ಸಾಥ ನೀಡಿದರು.

ಹುಲಸೂರ ಶಿವಾನಂದ ಸ್ವಾಮೀಜಿ ಉದ್ಘಾಟಿಸಿ ಮಾತನಾಡಿ ,ಶೇಷಪ್ಪ ಗಬ್ಬೂರ್ ಉತ್ತಮ ಸಂಗೀತಗಾರ ಅಷ್ಟೇ ಅಲ್ಲ ಸ್ನೇಹಜೀವಿಯೂ ಆಗಿದ್ದರು. ಅವರ ಹೆಸರಲ್ಲಿ ಇಲ್ಲಿ ಸ್ಮಾರಕ ಇಲ್ಲವೆ ಸಂಗೀತ ಶಾಲೆ ಆರಂಭಿಸಬೇಕು ಎಂದರು.

ತ್ರಿಪುರಾಂತ ರುದ್ರಮುನಿ ಶಿವಾಚಾರ್ಯರು, ಸಾಯಗಾಂವ ಶಿವಾನಂದ ದೇವರು, ಡಾ.ಗವಿಸಿದ್ಧಪ್ಪ ಪಾಟೀಲ, ಡಾ.ಎಸ್.ಬಿ.ಮಹಾಜನ, ಡಾ.ಬಲರಾಂ ಹುಡೆ ಮಾತನಾಡಿದರು. ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶರಣಬಸವ ಬಿರಾದಾರ, ಡಾ.ಮಾರುತಿ ಪೂಜಾರಿ ಉಪಸ್ಥಿತರಿದ್ದರು. ಶ್ರೀಶೈಲ್ ಹುಡೇದ್ ನಿರೂಪಿಸಿದರು. ಮಲ್ಲಿಕಾರ್ಜುನ ಮಠಪತಿ ವಂದಿಸಿದರು.

ದಿನಾಂಕ 23-12-2011
ಶುಕ್ರವಾರ ಪ್ರಜಾವಾಣಿ

---

ಶ್ರೀನೊಳಬಲ್ಲ — 01-10-2010

# ಬ.ಕ. ಟ್ರಸ್ಟ್ ವತಿಯಿಂದ ಗುಡ್ಡದ ಮಠ ಅಭಿವೃದ್ಧಿ

ಬಸವಕಲ್ಯಾಣ,ಸೆ,30–ತ್ರಿಪೂರಾಂತ ಕೆರೆಯ ಪತಿ ್ರವನದ ಪರಿಸರದಲ್ಲಿರುವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಮಠವು ಅಭಿವೃದ್ಧಿ ಪಡಿಸಲು ಬಿಕೆಡಿಬಿ ವ್ಯಾಪ್ತಿಗೆ ತೆಗೆದು ಕೋಳುವುದಾಗಿ ಆಯುಕ್ತರಾದ ಕಾಶಿನಾಥ ಗೋಖಲೆ ನುಡಿದರು, ಅವರು ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು,ಘನಲಿಂಗ ರುದ್ರಮುನಿ ಶಿವಾಚಾರ್ಯ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಹುಟ್ಟು ಹಬ್ಬದ ಬೆಳ್ಳಿ ಹಬ್ಬ,ಹಾಗೂ 5ನೇ ವರ್ದಂತಿ ಮಹೋತ್ಸವ ಉಧ್ಘಾಟಿಸಿ ಮಾತನಾಡಿ ಶರಣರ ಸ್ಮಾರಕಗಳ ಅಭಿವೃದ್ಧಿ ಕಾರ್ಯ ಭರದಿಂದ ಸಾಗಿದ್ದು

ಟ್ರಸ್ಟ್ ನಿರ್ದೇಶಕರು ಸರಕಾರಕ್ಕೆ ವಿನಂತಿಸಿದರೆ ಶ್ರೀಮಠವು ಪ್ರಾಧಿಕಾರದಿಂದ ಅಭಿವೃಧಿ ಪಡಿಸಲಾಗುವುದೆಂದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರಭುಲಿಂಗಯ್ಯಾ ಟಂಕಸಾಲಿಮಠ ಶ್ರೀಗಳ ಆಧ್ಯಾತ್ಮೀಕ ಚಿಂತನೆ ಸಾಮಾಜಿಕ ಕಾಳಜಿ ಉಳ್ಳವರಾಗಿದ್ದು,ಮಠದ ಸದ್ಭಕ್ತರ ಅಭಿವೃದ್ಧಿಯಲ್ಲೆ




ತ್ರಿಪೂರಾಂತದಮರಿದೇವರ ಗುಡ್ಡದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 25 ಹುಟ್ಟು ಹಬ್ಬ,5ನೇ ವರ್ದಂತಿ ಮಹೋತ್ಸವ ಉಧ್ಘಾಟಿಸಿ ಮಾತನಾಡುತಿರುವ ಬಿಕೆಡಿಬಿ ಆಯುಕ್ತರಾದ ಕಾಶಿನಾಥ ಗೋಖಲೆ,ವೇದಿಕೆಯಲ್ಲಿ ಶರಣಪ್ಪಬಿರಾದಾರ,ಮಠದಶ್ರೀಗಳು,ಹಿರನಾಗಾವನ ಜಯಶಾಂತಲಿಗ ಶ್ರೀಗಳು,ಮಲ್ಲಯ್ಯಾ ಹಿರೇಮಠ,ಟಂಕಸಾಲಿಮಠ ಉಪಸ್ಥಿತರಿದ್ದರು.

ಶ್ರೀಗಳು ಆನಂದ ಕಂಡುಕೋಳ್ಳವರಾಗಿದ್ದಾರೆಂದರು. ಬ.ದೇ.ಪಂಚಕಮಿಟಿಂಯ ನಿರ್ದೇಶಕರಾದ ಮಲ್ಲಯ್ಯಾ ಸ್ವಾಮಿ ಮಾತನಾಡಿ ಮಠದ ಅಭಿವೃಧಿಗಾಗಿ ಸದ್ಭಕ್ತರೆಲ್ಲಾ ಕೈಜೋಡಿಸಬೇಕು,ಶ್ರೀಗಳ ಅಖಂಡ ಆಶಿರ್ವಾದ ನಮ್ಮ ಮೇಲಿರಲಿ ಎಂದರು.

ಡಾ.ಬಸವರಾಜಸ್ವಾಮಿ ಸ್ವಾಗತಿಸಿ ಪ್ರಾಸ್ತಾವಿಕ ವಾಗಿ ಮಾತನಾಡಿದರು. ವೇದಿಕೆಯಲ್ಲಿ ಶರಣಪ್ಪ ಬಿರಾದಾರ, ಡಾ.ಜಗದೀಶ ಪೂಜಾರಿ, ಸಂಜುಕುಮಾರ ಸೂಗರೆ,ಉಪಸ್ಥಿತರಿದ್ದರು. ಮಲ್ಲಿಕಾರ್ಜುನ ರಾಜೋಳೆ, ಮಡಿವಾಳಪ್ಪಾ ಹುಣಸಗೇರಾ, ಜಗನ್ನಾಥ ಬಿರಾದಾರ, ಗೋವಿಂದ ಚಾಮಲ್ಲೇ,ಸಂಗಮೇಶ ಮುಚಳಂಬೆ ಪರಿವಾರದವರು ಪಾಲ್ಗೊಂಡಿದ್ದರು.

ನಿರೂಪಣೆ ರಮೇಶ ರಾಜೋಳೆ ನಡೆಸಿ ಕೋಟ್ಟರು, ಶ್ರೀಮಠ, ಹಾಗೂ ಬಾಬು ಬಿರಾದಾರ ಅವರಿಂದ ಪ್ರಸಾದದ ವ್ಯೆವಸ್ಥೆ ಮಾಡಲಾಗಿತ್ತು.ಇದೇ ಸಂದರ್ಭದಲ್ಲಿ ಬೇಲುರಿನ ನಾಗಲಿಂಗೇಶ್ವರ ಭಜನಾಮಂಡಳಿ ವತಿಯಿಂದ ಭಜನೆ ನೇರೆದ ಜನಸಥೋಮಕ್ಕೆ ಭಕ್ತಿ ಸಾಗರದಲ್ಲಿ ಮುಳುಗಿಸಿದ್ದರು.

ದಿನಾಂಕ 1-10-2010 ಶ್ರೀನೊಳಬಲ್ಲ
ದಿನಪತ್ರಿಕೆ

Scanned by CamScanner

# ಬೀದರ್‌ನಲ್ಲಿ ಜಾನಪದ ವಿವಿ ಪ್ರಾದೇಶಿಕ ಕೇಂದ್ರ: ಹೆಬ್ಬಾಳೆ

## ತಾಲೂಕು ಜಾನಪದ ಪರಿಷತ್ತು ಘಟಕ ಉದ್ಘಾಟನೆ

ಬಸವಕಲ್ಯಾಣ: ಜಿಲ್ಲೆಯಲ್ಲಿ ಜಾನಪದ ವಿಶ್ವವಿದ್ಯಾಲಯದ ಪ್ರಾದೇಶಿಕ ಅಧ್ಯಯನ ಕೇಂದ್ರ ಸ್ಥಾಪನೆಗೆ ಜಾನಪದ ಅಕಾಡೆಮಿ ಸೇರಿದಂತೆ ಸರ್ಕಾರದ ಹಿರಿಯ ಅಧಿಕಾರಿಗಳು ಹಸಿರು ನಿಶಾನೆ ನೀಡಿದ್ದಾರೆ ಎಂದು

ಜಾನಪದ ಅಕಾಡೆಮಿ ಸದಸ್ಯ ಸದಸ್ಯ ಡಾ. ಜಗನ್ನಾಥ ಹೆಬ್ಬಾಳೆ ತಿಳಿಸಿದ್ದಾರೆ. ಬಸವಕಲ್ಯಾಣದಲ್ಲಿ ತಾಲೂಕು ಜಾನಪದ ಪರಿಷತ್ತು ಘಟಕ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿಶ್ವವಿದ್ಯಾಲಯದಿಂದ ಜನಸಾಮಾನ್ಯರು ಆರ್ಥಿಕ ಸ್ಥಿತಿಗತಿಯಿಂದ ಸಬಲರಾಗಿ, ಮೂಲ ಜಾನಪದ ಕಲಾವಿದರು ಪ್ರಮುಖ ಪಾತ್ರಗಳನ್ನು ವಹಿಸಲಿದ್ದಾರೆ ಎಂದು ಹೇಳಿದರು.

ವಿಶ್ವ ವಿದ್ಯಾಲಯದ ಆಧೀನದಲ್ಲಿ ಮೂಡಣ, ಪಡುವಣ, ತೆಂಕಣ, ಪಡಗಣ ಎಂಬ ನಾಲ್ಕು ಪ್ರಾದೇಶಿಕ ಅಧ್ಯಯನ ಕೇಂದ್ರಗಳು ಸ್ಥಾಪಿತವಾಗಲಿದ್ದು ಈ ಪೈಕಿ ಬೀದರ್‌ನಲ್ಲಿ ಕೂಡ ಒಂದು ಸ್ಥಾಪನೆಯಾಗಲಿದೆ ಎಂದರು.

**₹ 50ಲಕ್ಷ ಸಹಾಯಧನ:** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಈಗಾಗಲೇ ಪರಿಷತ್ತಿಗಾಗಿ ಧನ ಸಹಾಯ ಕೇಳಲಾಗಿದ್ದು, ಇದಕ್ಕಾಗಿ ₹ 50ಲಕ್ಷ ನೀಡುವುದಾಗಿ ಘೋಷಿಸಿದ್ದಾರೆ. ಈ ಪೈಕಿ ಈಗಾಗಲೇ ₹ 25 ಲಕ್ಷ ಮಂಜೂರಿಯಾಗಿದೆ. ಇದರೊಟ್ಟಿಗೆ ಸರ್ಕಾರದಿಂದ ₹ 1ಕೋಟಿ ನೀಡುವ ಭರವಸೆಯನ್ನು ಮುಖ್ಯಮಂತ್ರಿಗಳು ನೀಡಿದ್ದಾರೆ ಎಂದು ವಿವರಿಸಿದರು. ಕಣ್ಮರೆಯಾಗಿ ಹೋಗುತ್ತಿರುವ ಜಾನಪದ ಸಾಹಿತ್ಯ ಉಳಿಸಿಕೊಳ್ಳಲು ರಾಯಭಾರಿಯಾಗಿ ಕಾರ್ಯನಿರ್ವಹಿಸುವ ಸಂಕಲ್ಪವಿದೆ. ಜಾನಪದ ಸಾಹಿತ್ಯ ಪರಿಷತ್ ಅಡಿಯಲ್ಲಿ ಈ ಭಾಗದ ಕಲಾವಿದರನ್ನು ಗುರುತಿಸಿ ಮುಖ್ಯ ವೇದಿ



ಜಾನಪದ ಅಕಾಡೆಮಿ ಸದಸ್ಯ ಡಾ. ಜಗನ್ನಾಥ ಹೆಬ್ಬಾಳೆ ಮಾತನಾಡಿದರು.

ಕೆಗೆ ತರುವದಾಗಿದೆ. ಜಾನಪದ ವಿದ್ವಾಂಸ ನಾಗೇಗೌಡರು ಹುಟ್ಟು ಹಾಕಿರುವ ಪರಿಷತ್ತು ಈಗ ಬೃಹತ್ತಾಗಿ ಬೆಳೆಯುತ್ತಿದೆ. ಜಾನಪದ ಸಾಹಿತ್ಯ ಪರಿಷತ್ತು ಗ್ರಾಮ ಮಟ್ಟದವರೆಗೂ ಕೊಂಡೊಯ್ಯುವ ಉದ್ದೇಶ ಹೊಂದಲಾಗಿದೆ ಎಂದರು. ಬಿಕೆಡಿಬಿ ಆಯುಕ್ತ ಕಾಶಿನಾಥ ಗೋಖಲೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಜಾನಪದ ಕಲಾವಿದರು ಇರುವತನಕ ಕಲೆಯ ಸಂಸ್ಕೃತಿ ಶಾಶ್ವತವಾಗಿ ಉಳಿಯುತ್ತದೆ. ಜಾನಪದದಲ್ಲಿ ಇರುವ ಇನ್ನಷ್ಟು ಶ್ರೀಮಂತಿಕೆಯನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕು ಎಂದು ಸಲಹೆ ನೀಡಿದರು.

**ಜೀವಂತಿಕೆ:** ಡಾ. ಎಸ್.ಬಿ ಮಹಾಜನ ಮಾತನಾಡಿ, ಜಾನಪದ ಸಾಹಿತ್ಯ ಎಲ್ಲಾ ಸಾಹಿತ್ಯಕ್ಕೂ ತಾಯಿ ಬೇರಾಗಿದೆ. ಜಾನಪದ ಕಲೆ ಸಾಮಾನ್ಯ ಜನರಿಂದ ಹುಟ್ಟಿಕೊಂಡಿದ್ದು, ಗ್ರಾಮೀಣ ಪ್ರದೇಶದಲ್ಲಿ ಮಾತ್ರ ಇಂದಿಗೂ ಜೀವಂತಿಕೆಯನ್ನು ಕಾಣುತ್ತೇವೆ. ಜಾನಪದ ಎಂಬುದು ಒಂದು ಕೋಮಿಗೆ, ಪಂಗಡಕ್ಕೆ ಸೀಮಿತವಾದುದ್ದಲ್ಲ. ಇದು ಪ್ರತಿಯೊಬ್ಬರ ದೈನಂದಿನ ಜೀವನದಲ್ಲಿ ಹಾಸು ಹೊಕ್ಕಾಗಿದೆ ಎಂದು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಶಿವರಾಚಪ್ಪ ವಾಲಿ, ಎಸ್.ಬಿ ಬಿರಾದಾರ ಮಾತನಾಡಿದರು. ತ್ರಿಪುರಾಂತದ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ ಮತ್ತು ಚನ್ನಮಲ್ಲಿಕಾರ್ಜುನ ಸ್ವಾಮಿ ನೇತೃತ್ವ ವಹಿಸಿದ್ದರು.

ಜಾನಪದ ಕಲಾವಿದರಾದ ಚಂಪಾಬಾಯಿ ಪಾಂಚಾಳ, ದ್ರುಪದಬಾಯಿ ಸಾಯಿಬಣ್ಣ ಜಾನಪದ ಹಾಡುಗಳನ್ನು ಪ್ರಸ್ತುತಪಡಿಸಿದರು. ಪ್ರೊ. ವೆಂಕಣ್ಣ ಡೊಣ್ಣೆಗೌಡರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಂತಲಿಂಗ ಮಠಪತಿ ಸ್ವಾಗತಿಸಿದರೆ ಸೂರ್ಯಕಾಂತ ಶೀಲವಂತ ನಿರೂಪಿಸಿ ಬಕ್ಕಯ್ಯಾ ಸ್ವಾಮಿ ವಂದಿಸಿದರು.

ದಿನಾಂಕ 8-3-2011 ಮಂಗಳವಾರ ಸಂಯುಕ್ತ ಕರ್ನಾಟಕ

ಪ್ರಜಾವಾಣಿ

ಶುಕ್ರವಾರ

23ನೇ ಡಿಸೆಂಬರ್ 2011

2 G*



## ಸಂಗೀತ ಕಾರ್ಯಕ್ರಮ

ಬಸವಕಲ್ಯಾಣದಲ್ಲಿ ಬುಧವಾರ ಸಂಜೆ ನಡೆದ ಸಂಗೀತಗಾರ ದಿ.ಶೇಷಪ್ಪ ಗಬ್ಬೂರ್ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಬಾಲಕ ಅಭಿಷೇಕ ಹಾಡಿದನು. ಸಂಗೀತಗಾರರಾದ ರಾಜಶೇಖರ ಶೀಲವಂತ, ನರೇಂದ್ರ ಜಾಧವ, ಹುಲಸೂರ ಶಿವಾನಂದ ಸ್ವಾಮಿ, ತ್ರಿಪುರಾಂತ ರುದ್ರಮುನಿ ಶಿವಾಚಾರ್ಯರು, ಡಾ.ಗವಿಸಿದ್ಧಪ್ಪ ಪಾಟೀಲ ಇದ್ದರು

Scanned by CamScanner

14-5-09

# ಬಟಗೇರಾ ಶ್ರೀ ಮಹಾಲಕ್ಷ್ಮಿ ಜಾತ್ರಾ ಮಹೋ





ಬಸವಕಲ್ಯಾಣ ಮೇ - 13 ಇಂದು ತಾಲೂಕಿನ ಬಟಗೇರಾ ಗ್ರಾಮದ ಶ್ರೀ ಮಹಾಲಕ್ಷ್ಮಿ ಜಾತ್ರಾ ಮಹೋತ್ಸವಕ್ಕೆ.

ಶ್ರೀ ಶ್ರೀ ಶ್ರೀ ಜಗದ್ಗುರು ಡಾ|| ಚಂದ್ರಶೇಖರ ಶಿವಚಾರ್ಯ ಕಾಶಿ, ವಿದ್ಯುಕ್ತಾವಾಗಿ ಜ ್ಯೋ ತಿ ಬೆಳಗಿಸುವುದರಂದಿಗೆ ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಿದರು ಇದಕ್ಕುಮುನ್ನಾ ಗ್ರಾಮದಲ್ಲಿ ಸಾವಿರಾರೂ ಗ್ರಾಮದ ಭಕ್ತರು ಭಜನೆ ಮೂಲಕ ಮತ್ತು ನೂರಾರು ಮಹಿಳೆಯರು ಸೇರಿ ಕುಂಬ ಕಳಸ ಹೊತ್ತಿಕೊಂಡು ಸುರಿವ ಬಿಸಿಲನ್ನು ಲೆಕ್ಕಿಸದೆ ಜಗದ್ಗುರು ಅವರ ಅಡ್ಡ ಪಲಕ್ಕಿ ಮೇರವಣಿಗೆ ನಡೆಸಿದರು.

ನಂತರ ಶಾಲೆ ಮೈದಾನದಲ್ಲಿ ಅಯೋಜಿಸಲಗಿದ್ದ ವೇದಿಕೆ ಮೇಲೆ ಶ್ರೀಗಳು ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮದ ಪ್ರಾರ್ಥನಾ ಗೀತೆ ಎನ್ನ ಗುರುಲಿಂಗಯ್ಯ ಸ್ವಾಮಿ ನಡೆಸಿಕೊಟ್ಟರು,

ಡಾ|| ರಾಜಶೇಖರ ಸ್ವಾಮಿ. ಗೋರ್ಟಾ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಬಟಗೇರಾ ಗ್ರಾಮಸ್ತರು ಬಹಳ ಪೂಣ್ಯವಂತರು ಎಕೆ ಅಂದರೆ ಯಾವುದೆ ಜಗದ್ಗುರುಗಳು ಅವರ ಪೀಠಕ್ಕೆ ಹೋಗಿ ಅಮಂತ್ರಣ ನೀಡಿದರು ಅವರು ಇಂತಹ ಕಾರ್ಯಕ್ರಮಕ್ಕೆ ಬರುವದು ತುಂಬ ಕಷ್ಟ ಅದರೆ ಕಾಶಿ ಜಗದ್ಗುರುಗಳು ಕೇವಲ ಮೂಬಾಯಿಲ (ದೂರವಾಣಿ) ಫೋನಿನಲ್ಲಿ ಸಂಪರ್ಕಿಸಿ ಅಹ್ವಾನಿಸಿದಾಗ ಗ್ರಾಮಕ್ಕೆ ಬಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ.

ಇಂತಹ ಗುರುಗಳು ನಮಗೆ ಸಿಗುವದು ತುಂಬವಿರಳ ಅದರೆ ಈ ಭಾಗದಲ್ಲಿ ಯಾವುದೇ ಪೀಠದ ಜಗದ್ಗುರುಗಳು ಬಂದಾಗ ಇಲ್ಲಿಯ ಎಲ್ಲ ಸ್ಥಳಿಯ ಶಿವ್ ಚಾಂಬ್ರ್ಯರ್ಂ ಉಪಿಸ್ಥಿತವಿರುವದು ಸದಾ ಚಾರವಿದೆ.

ಆದರೆ ಇಲ್ಲಿ ಇಬ್ಬರು (ಪ್ಂಡಿತಾರಾಧ್ ಶಿವಚಾರ್ಯರು ಹಳ್ಳಿಖೇಡ-ಬಿ ಮತ್ತು ಅಭಿನವ ಘನಲಿಂಗ ರುದ್ರಮನಿ ಶಿವಚಾರ್ಯರು ತ್ರಿಪೂರಾಂತ) ಶ್ರೀಗಳು ಬಿಟ್ಟರೆ ಯಾವ ಶಿವ್ ಚಾಂಬ್ರ್ಯರ್ಂ ಭಾಗವಹಿಸದಿರುವದು ತುಂಬ ವಿಶಾಧಕರ ಸಂಗತಿ ಮತ್ತು ನನಗೆ ನೋವುಂ... ವಿಷಾಧ ... ನಂತರ ... ಅಶಿರ್ವಚ... ಶಿಷ್ಯನ ... ವಿವರಿಸು... ದೇವಿಯ... ದಯವಿ... ಕೊಡಬಾ... ತಿಳಿಸುತ್ತ... ಬಂದಾಗ ... ಮತವನ...

## ಸೋನಿಯಾ - ಪಾಸ್ವಾ...

ನವದೆಹಲಿ, ಮೇ ೧೩- ಕಳೆ... ಕುಮಾರಸ್ವಾಮಿ ಅವರೊಂದಿ... ಅಧಿನಾಯಕಿ ಸೋನಿಯಾಗಾಂ... ರಾಮ್‌ವಿಲಾಸ್ ಪಾಸ್ವಾನ್ ಅ...

ಆದರೆ ಇಂದು 12 ಜನಪಥ... ಬೆಂಕಿ ಆಕಸ್ಮಿಕ ಉಂಟಾದ ಹಿ... ಷಯವನ್ನು ಕಾಂಗ್ರೆಸ್ ಅಧ್ಯಕ್ಷರು... ಪಾಸ್ವಾನ್ ಹೇಳಿದ್ದಾರೆ.

ಎಲ್‌ಜೆಪಿ ಯುಪಿಎ ಅ... ಬಿಹಾರದಲ್ಲಿ ನಡೆದ ಘಟ... ರಾಮ್‌ವಿಲಾಸ್ ಪಾಸ್ವಾನ್ ಅ...

## ಕಾಶ್ಮೀರ ಕಣಿವೆಯ...

ಶ್ರೀನಗರ, ಮೇ ೧೩- ಪ್ರತ್ಯೆ... ಗಂಟೆ ಬಂದ್‌ನ ಎರಡನೇ ದಿ... ಸಾಮಾನ್ಯ ಜನಜೀವನ ಅಸ್ತ...

ಶ್ರೀನಗರ ಸೇರಿದಂತೆ ಕ... ಬೀದಿಗಳು ಜನರಿಲ್ಲದೆ ಬ... ನೋಡಿದರು ಭದ್ರತಾ ಪಡೆಗ...

ಅಂತಿಮ ಮತದಾನ ನಡೆಯ... ಜನರ ಓಡಾಟಕ್ಕೂ ಕೆಲವು ... ಕಣಿವೆಯಲ್ಲಿ ಚುನಾವಣೆ ವಿರೋಧಿಸುತ್ತಿದ್ದಾರೆ.

ಆದರೂ ಮತಗಟ್ಟೆಗಳಲ್ಲಿ ... ಪೊಲೀಸರ ಜೊತೆಗೆ ಅರೆ... ಕೊಡಲಾಗಿದೆ.

ದಿನಾಂಕ 14-5-2009 ಬಹಿರಂಗ ಸುದ್ದಿ ದಿನಪತ್ರಿಕೆ.

Scanned by CamScanner



*ಬಸವಕಲ್ಯಾಣ ತಾಲೂಕಿನ ಮಂಠಾಳ ಗ್ರಾಮದ ಅನಂತ ಚೈತನ್ಯ ಶ್ರೀ ಬುರಾಣಪೂರ ಸಿದ್ಧಯಪ್ಪಾನ ಜಾತ್ರಾ ಮಹೋತ್ಸವ ನಿಮಿತ್ಯ ನಡೆದ ಶಿವಾನುಭವ ಚಿಂತನ ಸಭೆಯನ್ನು ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರುಮುನಿ ಶಿವಾಚಾರ್ಯರು ಉದ್ಘಾಟಿಸಿ ಮಾತನಾಡಿದರು. ಶ್ರೀ ಗುಹೇಶ್ವರ ಮಹಾಸ್ವಾಮಿಗಳು ಅಲ್ಲದೆ ಮತ್ತಿತರು ಪೂಜ್ಯರು ಉಪಸ್ಥಿತರಿದ್ದರು.*

# ಮಂಠಾಳ: ಸಿದ್ಧಯಪ್ಪನ ಸಂಭ್ರಮದ ಜಾತ್ರೆ

ಬಸವಕಲ್ಯಾಣ,29– ತಾಲೂಕಿನ ಮಂಠಾಳ ಗ್ರಾಮದ ಅನಂತ ಚೈತನ್ಯ ಶ್ರೀ ಬುರಾಣಪೂರ ಸಿದ್ಧಯಪ್ಪಾನ ಜಾತ್ರಾ ಮಹೋತ್ಸವ ಸೋಮವಾರ ಸಂಭ್ರಮದಿಂದ ಆಚರಿಸಲಾಯಿತು. ಈ ನಿಮಿತ್ಯವಾಗಿ ನಡೆದ ಸಹಸ್ರ ಬಿಲ್ವಾರ್ಚನೆ ಹಾಗೂ ಮಹಾ ರುದ್ರಾಭಿಷೇಕ ಕಾರ್ಯಕ್ರಮ ವಿಜೃಂಭಣೆಯಿಂದ ಜರುಗಿದವು.

ಜಾತ್ರಾ ಮಹೋತ್ಸವದಲ್ಲಿ ನಡೆದ ಶಿವಾನುಭವ ಚಿಂತನ ಸಭೆಯನ್ನು ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರುಮುನಿ ಶಿವಾಚಾರ್ಯರು ಉದ್ಘಾಟಿಸಿ ಮಾತನಾಡಿದ ಅವರು ಯುವಕರು ಉತ್ತಮ ಕ್ರೀಯಾಶೀಲಯಾಗಿ ಯುವ ಶಕ್ತಿ ಕೇಂದ್ರವಾಗಲಿ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ ವಿರಕ್ತ ಮಠದ ಪೂಜ್ಯ ಶ್ರೀ ಗುಹೇಶ್ವರ ಮಹಾಸ್ವಾಮಿಗಳು ಮಾತನಾಡಿ ಮನುಷ್ಯರಲ್ಲಿ ಒಳ್ಳೆಯ ಭಾವನೆಗಳನ್ನು ಬೆಳೆಸಿಕೊಳ್ಳಬೇಕು ಎಂದರು.

ಅಲ್ಲದೆ ಕಾಂಬಳೆವಾಡಿ ಶ್ರೀಗಳು, ಮಹಾಗಾಂವ ಶ್ರೀಗಳು ಸೇರಿದಂತೆ ಮತ್ತಿರು ಮಾತನಾಡಿದರು. ಯುವಕ ಸಂಘದ ಪದಾಧಿಕಾರಿಗಳಾದ ಗುರುರಾಜ ಬಿರಾದಾರ, ಶಿವಾನಂದ ಪಾಟೀಲ, ರಾಮಲಿಂಗ ಕಿವುಡೆ, ಬಂಡೆಪ್ಪಾ ಮಾಳಿ, ಸಾಗರ ಹುಗ್ಗೆ ಪಾಟೀಲ, ಧನರಾಜ ಪಾಟೀಲ, ಸಿದ್ರಾಮ ಶಟಗಾರ, ಗ್ರಾ. ಪಂ. ಸದಸ್ಯ ಗಜಾನಂದ ಪಾಟೀಲ, ಶಿವಾನಂದ ಮಗಶೆಟ್ಟಿ, ಧನರಾಜ ಸಾತಬಾಯಿ, ಶಂಕರ ಪಾಟೀಲ, ಸೇರಿದಂತೆ ನೂರಾರು ಭಕ್ತರು ಪಾಲ್ಗೊಂಡಿದರು.

Scanned by CamScanner

# ಬಸವ ಜ್ಯೋತಿ ರಥ ಸದ್ಭಾವನಾ ಪಾದಯಾತ್ರೆ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಹುಲಸೂರಿನಲ್ಲಿ ಜನವರಿ 15ರಿಂದ ನಡೆಯುವ ಶ್ರೀ ಜಗದ್ಗುರು ಬಸವಕುಮಾರ ಶಿವಯೋಗಿಗಳ ಸ್ಮರಣೋತ್ಸವ ಮತ್ತು ಶರಣ ಸಂಸ್ಕೃತಿ ಉತ್ಸವ ನಿಮಿತ್ತ ಪಟ್ಟಣದಿಂದ ಹುಲಸೂರಿನವರೆಗೆ ಬಸವಜ್ಯೋತಿ ರಥ ಸದ್ಭಾವನಾ ಪಾದಯಾತ್ರೆ ಶನಿವಾರ ಹೊರಟಿತು.

ಹುಲಸೂರಿನ ಶ್ರೀ ಶಿವಾನಂದ ಮಹಾಸ್ವಾಮಿ ನೇತೃತ್ವದ ಪಾದಯಾತ್ರೆಗೆ ನಗರದ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಶನಿವಾರ ಬೆಳಗ್ಗೆ ಚಾಲನೆ ನೀಡಲಾಯಿತು. ಧಾರವಾಡದ ಶ್ರೀ ಚನ್ನಬಸವ ಸ್ವಾಮಿ, ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಸಾಯಗಾಂವದ ಶ್ರೀ ಶಿವಾನಂದ ದೇವರು ಸಮ್ಮುಖ ವಹಿಸಿದ್ದರು.

ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ ಅಧ್ಯಕ್ಷ ಅನೀಲಕುಮಾರ ರಗಟೆ, ಮುಖಂಡರಾದ ಬಾಬು ಹೊನ್ನಾನಾಯಕ, ಎಪಿಎಂಸಿ ಮಾಜಿ ಉಪಾಧ್ಯಕ್ಷ ಬಾಬುರಾವ ಪಟ್ನೆ, ಶಂಕ್ರಣ್ಣ ಕೊಳಕೂರ, ವೈದ್ಯ ಬಸವರಾಜ ಪಂಡಿತ, ಜಗನ್ನಾಥ ಚಿಲ್ಲಾಬಟ್ಟೆ, ಸುಧೀರ ಕಾಡಾದಿ, ರಾಜಕುಮಾರ ನಿಡೋದೆ, ಬಾಬುರಾವ ಗೌಡಗಾಂವೆ, ಬಿಡಿಪಿಸಿ ಉಪಾಧ್ಯಕ್ಷ ಗದಗೆಪ್ಪ ಹಲಶೆಟ್ಟೆ, ನಿರ್ದೇಶಕರಾದ ಕಾಶಪ್ಪ ಸಕ್ಕರಭಾವಿ, ಸುಭಾಷ ಹೊಳ ಕುಂದೆ, ನಾಗಯ್ಯ ಸ್ವಾಮಿ, ಬಸವರಾಜ ಬಾಲಕಿಲೆ ಉಪಸ್ಥಿತರಿದ್ದರು.

ಬಸವಣ್ಣನವರ ಭಾವಚಿತ್ರದೊಂದಿಗೆ ನಗರದ ಮುಖ್ಯ ಮಾರ್ಗವಾಗಿ ಹೊರಟ ಪಾದಯಾತ್ರೆಯಲ್ಲಿ ಸ್ವಾಮೀಜಿಗಳು, ಪ್ರಮುಖರು, ಹುಲಸೂರಿನ ಗುರುಬಸವೇಶ್ವರ ಸಂಸ್ಥಾನ ಮಠದ ಸದ್ಭಕ್ತರು, ಮಹಿಳೆಯರು, ಭಜನಾ ತಂಡದವರು ಭಾಗವಹಿಸಿದ್ದರು.

ಬೆಟಬಾಲಕುಂದಾ, ಬೇಲೂರ ಮಾರ್ಗವಾಗಿ ನಡೆದ ಬಸವಜ್ಯೋತಿ ಸದ್ಭಾವನಾ ಪಾದಯಾತ್ರೆಗೆ ಮಾರ್ಗ ಮಧ್ಯೆ ಹಲವೆಡೆ ಭಕ್ತಿಪೂರ್ವಕವಾಗಿ ಸ್ವಾಗತಿಸಲಾಯಿತು.

## ಬಸವಕಲ್ಯಾಣದಿಂದ ಹುಲಸೂರಿಗೆ ಹೊರಟಿತು..



ಬಸವಜ್ಯೋತಿ ರಥ ಸದ್ಭಾವನಾ ಪಾದಯಾತ್ರೆಗೆ ಬಸವಕಲ್ಯಾಣದ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಶನಿವಾರ ಚಾಲನೆ ನೀಡಲಾಯಿತು. ಶಿವಾನಂದ ಶ್ರೀ, ಚನ್ನಬಸವ ಶ್ರೀ,್ರೀ ಅಭಿನವ ಘನಲಿಂಗ ರುದ್ರಮಶ್ರೀರ್ರೀ ಶಿವಾನಂದ ದೇವರು, ಅನೀಲಕುವ ರ ರಗಟೆ, ಬಾಬು ಹೊನ್ನಾನಾಯಕ, ಕಾಶಪ್ಪ ಸಕ್ಕರಭಾವಿ, ನಿಡೋದೆ, ಕೆ.ಕಾಶಪ್ಪ ಉಪಸ್ಥಿತರಿದ್ದರು.

ದಿನಾಂಕ 2-1-2011 ವಿಜಯಕರ್ನಾಟಕ ದಿನ ಪತ್ರಿಕೆ.

Scanned by CamScanner

### ಪಂಡಿತ.ಪುಟ್ಟರಾಜ ಗವಾಗಳಿಗೆ ನುಡಿನಮನ,

# ಗವಾಯಿಗಳಿಗೆ ಸಾಹಿತ್ಯ, ಸಂಗೀತ, ಅಧ್ಯಾತ್ಮದ ಕಣ್ಣುಗಳಿದ್ದವು - ಹಾರಕೂಡ ಶ್ರೀಗಳು




ಬಸವಕಲ್ಯಾಣ,ಸೆ.30-ಅಂಧ,ಅನಾಥರಬಾಳಿನ ಜ್ಯೋತಿಯಾಗಿ ಬಾಳಿ ಬೆಳಗಿದ ಗಾನಯೋಗಿ ಪಂ.ಪುಟ್ಟರಾಜ ಗವಾಯಿಗಳಿಗೆ ಸಾಹಿತ್ಯ ಸಂಗೀತ ಆದ್ಯಾತ್ಮದ ಮೂರು ಕಣ್ಣುಗಳಿದ್ದವು ಎಂದು ಸುಕ್ಷೇತ್ರ ಹಾರಕೂಡದ ಪೂಜ್ಯಶ್ರೀ ಚನ್ನವೀರ ಶಿವಾಚಾರ್ಯರು ನುಡಿದರು ಅವರು,ನಗರದ ಬಿಕೆಡಿಬಿ ಗ್ರಂಥಾಲಯದಲ್ಲಿ ಏರ್ಪಡಿಸಿದ ಪಂ.ಪುಟ್ಟರಾಜ ಗವಾಯಿಗಳ ನುಡಿನಮನ ಕಾರ್ಯಕ್ರಮದ ದಿವ್ಯ ಸಾನಿಧ್ಯವಹಿಸಿ ಮಾತನಾಡಿದರು.

ತ್ರಿಪೂರಾಂತದ ಪೂಜ್ಯಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತ್ರತ್ವ ವಹಿಸಿ ಮಾತನಾಡಿದರು,ಕಾರ್ಯಕ್ರಮದ ಅಧ್ಯಕ್ಷತೆ ಬಿಕೆಡಿಬಿ ಆಯುಕ್ತರಾದ ಕಾಶಿನಾಥ ಗೋಖಲೆ ವಹಿಸಿದ್ದರು, ಮುಖ್ಯಅತಿಥಿಗಳಾಗಿ ಗಾನಯೋಗಿ ಪಂಚಾಕ್ಷರಿ ಸೇವಾ ಸಂಘದ ಅಧ್ಯಕ್ಷರಾದ ಎಸ್.ವಿ.ಕಲ್ಮಠ, ಮಾತನಾಡಿದರು ತಾಲೂಕಾ ಕ.ಸಾ.ಪ.ಅಧ್ಯಕ್ಷರಾದ ಪ್ರಭುಲಿಂಗಯ್ಯಾ ಟಂಕಸಾಲಿ ಮಠ, ಸತ್ಯಾನುಭವ ಆಶ್ರಮದ ನಿರ್ದೇಶಕರಾದ ಫಾದರ ಬೇಂಜಮೀನ್ ಡಿಸೋಜಾ,ಸಂಗೀತ ಕಲಾವಿದ ಹನುಮೀಂಯಾ, ವೇದಿಕೆಯಲ್ಲಿದ್ದರು.

ಕಲಾವಿದರಾದ ರೇವಣಸಿದ್ದಯ್ಯಾ ಮಠಪತಿಜನಪದ ಗೀತೆ, ರಾಜೇಂದ್ರ ಪವಾರ ಹಾರ್ಮೋನಿಯಂ ಸೋಲೋ, ಕೊಳಲು ಎ.ಎಸ್.ಐ.ಹಣಮಂತಪ್ಪಚಿದ್ರಿ, ಹಿಂದುಸ್ಥಾನಿ ಗಾಯನ ರಾಮಲೂ ಗಾದಗಿ, ಬಸವರಾಜ ಗಬ್ಬೂರ,ಅಲ್ಲದೆ ಜಿಲ್ಲೆಯ ಎಲ್ಲಾ ಕಲಾವಿದರು ತಮ್ಮ ಸಂಗೀತ ಸೇವೆ ನಡೆಸಿಕೊಟ್ಟರು.ಸ್ವಾಗತ ರಾಜಕುಮಾರ ಮದಕಟ್ಟಿ,ಸಂಚಾಲನೆ ಶಾಂತ ಯ್ಯಾ ಮಠಪತಿ,ವಂದನಾರ್ಪಣೆ ಶಶಿಧರ ಪಾಟೀಲ್ ನೇರವೇರಿಸಿದರು.

ಪಂ.ಪುಟ್ಟರಾಜ ಗವಾಗಳ ಕಲಾತಂಡದಿಂದ ವಚನ ಗಾಯನ, ಜನಪದಗೀತೆ, ಭಕ್ತಿಗೀತೆ ಹಾಡಿ ನೆರೆದ ಜನಸ್ತೋಮಕ್ಕೆ ಸಂಗೀತದ ರಸದೌತಣ ನೀಡಿದರು.ಪ್ರಾಚಾರ್ಯರಾದ ಸೂರ್ಯಕಾಂತ ಶಿಲವಂತ,ವಕಿಲರಾದ ಕಾಟೆ,ಬಸವರಾಜ ನಂದಿ,ರೇವಣಸಿದ್ದಯ್ಯಾ ಮಠಪತಿ, ಹಾವಯ್ಯಾಸ್ವಾಮಿ, ಪಂಡಿತ ಬಸವರಾಜ ಜನಾರ್ಧನ ವಾಘ್ಮೋರೆ, ಪ್ರವೀಣದಾಂಡೆಕರ,ಸಿದ್ದಲಿಂಗ ನೇಟೆ, ಬಸವರಾಜ ರಗಟೆ, ಪಂಚಾಕ್ಷರಿ ಜಿ.ಹಿರೇಮಠ, ಡಾ.ಬಸವರಾಜ ಸ್ವಾಮಿ ಉಪಸ್ಥಿತರಿದ್ದರು.



ಬಸವಕಲ್ಯಾಣಕ್ಕೆ ಸೋಮವಾರ ಆಗಮಿಸಿದ ಗಂಗಾವತಿಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ತೆಗೆದ ಕನ್ನಡಾಂಬೆಯ ಜ್ಯೋತಿಯಾತ್ರೆಗೆ ಭವ್ಯ ಸ್ವಾಗತ ಕೋರಲಾಯಿತು

# ಕನ್ನಡಾಂಬೆ ಜ್ಯೋತಿ ಯಾತ್ರೆಗೆ ಸ್ವಾಗತ

**ಪ್ರಜಾವಾಣಿ ವಾರ್ತೆ**

ಬಸವಕಲ್ಯಾಣ: ಗಂಗಾವತಿಯಲ್ಲಿ ಡಿಸೆಂಬರ್ 9 ರಿಂದ ನಡೆಯುವ 78 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕರ್ನಾಟಕ ಶುದ್ಧೀಕರಣ ಹೋರಾಟ ಸಮಿತಿಯಿಂದ ರಾಜ್ಯಾದ್ಯಂತ ನಡೆಸಿರುವ ಕನ್ನಡಾಂಬೆ ಜ್ಯೋತಿ ಯಾತ್ರೆಗೆ ಸೋಮವಾರ ಇಲ್ಲಿ ಭವ್ಯ ಸ್ವಾಗತ ಕೋರಲಾಯಿತು.

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಸಾಹಿತಿಗಳು, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಲ್ಲೂರು ಪ್ರಸಾದ ಮತ್ತು ಕನ್ನಡಾಂಬೆಯ ಭಾವಚಿತ್ರ ತೆಗೆದು ಯಾತ್ರೆಯ ರಥವನ್ನು ವಿಶಿಷ್ಟವಾಗಿ ಸಿಂಗರಿಸಲಾಗಿದೆ. ಅದರಲ್ಲಿ ಭುವನೇಶ್ವರಿ ತಾಯಿಯ ಮೂರ್ತಿ ಇಡಲಾಗಿದ್ದು ಯಾತ್ರೆಯ ವಾಹನ ಇಲ್ಲಿಗೆ ಆಗಮಿಸಿದಾಗ ಇಲ್ಲಿನ ಬಸವೇಶ್ವರ ದೇವಸ್ಥಾನದ ಎದುರು ಮೂರ್ತಿಗೆ ಪೂಜೆ ಸಲ್ಲಿಸಲಾಯಿತು. ನಂತರ ಮಹಾತ್ಮಾಗಾಂಧಿ ವೃತ್ತದಿಂದ ಮುಖ್ಯರಸ್ತೆಯ ಮೂಲಕ ಅಂಬೇಡ್ಕರ ವೃತ್ತದವರೆಗೆ ಮೆರವಣಿಗೆ ನಡೆಸಿ ಬೀಳ್ಕೊಡಲಾಯಿತು.

'ಕನ್ನಡಾಂಬೆಗೆ ಜಯವಾಗಲಿ' 'ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಲಿ' 'ಗಂಗಾವತಿಯಲ್ಲಿ ನಡೆಯುವ ಸಮ್ಮೇಳನಕ್ಕೆ ಎಲ್ಲರೂ ಆಗಮಿಸಬೇಕು' ಎಂಬಿತ್ಯಾದಿ ಘೋಷಣೆಗಳನ್ನು ಮೆರವಣಿಗೆಯಲ್ಲಿ ಪಾಲ್ಗೊಂಡ ಯುವಕರು ಕೂಗಿದರು. ಎಲ್ಲರೂ ಕೊರಳಿಗೆ ಕನ್ನಡ ಧ್ವಜಗಳನ್ನು ಹಾಕಿದ್ದರು. ತಮಟೆ ತಂಡದವರು ವಾದ್ಯಗಳನ್ನು ವಿಶಿಷ್ಟ ರೀತಿಯಲ್ಲಿ ಬಾರಿಸಿ ಗಮನ ಸೆಳೆದರು.

ತ್ರಿಪುರಾಂತ ರುದ್ರಮುನಿ ಶಿವಾಚಾರ್ಯರು ಭುವನೇಶ್ವರಿ ತಾಯಿಯ ಮೂರ್ತಿಗೆ ಪೂಜೆ ಸಲ್ಲಿಸಿದರು. ಕರ್ನಾಟಕ ಶುದ್ಧೀಕರಣ ಹೋರಾಟ ವೇದಿಕೆ ರಾಜ್ಯಾಧ್ಯಕ್ಷ ಕೃಷ್ಣಪ್ಪ ಗುಣಸಾಗರ, ಪ್ರಮುಖರಾದ ಆರ್.ಶಕುಂತಲಾ, ರಾಜೇಂದ್ರಬಾಬು, ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಅಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ, ವಲಯ ಅಧ್ಯಕ್ಷ ಚಂದ್ರಕಾಂತ ಸ್ವಾಮಿ ನಾರಾಯಣಪುರ, ಬಸವಲಿಂಗ, ಬಸವರಾಜ ಕಾಮಶೆಟ್ಟಿ, ಶರಣಪ್ಪ ಮುಂತಾದವರು ಪಾಲ್ಗೊಂಡಿದ್ದರು.

ದಿನಾಂಕ 4-12-2011 ರವಿವಾರ
ಪ್ರಜಾವಾಣಿ ದಿನಪತ್ರಿಕೆ.

Scanned by CamScanner

# ಮಾಹಿತಿ ಹಕ್ಕು ಕಾಯಿದೆ ಲಾಭ ಪಡೆಯಿರಿ

▪ ವಿಕ ಸುದ್ದಿಲೋಕ ಬಸವಕಲ್ಯಾಣ

ಸರಕಾರದಿಂದ ಸಿಗುವ ಸೌಲಭ್ಯಗಳ ಬಗ್ಗೆ ತಿಳಿದುಕೊಳ್ಳಲು ಮಾಹಿತಿ ಹಕ್ಕು ಕಾಯಿದೆ ಅಡಿ ಮಾಹಿತಿ ಪಡೆಯಬೇಕು. ಗ್ರಾಪಂ, ತಾಪಂ ಮಟ್ಟದಲ್ಲಿಯೂ ನಿಮಗೆ ಸಿಗಬೇಕಾದ ಸೌಲಭ್ಯದಿಂದ ವಂಚಿತಗೊಳಿಸಿದರೆ. ಇಂಥ ಸಂದರ್ಭದಲ್ಲಿ ನ್ಯಾಯಯುತವಾಗಿ ಸಿಗಬೇಕಾದ ಸೌಲಭ್ಯ ಪಡೆಯಲು ಸಾರ್ವಜನಿಕ ಹಿತಾಸಕ್ತ ಪ್ರಕರಣ ದಾಖಲಿಸಿ ಎಂದು ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಸಲಹೆ ನೀಡಿದ್ದಾರೆ.

ಜೈ ಕರ್ನಾಟಕ ವಿಕಲಚೇತನರ ತಾಲೂಕು ಸಂಘ ಹಾಗೂ ಆರ್ಬಿಟ್ ಸಂಸ್ಥೆ ಆಶ್ರಯದಲ್ಲಿ ಆರ್ಯ ಸಮಾಜ ಭವನದಲ್ಲಿ ನಡೆದ ವಿಶ್ವ ವಿಕಲಚೇತನರ ದಿನಾಚರಣೆ ಮತ್ತು ಪ್ರತಿಭೆ ಪ್ರದರ್ಶನದ ಅಧ್ಯಕ್ಷತೆ ವಹಿಸಿದ್ದ ಅವರು, ವಿಕಲಚೇತನ ವಿಶೇಷ ಯೋಜನೆಯಡಿ ಬೀದರ್ ತಾಲೂಕು ಮತ್ತು ಔರಾದ ತಾಲೂಕಿಗೆ ಮನೆ ಮಂಜೂರಿಯಾಗಿವೆ. ಆದರೆ ಬಸವಕಲ್ಯಾಣ ತಾಲೂಕಿಗೆ ಏಕೆ ಆಗಿಲ್ಲ ಎಂದು ಪ್ರಶ್ನಿಸಿದರು.

ವಿಶೇಷ ಯೋಜನೆಯಡಿ ಮನೆ ಮಂಜೂರಿಗೆ ಸೇರಿ ಇತರ ಸಮಸ್ಯೆಗಳ ಪರಿಹಾರ ಕಲ್ಪಿಸುವ ಸಂಬಂಧ ಸರಕಾರದ ಗಮನಕ್ಕೆ ತರಲಾಗುವದು, ಅವಶ್ಯಕತೆ ಬಿದ್ದಲ್ಲಿ ಹೋರಾಟಕ್ಕೂ ಸಿದ್ಧ ಎಂದು ಅಭಯ ನೀಡಿದ ಖೂಬಾ, ಅಂಗವಿಕಲತೆ ಸಾಧನೆಗೆ ಅಡ್ಡಿಯಾಗುವದಿಲ್ಲ. ಸ್ಪಷ್ಟ ಗುರಿ, ಇದನ್ನು ಸಾಧಿಸುವ ಪ್ರಯತ್ನ ಮಾಡಿದ್ದೇ ಆದಲ್ಲಿ ಜೀವನಲ್ಲಿ ಅದ್ಭುತ ಸಾಧನೆ ಮಾಡಲು ಸಾಧ್ಯ ಎಂದರು.

ಸಾನ್ನಿಧ್ಯ ವಹಿಸಿದ್ದ ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ವಿಕಲ ಚೇತನರ ಸೇವೆಯಲ್ಲಿ ಭಗವಂತನನ್ನು ಕಾಣಬೇಕು. ಇವರ ಸೇವೆ ಮಾಡಿದರೆ ದೇವರ ಪೂಜೆ ಮಾಡಿದಂತೆ ಎಂದರು. ಉದ್ಘಾಟಿಸಿದ ಜಿಲ್ಲಾ ಹಿರಿಯ ನಾಗರಿಕ ಹಾಗೂ ವಿಕಲಚೇತನರ ಕಲ್ಯಾಣಾಧಿಕಾರಿ ಬನ್ಸಿ ಪವಾರ ಮಾತನಾಡಿ, ವಿಕಲಚೇತನರಿಗೆ ಸರಕಾರದಿಂದ ಸಿಗುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು.



ಬಸವಕಲ್ಯಾಣದ ಆರ್ಯ ಸಮಾಜ ಭವನದಲ್ಲಿ ಶುಕ್ರವಾರ ನಡೆದ ವಿಕಲಚೇತನರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಮಾತನಾಡಿದರು.

ಆರ್ಬಿಟ್ ಸಂಸ್ಥೆ ಕೇಂದ್ರ ಸಂಯೋಜಕ ಸುರೇಶ ಗೊರ್ನಳ್ಳಿ, ಶಿವಕುಮಾರ ಪಾಟೀಲ್ ಮಾತನಾಡಿದರು. ಸಂಘದ ತಾಲೂಕು ಅಧ್ಯಕ್ಷ ಶರಣಪ್ಪ ರಾಜೋಳ, ಜಿಲ್ಲಾ ಒಕ್ಕೂಟದ ಅಧ್ಯಕ್ಷ ಸಾಲಿಮಾನ, ತಾಪಂ ಮಾಜಿ ಅಧ್ಯಕ್ಷ ಕಾಳಿದಾಸ ಜಾಧವ, ತುಕ್ಕಾರೆಡ್ಡಿ, ಜ್ಞಾನೇಶ್ವರ ಹಾರಕೂಡೆ, ರಸಿಕಾ ಮುಡಬಿ, ಬಾಬು ಪಾಟೀಲ್ ಉಪಸ್ಥಿತರಿದ್ದರು. ಪ್ರಮೀಲಾ ವಾಘರಾಜ ಸ್ವಾಗತಿಸಿ ದರು. ನಾಗರಾಜ ವಂದಿಸಿದರು. ಚಂದ್ರಕಾತರೆಡ್ಡಿ ನರಹರೆ ನಿರೂಪಿಸಿದರು.

ದಿನಾಂಕ 10-12-2011 ಶನಿವಾರ ವಿಜಯಕರ್ನಾಟಕ ದಿನಪತ್ರಿಕೆ

# ‘ನಾಗಭೂಷಣರು ‘ಯೋಗಗುರು’ ಆಗಿದ್ದರು’

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಸದ್ಗುರು ನಾಗಭೂಷಣ ಶಿವಯೋಗಿಗಳು ಯೋಗ ಗುರು ಆಗಿದ್ದರು. ಪ್ರಾಣಾಯಾಮ ಕಲಿಸಿ ರೋಗ ದೂರ ಮಾಡುತ್ತಿದ್ದರು, ಅವರಿಂದ ರೋಗ ಗುಣಪಡಿಸಿಕೊಂಡವರಲ್ಲಿ ನಾನೂ ಒಬ್ಬವನಾಗಿದ್ದೇನೆ ಎಂದು ಅಖಿಲ ಭಾರತ ವೀರಶೈವ ಮಹಾಸಭೆ ಅಧ್ಯಕ್ಷ ಮತ್ತು ಮಾಜಿ ಸಚಿವರಾದ ಭೀಮಣ್ಣ ಖಂಡ್ರೆ ಹೇಳಿದರು.

ತಾಲ್ಲೂಕಿನ ಮುಚಳಂಬದ ನಾಗಭೂಷಣ ಶಿವಯೋಗಿ ಸಂಸ್ಥಾನದಲ್ಲಿ ಭಾನುವಾರ ಹಮ್ಮಿಕೊಂಡ ಸತ್ಸಂಗ ಸಪ್ತಾಹ ಸಮಾರೋಪ ಮತ್ತು ನಾಗಭೂಷಣ ಶಿವಯೋಗಿಗಳ 41 ನೇ ಸ್ಮರಣೋತ್ಸವದಲ್ಲಿ ಮಾತನಾಡಿದರು. ನೇತೃತ್ವ ವಹಿಸಿದ್ದ ಮಠಾಧಿಪತಿ ಪ್ರಣವಾನಂದ ಸ್ವಾಮೀಜಿ ಮಾತನಾಡಿದರು. ಸದ್ಗುರುವಿನಲ್ಲಿನ ಭಕ್ತಿಯೇ ಮುಕ್ತಿಗೆ ಕಾರಣ. ಸಂಶಯದ ಸ್ವಭಾವ ಅವನತಿಗೆ ಕಾರಣ ಅಗುತ್ತದೆ.

ಗುರು ಹಿರಿಯರನ್ನು ನಿಂದಿಸದೆ ವಂದಿಸಬೇಕು ಎಂದರು. ಬೋರಗಿ ಮಹಾಲಿಂಗೇಶ್ವರ ಸ್ವಾಮೀಜಿ, ತ್ರಿಪುರಾಂತ ರುದ್ರಮುನಿ ಶಿವಾಚಾರ್ಯರು, ಶಿವಬಸವ ಸ್ವಾಮಿ, ಗಣೇಶಾನಂದ ಸ್ವಾಮೀಜಿ, ಗೋಪಾಲಶಾಸ್ತ್ರೀ ಉಪಸ್ಥಿತರಿದ್ದರು. ಯುವ ಕಾಂಗ್ರೆಸ್ ಸಮಿತಿ ಜಿಲ್ಲಾಧ್ಯಕ್ಷ ಆನಂದ ದೇವಪ್ಪ, ತಾಲ್ಲೂಕು ಅಧ್ಯಕ್ಷ ಮನೋಜ ಮಾಶೆಟ್ಟೆ ಅವರನ್ನು ಸನ್ಮಾನಿಸಲಾ ಯಿತು. ಪರಮಾನಂದ ಸ್ವಾಮೀಜಿ ನಿರೂಪಿಸಿದರು.



ಬಸವಕಲ್ಯಾಣ ತಾಲ್ಲೂಕಿನ ಮುಚಳಂಬದಲ್ಲಿ ಭಾನುವಾರ ನಡೆದ ಸತ್ಸಂಗ ಸಪ್ತಾಹ ಸಮಾರೋಪ ಮತ್ತು ನಾಗಭೂಷಣ ಶಿವಯೋಗಿಗಳ 41 ನೇ ಸ್ಮರಣೋತ್ಸವ ಸಮಾರಂಭದಲ್ಲಿ ಮಾಜಿ ಸಚಿವ ಭೀಮಣ್ಣ ಖಂಡ್ರೆ ಮಾತನಾಡಿದರು. ಪ್ರಣವಾನಂದ ಸ್ವಾಮೀಜಿ, ಬೋರಗಿ ಮಹಾಲಿಂಗೇಶ್ವರ ಸ್ವಾಮೀಜಿ ಉಪಸ್ಥಿತರಿದ್ದರು.

ತುಲಾಭಾರ: ಸತ್ಸಂಗ ಸಪ್ತಾಹದ ಆರನೇ ದಿನ ಶನಿವಾರ ಸಂಜೆ ಪ್ರಣವಾನಂದ ಸ್ವಾಮೀಜಿಗಳ ತುಲಾಭಾರ ನಡೆಯಿತು. ಈ ಸಂದರ್ಭದಲ್ಲಿ ಕಳೆದ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ 100 ರಷ್ಟು ಫಲಿತಾಂಶ ಪಡೆದ ನಾಗಭೂಷಣ ಶಿವಯೋಗಿ ಗುರುಕುಲದ ವಿದ್ಯಾರ್ಥಿಗಳ ಮತ್ತು ಶಿಕ್ಷಕರನ್ನು ಸತ್ಕರಿಸಲಾಯಿತು. ಕಾರ್ಯಕ್ರಮ ಉದ್ಘಾಟಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಶಿವರಾಚಪ್ಪ ವಾಲಿ ಮಾತನಾಡಿದರು. ಪ್ರಣವಾನಂದ ಸ್ವಾಮೀಜಿ ನೇತೃತ್ವ ವಹಿಸಿದ್ದರು.

ಶಿಕ್ಷಣ ಸಂಯೋಜಕ ವಿಶ್ವನಾಥ ಬಿರಾದಾರ, ಬಂಡೆಪ್ಪ ಧನ್ನೂರ ಮಾತನಾಡಿದರು. ಹೆಚ್ಚಿನ ಅಂಕಪಡೆದ ವಿದ್ಯಾರ್ಥಿ ನೀಲಕಂಠ ವೈಜನಾಥ ಹಾಗೂ ಮುಖ್ಯಗುರು ಪಾಂಡುರಂಗ ನಿಡವಂಚೆ, ಸಹ ಶಿಕ್ಷಕರಾದ ಸುನಿಲಕುಮಾರ ಹಾಲು, ಅಣ್ಣೆಪ್ಪ ಬಿರಾದಾರ, ದೇವರಾಜ ಬೆಲ್ಲಾಳೆ, ರಜನಿಕಾಂತ ಶೆಟಗಾರ ಸನ್ಮಾನಿಸಲಾಯಿತು.

ದಿನಾಂಕ 12-12-2011 ಸೋಮವಾರ ಪ್ರಜಾವಾಣಿ ದಿನಪತ್ರಿಕೆ.

Scanned by CamScanner



ಬಸವಕಲ್ಯಾಣದಲ್ಲಿ ಕನ್ನಡಾಂಬೆ ಜ್ಯೋತಿ ಯಾತ್ರೆಗೆ ಪೂಜೆ ಸಲ್ಲಿಸಿ, ಬೀಳ್ಕೊಡಲಾಯಿತು. ತ್ರಿಪುರಾಂತ ಶ್ರೀಗಳು, ಕರ್ನಾಟಕ ಶುದ್ಧೀಕರಣ ಹೋರಾಟ ವೇದಿಕೆ ರಾಜ್ಯಾಧ್ಯಕ್ಷ ಕೃಷ್ಣಪ್ಪ ಗುಣಸಾಗರ ಇತರರು ಉಪಸ್ಥಿತರಿದ್ದರು.

# ಕಲ್ಯಾಣದಲ್ಲಿ ಕನ್ನಡಾಂಬೆಯ ಜ್ಯೋತಿ

▪ ವಿಕ ಸುದ್ದಿಲೋಕ ಬಸವಕಲ್ಯಾಣ

ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ನಡೆಯುವ 78ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಮಿತ್ತ ಕರ್ನಾಟಕ ಶುದ್ಧೀಕರಣ ಹೋರಾಟ ಸಮಿತಿಯಿಂದ ಹಂಪಿಯಿಂದ ಆರಂಭಿಸಲಾಗಿರುವ ಕನ್ನಡಿಗರ ಸ್ವಾಭಿಮಾನದ ಕನ್ನಡಾಂಬೆಯ ಜ್ಯೋತಿ ಯಾತ್ರೆಗೆ ಭಾನುವಾರ ಸಂಜೆ ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಘಟಕದಿಂದ ಸ್ವಾಗತಿಸಿ, ಬರ ಮಾಡಿಕೊಳ್ಳಲಾಯಿತು.

ರಾಜ್ಯ ಗಡಿ ತಾಲೂಕಿನಲ್ಲಿ ಸಂಚರಿಸುತ್ತಿವ ಜ್ಯೋತಿಯಾತ್ರೆಗೆ ಸೋಮವಾರ ಬೆಳಗ್ಗೆ ದೇವಸ್ಥಾನದ ಬಳಿ ಪೂಜೆ ಸಲ್ಲಿಸಿ ಬೀಳ್ಕೊಡಲಾಯಿತು. ಕನ್ನಡಾಂಬೆಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದ ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಜ್ಯೋತಿ ಯಾತ್ರೆ ಯಶಸ್ವಿಯಾಗಲಿ, ಗಡಿ ಭಾಗದಲ್ಲಿ ಕನ್ನಡದ ವಾತಾವರಣ ನಿರ್ಮಾಣವಾಗಲಿ ಎಂದು ಹಾರೈಸಿದರು.

ಕರ್ನಾಟಕ ಶುದ್ಧೀಕರಣ ಹೋರಾಟ ಸಮಿತಿಯ ಸಂಸ್ಥಾಪಕ, ರಾಜ್ಯಾಧ್ಯಕ್ಷ ಕೃಷ್ಣಪ್ಪ ಗುಣಸಾಗರ, ಉಪಾಧ್ಯಕ್ಷರಾದ ಎಂ.ಎಸ್.ಹಣಮಂತಪ್ಪ, ಎಂ. ದೇವಪ್ರಿಯಾ, ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಆರ್.ಶಕುಂತಲಾ, ದೇವಸ್ಥಾನದ ಮಲ್ಲಿಕಾರ್ಜುನ ಶಾಮಭೋಗಿಮಠ, ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ, ನಾರಾಯಣಪೂರ ವಲಯ ಅಧ್ಯಕ್ಷ ಚಂದ್ರಕಾಂತ ಸ್ವಾಮಿ, ಬಸವಲಿಂಗ ಸುಬೇದಾರ, ಮಲ್ಲಿಕಾರ್ಜುನ ಕುರಕೋಟೆ ಬಸವರಾಜ ಕಾಮಶೆಟ್ಟಿ ಉಪಸ್ಥಿತರಿದ್ದರು.

ನಂತರ ದೇವಸ್ಥಾನದಿಂದ ಜ್ಯೋತಿ ಯಾತ್ರೆಯು ವಾದ್ಯಮೇಳದೊಂದಿಗೆ ಮುಖ್ಯರಸ್ತೆಯ ಮಾರ್ಗವಾಗಿ ಅಂಬೇಡ್ಕರ್ ವೃತ್ತದ ವರೆಗೆ ಮೆರವಣಿಗೆ ನಡೆಸಲಾಯಿತು. ಹಂಪಿ ಸಮೀಪದ ಕಮಲಾಪೂರನ ದುರ್ಗಪ್ಪ ನೇತೃತ್ವದ ಕಲಾ ತಂಡದಿಂದ ನಡೆದ ಪ್ರದರ್ಶನ ಮೆರವಣಿಗೆಗೆ ಮೆರುಗು ನೀಡಿತು.

ದಿನಾಂಕ 6-12-2011 ವಿಜಯ ಕರ್ನಾಟಕದಲ್ಲಿ



ಬಸವಕಲ್ಯಾಣದಲ್ಲಿ ಶುಕ್ರವಾರ ಯೋಗಗುರು ಬಾಬಾ ರಾಮದೇವ ಅವರು ಡಿಸೆಂಬರ್ 8 ರಂದು ಇಲ್ಲಿ ನಡೆಸಲಿರುವ ಸಮಾರಂಭದ ಪ್ರಚಾರ ಯಾತ್ರೆಗೆ ತ್ರಿಪುರಾಂತ ರುದ್ರಮುನಿ ಶಿವಾಚಾರ್ಯರು ಚಾಲನೆ ಕೊಟ್ಟರು. ಸುನಿಲ ಪಾಟೀಲ, ಡಾ.ಬಸವರಾಜ ಸ್ವಾಮಿ, ಸಂಜೀವ ಜಾಧವ, ರವಿ ಚಂದನಕೆರೆ, ರಾಜೀವ ಸುಗೂರೆ ಉಪಸ್ಥಿತರಿದ್ದರು.

## ಬಾಬಾ ಸಭೆ ಪ್ರಚಾರಕ್ಕೆ ಚಾಲನೆ

ಬಸವಕಲ್ಯಾಣ: ಯೋಗಗುರು ಬಾಬಾ ರಾಮದೇವ ಅವರ ನೇತೃತ್ವದಲ್ಲಿ ಡಿಸೆಂಬರ್ 8 ರಂದು ಇಲ್ಲಿ ಬಹಿರಂಗ ಸಮಾರಂಭ ಹಮ್ಮಿಕೊಂಡಿರುವ ಕಾರಣ ಶುಕ್ರವಾರ ಕಾರ್ಯಕ್ರಮದ ಪ್ರಚಾರ ಆರಂಭಿಸಲಾಯಿತು.

ಅಂದು ಮಧ್ಯಾಹ್ನ 3 ಗಂಟೆಗೆ ಇಲ್ಲಿನ ರಥ ಮೈದಾನದಲ್ಲಿ ಅವರು ಬೃಹತ್ ಸಮಾರಂಭವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ವಿವಿಧ ಯೋಗಗಳ ಬಗ್ಗೆಯೂ ಅವರು ಹೇಳಿಕೊಡಲಿದ್ದಾರೆ.

ಅವರ ಕಾರ್ಯಕ್ರಮದ ಪ್ರಚಾರಕ್ಕೆ ಇಂದು ತ್ರಿಪುರಾಂತ ರುದ್ರಮುನಿ ಶಿವಾಚಾರ್ಯರು ಚಾಲನೆ ಕೊಟ್ಟರು.

ಮುಖಂಡರಾದ ಸುನಿಲ ಪಾಟೀಲ, ಡಾ.ಬಸವರಾಜ ಸ್ವಾಮಿ, ನಗರಸಭೆ ಮಾಜಿ ಅಧ್ಯಕ್ಷ ರಾಜೀವ ಸುಗೂರೆ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ರವಿ ಚಂದನಕೆರೆ, ಬಿಜೆಪಿ ಮುಖಂಡ ಸಂಜೀವ ಜಾಧವ, ಸುಭಾಷ ಸುತ್ರಾವೆ, ನಾರಾಯಣ ಬುನ್ನಾ, ಸೂರ್ಯಕಾಂತ ಸಸಾಣೆ, ರಾಜಕುಮಾರ ದೇಗಾಂವ ಉಪಸ್ಥಿತರಿದ್ದರು.

**ಇಂದಿನ ಕಾರ್ಯಕ್ರಮ :**

ಬೆಳಗ್ಗೆ 8ಕ್ಕೆ ಅಭಿಷೇಕ, ಸಂಜೆ 4ಕ್ಕೆ ಪಲ್ಲಕ್ಕಿ ಉತ್ಸವ, 6ಕ್ಕೆ ರಥೋತ್ಸವ, 7ಕ್ಕೆ ಶಿವಾನುಭವ ಚಿಂತನ ಜರುಗಲಿದೆ.

ಕಾಶಿಯ ಶ್ರೀಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು ಸಾನ್ನಿಧ್ಯ, ಹಾರಕೂಡ ಸಂಸ್ಥಾನ ಹಿರೇಮಠದ ಪೀಠಾಧಿಪತಿ ಶ್ರೀಚನ್ನವೀರ ಶಿವಾಚಾರ್ಯರು ನೇತೃತ್ವ ವಹಿಸಲಿದ್ದಾರೆ.

ಚಿಂಚನಸೂರ ಶ್ರೀಸಿದ್ಧಮಲ್ಲ ಶಿವಾಚಾರ್ಯರು, ರಾಜೇಶ್ವರದ ಶ್ರೀಘನಲಿಂಗ ರುದ್ರಮುನಿ ಶಿವಾಚಾರ್ಯರು, ತ್ರಿಪುರಾಂತದ ಶ್ರೀಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಸದಲಾಪೂರದ ಶ್ರೀಸಿದ್ಧಲಿಂಗ ಶಿವಾಚಾರ್ಯರು, ನಾಗೂರಿನ ಡಾ. ಶ್ರೀಸೈಯದ ಸಿರಾಜೋದ್ದಿನ್ ಹುಸೇನಿ ಸಮ್ಮುಖದಲ್ಲಿ ಕಾರ್ಯಕ್ರಮಗಳು ಜರುಗಲಿವೆ. ಔಸಾದ ಶ್ರೀಗುರುಬಾಬಾ ಮಹಾರಾಜ ಅಧ್ಯಕ್ಷತೆ ವಹಿಸಲಿದ್ದಾರೆ.

ಸಚಿವ ರೇವುನಾಯಕ ಬೆಳಮಗಿ, ಶಾಸಕರಾದ ಬಸವರಾಜ ಪಾಟೀಲ್ ಅಟ್ಟೂರ್, ರಾಜಶೇಖರ ಪಾಟೀಲ್ ಹುಮನಾಬಾದ, ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಭಾಗವಹಿಸುವರು.

ಡಿ.30ರಂದು ಮಧ್ಯಾಹ್ನ 2ಕ್ಕೆ ನಡೆಯಲಿರುವ ಕುಸ್ತಿ ಪಂದ್ಯವನ್ನು ಸಂಸದ ಧರ್ಮಸಿಂಗ್ ಉದ್ಘಾಟಿಸಲಿದ್ದಾರೆ. ಶಾಸಕ ಬಸವರಾಜ ಪಾಟೀಲ್ ಅಟ್ಟೂರ್ ಅಧ್ಯಕ್ಷತೆ ವಹಿಸುವರು. ಜಿಪಂ ಅಧ್ಯಕ್ಷ ಕುಶಾಲ ಪಾಟೀಲ್ ಗಾದಗಿ, ಸದಸ್ಯರಾದ ಚಂದ್ರಶೇಖರ್ ಬಿರಾದಾರ, ಸಂಜು.ಎಸ್ .ಕಾಳೇಕರ್, ರವಿರೆಡ್ಡಿ ಪಾಟೀಲ್, ಮಾಜಿ ಶಾಸಕ ಎಂ.ಜಿ. ಮುಳೆ, ತಾಪಂ ಅಧ್ಯಕ್ಷ ಗುರುಲಿಂಗಪ್ಪ ಸೈದಾಪೂರೆ, ಸದಸ್ಯ ರಾಮಲಿಂಗರೆಡ್ಡಿ, ಬಾಬು ಹೊನ್ನಾನಾಯಕ, ಸಿದ್ರಾಮಪ್ಪ ಗುದಗೆ ಪಾಲ್ಗೊಳ್ಳುವರು.

ದಿನಾಂಕ 29-12-2011 ವಿಜಯ ಕರ್ನಾಟಕದಲ್ಲಿ

## ಯರಬಾಗ ಶ್ರೀ ಜನ್ಮ ದಿನ

ಬಸವಕಲ್ಯಾಣ: ತಾಲೂಕಿನ ಯರಬಾಗ ಗ್ರಾಮದ ಜ್ಯೋತಿರ್ಲಿಂಗಾಶ್ರಮದ ಶ್ರೀಬಸವಲಿಂಗ ಶಿವಾಚಾರ್ಯರ 53ನೇ ಜನ್ಮ ದಿನೋತ್ಸವ ಹಾಗೂ ತುಲಾಭರ ಕಾರ್ಯಕ್ರಮ ಗ್ರಾಮದ ಶ್ರೀಸದ್ಗುರು ರೇಣುಕಾಚಾರ್ಯ ಕಲ್ಯಾಣ ಮಂಟಪದಲ್ಲಿ ಗುರುವಾರ ಸಂಜೆ ಜರುಗಲಿದೆ. ತಡೋಳಾದ ಶ್ರೀರಾಜೇಶ್ವರ ಶಿವಾಚಾರ್ಯರು ಸಾನ್ನಿಧ್ಯ, ಹಿರನಾಗಾಂವನ ಶ್ರೀಜಯಶಾಂತಲಿಂಗ ಶಿವಾಚಾರ್ಯರು, ರಾಜೇಶ್ವರನ ಶ್ರೀಘನಲಿಂಗರುದ್ರಮುನಿ ಶಿವಾಚಾರ್ಯರು ನೇತೃತ್ವ, ಸೊಂತ-ಹಿಪ್ಪರಗಿಯ ಶ್ರೀಶಿವಕುಮಾರ ಶಿವಾಚಾರ್ಯರು, ತ್ರಿಪುರಾಂತನ ಶ್ರೀಅಭಿನವ ಘನಲಿಂಗರುದ್ರಮುನಿ ಶಿವಾಚಾರ್ಯರು, ಕಾಳಗಿಯ ಶ್ರೀಶಿವಬಸವ ಶಿವಾಚಾರ್ಯರು ಸಮ್ಮುಖ ವಹಿಸುವರು. ಶಾಸಕ ರಾಜಶೇಖರ ಪಾಟೀಲ್ ಹುಮನಾಬಾದ್ ಅಧ್ಯಕ್ಷತೆ ವಹಿಸಲಿದ್ದು, ಭಾಲ್ಕಿ ಶಾಸಕ ಈಶ್ವರ ಖಂಡ್ರೆ, ಬಿಎಸ್ಎಸ್‌ಕೆ ಅಧ್ಯಕ್ಷ ಸುಭಾಷ ಕಲ್ಲೂರ ಭಾಗವಹಿಸುವರು.

ದಿನಾಂಕ 29-12-2011
ವಿಜಯ ಕರ್ನಾಟಕದಲ್ಲಿ

Scanned by CamScanner




ಸ್ವಾಮಿ ರಾಮದೇವ್ ಅವರು ಯೋಗ ಶಿಬಿರ ನಡೆಸಿಕೊಡುತ್ತಿರುವುದು. ಹಾರಕೂಡ ಶ್ರೀಗಳು, ಪ್ರಣವಾನಂದ ಸ್ವಾಮಿಗಳು ಇದ್ದರು.

### ಬಸವಕಲ್ಯಾಣದಲ್ಲಿ ಯೋಗ ಶಿಬಿರ

# 'ಆರ್ಥಿಕ ಸಬಲೀಕರಣಕ್ಕೆ ಕಪ್ಪು ಹಣ ಮರಳಿ ಬರಲಿ'

ಬಸವಕಲ್ಯಾಣ, ೮– ವಿದೇಶಗಳಲ್ಲಿ ಇಡಲಾಗಿರುವ ೪೦೦ ಲಕ್ಷ ಕೋಟಿ ರೂಪಾಯಿಯನ್ನು ತ್ವರಿತವಾಗಿ ದೇಶಕ್ಕೆ ಮರಳಿ ತರಬೇಕು ಎಂದು ಹೆಸರಾಂತ ಯೋಗಋಷಿ, ಸ್ವಾಮಿ ರಾಮದೇವ್ ಅವರು ಇಲ್ಲಿ ಒತ್ತಿ ಹೇಳಿದರು.

ಇಲ್ಲಿನ ಥೇರ್ ಮೈದಾನದಲ್ಲಿ ನಡೆದ ಯೋಗ ಶಿಬಿರದಲ್ಲಿ ಮಾತನಾಡಿದ ಪೂಜ್ಯರು, ವಿದೇಶಗಳಲ್ಲಿರುವ ಕಪ್ಪು ಹಣ ತಂದಾಗಲೇ ದೇಶ ವಿಶ್ವದ ಶ್ರೀಮಂತ ರಾಷ್ಟ್ರವಾಗಲಿದೆ ಎಂದು ಹೇಳಿದರು. ಕಪ್ಪು ಹಣ ದೇಶಕ್ಕೆ ಮರಳಿ ಬಂದಲ್ಲಿ ಜನರ ದಾರಿದ್ರ್ಯ ನಿವಾರಣೆಯಾಗುತ್ತದೆ. ನಿರುದ್ಯೋಗ ಸಮಸ್ಯೆ ಪರಿಹಾರವಾಗುತ್ತದೆ ಎಂದು ಹೇಳಿದರು. ಆರ್ಥಿಕ, ಆಧ್ಯಾತ್ಮಿಕ ಹಾಗೂ ಸಾಮಾಜಿಕ ನ್ಯಾಯ ಒದಗಿಸಿದಂತಾಗುತ್ತದೆ ಎಂದರು.

೧೨ ನೇ ಶತಮಾನದಲ್ಲಿ ಬಸವಣ್ಣನವರು ನೀಡಿರುವ ಸಂದೇಶಗಳು ಈಗಲೂ ಪ್ರಸ್ತುತವಾಗಿವೆ. ಶರಣರು ಕಾಯಕಕ್ಕೆ ನೀಡಿರುವ ಮಹತ್ವ ಅನುಕರಣೀಯವಾಗಿದೆ ಎಂದು ಸ್ವಾಮಿ ರಾಮದೇವ್ ಹೇಳಿದರು. ಕಾಯಕ ತತ್ವ ಪಾಲನೆಯಿಂದ ಜ್ಞಾನದ ಜೊತೆಗೆ ಭಕ್ತಿಪೂರ್ವಕವಾಗಿ ಕರ್ಮ ಸಾಧಿಸಬಹುದು. ಮುಕ್ತಿ ಪಡೆಯಬಹುದು ಎಂದು ಹೇಳಿದರು.

ಬಸವಣ್ಣನವರು ಶೋಷಿತರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದ್ದರು. ಈಗಲೂ ಶೋಷಿತರನ್ನು ಮುಖ್ಯ ವಾಹಿನಿಗೆ ತರುವ ಕೆಲಸ ನಡೆಯಬೇಕಾಗಿದೆ. ಸಾಮಾಜಿಕ ನ್ಯಾಯ ಒದಗಿಸುವುದರ ಜೊತೆಗೆ ಆರ್ಥಿಕ ಸಬಲೀಕರಣ ಸಾಧಿಸಬೇಕಾಗಿದೆ ಎಂದು ಪೂಜ್ಯರು ಒತ್ತಿ ಹೇಳಿದರು.

ಯೋಗಗುರುಗಳು ಬಸವಣ್ಣನವರ 'ಕಳಬೇಡ' ವಚನವನ್ನು ಹೇಳುವ ಮೂಲಕ ಎಲ್ಲರ ಗಮನ ಸೆಳೆದರು. ಹಾರಕೂಡದ ಚೆನ್ನವೀರ ಶಿವಾಚಾರ್ಯರು, ಹುಲಸೂರಿನ ಶಿವಾನಂದ ಸ್ವಾಮಿಗಳು, ಮುಚಳಂಬದ ಪ್ರಣವಾನಂದ ಮಹಾಸ್ವಾಮಿಗಳು, ತಡೋಳಾದ ರಾಜೇಶ್ವರ ಶಿವಾಚಾರ್ಯರು, ಶಿವಯೋಗೀಶ್ವರ ಸ್ವಾಮಿಗಳು, ತ್ರಿಪುರಾಂತದ ಘನಲಿಂಗ ರುದ್ರಮುನಿಶಿವಾಚಾರ್ಯರು, ಔಸಾದ ಗುರುಬಾಬಾ ಮಹಾರಾಜರು ಉಪಸ್ಥಿತರಿದ್ದರು.

ಶಿಬಿರದಲ್ಲಿ ಹತ್ತಾರು ಸಾವಿರ ಜನ ಪಾಲ್ಗೊಂಡಿದ್ದರು. ಸಸ್ತಾಪುರ ಬಂಗಲೆಯಿಂದ ಯೋಗಋಷಿಗಳನ್ನು ಬೈಕ್ ರ್‍ಯಾಲಿ ಮೂಲಕ ಕರೆದು ತರಲಾಯಿತು. ಪೂಜ್ಯರು ಆರ್ಯ ಸಮಾಜ ಭವನದ ಶಿಲಾನ್ಯಾಸ ನೆರವೇರಿಸಿದುರ. ನಂತರ ಬಸವೇಶ್ವರ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು.

ಪ್ರಮುಖರಾದ ಸುನೀಲ ಪಾಟೀಲ, ಬಸವರಾಜ ವರಕಾಲೆ, ಶಿವರಾಜ ಬಾಲಕಿಲ್ಲೆ, ಪತಂಜಲಿ ಯೋಗ ಸಮಿತಿ ಉಪಾಧ್ಯಕ್ಷ ಶಾಂತಲಿಂಗ ಮಠಪತಿ, ಬಸವೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷ ಅನೀಲಕುಮಾರ ರಗಟೆ, ಗದಗೆಪ್ಪ ಹಲಶೆಟ್ಟಿ ಮುಂತಾದವರು ಉಪಸ್ಥಿತರಿದ್ದರು.

ದಿನಾಂಕ 9-12-2011 ಶುಕ್ರವಾರ




ಬಸವಕಲ್ಯಾಣದಲ್ಲಿ ಶುಕ್ರವಾರ ಹಮ್ಮಿಕೊಂಡ ಅಂಗವಿಕಲರ ಪ್ರತಿಭಾ ಪ್ರದರ್ಶನ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಮಾತನಾಡಿದರು. ಬನ್ಸಿಲಾಲ ಪವಾರ, ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯರು, ಸುರೇಶ ಗೊರನಳ್ಳಿ, ಸಂಜೀವ ಶಿರಸೆ ಪಾಲ್ಗೊಂಡಿದ್ದರು.

# 'ಅಂಗವಿಕಲರು ಮಾಹಿತಿ ಹಕ್ಕು ಚಲಾಯಿಸಲಿ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಅಂಗವಿಕಲರು ಮಾಹಿತಿ ಹಕ್ಕು ಚಲಾಯಿಸಿ ತಮಗೆ ಯಾವ್ಯಾವ ಸೌಲಭ್ಯಗಳು ಸಿಗುತ್ತವೆ ಮತ್ತು ಸರ್ಕಾರದ ಯೋಜನೆಗಳ ಲಾಭ ಅರ್ಹರಿಗೆ ದೊರೆತಿದೆಯೇ ಎಂಬುದನ್ನು ತಿಳಿದುಕೊಳ್ಳಬೇಕು ಎಂದು ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಸಲಹೆ ಕೊಟ್ಟರು.

ಜೈ ಕರ್ನಾಟಕ ವಿಕಲಚೇತನರ ಸಂಘದಿಂದ ವಿಶ್ವ ಅಂಗವಿಕಲರ ದಿನಾಚರಣೆ ಅಂಗವಾಗಿ ಶುಕ್ರವಾರ ಇಲ್ಲಿನ ಆರ್ಯ ಸಮಾಜ ಭವನದಲ್ಲಿ ಹಮ್ಮಿಕೊಂಡ ಪ್ರತಿಭಾ ಪ್ರದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬಸವಕಲ್ಯಾಣ ತಾಲ್ಲೂಕಿನಲ್ಲಿನ ಜನತೆ ಸರ್ಕಾರಿ ಸೌಲಭ್ಯ ಪಡೆಯುವಲ್ಲಿ ಹಿಂದಿದೆ. ಬೇರೆ ತಾಲ್ಲೂಕಿನಲ್ಲಿ ಅಂಗವಿಕಲರಿಗೆ ವಿವಿಧ ಯೋಜನೆಗಳಲ್ಲಿ ಮನೆಗಳು ದೊರೆತಿವೆ. ಇಲ್ಲಿನವರಿಗೂ ಮನೆ ಕೊಡುವಂತೆ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು. ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಅಂಗವಿಕಲರ ಬಗ್ಗೆ ನಿರ್ಲಕ್ಷ ತೋರುವುದು ಸರಿಯಲ್ಲ ಎಂದರು.

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಬನ್ಸಿಲಾಲ್ ಪವಾರ ಮಾತನಾಡಿ ಜಿಲ್ಲೆಯಲ್ಲಿ 35 ಸಾವಿರ ಅಂಗವಿಕಲರಿದ್ದಾರೆ. ಎಲ್ಲರಿಗೂ ಗುರುತಿನ ಚೀಟಿ ಮತ್ತು ವಿವಿಧ ಸೌಲಭ್ಯ ಕೊಡಲಾಗುತ್ತಿದೆ ಎಂದು ತಿಳಿಸಿದರು.

ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಅಂಗವಿಕಲರಿಗೆ ಕೀಳು ಭಾವನೆಯಿಂದ ನೋಡಬಾರದು. ಇಂಥವರ ಸೇವೆ ಮಾಡುವುದು ದೇವರ ಸೇವೆಗೆ ಸಮಾನ ಎಂದು ಅಭಿಪ್ರಾಯಪಟ್ಟರು. ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಕಾಳಿದಾಸ ಜಾಧವ, ಅರ್ಬಿಟ ಸಂಸ್ಥೆ ಸಂಚಾಲಕ ಸುರೇಶ ಗೊರನಾಳೆ, ಸಂಜೀವ ಶಿರಸೆ, ತುಕ್ಕಾರೆಡ್ಡಿ, ಸುಲೇಮಾನ, ಶರಣಪ್ಪ ರಾಜೋಳಾ, ರಸಿಕಾ ಮುಡಬಿ, ಶಿವಕುಮಾರ ಪಾಟೀಲ ಉಪಸ್ಥಿತರಿದ್ದರು. ಪ್ರೇಮಿಲಾ ಎಣಕೂರ ಸ್ವಾಗತಿಸಿದರು. ಚಂದ್ರಕಾಂತರೆಡ್ಡಿ ನಿರೂಪಿಸಿದರು. ನಾಗರಾಜ ವಂದಿಸಿದರು. ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ದಿನಾಂಕ 11-12-2011 ರವಿವಾರ ಪ್ರಜಾವಾಣಿಯಲ್ಲಿ

Scanned by CamScanner

# ಕನ್ನಡಾಭಿಮಾನ ಮೂಡಿಸುವ ಕೆಲಸ ನಿರಂತರವಾಗಿರಲಿ

▪ ವಿಕ ಸುದ್ದಿಲೋಕ ಬಸವಕಲ್ಯಾಣ

ಮಾತೃ ಭಾಷೆ ಕನ್ನಡದ ಬಗ್ಗೆ ಪ್ರತಿಯೊಬ್ಬರಿಗೂ ಅಭಿಮಾನವಿರಬೇಕು. ಮಕ್ಕಳಿಗೆ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಕಲಿಸುವಲ್ಲಿ ಪಾಲಕರು ಕಾಳಜಿ ವಹಿಸಬೇಕು ಎಂದು ತ್ರಿಪುರಾಂತನ ಶ್ರೀ ಅಭಿನವ ಘನಲಿಂಗರುದ್ರಮುನಿ ಶಿವಾಚಾರ್ಯರು ಹೇಳಿದರು.

ನಾರಾಯಣಪುರ ಸರಕಾರಿ ಸಂಯುಕ್ತ ಪ್ರೌಢ ಶಾಲೆಯಲ್ಲಿ ಸೋಮವಾರ ನಡೆದ ವಲಯ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸಾನ್ನಿಧ್ಯ ವಹಿಸಿದ್ದ ಶ್ರೀಗಳು, ಇಂಥ ಕಾರ್ಯಕ್ರಮಗಳನ್ನು ಗಡಿ ಗ್ರಾಮಗಳಲ್ಲಿ ಹಮ್ಮಿಕೊಳ್ಳುವ ಮೂಲಕ ಗಡಿ ಭಾಗದಲ್ಲಿ ಕನ್ನಡಾಭಿಮಾನ ಮೂಡಿಸುವ ಕಾರ್ಯ ನಡೆಯಬೇಕಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಜವಾಹರ ನವೋದಯ ವಿದ್ಯಾಲಯದ ಪ್ರಾಚಾರ್ಯ ಕೆ.ಎಸ್.ದತ್ತಾತ್ರಿ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಇಂತಹ ಸಮ್ಮೇಳನಗಳ ಮೂಲಕ ಕನ್ನಡಾಭಿಮಾನ ಮೂಡಿಸುವ ಜತೆಗೆ ಗ್ರಾಮೀಣ ಪ್ರತಿಭೆಗಳನ್ನು ಗುರುತಿಸುವ ಕಾರ್ಯ ನಡೆಯಬೇಕು ಎಂದರು.

ಸಮಾರೋಪ ಭಾಷಣ ಮಾಡಿದ ಸಾಹಿತಿ ಗುರುನಾಥ ಅಕ್ಕಣ್ಣ, ಬೀದರ್ ಭಾಷೆಗೆ ತನ್ನದೇ ಆದ ವಿಶಿಷ್ಟತೆ ಇದ್ದು, ಸಾಹಿತ್ಯ ಕೃಷಿಯಲ್ಲಿ ಇದಕ್ಕೆ ಆದ್ಯತೆ ಸಿಗಬೇಕು. ಈ ಭಾಗದಲ್ಲಿ ಪ್ರತಿಭೆಗಳಿಗೆ ಕೊರತೆ ಇಲ್ಲ, ಬರಹಗಾರರಿಗೆ ಗುರುತಿಸಿ ಪ್ರೋತ್ಸಾಹಿಸುವ ಕೆಲಸ ನಡೆಯಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಶಿವರಾಚಪ್ಪ ವಾಲಿ ಮಾತನಾಡಿದರು. ಸಮ್ಮೇಳನದ ಸರ್ವಾಧ್ಯಕ್ಷ ಪಂಡಿತ ಬಸವರಾಜ ಪರ್ತಾಪುರೆ, ತಾಪಂ ಅಧ್ಯಕ್ಷ ಗುರುಲಿಂಗಪ್ಪ ಸೈದಾಪುರೆ, ಸ್ವಾಗತ ಸಮಿತಿ ಹಾಗೂ ಗ್ರಾಪಂ ಅಧ್ಯಕ್ಷ ಕೃಷ್ಣಾರೆಡ್ಡಿ, ಕಸಾಪ ತಾಲೂಕು ಅಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ, ಗೌರವ ಕಾರ್ಯದರ್ಶಿ ನಾಗಪ್ಪ ನಿಣ್ಣೆ, ವಲಯ ಅಧ್ಯಕ್ಷ ಚಂದ್ರಕಾಂತ ಸ್ವಾಮಿ, ಉಪನ್ಯಾಸಕ ದೇವೇಂದ್ರ ಮಂಠಾಳಕರ್, ಸಿದ್ರಾಮಪ್ಪ ಹಾರಕೂಡೆ, ರಾಜಕುಮಾರ ಇಂಗನಕರ್, ಪ್ರೌಢ ಶಾಲೆ ಮುಖ್ಯಗುರು ಶಕುಂತಲಾ ದಾಡೇಕರ್, ಪ್ರಾಥಮಿಕ ಶಾಲೆ ಮುಖ್ಯಗುರು ಕಲಾವತಿ ರೆಡ್ಡಿ ಇದ್ದರು.

ನಾನಾ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರನ್ನು ಸನ್ಮಾನಿಸಲಾಯಿತು.

**ಗೋಷ್ಠಿ:** ಸಮ್ಮೇಳನದಲ್ಲಿ ನಡೆದ ಗೋಷ್ಠಿಯಲ್ಲಿ ತುಮಕೂರ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ.ವೆಂಕಟರೆಡ್ಡಿ ರಾಮರೆಡ್ಡಿ ವಿಶೇಷ ಉಪನ್ಯಾಸ ನೀಡಿ, ಪರಂಪರೆಯ ಅಭಿಮಾನದೊಂದಿಗೆ ಕನ್ನಡಿಗರ ಪ್ರಸ್ತುತ ಸ್ಥಿತಿ-ಗತಿಗಳ ಪ್ರಜ್ಞೆಯೂ ಅವಶ್ಯಕವಾಗಿದೆ ಎಂದರು.

ಕನ್ನಡಿಗರ ಸಮಸ್ಯೆ, ರೈತರ ಅಳಲು, ಜಲ ರಾಜಕೀಯ, ಪ್ರಾದೇಶಿಕ ಅಸಮಾನತೆ, ಗಡಿವಿವಾದ, ಗಡಿ ಭಾಗದ ಸಮಸ್ಯೆಗಳನ್ನು ಪ್ರಸ್ತಾಪಿಸಿದರು.

ನಾರಾಯಣಪುರ ಮತ್ತು ಐತಿಹಾಸಿಕತೆಯ ಮಹತ್ವಕುರಿತು ಉಪನ್ಯಾಸ ನೀಡಿದ ಏಕಲವ್ಯ ಡಿಇಡಿ ಕಾಲೇಜ್ ಪ್ರಾಚಾರ್ಯ ರುದ್ರಮುನಿ ಮಠಪತಿ, ಐತಿಹಾಸಿಕ ಸ್ಥಳಗಳನ್ನು ಪರಿಚಯಿಸಿದರು.

ಪಶುಪಾಲನಾ ಇಲಾಖೆ ಸಹಾಯಕ ನಿರ್ದೇಶಕ, ಸಾಹಿತಿ ಡಾ. ರವೀಂದ್ರನಾಥ ಅಧ್ಯಕ್ಷತೆ ವಹಿಸಿದ್ದರು. ಚಂದ್ರಕಾಂತ ಕಿವಡೆ ಇದ್ದರು. ಕಲಾವತಿ ರೆಡ್ಡಿ ಸ್ವಾಗತಿಸಿದರು. ರಮೇಶ ಕಾಮಣ್ಣ ವಂದಿಸಿದರು. ದೇವೇಂದ್ರ ಬರಗಾಲೆ ನಿರೂಪಿಸಿದರು.

**ಕವಿ ಗೋಷ್ಠಿ:** ಕವಿ ಗೋಷ್ಠಿ ಅಧ್ಯಕ್ಷತೆ ವಹಿಸಿದ್ದ ಸರಕಾರಿ ಪಿಯು ಕಾಲೇಜ್ ಪ್ರಾಚಾರ್ಯ ಪ್ರೊ.ಎಂ.ಎಂ. ತಂಬಾಕೆ ಮಾತನಾಡಿ, ಕವನಗಳು ಸಾಮಾಜಿಕ ಜವಾಬ್ದಾರಿ ಹೇಳುವಂತಿರಬೇಕು ಎಂದರು. ಕಸಾಪ ಕೋಹಿನೂರ ವಲಯ ಅಧ್ಯಕ್ಷ ಅಂಬಾರಾಯ ಉಗಾಜಿ ಮಾತನಾಡಿದರು.

ಕವಿಗಳಾದ ವಿಶ್ವನಾಥ ಮುಕ್ತಾ, ವೀರಶೆಟ್ಟಿ ಪಾಟೀಲ್, ರಾಘವೇಂದ್ರ ಕನ್ನೂರಕರ್, ಪ್ರಕಾಶ.ಜಿ, ವೀರಣ್ಣ ಮಂಠಾಳಕರ್, ಅಶೋಕ ಎಂ.ಬಿ ಹಾಗೂ ದೇವೇಂದ್ರ ಬರಗಾಲೆ ಕವನ ವಾಚಿಸಿದರು. ರವೀಂದ್ರ ಪತ್ನೆ ಸ್ವಾಗತಿಸಿದರು. ರವೀಂದ್ರ ಮಠ ವಂದಿಸಿದರು.



ನಾರಾಯಣಪುರ ವಲಯ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪದಲ್ಲಿ ಸಮ್ಮೇಳನದ ಅಧ್ಯಕ್ಷ ಪಂಡಿತ ಬಸವರಾಜ ದಂಪತಿಗೆ ಸನ್ಮಾನಿಸಲಾಯಿತು.

ದಿನಾಂಕ 23-11-2011 ಬುಧವಾರ ವಿಜಯ ಕರ್ನಾಟಕ ದಿನಪತ್ರಿಕೆ.

# ಹಾರಕೂಡದಲ್ಲಿ ಜಾತ್ರಾ ಮಹೋತ್ಸವ

ಬೀದರ, ೮– ಪೂಜ್ಯ ಸದ್ಗುರು ಚೆನ್ನಬಸವ ಶಿವಯೋಗಿಗಳವರ ಜಾತ್ರಾ ಮಹೋತ್ಸವ ಪ್ರಸಿದ್ಧ ಹಾರಕೂಡ ಕ್ಷೇತ್ರದಲ್ಲಿ ದಿ. ೨೯ ರಿಂದ ನಡೆಯಲಿದೆ.

೨೯ ರಂದು ಬೆಳಿಗ್ಗೆ ೮ ಗಂಟೆಗೆ ಅಭಿಷೇಕ ನಡೆಯುವುದು, ಸಂಜೆ ೪ ಗಂಟೆಗೆ ಪಲ್ಲಕ್ಕಿ ಉತ್ಸವ, ೬ ಗಂಟೆಗೆ ರಥೋತ್ಸವ, ೭ ಗಂಟೆಗೆ ಶಿವಾನುಭವ ಗೋಷ್ಠಿ ನಡೆಯುವುದು. ಪೂಜ್ಯ ಚೆನ್ನವೀರ ಶಿವಾಚಾರ್ಯರು ನೇತೃತ್ವ ವಹಿಸುವರು. ಪೂಜ್ಯರಾದ ಸಿದ್ಧಮಲ್ಲ ಶಿವಾಚಾರ್ಯರು, [illegible] ಘನಲಿಂಗ [illegible] ರುದ್ರಮುನಿ [illegible] ಶಿವಾಚಾರ್ಯರು, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಸದಲಾಪುರದ ಸಿದ್ಧಲಿಂಗ ಶಿವಾಚಾರ್ಯರು ಸಮ್ಮುಖ ವಹಿಸುವರು. ಔಸಾದ ಗುರುಬಾಬಾ ಮಹಾರಾಜರು ಅಧ್ಯಕ್ಷತೆ ವಹಿಸು ವರು. ಶಾಸಕರು, ರಾಜಕೀಯ ಮು ಖಂಡರು, ಚುನಾಯಿತ ಪ್ರತಿನಿಧಿ ಗಳು,ಗಣ್ಯರು ಅತಿಥಿಯಾಗಿ ಪಾಲ್ಗೊಳ್ಳುವರು. ೩೦ ರಂದು ಮಧ್ಯಾಹ್ನ ೨ ಗಂಟೆಗೆ ಜಂಗಿ ಪೈಲವಾನ ಥೇಟರ್ ಕುಸ್ತಿ ನಡೆಯುವುದು. ೩೧ ರಂದು ಜಾನುವಾರು ಪ್ರದರ್ಶನ ನಡೆಯುತ್ತದೆ. [illegible]

ದಿನಾಂಕ 9-12-2011 ಸಂಯುಕ್ತ ಕರ್ನಾಟಕ ಪತ್ರಿಕೆ



ಮುಚಳಂಬನಲ್ಲಿ ಲಿಂ.ಶರಣಪ್ಪ ಮಹಾರುದ್ರಪ್ಪ ನರಶೆಟ್ಟಿ ಅವರ 8ನೇ ಪುಣ್ಯ ಸ್ಮರಣೋತ್ಸವ ನಿಮಿತ್ತ ನಡೆದ ಸಮಾರಂಭವನ್ನು ಸಂಸದ ಧರ್ಮಸಿಂಗ್ ಉದ್ಘಾಟಿಸಿದರು. ಶ್ರೀಶೈಲ್ ಜಗದ್ಗುರು, ಪ್ರಣವಾನಂದ ಸ್ವಾಮೀಜಿ, ಶಿವರಾಜ ನರಶೆಟ್ಟಿ ಇತರರಿದ್ದರು.

ದಿನಾಂಕ [illegible] 1-11-12 ಗುರುವಾರ ವಿಜಯವಾಣಿ

Scanned by CamScanner

# ಡಿ. 8ರಂದು ಕಲ್ಯಾಣಕ್ಕೆ ಬಾಬಾ: ಪೂರ್ವ ಸಿದ್ಧತೆ

▪ ವಿಕ ಸುದ್ದಿಲೋಕ ಬಸವಕಲ್ಯಾಣ

ನಗರಕ್ಕೆ ಡಿ. 8ರಂದು ಯೋಗಗುರು ರಾಮದೇವ ಬಾಬಾ ಆಗಮಿಸಲಿರುವ ಹಿನ್ನೆಲೆಯಲ್ಲಿ ಇಲ್ಲಿಯ ಆರ್ಯ ಸಮಾಜ ಭವನದಲ್ಲಿ ಪೂರ್ವ ಸಿದ್ಧತಾ ಸಭೆ ಸೋಮವಾರ ಜರುಗಿತು.

ಪತಂಜಲಿ ಯೋಗ, ಭಾರತ ಸ್ವಾಭಿಮಾನ ಟ್ರಸ್ಟ್ ಪದಾಧಿಕಾರಿಗಳು ಹಾಗೂ ಪ್ರಮುಖರು ಭಾಗವಹಿಸಿದ್ದರು. 8ರಂದು ಮಧ್ಯಾಹ್ನ 3ರಿಂದ ನಗರದ ರಥ ಮೈದಾನದಲ್ಲಿ ಸಮಿತಿ ಮತ್ತು ಟ್ರಸ್ಟ್ ಅಡಿ ಬಾಬಾ ಅವರ ಕಾರ್ಯಕ್ರಮ ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ಕಾರ್ಯಕ್ರಮ ಯಶಸ್ವಿಯಾಗಿಸಲು ಎಲ್ಲರೂ ಶ್ರಮಿಸುವದಾಗಿ ಭರವಸೆ ನೀಡಿದರು.

ಉತ್ತರ ಕರ್ನಾಟಕ ಪ್ರಾಂತ ಸಂಚಾಲಕ ಭವರಲಾಲ್ ಆರ್ಯ ಮಾತನಾಡಿ, ರಾಮದೇವ ಗುರೂಜಿ ಸಮೃದ್ಧ ಭಾರತ ನಿರ್ಮಾಣಕ್ಕಾಗಿ ವಿಶ್ವಕ್ಕೆ ಮಹಾ ಮಾನವತಾವಾದಿಯ ಸಂದೇಶ ತಲುಪಿಸಲಿ ಎಂದು ಸದಾಶಯ ವ್ಯಕ್ತಪಡಿಸಿದರು.

ನೇತೃತ್ವ ವಹಿಸಿದ್ದ ಮುಚಳಂಬನ ಶ್ರೀ ಪ್ರಣವಾನಂದ ಮಹಾಸ್ವಾಮಿಜಿ ಆಶೀರ್ವಚನ ನೀಡಿ, ಬಾಬಾ ಅವರು ರಾಷ್ಟ್ರ ರಕ್ಷಣೆ ಮತ್ತು ದೇಶಾ ಭಿಮಾನ ಕುರಿತು ಜಾಗೃತಿ ಮೂಡಿಸುತ್ತಿದ್ದಾರೆ. ಇಲ್ಲಿ ನಡೆವ ಕಾರ್ಯಕ್ರಮ ಯಶಸ್ವಿಗೊಳಿಸಲು ಎಲ್ಲರೂ ಕೆಲಸ ಮಾಡೋಣ ಎಂದರು.

ಭಾರತ ಸ್ವಾಭಿಮಾನ್ ಟ್ರಸ್ಟ್‌ನ ತಾಲೂಕು ಘಟಕದ ಅಧ್ಯಕ್ಷ ಡಾ.ಬಸವರಾಜ ಸ್ವಾಮಿ, ಡಾ.ಎಸ್.ಬಿ. ಮಹಾಜನ್, ನ್ಯಾಯವಾದಿ ಎಂ.ಜಿ.ಮಹಾಜನ್, ಆರ್ಯ ಸಮಾಜ ಪ್ರಮುಖ ಸುಭಾಷ ಅಷ್ಟಿಕರ್, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ರವಿ ಚಂದನಕೆರೆ ಸೇರಿದಂತೆ ಇತರ ಪ್ರಮುಖರು ಮಾತನಾಡಿದರು.

## ಸ್ವಾಗತ ಸಮಿತಿಗೆ ಮುಚಳಂಬ ಶ್ರೀ

**ಬಾಬಾರ ಕಾರ್ಯಕ್ರಮ ಯಶಸ್ವಿಗೊಳಿಸಲು ಸೋಮವಾರ ಆರ್ಯ ಸಮಾಜ ಭವನದಲ್ಲಿ ನಡೆದ ಪ್ರಮುಖರ ಸಭೆಯಲ್ಲಿ ಸ್ವಾಗತ ಸಮಿತಿ ಅಧ್ಯಕ್ಷರಾಗಿ ಮುಚಳಂಬ ಶ್ರೀ ಪ್ರಣವಾನಂದ ಮಹಾಸ್ವಾಮಿಯವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.**



**ಬಸವಕಲ್ಯಾಣಕ್ಕೆ ಡಿ.8 ರಂದು ಯೋಗಗುರು ರಾಮದೇವ ಬಾಬಾ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ನಗರದ ಆರ್ಯ ಸಮಾಜ ಭವನದಲ್ಲಿ ನಡೆದ ಪೂರ್ವ ಸಿದ್ಧತಾ ಸಭೆಯನ್ನು ಶ್ರೀ ಪ್ರಣವಾನಂದ ಸ್ವಾಮಿಜಿ ಉದ್ಘಾಟಿಸಿದರು. ಭವರಲಾಲ್ ಆರ್ಯ, ಪರಮಾನಂದ ಸ್ವಾಮಿಜಿ, ತ್ರಿಪುರಾಂತ ಶ್ರೀ, ಡಾ.ಬಸವರಾಜ, ಎಂ.ಜಿ. ಮಹಾಜನ್ ಇದ್ದರು.**

ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿದ್ದರು. ಸುನೀಲ್ ಪಾಟೀಲ್, ಸುಭಾಷ ಹೋಳಕುಂದೆ, ಬಸವರಾಜ ವರಕಾಲೆ, ಸುಭಾಷ ಸುತ್ರಾವೆ, ವೆಂಕಟ ಗುರ್ಜರ, ಲಕ್ಷ್ಮೀಬಾಯಿ ಪಾಟೀಲ್, ಶಿವರಾಜ ಬಾಲಕಿಲೆ, ಪ್ರಭುಲಿಂಗಯ್ಯ ಟಂಕಸಾಲಿಮಠ, ಬಸವರಾಜ ಪಾಟೀಲ್ ಶಿವಪುರ, ನಾರಾಯಣ ಬುನ್ನಾ, ಧನರಾಜ ರಾಜೋಳೆ, ರುದ್ರೇಶ ಪಾಟೀಲ್ ಬೇಲೂರ್ ಇತರರಿದ್ದರು.

ದಿನಾಂಕ 16-11-2011 ಬುಧವಾರ ವಿಜಯ ಕರ್ನಾಟಕ ದಿನ ಪತ್ರಿಕೆ.




ಬಸವಕಲ್ಯಾಣದ ರಥ ಮೈದಾನದಲ್ಲಿ ನಡೆದ ಯೋಗ ಶಿಬಿರ ಮತ್ತು ಬಹಿರಂಗ ಸಭೆಯಲ್ಲಿ ಬಾಬಾ ಮಾತನಾಡಿದರು.

# ಯೋಗ ಶಿಬಿರಕ್ಕೆ ಸ್ವಾಮೀಜಿಗಳ ಸಾಥ್

ಬಸವಕಲ್ಯಾಣ: ಭಾರತ ಸ್ವಾಭಿಮಾನ ಯಾತ್ರೆ ನಿಮಿತ್ತ ನಗರದ ರಥ ಮೈದಾನದಲ್ಲಿ ಗುರುವಾರ ಆಯೋಜಿಸಲಾಗಿದ್ದ ಉಚಿತ ಯೋಗ ಶಿಬಿರ ಮತ್ತು ಬಹಿರಂಗ ಸಭೆಯಲ್ಲಿ ಭಾಗವಹಿಸಲು ಗುರುವಾರ ನಗರಕ್ಕೆ ಆಗಮಿಸಿದ ರಾಮದೇವ ಬಾಬಾ ಅವರಿಗೆ ಬಸವಕಲ್ಯಾಣದಲ್ಲಿ ಅದ್ದೂರಿ ಸ್ವಾಗತ ನೀಡಲಾಯಿತು.

ಬಾಬಾ ರಾಮದೇವ ಅವರನ್ನು ಸಸ್ತಾಪುರ ಬಂಗ್ಲಾ ಮಹಾದ್ವಾರದ ಬಳಿಯಲ್ಲಿ ಮಠಾಧೀಶರ ನೇತೃತ್ವದಲ್ಲಿ ಸ್ವಾಗತ ಸಮಿತಿ ಪ್ರಮುಖರು, ಗಣ್ಯರು ಸ್ವಾಗತಿಸಿ ಬರ ಮಾಡಿಕೊಂಡರು.

ಶ್ರೀ ಪ್ರಣವಾನಂದ ಮಹಾಸ್ವಾಮಿಜಿ, ಶ್ರೀ ಚನ್ನವೀರ ಶಿವಾಚಾರ್ಯರು, ಶ್ರೀ ರಾಜೇಶ್ವರ ಶಿವಾಚಾರ್ಯರು, ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ.ಬಸವರಾಜ ಸ್ವಾಮಿಜಿ, ರವಿ ಚಂದನಕೆರೆ, ಸುನೀಲ ಪಾಟೀಲ್, ರಾಜಕುಮಾರ ಸುಗರೆ, ಬಸವರಾಜ ವರಕಾಲೆ, ಶಾಂತಲಿಂಗ ಸ್ವಾಮಿ, ಚನ್ನಬಸಪ್ಪ ಬಿರಾದಾರ, ರುದ್ರಮುನಿ ಮಠಪತಿ, ಐಜಿ ನಾಗರಾಜ ಇತರರಿದ್ದರು.

ಧ್ವಜಗಳೊಂದಿಗೆ ಬೈಕ್ ರ‍್ಯಾಲಿಯಲ್ಲಿ ಯುವಕರು ಭಾಗವಹಿಸಿದ್ದರು.

ದಿನಾಂಕ 10-12-2011 ಶನಿವಾರ ವಿಜಯಕರ್ನಾಟಕ.



**ಹಣ್ಣು ವಿತರಣೆ.....**

ರಕ್ಷಾ ಬಂಧನ ನಿಮಿತ್ತ ಸ್ವತಂತ್ರ ಕರ್ನಾಟಕ ರಕ್ಷಣಾ ವೇದಿಕೆಯಿಂದ ಬಸವಕಲ್ಯಾಣ ಸರ್ಕಾರಿ ಆಸ್ಪತ್ರೆಯಲ್ಲಿ ಹಣ್ಣು ವಿತರಿಸಲಾಯಿತು. ತ್ರಿಪುರಾಂತ ಸ್ವಾಮೀಜಿ, ರಾಜಕುಮಾರ ಸ್ವಾಮಿ, ಧನರಾಜ ರಾಜೋಳೆ, ಶಿವಾನಂದ ಹಿರೇಮಠ, ಸರೋಜಾ ರೆಡ್ಡಿ, ನಾಗೇಶ ಕಲ್ಯಾಣಕರ್, ಮಧುಸೂದನ ರೆಡ್ಡಿ, ಡಾ.ಭುರಾಳೆ, ಡಾ.ನಾಗರಾಜ ಇದ್ದರು.

ದಿನಾಂಕ 3-8-2012 ಶುಕ್ರವಾರ ವಿಜಯವಾಣಿ ದಿನಪತ್ರಿಕೆ

Scanned by CamScanner



ಬಸವಕಲ್ಯಾಣ ತಾಲ್ಲೂಕಿನ ಬೇಲೂರ್‌ನ ಕಲ್ಯಾಣ ಕಟ್ಟಿಮನಿ ಹಿರೇಮಠದಲ್ಲಿ ಈಚೆಗೆ ಹಮ್ಮಿಕೊಂಡಿದ್ದ ಸಿದ್ಧಲಿಂಗ ಶಿವಾಚಾರ್ಯರ ಪುಣ್ಯಸ್ಮರಣೋತ್ಸವದಲ್ಲಿ ದೇವೇಂದ್ರ ಬರಗಾಲೆ ಮಾತನಾಡಿದರು. ಗುರುಲಿಂಗ ಶಿವಾಚಾರ್ಯರು, ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯರು ಉಪಸ್ಥಿತರಿದ್ದರು.

# ಬೇಲೂರ ಶಿವಾಚಾರ್ಯರ ಸ್ಮರಣೆ

ಬಸವಕಲ್ಯಾಣ: ತಾಲ್ಲೂಕಿನ ಬೇಲೂರಿನ ಕಲ್ಯಾಣ ಕಟ್ಟಿಮನಿ ಹಿರೇಮಠದಲ್ಲಿ ಲಿಂ.ಸಿದ್ಧಲಿಂಗ ಶಿವಾಚಾರ್ಯರ 27ನೇ ಸ್ಮರಣೋತ್ಸವ ಈಚೆಗೆ ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ದೇವೇಂದ್ರ ಬರಗಾಲೆ ಮಾತನಾಡಿ ಮೊದಲು ಮಠಗಳು ಕಠಿಣ ಆಚರಣೆಗಳಿಂದ ಜನರನ್ನು ದೂರ ಇಡುತ್ತಿದ್ದವು. ಆದರೆ ಇಂದು ಮಠಾಧೀಶರ ದ್ವಂದ್ವ ನೀತಿಯಿಂದಾಗಿ ಜನರು ಮಠದಿಂದ ದೂರವಾಗುತ್ತಿದ್ದಾರೆ ಎಂದರು. ವಿಭಿನ್ನ ಹೇಳಿಕೆ, ಆಚರಣೆಗಳಿಂದ ಲಿಂಗಾಯತ ಸಮುದಾಯ ಒಡೆಯುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಜನರು ಬರೀ ಉಪದೇಶ ಕೇಳಿದರೆ ಸಾಲದು ಅದರಂತೆ ನಡೆಯಬೇಕು. ಗುರುವಿನಲ್ಲಿ ಭಕ್ತಿಯಿದ್ದರೆ ಜೀವನದಲ್ಲಿ ಮುಕ್ತಿ ಸಿಗುತ್ತದೆ ಎಂದರು.

ಶರಣಯ್ಯ ಸ್ವಾಮಿ ಮಾತನಾಡಿದರು. ಮಠಾಧಿಪತಿ ಗುರುಲಿಂಗ ಶಿವಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು. ಗುಂಡಪ್ಪ ಅಂತಪ್ಪ, ರಾಜಪ್ಪ ಹಲಿಂಗೆ, ಗುರಪ್ಪ ಬಡೂರೆ, ವಿಶ್ವನಾಥ ಜಮಾದಾರ, ಬಸವರಾಜ ಪಾಟೀಲ ಉಪಸ್ಥಿತರಿದ್ದರು. ರೇವಣಸಿದ್ಧ ಪಾಟೀಲ ನಿರೂಪಿಸಿದರು. ಶಿವಾನಂದ ಶೀಲವಂತ ವಂದಿಸಿದರು. ನಂತರ ರಾತ್ರಿ ಜಾಗರಣೆ ನಡೆಯಿತು.

ದಿನಾಂಕ 3-1-12 ಮಂಗಳವಾರ
ಪ್ರಜಾವಾಣಿ ದಿನಪತ್ರಿಕೆ

# 'ಯುವಕರಲ್ಲಿ ತಿಳಿವಳಿಕೆ ಅಗತ್ಯ'

ಪ್ರಜಾವಾಣಿ ವಾರ್ತೆ




ಬಸವಕಲ್ಯಾಣದ ಮಹಾತ್ಮಾಗಾಂಧಿ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ಎಬಿವಿಪಿಯಿಂದ ಗುರುವಾರ ಹಮ್ಮಿಕೊಂಡ ಸ್ವಾಮಿ ವಿವೇಕಾನಂದರ 150 ನೇ ಜಯಂತಿ ಕಾರ್ಯಕ್ರಮದಲ್ಲಿ ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಪ್ರಾಚಾರ್ಯ ವಿಠ್ಠಲ ಪಂಚಾಳ, ರುದ್ರೇಶ ಪಾಟೀಲ ಉಪಸ್ಥಿತರಿದ್ದರು.

ಬಸವಕಲ್ಯಾಣ: ದೇಶ ಪ್ರಗತಿ ಸಾಧಿಸಲು ಯುವಕರಲ್ಲಿ ತಿಳಿವಳಿಕೆ ಬರಬೇಕಾಗಿದೆ. ಮೂಢನಂಬಿಕೆ, ದುಶ್ಚಟಗಳಿಂದ ದೂರ ಇರಬೇಕಾಗಿದೆ ಎಂದು ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯರು ಅಭಿಪ್ರಾಯಪಟ್ಟರು.

ಇಲ್ಲಿನ ಮಹಾತ್ಮಾಗಾಂಧಿ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ಎಬಿವಿಪಿಯ ಸಂಯುಕ್ತ ಆಶ್ರಯದಲ್ಲಿ ಗುರುವಾರ ಹಮ್ಮಿಕೊಂಡ ಸ್ವಾಮಿ ವಿವೇಕಾನಂದರ 150 ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಮಯದ ಸದುಪಯೋಗ ಮಾಡಿಕೊಳ್ಳಬೇಕು. ಒಂದು ಕ್ಷಣವೂ ಸುಮ್ಮನೆ ಕೂರದಂತೆ ನಿಯಮ ರೂಪಿಸಿಕೊಂಡು ಕ್ರಮಬದ್ಧವಾಗಿ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕು. ಸ್ವಾಮಿ ವಿವೇಕಾನಂದರ ಪುಸ್ತಕಗಳನ್ನು ಓದಿ ಜ್ಞಾನ ಪಡೆದುಕೊಳ್ಳಬೇಕು ಎಂದರು.

ಎಬಿವಿಪಿ ತಾಲ್ಲೂಕು ಸಂಚಾಲಕ ರುದ್ರೇಶ ಪಾಟೀಲ ಮಾತನಾಡಿ ವಿವೇಕಾನಂದರ ಜೀವನದ ಬಗ್ಗೆ ಹೇಳಿದರು. ಚಿಕಾಗೋದಲ್ಲಿ ಮಾಡಿದ ಭಾಷಣದಿಂದಾಗಿ ವಿವೇಕಾನಂದರ ವ್ಯಕ್ತಿತ್ವ ಬೆಳಕಿಗೆ ಬಂತು. ಭಾರತೀಯ ಸಂಸ್ಕೃತಿಯನ್ನು ವಿದೇಶಿಗರು ಕೊಂಡಾಡುವಂತಾಯಿತು ಎಂದರು.

ಪ್ರಾಚಾರ್ಯ ವಿಠ್ಠಲ ಪಂಚಾಳ ಅಧ್ಯಕ್ಷತೆ ವಹಿಸಿದ್ದರು. ಪ್ರಮುಖರಾದ ದಿಗಂಬರ ಬೊಕ್ಕೆ, ವೀರಪಣ್ಣ ಬಿರಾದಾರ, ರವೀಂದ್ರ ಕಿಟ್ಟಾ, ಸುನಿಲ ಪಾಟೀಲ, ಭಾಗ್ಯಲಕ್ಷ್ಮಿ ಬೇಲೂರೆ ಉಪಸ್ಥಿತರಿದ್ದರು.

ಮಹಾದೇವ ಪಾಟೀಲ ನಿರೂಪಿಸಿದರು. ಹಣಮಂತ ಮಾಶೆಟ್ಟೆ ವಂದಿಸಿದರು. ವಿದ್ಯಾರ್ಥಿಗಳು, ಉಪನ್ಯಾಸಕರು ಪಾಲ್ಗೊಂಡಿದ್ದರು.

ದಿನಾಂಕ 13-1-2012 ಶುಕ್ರವಾರ ಪ್ರಜಾವಾಣಿ ದಿನಪತ್ರಿಕೆ.

# ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ

ಬಸವಕಲ್ಯಾಣ: ಜಗದ್ಗುರು ರಂಭಾಪುರಿ ಪೀಠದ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆಯ ತಾಲೂಕು ಘಟಕವನ್ನು ರಚಿಸ ಲಾಗಿದೆ. ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ (ಗೌರವ ಅಧ್ಯಕ್ಷರು), ವೀರಣ್ಣ ಶೀಲವಂತ (ಅಧ್ಯಕ್ಷ), ಬಸವಂತಪ್ಪ ಲವಾರೆ (ಉಪಾಧ್ಯಕ್ಷ), ಸೂರ್ಯಕಾಂತ ಶೀಲವಂತ (ಪ್ರಧಾನ ಕಾರ್ಯದರ್ಶಿ), ರಮೇಶ ರಾಜೋಳೆ (ಕಾರ್ಯದರ್ಶಿ), ಪ್ರಭುಲಿಂಗಯ್ಯ ಟಂಕಸಾಲಿಮಠ ( ಸಹ ಕಾರ್ಯದರ್ಶಿ), ಮಲ್ಲಿಕಾರ್ಜುನ ನಂದಿ (ಸಂಘಟನಾ ಕಾರ್ಯ ದರ್ಶಿ) ಹಾವಯ್ಯ ಸ್ವಾಮಿ ಚಟ್ಟಿ( ಕೋಶಾಧ್ಯಕ್ಷ). ರೇವಣಸಿದ್ದಯ್ಯ ಸ್ವಾಮಿ ಮಠಪತಿ, ಶರಣಪ್ಪ ಬಿರಾದಾರ, ದಯಾನಂದ ಶೀಲವಂತ, ಎ.ಜಿ. ಪಾಟೀಲ್, ರಮೇಶ ಸ್ವಾಮಿ, ಸುನೀಲ ಪಾಟೀಲ್, ರಾಜ ಕುಮಾರ ಪಾಟೀಲ್, ಡಾ.ಜಿ.ಎಸ್. ಭುರಳೆ, ಶಿವಕುಮಾರ ಸ್ವಾಮಿ, ಗಿರಿಮಲ್ಲಯ್ಯ ಸ್ವಾಮಿ, ರುದ್ರೇಶ್ವರ ಗೋರ್ಟಾ, ರೇವಣಸಿದ್ದ ಬಾಬಾನೋರ, ಚಂದ್ರಕಾಂತ ಸ್ವಾಮಿ, ಶಾಂತವೀರ ಸ್ವಾಮಿ, ರಾಕೇಶ ಸ್ವಾಮಿ, ಶಿವಕುಮಾರ ಪಾಟೀಲ್ ಹಾಗೂ ನಾಗರಾಜ ಶಿವಪುರೆ ಕಾರ್ಯಕಾರಿ ಮಂಡಳಿ ಸದಸ್ಯರಾಗಿದ್ದಾರೆ.

ದಿನಾಂಕ 17-4-12 ಮಂಗಳವಾರ
ವಿಜಯಕರ್ನಾಟಕ

Scanned by CamScanner

## ತಡೋಳಾದಲ್ಲಿ ಸರ್ವಧರ್ಮ ಸಮ್ಮೇಳನ

# ಸರ್ವ ಧರ್ಮ ಒಳಿತನ್ನೇ ಬಯಸುತ್ತವೆ: ಬೆಲ್ದಾಳ ಶ್ರೀ

▪ **ಏಕ ಸುದ್ದಿಲೋಕ** ಬಸವಕಲ್ಯಾಣ

ಎಲ್ಲ ಧರ್ಮಗಳು ಪವಿತ್ರ. ಸರ್ವ ಧರ್ಮಗಳು ಒಳಿತನ್ನೇ ಬಯಸುತ್ತವೆ ಎಂದು ಕೌಟಾದ ಶ್ರೀ ಸಿದ್ಧರಾಮೇಶ್ವರ ಶರಣರು ಬೆಲ್ದಾಳ ಪ್ರತಿಪಾದಿಸಿದರು.

ತಡೋಳಾದ ಜೈ ಭವಾನಿ ಮಂದಿರ ಹಾಗೂ ಸದ್ಗುರು ಯಲ್ಲಾಲಿಂಗ ಪ್ರಭುಗಳ ಪುಣ್ಯಾಶ್ರಮದಲ್ಲಿ ಶ್ರೀ ಯಲ್ಲಾಲಿಂಗ ಪ್ರಭುಗಳ 26ನೇ ಪುಣ್ಯ ಸ್ಮರಣೋತ್ಸವ, ಪೂಜ್ಯ ಮಾತೆ ಶಿವಶರಣೆ ಮಹಾದೇವಿ ತಾಯಿ ಅವರ 47ನೇ ಜನ್ಮ ದಿನ ನಿಮಿತ್ತ ಶನಿವಾರ ನಡೆದ ಸರ್ವ ಧರ್ಮ ಸಮ್ಮೇಳನ ಉದ್ಘಾಟಿಸಿದ ಅವರು, ಧರ್ಮ -ಧರ್ಮಗಳ ಮಧ್ಯೆ ಸಮನ್ವಯತೆ ಅವಶ್ಯಕತೆ ಇದೆ ಎಂದರು.

ಧರ್ಮ-ಧರ್ಮಗಳ ಮಧ್ಯೆ ವೈಮನಸ್ಸು ತಾಂಡವಾಡುತ್ತಿದೆ. ಧರ್ಮದ ಹೆಸರಿನಲ್ಲಿ ಪ್ರತ್ಯೇಕತಾವಾದ ಬಲಗೊಳುತ್ತಿದ್ದು, ಇದು ಮನಸ್ಸುಗಳನ್ನು ಒಡೆಯಲು ಕಾರಣವಾಗುತ್ತದೆ ಎಂದು ಕಳವಳ ವ್ಯಕ್ತಪಡಿಸಿದ ಶ್ರೀಗಳು, ಒಂದು ಧರ್ಮದವರು ಇನ್ನೊಂದು ಧರ್ಮ ವಿರೋಧಿಸುವದು ಪ್ರತ್ಯೇಕತಾವಾದ. ಧರ್ಮಗಳು ಒಳ್ಳೆಯದನ್ನೇ ಸಾರಿದ್ದು, ಈ ವಾಸ್ತವವನ್ನು ಎಲ್ಲರೂ ಅರಿಯಬೇಕಿದೆ ಎಂದರು.

ಸಾನ್ನಿಧ್ಯ ವಹಿಸಿದ್ದ ಭಾಲ್ಕಿ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಆಶೀರ್ವಚನ ನೀಡಿ, ಎಲ್ಲ ಧರ್ಮಗಳ ಉದ್ದೇಶ ಒಳ್ಳೆಯದೇ ಅಗಿದೆ. ಎಲ್ಲರೂ ಒಂದಾಗಿ ಸಮನ್ವಯತೆ ಮೂಡಿಸುವ ಕೆಲಸ ಮಾಡಬೇಕು ಎಂದರು.

ಹುಲಸೂರನ ಶ್ರೀ ಶಿವಾನಂದ ಮಹಾಸ್ವಾಮಿಗಳು ಆಶೀರ್ವಚನ ನೀಡಿ, ಪ್ರತಿಯೊಬ್ಬರು ಒಂದಾಗಿ ಸೌಹಾರ್ದತೆಯಿಂದ ಬದುಕುವ ಭವ್ಯ ಸಂಸ್ಕೃತಿ ಭಾರತ ದೇಶದಲ್ಲಿದೆ. ಎಲ್ಲರೂ ಒಂದಾಗಿ ಸದೃಢ-ಸಮೃದ್ಧ ದೇಶ ಕಟ್ಟುವ ಕಾರ್ಯದಲ್ಲಿ ಕೈಜೋಡಿಸುವ ಅವಶ್ಯಕತೆ ಇದೆ ಎಂದರು.



**ತಡೋಳಾದಲ್ಲಿ ಸದ್ಗುರು ಯಲ್ಲಾಲಿಂಗ ಪ್ರಭುಗಳ 26ನೇ ಪುಣ್ಯ ಸ್ಮರಣೋತ್ಸವ ನಿಮಿತ್ತ ನಡೆವ ಸರ್ವ ಧರ್ಮ ಸಮ್ಮೇಳನ ಶ್ರೀ ಸಿದ್ಧರಾಮ ಶರಣರು ಬೆಲ್ದಾಳ ಉದ್ಘಾಟಿಸಿದರು. ಶ್ರೀ ಷಡಕ್ಷರಿ ಶಿವಯೋಗಿ ಬಸವರಾಜೇಂದ್ರ ಮಹಾಸ್ವಾಮಿಜಿ, ಶ್ರೀ ಬಸವಲಿಂಗ ಪಟ್ಟದ್ದೇವರು, ಶ್ರೀ ಶಿವಾನಂದ ಮಹಾಸ್ವಾಮಿಜಿ, ಶಿವಶರಣೆ ಮಹಾದೇವಿ ತಾಯಿ, ಬಂತೆ ಸಂಘಾನಂದ, ತ್ರಿಪುರಾಂತ ಶ್ರೀ, ಡಾ.ಗವಿಸಿದ್ಧಪ್ಪ ಪಾಟೀಲ್ ಇದ್ದರು.**

ನೇತೃತ್ವ ವಹಿಸಿದ್ದ ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಹಿರಿಯ ಸಾಹಿತಿ ಎಚ್. ಕಾಶೀನಾಥ ರೆಡ್ಡಿ, ಕಾಂಗ್ರೆಸ್ ಮುಖಂಡರಾದ ಬಿ.ನಾರಾಯಣರಾವ, ಶಾಂತಪ್ಪ ಪಾಟೀಲ್, ಹೈಕ ಹೋರಾಟ ಸಮಿತಿ ಜಿಲ್ಲಾಧ್ಯಕ್ಷ ಪಂಡಿತರಾವ ಚಿದ್ರಿ, ದಿಲೀಪಗೀರ ಗೋಸ್ವಾಮಿ ಮಾತನಾಡಿದರು.

ಅಚಲೇರಿ-ಜಿಡಗಾ-ತಡೋಳಾದ ಪೂಜ್ಯ ಶ್ರೀ ಷಡಕ್ಷರಿ ಬಸವ ರಾಜೇಂದ್ರ ಮಹಾಸ್ವಾಮಿಗಳಿಗೆ ಸುವರ್ಣ ಕಿರೀಟ ಧಾರಣೆ, ಹಾಗೂ ತುಲಾಭಾರ ಸಮಾರಂಭ ಜರುಗಿತು. ತಡೋಳಾದ ಶ್ರೀ ಬಾಲ ತಪಸ್ವಿನಿ ಶಿವಶರಣೆ ಮಹಾದೇವಿ ತಾಯಿ ನೇತೃತ್ವ ವಹಿಸಿದ್ದರು.

ಬೆಟಬಾಲಕುಂದಾದ ಶ್ರೀ ಸದಾನಂದ ಅಪ್ಪಗಳು, ಗೊಬ್ಬರವಾಡಿಯ ಶ್ರೀ ಹಣಮಂತ ಮಹಾರಾಜರು, ಬುರಾಣಾಪುರನ ಶ್ರೀ ಸಿದ್ರಾಮ ಮಹಾರಾಜರು, ಬೇಲೂರನ ಶ್ರೀ ಪಂಚಾಕ್ಷರಿ ಸ್ವಾಮಿಜಿ, ಬುದ್ಧ ವಿಹಾರನ ಶ್ರೀ ಸಂಘಾನಂದ ಬಂತೆ, ಫಾದರ್ ಬೆಂಜಮಿನ್ ಡಿ ಸೋಜಾ, ಮಹ್ಮದ ರೈಸೋದ್ದಿನ್ ಸಮ್ಮುಖ ವಹಿಸಿದ್ದರು.

ಬೀದರ್‌ನ ವಿಜಯಕುಮಾರ ರಾಂಪುರೆ, ಕಸಾಪ ತಾಲೂಕು ಅಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ರಾಜೇಂದ್ರ ಗೋಖಲೆ, ಸರಕಾರಿ ಪ್ರಥಮ ದರ್ಜೆ ಕಾಲೇಜ್ ಪ್ರಾಚಾರ್ಯ ಪ್ರೊ. ನಾಗೇಂದ್ರ ಢೋಲೆ, ಎಪಿಎಂಸಿ ಅಧ್ಯಕ್ಷ ಪ್ರಕಾಶ ಮೆಂಡೋಳೆ, ಗ್ರಾಪಂ ಅಧ್ಯಕ್ಷ ಸಂಜು ಮೇತ್ರೆ, ತಾಪಂ ಸದಸ್ಯೆ ಫುಲಾಬಾಯಿ ಮಾಳಗೆ, ಅಲ್ತಾಫ್ ಅಮ್ಜದ, ವ್ಯವಸ್ಥಾಪಕ ಗೌಡಪ್ಪ (ನಾಗಶೆಟ್ಟಿ)ಪಾಟೀಲ್ ಉಪಸ್ಥಿತರಿದ್ದರು.

ಸಮಿತಿ ಸಂಚಾಲಕ ಸಾಹಿತಿ ಡಾ.ಗವಿಸಿದ್ಧಪ್ಪ ಪಾಟೀಲ್ ಸ್ವಾಗತಿಸಿದರು. ಸಂಯೋಜಕ ಡಾ.ಬಲರಾಮ ಹುಡೆ ನಿರೂಪಿಸಿದರು. ಉಪನ್ಯಾಸಕ ಜೈಸೇನ್ ಪ್ರಸಾದ ನಿರೂಪಿಸಿದರು. ಗಾಯಕ ರಾಜಕುಮಾರ ಹೂಗಾರ ಅವರಿಂದ ಪ್ರಾರ್ಥನೆ, ತ್ರಿವೇಣಿ ಮಠಪತಿ ಹಾಗೂ ಸಂಗಡಿಗರಿಂದ ಸ್ವಾಗತ ಗೀತೆ ಜರುಗಿತು.

ಬಾಲ ತಪಸ್ವಿನಿ ಶಿವಶರಣೆ ಪೂಜ್ಯ ಮಾತೆ ಮಹಾದೇವಿ ತಾಯಿ ಅವರ ಜೀವನ ಚರಿತ್ರೆ ಕುರಿತು ಡಾ.ಗವಿಸಿದ್ಧಪ್ಪ ಪಾಟೀಲ್ ಅವರು ಬರೆದ ಪುಸ್ತಕವನ್ನು ಇದೇ ಸಂದರ್ಭದಲ್ಲಿ ಭಾಲ್ಕಿ ಶ್ರೀ ಬಿಡುಗಡೆ ಮಾಡಿದರು.

ದಿನಾಂಕ 22-1-2012 ಭಾನುವಾರ [illegible] ದಿನಪತ್ರಿಕೆ.



## ಚಿತ್ರಕಲಾ ಪ್ರದರ್ಶನ

ಬಸವಕಲ್ಯಾಣದ ಬಸವೇಶ್ವರ ಚಿತ್ರಕಲಾ ಕಾಲೇಜಿನಲ್ಲಿ ರಾಜ್ಯೋತ್ಸವ ಅಂಗವಾಗಿ ಶುಕ್ರವಾರ ಹಮ್ಮಿಕೊಂಡ ಚಿತ್ರಕಲಾ ಪ್ರದರ್ಶನವನ್ನು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ವೀಕ್ಷಿಸಿದರು. ಪ್ರಭುಲಿಂಗಯ್ಯ, ಚಂದ್ರಕಾಂತ ಸ್ವಾಮಿ ಇದ್ದರು

Scanned by CamScanner

# ಬಸವಕಲ್ಯಾಣ: ಮಹಾಸತ್ಸಂಗಕ್ಕೆ ಜನ ಸಾಗರ

▪ ವಿಕ ಸುದ್ದಿಲೋಕ ಬಸವಕಲ್ಯಾಣ

ನಗರದ ರಥ ಮೈದಾನದಲ್ಲಿ ಸೋಮವಾರ ಸಂಜೆ ಪೂಜ್ಯ ಶ್ರೀ ರವಿಶಂಕರ ಗುರೂಜಿಯವರ ಸಾನ್ನಿಧ್ಯದಲ್ಲಿ ನಡೆದ ಮಹಾಸತ್ಸಂಗದಲ್ಲಿ ಅಪಾರ ಜನ ಸ್ತೋಮ ಭಾಗವಹಿಸಿದ್ದು, ಇಡೀ ಮೈದಾನದಲ್ಲಿ ಎಲ್ಲೆಡೆ ಕಿಕ್ಕಿರಿದು ತುಂಬಿದ ಜನ ಸಾಗರ ಕಂಡು ಬಂತು. ನಗರ, ಜಿಲ್ಲೆ-ಹೊರ ಜಿಲ್ಲೆ, ಪಕ್ಕದ ಮಹಾರಾಷ್ಟ್ರದ ಹಲವು ಗ್ರಾಮಗಳಿಂದಲೂ ಜನರು ಆಗಮಿಸಿದ್ದರು.

ಆರಂಭದಲ್ಲಿ ಗುರೂಜಿ ಸಾನ್ನಿಧ್ಯದಲ್ಲಿ ರುದ್ರಪೂಜೆ ನಡೆದ ನಂತರ ಕನ್ನಡ-ಹಿಂದಿಯಲ್ಲಿ ಮಾತನಾಡಿದರು. ಭಜನೆ ಮಾಡುವಾಗ ಸಮಾರಂಭದಲ್ಲಿ ಭಾಗವಹಿಸಿದ್ದ ಜನಸ್ತೋಮ ಭಜನೆಯಲ್ಲಿ ತಲ್ಲೀನರಾಗಿ ತಮ್ಮನ್ನು ತಾವು ಮರೆತಂತೆ ಭಕ್ತಿಯ ಅಲೆಯಲ್ಲಿ ಮುಳುಗಿದ್ದರು.

ಭ್ರಷ್ಟಾಚಾರ, ದುರಾಚಾರ, ಮದ್ಯಪಾನ ಮುಕ್ತವಾದ ಸುಂದರ ಸಮಾಜ, ಸದೃಢ ರಾಷ್ಟ್ರ ನಿರ್ಮಾಣಕ್ಕಾಗಿ ಎಲ್ಲರೂ ಕೈಜೋಡಿಸಬೇಕು. ಇದು ಸತ್ಸಂಗದಿಂದ ಸಾಧ್ಯ. ಸಂಕ್ರಾಂತಿ ಹಬ್ಬ ಎಳ್ಳು-ಬೆಲ್ಲದ ಮಿಶ್ರಣ. ಎಳ್ಳಿನಂತೆ ಎಲ್ಲಕ್ಕಿಂತಲೂ ಸಣ್ಣವರೆಂದು ಭಾವಿಸಿ, ಬೆಲ್ಲದಂತೆ ಎಲ್ಲರಿಗೂ ಸಿಹಿಯಾಗಿ ಬಾಳಿ ಎಂದರು.

ಇದೇ ಸಂದರ್ಭದಲ್ಲಿ ತಾಲೂಕು ಸರಕಾರಿ ನೌಕರರ ಸಂಘದಿಂದ 2012ರ ನೂತನ ಕ್ಯಾಲೆಂಡರ್ ಬಿಡುಗಡೆ ಮಾಡಿದ ಅವರು, ನೌಕರ ಸಂಘದ ತಾಲೂಕು ಅಧ್ಯಕ್ಷ ಶರಣಬಸಪ್ಪ ಬಿರಾದಾರ ಅವರನ್ನು ಆಶೀರ್ವದಿಸಿದರು. ದೇಶವನ್ನು ಮುನ್ನಡೆಸುವಲ್ಲಿ ನೌಕರರ ಪಾತ್ರ ಮಹತ್ವದ್ದಾಗಿದೆ. ನೌಕರರ ಸಮಸ್ಯೆಗಳ ಕುರಿತು ಸಂಘದ ಪದಾಧಿಕಾರಿಗಳೊಂದಿಗೆ ಚರ್ಚಿಸುವದಾಗಿ ಹೇಳಿದರು.

ಹಾರಕೂಡನ ಶ್ರೀ ಚನ್ನವೀರ ಶಿವಾಚಾರ್ಯರು, ಹುಲಸೂರಿನ ಶ್ರೀ ಶಿವಾನಂದ ಮಹಾಸ್ವಾಮಿಜಿ, ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು, ಮುಚಳಂಬನ ಶ್ರೀ ಪ್ರಣವಾನಂದ ಮಹಾಸ್ವಾಮಿಜಿ, ತಾಂಬೋಳ ಶ್ರೀಗಳು ಸೇರಿದಂತೆ ಈ ಭಾಗದ ಮಠಾಧೀಶರು ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೂ ಮುನ್ನ ನಗರದ ಜಿಪಂ ಸದಸ್ಯ ಸಂಜು ಕಾಳೇಕರ್ ಅವರ ನಿವಾಸಕ್ಕೆ ಭೇಟಿ ನೀಡಿ ಸನ್ಮಾನ ಸ್ವೀಕರಿಸಿದ, ಗುರೂಜಿ ನಂತರ ಸ್ವಾಗತ ಸಮಿತಿ ಅಧ್ಯಕ್ಷ ಸುನೀಲ ಪಾಟೀಲ್ ಅವರ ನಿವಾಸಕ್ಕೆ ಭೇಟಿ ನೀಡಿದರು. ನಂತರ ಶ್ರೀ ಬಸವೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ದರ್ಶನ ಪಡೆದು, ವೇದಿಕೆಗೆ ಆಗಮಿಸಿದರು.



ಬಸವಕಲ್ಯಾಣದ ರಥ ಮೈದಾನದಲ್ಲಿ ಶ್ರೀ ರವಿಶಂಕರ ಗುರೂಜಿ ಅವರ ಸಾನ್ನಿಧ್ಯದಲ್ಲಿ ಸೋಮವಾರ ನಡೆದ ಮಹಾ ಸತ್ಸಂಗದಲ್ಲಿ ಶ್ರೀ ಶಿವಾನಂದ ಮಹಾಸ್ವಾಮಿಜಿ, ರಾಜೇಶ್ವರ ಶ್ರೀ, ಚನ್ನವೀರ ಶ್ರೀ, ಪ್ರಣವಾನಂದ ಸ್ವಾಮಿಜಿ ಇತರರು ಇದ್ದರು.

ದಿನಾಂಕ 18-1-2012 ಬುಧವಾರ ವಿಜಯಕರ್ನಾಟಕ ದಿನಪತ್ರಿಕೆ.

# ವಿದ್ಯಾರ್ಥಿಗಳಲ್ಲಿ ಇರಲಿ ಗುರುಭಕ್ತಿ

▪ ವಿಕ ಸುದ್ದಿಲೋಕ ಬಸವಕಲ್ಯಾಣ

ಜೀವನದಲ್ಲಿ ಯಶಸ್ಸಿಗೆ ಪ್ರೀತಿ-ಭಕ್ತಿಯೇ ಕಾರಣ. ವಿದ್ಯಾರ್ಥಿಗಳಲ್ಲಿ ಇರಬೇಕು ಗುರುಗಳ ಬಗ್ಗೆ ಭಕ್ತಿ-ಗೌರವ ಎಂದು ಪೂಜ್ಯ ತೇಜಸ್ವಿನಿ ಮಾತೆ ನುಡಿದರು.

ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹೊಸದಾಗಿ ಆಗಮಿಸಿದ ಸಿಬ್ಬಂದಿಗೆ ಸ್ವಾಗತ ಮತ್ತು ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭವನ್ನು ಸಸಿಗೆ ನೀರೆರೆವ ಮೂಲಕ ಉದ್ಘಾಟಿಸಿದ ಅವರು, ವಿದ್ಯಾರ್ಥಿಗಳು ಶ್ರಮ ವಹಿಸಿ ಅಭ್ಯಾಸ ಮಾಡಬೇಕು ಎಂದರು.

ಸರಕಾರಿ ಪಿಯು ಕಾಲೇಜ್ ಪ್ರಾಚಾರ್ಯ ಎಂ.ಎಂ. ತಂಬಾಕೆ ಮಾತನಾಡಿ, ವಿದ್ಯಾರ್ಥಿಗಳು ಎಷ್ಟೇ ಸಮಸ್ಯೆಗಳನ್ನು ಬಂದರೂ ಸಮರ್ಥವಾಗಿ ಎದುರಿಸುವ ಛಲ ಹೊಂದಿರಬೇಕು. ಆತ್ಮ ವಿಶ್ವಾಸ ಮೈಗೂಡಿಸಿಕೊಳ್ಳಬೇಕು ಎಂದರು.

ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ವಿದ್ಯಾರ್ಥಿಗಳು ಶಿಕ್ಷಣದ ಜತೆಗೆ ಉತ್ತಮ ಸಂಸ್ಕಾರ ಬೆಳೆಸಿಕೊಳ್ಳಬೇಕು ಎಂದರು. ಅಧ್ಯಕ್ಷತೆ ವಹಿಸಿದ್ದ ಸರಕಾರಿ ಪ್ರಥಮ ದರ್ಜೆ ಪ್ರಾಚಾರ್ಯ ಪ್ರೊ.ನಾಗೇಂದ್ರ ಢೋಲೆ, ನೀಲಾಂಬಿಕಾ ಕಾಲೇಜಿನ ಪ್ರಾಚಾರ್ಯ ಎಂ.ಕೆ.ಗಾದಗೆ ಮಾತನಾಡಿದರು.



ಬಸವಕಲ್ಯಾಣದ ಪದವಿ ಕಾಲೇಜಿನಲ್ಲಿ ಹೊಸದಾಗಿ ಆಗಮಿಸಿದ ಸಿಬ್ಬಂದಿಗೆ ಸ್ವಾಗತ ಹಾಗೂ ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿಗಳ ಅಭಿನಂದನಾ ಸಮಾರಂಭ ಪೂಜ್ಯ ತೇಜಸ್ವಿನಿ ಮಾತೆ ಉದ್ಘಾಟಿಸಿದರು.

ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿಗಳನ್ನು ಸತ್ಕರಿಸಿ ಗೌರವಿಸಲಾಯಿತು. ಹೊಸದಾಗಿ ಆಗಮಿಸಿರುವ ಅರ್ಥಶಾಸ್ತ್ರ ವಿಭಾಗದ ಸಹಾಯ ಪ್ರಾಧ್ಯಾಪಕ ಡಾ.ಬಲಿರಾಂ ಹುಡೆ, ಎಫ್‌ಡಿಎ ಸೈಯದ ಮಕ್ದುಮ್, ಎಸ್‌ಡಿಎ ಮಲ್ಲಿಕಾರ್ಜುನ, ಮಂಗಲಾ ಅವರನ್ನು ಸ್ವಾಗತಿಸಲಾಯಿತು.

ಡಾ.ಗವಿಸಿದ್ದಪ್ಪ ಪಾಟೀಲ್ ಸ್ವಾಗತಿಸಿ, ಪ್ರಸ್ತಾವಿಕ ಮಾತನಾಡಿದರು. ಪ್ರೊ.ದಶವಂತ ಬಂಡೆ ವಂದಿಸಿದರು. ಡಾ.ಚಿತ್ರಶೇಖರ ಚಿರಳ್ಳಿ ನಿರೂಪಿಸಿದರು. ಡಾ.ಗೋವಿಂದ ಕಟಗೆ, ಪ್ರೊ.ಶಾಂತಕುಮಾರ ಬನಗುಂಡಿ, ಪ್ರೊ.ಪುಷ್ಪಾ, ಪ್ರೊ.ಸುನಂದಾ ತಾಯಪ್ಪ, ಜೈಶೇನ್ ಪ್ರಸಾದ, ಬಸವರಾಜ ಸಿಂಧೆ, ಭೀಮರೆಡ್ಡಿ, ಗೌತಮ ಕಾಂಬಳೆ, ರೈಸೋದ್ದಿನ್ ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

ದಿನಾಂಕ 1-2-12 ಬುಧವಾರ ವಿಜಯಕರ್ನಾಟಕ ದಿನಪತ್ರಿಕೆ

Scanned by CamScanner



ಬಸವಕಲ್ಯಾಣದ ಸರ್ಕಾರಿ ಪದವಿ ಕಾಲೇಜಿನಲ್ಲಿ ಮಂಗಳವಾರ ಸ್ನಾತಕೋತ್ತರ ಪದವಿ ಪಡೆದವರನ್ನು ಸನ್ಮಾನಿಸಲಾಯಿತು. ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯರು, ಶರಣೆ ತೇಜಸ್ವಿನಿತಾಯಿ, ನಾಗೇಂದ್ರ ಢೋಲೆ, ಡಾ.ಗವಿಸಿದ್ದಪ್ಪ ಪಾಟೀಲ, ಎಂ.ಕೆ.ಗಾದಗೆ, ಎಂ.ಎಂ.ತಂಬಾಕೆ, ಮಲ್ಲಿಕಾರ್ಜುನ ಹುಣಚಗೇರಿ ಪಾಲ್ಗೊಂಡಿದ್ದರು.

## 'ಯುವಕರು ಪ್ರಗತಿಪರ ಚಿಂತಕರಾಗಲಿ'

**ಪ್ರಜಾವಾಣಿ ವಾರ್ತೆ**

ಬಸವಕಲ್ಯಾಣ: ಯುವಕರು ಬರೀ ಉನ್ನತ ಶಿಕ್ಷಣ ಪಡೆದರೆ ಸಾಲದು, ಪ್ರಗತಿಪರ ಚಿಂತಕರಾಗಬೇಕು ಎಂದು ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯರು ಅಭಿಪ್ರಾಯ ಪಟ್ಟರು.

ಇಲ್ಲಿನ ಸರ್ಕಾರಿ ಪದವಿ ಕಾಲೇಜಿನಲ್ಲಿ ಮಂಗಳವಾರ ಹಮ್ಮಿಕೊಂಡ ಸ್ನಾತಕೋತ್ತರ ಪದವಿ ಪಡೆದವರ ಮತ್ತು ಹೊಸದಾಗಿ ನೇಮಕಗೊಂಡ ಸಿಬ್ಬಂದಿಗಳ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಮಯದ ಸದುಪಯೋಗ ಮಾಡಿಕೊಳ್ಳಬೇಕು. ಉತ್ತಮ ವಿಚಾರ ಹೊಂದಿ ಎಲ್ಲರಿಗೂ ಮಾದರಿಯಾದ ಆದರ್ಶ ಜೀವನ ಜೀವಿಸಬೇಕು ಎಂದರು.

ಅಂಬಿಗರ ಚೌಡಯ್ಯ ಗವಿಯ ಶರಣೆ ತೇಜಸ್ವಿನಿತಾಯಿ ಮತನಾಡಿ ಪ್ರೀತಿಯಿಂದ ಮಾತ್ರ ಎಂಥವರ ಹೃದಯವನ್ನು ಸಹ ಗೆಲ್ಲಬಹುದು ಎಂದರು. ಸಂಗಡಿಗರೊಂದಿಗೆ ಆತ್ಮೀಯತೆ ಬೆಳೆಸಿಕೊಂಡು ಉನ್ನತ ಧ್ಯೇಯವನ್ನಿಟ್ಟುಕೊಂಡು ಬದುಕಬೇಕು. ಗುರು ಹಿರಿಯರಿಗೆ ಗೌರವ ಕೊಡಬೇಕು ಎಂದರು.

ಅತಿಥಿಯಾಗಿದ್ದ ಎಂ.ಎಂ.ತಂಬಾಕೆ ಮಾತನಾಡಿ ಎಷ್ಟೇ ಕಷ್ಟ ಬಂದರೂ ಎದುರಿಸುವ ಛಲ ಯುವಕರು ಬೆಳೆಸಿಕೊಳ್ಳಬೇಕು ಎಂದರು. ಡಾ.ಗವಿಸಿದ್ಧಪ್ಪ ಪಾಟೀಲ, ಪ್ರಾಚಾರ್ಯರಾದ ಎಂ.ಕೆ.ಗಾದಗೆ, ನಾಗೇಂದ್ರ ಢೋಲೆ ಮಾತನಾಡಿದರು.

ಅರ್ಥಶಾಸ್ತ್ರದ ಸಹಾಯಕ ಪ್ರಾಧ್ಯಾಪಕ ಡಾ.ಬಲರಾಂ ಹುಡೆ, ಸಿಬ್ಬಂದಿವರ್ಗದವರಾದ ಸೈಯದ್ ಸಾಬ್, ಮಲ್ಲಿಕಾರ್ಜುನ ಹುಣಚಗೇರಿ, ಮಂಗಲಾ ಅವರನ್ನು ಸನ್ಮಾನಿಸಲಾಯಿತು. ಡಾ.ಚಿತ್ರಶೇಖರ ಚಿರಳ್ಳಿ ನಿರೂಪಿಸಿದರು. ದಶವಂತ ಬಂಡೆ ವಂದಿಸಿದರು.

ದಿನಾಂಕ 3.2.2012 ಶುಕ್ರವಾರ ಪ್ರಜಾವಾಣಿ.

ಭಾವೈಕ್ಯ ಧರ್ಮ ಸಮ್ಮೇಳನ

## 'ನಾಯಕರು ನೀತಿವಂತರಾಗಲಿ'

**ಪ್ರಜಾವಾಣಿ ವಾರ್ತೆ**



ಬಸವಕಲ್ಯಾಣದಲ್ಲಿ ಶನಿವಾರ ಮೌನೇಶ್ವರರ ಜಾತ್ರೆ ಅಂಗವಾಗಿ ನಡೆದ ಭಾವೈಕ್ಯ ಧರ್ಮ ಸಮ್ಮೇಳನದಲ್ಲಿ ಮುಚಳಂಬ ಪ್ರಣವಾನಂದ ಸ್ವಾಮೀಜಿಯವರು 'ಮೊದಲ ಗಿರಾಕಿ' ಪುಸ್ತಕ ಬಿಡುಗಡೆ ಮಾಡಿದರು. ಯಾದಗಿರಿ ಏಕದಂಡಗಿ ಮಠದ ಗುರುನಾಥ ಸ್ವಾಮೀಜಿ, ಜಯಶಾಂತಲಿಂಗ ಸ್ವಾಮೀಜಿ, ಜಿಯಾವುಲ್ ಹಸನ್ ಜಾಗೀರದಾರ, ಎಂಜಿನಿಯರ್ ಜಯಪ್ರಕಾಶ ಪೊದ್ದಾರ, ಸಾಹಿತಿ ಮಚೇಂದ್ರ ಅಣಕಲ್, ಅಭಿನವ ರುದ್ರಮುನಿ ಶಿವಾಚಾರ್ಯರು ಪಾಲ್ಗೊಂಡಿದ್ದರು.

ಬಸವಕಲ್ಯಾಣ: ದೇಶವನ್ನಾಳುವ ನಾಯಕರು ಮೊದಲು ನೀತಿವಂತರಾಗಬೇಕು. ಪ್ರಜೆಗಳ ಬಗ್ಗೆ ನೀತಿ ನಿಯಮ ರೂಪಿಸುವ ವಿಧಾನಸೌಧದಲ್ಲಿ ಕುಳಿತು ಅಶ್ಲೀಲ ಚಿತ್ರಗಳನ್ನು ನೋಡುವ ಜನಪ್ರತಿನಿಧಿಗಳಿದ್ದರೆ ಲೋಕೋದ್ಧಾರ ಸಾಧ್ಯವೇ ಎಂದು ಮುಚಳಂಬ ನಾಗಭೂಷಣ ಶಿವಯೋಗಿ ಸಂಸ್ಥಾನದ ಪ್ರಣವಾನಂದ ಸ್ವಾಮೀಜಿ ಪ್ರಶ್ನಿಸಿದರು.

ಇಲ್ಲಿನ ಮೌನೇಶ್ವರ ದೇವಸ್ಥಾನದಲ್ಲಿ ಶನಿವಾರ ಜಾತ್ರೆ ಅಂಗವಾಗಿ ನಡೆದ ಭಾವೈಕ್ಯ ಧರ್ಮ ಸಮ್ಮೇಳನದಲ್ಲಿ 'ಮೊದಲ ಗಿರಾಕಿ' ಕಥಾ ಸಂಕಲನ ಬಿಡುಗಡೆ ಮಾಡಿ ಮಾತನಾಡಿದರು.

ಪ್ರತಿಯೊಂದು ಧರ್ಮ ಸಮಾನತೆ ಸಾರುತ್ತದೆ. ಮನುಷ್ಯನ ಉದ್ಧಾರದ ಮಾರ್ಗ ತೋರುತ್ತದೆ. ಆದರೆ ಇಂದು ಪ್ರತಿ ಊರು ಲಂಕೆ, ಮನೆ, ಮನೆಯಲ್ಲಿ ರಾವಣರ ಗುಣವುಳ್ಳವರು ಇದ್ದಾರೆ. ಹೀಗಾದರೆ ಸಮಾಜೋದ್ಧಾರ ಸಾಧ್ಯವಿಲ್ಲ ಎಂದರು.

ರಾಜಾ ಬಾಗಸವಾರ ದರ್ಗಾ ಪ್ರಮುಖ ಜಿಯಾವುಲ್ ಹಸನ್ ಜಾಗೀರದಾರ ಮಾತನಾಡಿ ಒಬ್ಬರನ್ನೊಬ್ಬರು ಗೌರವಿಸುವುದನ್ನು ಕಲಿಸುವುದೇ ಧರ್ಮ. ಚೆಂದದ ಬಟ್ಟೆ ಅಥವಾ ಹಣವನ್ನು ನೋಡಿ ವ್ಯಕ್ತಿಗೆ ಗೌರವ ಕೊಡುವುದಲ್ಲ. ಗುಣವನ್ನು ನೋಡಬೇಕು ಎಂದರು.

ಮಾಜಿ ಶಾಸಕ ಎಂ.ಜಿ.ಮುಳೆ ಮಾತನಾಡಿ ಸದ್ಗುರು ಮೌನೇಶ್ವರರು ಭಾವೈಕ್ಯತೆಯ ಹರಿಕಾರ ಆಗಿದ್ದರು. ಅವರು ಸಾರಿದ ಮಾರ್ಗದಲ್ಲಿ ನಾವೆಲ್ಲ ನಡೆಯಬೇಕಾಗಿದೆ ಎಂದರು.

ಹಿರೇನಾಗಾಂವ ಜಯಶಾಂತಲಿಂಗ ಸ್ವಾಮೀಜಿ, ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಜಯಪ್ರಕಾಶ ಪೊದ್ದಾರ, ಪುಸ್ತಕದ ಲೇಖಕ ಮಚೇಂದ್ರ ಅಣಕಲ್, ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಶಬ್ಬೀರ ಪಾಶಾ, ವಿಶ್ವಕರ್ಮ ಸಮಾಜ ಸಂಘದ ಮುಖಂಡ ವಿಜಯಕುಮಾರ ಪಂಚಾಳ, ನಗರಸಭೆ ಅಧ್ಯಕ್ಷೆ ಮಂಗಲಾಬಾಯಿ ಉದ್ರೆ ಮಾತನಾಡಿದರು.

ಯಾದಗಿರಿ ಏಕದಂಡಗಿ ಮಠದ ಗುರುನಾಥ ಸ್ವಾಮೀಜಿ, ದೊಡ್ಡೇಂದ್ರ ಸ್ವಾಮೀಜಿ ಸುಲೇಪೇಟ್, ತಿಂಥಿಣಿ ಮೌನೇಶ್ವರ ಸ್ವಾಮೀಜಿ, ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯರು, ಹುಮನಾಬಾದ್ ಕುಮಾರ ಸ್ವಾಮಿ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷ ಗುರುಲಿಂಗಪ್ಪ ಸೈದಾಪುರೆ, ಕಾಂಗ್ರೆಸ್ ಮುಖಂಡ ಅರ್ಜುನ ಕನಕ, ಬಿ.ಕೆ.ರೋಹಿದಾಸ, ಹರಿಶ್ಚಂದ್ರ ಪಂಚಾಳ ಉಪಸ್ಥಿತರಿದ್ದರು. ಕಾರ್ಯಕ್ರಮದ ಮೊದಲು ಭಾವಚಿತ್ರದ ಮೆರವಣಿಗೆ ನಡೆಯಿತು.

ದಿನಾಂಕ 12-2-2012 ರವಿವಾರ ಪ್ರಜಾವಾಣಿ ದಿನಪತ್ರಿಕೆ.

Scanned by CamScanner

# ಸುಖ-ಶಾಂತಿಗಾಗಿ ಧರ್ಮದ ಮಾರ್ಗ ಅವಶ್ಯಕ

▪ ಏಕ ಸುದ್ದಿಲೋಕ ಬಸವಕಲ್ಯಾಣ

ಮನುಷ್ಯನಿಗೆ ಜೀವನದಲ್ಲಿ ಸುಖ-ಶಾಂತಿ, ನೆಮ್ಮದಿ ಸಿಗಬೇಕಾದರೆ ಧರ್ಮದ ಮಾರ್ಗದಲ್ಲಿ ನಡೆಯಬೇಕಾದ ಅವಶ್ಯಕತೆ ಇದೆ ಎಂದು ಯಾದಗಿರಿಯ ಏಕದಂಡಗಿ ಮಠದ ಶ್ರೀ ಗುರುನಾಥ ಮಹಾರಾಜ ಹೇಳಿದರು.

ಶ್ರೀ ಮೌನೇಶ್ವರ ಸೇವಾ ಸಮಿತಿ ಮತ್ತು ವಿಶ್ವಕರ್ಮ ಸಮಾಜ ಆಶ್ರಯದಲ್ಲಿ ಸದ್ಗುರು ಶ್ರೀ ಮೌನೇಶ್ವರ ದ್ವಿತೀಯ ಜಾತ್ರಾ ಮಹೋತ್ಸವದ ನಿಮಿತ್ತ ಶನಿವಾರ ಶ್ರೀ ಮೌನೇಶ್ವರ ದೇವಸ್ಥಾನದಲ್ಲಿ ಆಯೋಜಿಸಲಾದ ಧರ್ಮಸಭೆ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಮಾನವೀಯ ಮೌಲ್ಯಗಳು ಕುಸಿಯುತ್ತಿವೆ ಎಂದರು.

ಮಾನವೀಯತೆಯನ್ನು ಅಳವಡಿಸಿಕೊಳ್ಳಬೇಕು. ಧರ್ಮದ ಮಾರ್ಗದಲ್ಲಿ ನಡೆಯಬೇಕು. ಯುವಕರು ದುಶ್ಚಟಗಳಿಂದ ದೂರವಿದ್ದು, ಸದ್ಗುಣಗಳನ್ನು ಬೆಳೆಸಿಕೊಳ್ಳಬೇಕು. ಸಕಾರಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಪರಿಸರದ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು ಎಂದರು.

ಸಾನ್ನಿಧ್ಯ ವಹಿಸಿದ್ದ ರಾಜಾ ಬಾಗ ಸವಾರ ದರ್ಗದ ಪ್ರಮುಖರಾದ ಪೂಜ್ಯ ಖಾಜಾ ಜಿಯಾಉಲ್ ಹಸನ ಜಾಗೀರದಾರ ಆಶೀರ್ವಚನ ನೀಡಿ, ಎಲ್ಲ ಮಹಾತ್ಮರು-ಮಹಾಪುರುಷರು ಶಾಂತಿ-ಸೌಹಾರ್ದತೆಯ ಸಂದೇಶವೇ ನೀಡಿದ್ದಾರೆ ಎಂದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ಮುಚಳಂಬನ ಶ್ರೀ ಪ್ರಣವಾನಂದ ಮಹಾಸ್ವಾಮಿಜಿ ಆಶೀರ್ವಚನ ನೀಡಿ, ಮಹಾ ಪುರುಷರ ಸಂದೇಶಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಮಾಜಿ ಶಾಸಕ ಎಂ.ಜಿ.ಮುಳೆ ಮಾತನಾಡಿದರು. ಹಿರನಾಗಾಂವನ ಶ್ರೀ ಜೈಶಾಂತಲಿಂಗ ಮಹಾಸ್ವಾಮಿಜಿ, ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಹುಮನಾಬಾದನ ಶ್ರೀ ಕುಮಾರ ಮಹಾಸ್ವಾಮಿಜಿ, ಸುಲೇಪೇಠನ ಶ್ರೀ ದೊಡ್ಡೇಂದ್ರ ಮಹಾಸ್ವಾಮಿಜಿ, ತಿಂಥಣಿಯ ಶ್ರೀಗಳು, ರೋಹಿದಾಸ ಭಯ್ಯಾ ಆಶೀರ್ವಚನ ನೀಡಿದರು.



ಬಸವಕಲ್ಯಾಣದ ಜಗದ್ಗುರು ಮೌನೇಶ್ವರ ಜಾತ್ರಾ ಮಹೋತ್ಸವದ ನಿಮಿತ್ತ ನಡೆದ ಧರ್ಮ ಸಭೆ ಶ್ರೀ ಗುರುನಾಥ ಮಹಾರಾಜ ಉದ್ಘಾಟಿಸಿದರು.

ನಗರಸಭೆ ಅಧ್ಯಕ್ಷೆ ಮಂಗಲಾಬಾಯಿ ಉದರೆ, ಜೆಡಿಎಸ್ ತಾಲೂಕು ಅಧ್ಯಕ್ಷ ಶಬ್ಬೀರ ಪಾಶ ಮುಜಾವರ, ಎಇಇ ಜೈಪ್ರಕಾಶ ಪೊದ್ದಾರ ಮಾತನಾಡಿದರು. ಲೇಖಕ ಮಚೇಂದ್ರ ಅಣಕಲ್ ಬರೆದ ಮೊದಲ ಗಿರಾಕಿ ಕಥಾ ಸಂಕಲನದ ಬಿಡುಗಡೆಯನ್ನು ಪೂಜ್ಯರು ನೆರವೇರಿಸಿದರು. ಪುಸ್ತಕ ಕುರಿತು ಮಚೇಂದ್ರ ಅಣಕಲ್ ಮಾತನಾಡಿದರು. ತಾಪಂ ಅಧ್ಯಕ್ಷ ಗುರುಲಿಂಗಪ್ಪ ಸೈದಾಪೂರೆ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅರ್ಜುನ ಕನಕ, ಉಪಸ್ಥಿತರಿದ್ದರು. ವಿಜಯಕುಮಾರ ಪಂಚಾಳ ಸ್ವಾಗತಿಸಿ, ಪ್ರಸ್ತಾವಿಕ ಮಾತನಾಡಿದರು. ಭೀಮೇಶ ಪಂಚಾಳ ನಿರೂಪಿಸಿದರು.

**ಪಲ್ಲಕಿ ಉತ್ಸವ:** ಕಾರ್ಯಕ್ರಮಕ್ಕೂ ಮುನ್ನ ಮೌನೇಶ್ವರ ದೇವಸ್ಥಾನದಿಂದ ನಗರದ ಮುಖ್ಯ ಮಾರ್ಗವಾಗಿ ದೇವಸ್ಥಾನದ ವರೆಗೆ ಶ್ರೀ ಮೌನೇಶ್ವರ ಉತ್ಸವ ಮೂರ್ತಿ ಪಲ್ಲಕಿ ಮೆರವಣಿಗೆಯು ಸಾಂಸ್ಕೃತಿಕ ವೈಭವದೊಂದಿಗೆ ಜರುಗಿತು.

ಅಲಂಕೃತ ವಾಹನದಲ್ಲಿ ಮೌನೇಶ್ವರ ಭಾವಚಿತ್ರದೊಂದಿಗೆ ನಡೆದ ಮೆರವಣಿಗೆಯಲ್ಲಿ ಪುರವಂತರಿಂದ ನಡೆದ ಆಕರ್ಷಕ ಪ್ರದರ್ಶನ ವಿಶೇಷವಾಗಿತ್ತು. ಕುಂಭ-ಕಳಸದೊಂದಿಗೆ ಭಾಗವಹಿಸಿದ ಸುಮಂಗಲೆಯರು ಮೆರವಣಿಗೆಗೆ ಮೆರಗು ತಂದರು.

ಮೌನೇಶ್ವರ ದೇವಸ್ಥಾನ ಪಂಚ ಕಮೀಟಿ ಅಧ್ಯಕ್ಷ ತಿಪ್ಪಣ್ಣ ಪಂಚಾಳ, ಉಪಾಧ್ಯಕ್ಷ ಹರಿಶ್ಚಂದ್ರ ಪಂಚಾಳ, ಕಾರ್ಯದರ್ಶಿ ವಿಜಯಕುಮಾರ ಪಂಚಾಳ, ವೀರಭದ್ರ ಪಂಚಾಳ, ಮಹಾದೇವ ಪೊದ್ದಾರ, ಜಗನ್ನಾಥ ಪಂಚಾಳ, ಅಂಬಾದಾಸ ಪಂಚಾಳ, ಕಾಶಿನಾಥ ಪಂಚಾಳ, ನರೇಂದ್ರ ಪಂಚಾಳ, ವೈಜಿನಾಥ ಪಂಚಾಳ ಸೇರಿದಂತೆ ಸಮಾಜದ ಪ್ರಮುಖರು, ಗಣ್ಯರು, ಭಕ್ತರು ಭಾಗವಹಿಸಿದ್ದರು.

ದಿನಾಂಕ 12-2-2012 ಭಾನುವಾರ ವಿಜಯ ಕರ್ನಾಟಕ ದಿನಪತ್ರಿಕೆ



ಬಸವಕಲ್ಯಾಣ: ರಾಷ್ಟ್ರಕವಿ ಕುವೆಂಪು ಪ್ರಾಥಮಿಕ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ ನಡೆಯಿತು.

### ಕುವೆಂಪು ಪ್ರಾಥಮಿಕ ಶಾಲೆ

**ಬಸವಕಲ್ಯಾಣ:** ನಗರದ ತ್ರಿಪುರಾಂತದಲ್ಲಿ ಇರುವ ರಾಷ್ಟ್ರಕವಿ ಕುವೆಂಪು ಪ್ರಾಥಮಿ ಶಾಲೆಯ ಪ್ರಥಮ ವಾರ್ಷಿಕೋತ್ಸವ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ನಗರಸಭೆ ಅಧ್ಯಕ್ಷೆ ಮಂಗಲಾಬಾಯಿ ಉದ್ರೆ ಉದ್ಘಾಟಿಸಿದರು. ತಾಲೂಕಾ ಪಂಚಾಯತ್ ಅಧ್ಯಕ್ಷ ಗುರುಲಿಂಗಪ್ಪ ಸೈದಾಪುರೆ, ಪತ್ರಕರ್ತ ಗುರುನಾಥ ಗಡ್ಡೆ, ಸ.ಪ್ರ.ದರ್ಜೆ ಕಾಲೇಜಿನ ಪ್ರಾಚಾರ್ಯ ನಾಗೇಂದ್ರ ಢೋಲೆ ಮಾತನಾಡಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದರು. ಈ ಸಂದರ್ಭದಲ್ಲಿ ಎಪಿಎಂಸಿ ಅಧ್ಯಕ್ಷ ಪ್ರಕಾಶ ಮೆಂಡೊಳೆ, ಪ್ರಮುಖರಾದ ಸಂಜಯ ಕಾಳಗೆ, ವಿಶ್ವನಾಥ ಬಿರದಾರ ಉಪಸ್ಥಿತರಿದ್ದರು. ಪ್ರಕಾಶ ಬಿರಾದಾರ ಸ್ವಾಗತಿಸಿದರು. ಅರ್ಚನಾ ಕಾಡಾದಿ ನಿರೂಪಿಸಿದರು. ವಿಜಯಲಕ್ಷ್ಮೀ ನೇರಟ್ಟೆ ವಂದಿಸಿದರು.

ದಿನಾಂಕ 8-3-2012 ಗುರುವಾರ ಉದಯವಾಣಿ

Scanned by CamScanner

# ತ್ರಿಪುರಾಂತ ಗವಿಮಠ: ರೇಣುಕಾಚಾರ್ಯ ಜಯಂತಿ

ಬಸವಕಲ್ಯಾಣ: ವೀರಶೈವ ಪರಂಪರೆ ಸಾರುವ ಸಿದ್ಧಾಂತ ಶಿಖಾಮಣಿ ಗ್ರಂಥವನ್ನು ಸಮಾಜದ ಪ್ರತಿಯೊಬ್ಬರು ಅಧ್ಯಯನ ಮಾಡಬೇಕು ಎಂದು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು. ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠದಲ್ಲಿ ನಡೆದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಡಾ। ಬಸವರಾಜ ಸ್ವಾಮಿ ಪಂಚಾಚಾರ್ಯ ಪರಂಪರೆ ಹಾಗೂ ಪೂರ್ವಜರು ಕೊಟ್ಟು ಹೋಗಿರುವ ಅಧ್ಯಾತ್ಮದ ತಿರುಳನ್ನು ಅರಿತು ಬಾಳಬೇಕೆಂದರು. ಚಂದ್ರಕಾಂತ ಮಠಪತಿ ನಾರಾಯಣಪುರ, ಬಸವಂತಪ್ಪ ಲವಾರೆ, ಶಿವಕುಮಾರ ಮಠಪತಿ ಮಾತನಾಡಿದರು.

ಮಲ್ಲಿಕಾರ್ಜುನ ನಂದಿ, ರೇವಣ ಸಿದ್ದಮಠಪತಿ ಸ್ವಾಗತಿಸಿದರು. ಪ್ರಭುಲಿಂಗಯ್ಯ ಟಂಕಸಾಲಿಮಠ ನಿರೂಪಿಸಿದರು. ಶರಣಪ್ಪ ಬಿರಾದಾರ ಬಸತೀರ್ಥಯ್ಯ ಕಾಡಾದಿ, ರೇವಣಸಿದ್ಧಯ್ಯ ವಸ್ತ್ರದ, ಡಾ। ಜಗದೀಶ ಪೂಜಾರ, ರಾಕೇಶ ಪುರವಂತ, ಸದಾನಂದ ಕಣಜಿ, ಶಾಂತವೀರ ಮಠಪತಿ, ಕಾರ್ತಿಕಯ್ಯ ಸ್ವಾಮಿ ಜಾಫರವಾಡಿ, ಎಬಿವಿಪಿ ತಾಲೂಕು ಸಂಚಾಲಕ ರುದ್ರೇಶ ಪಾಟೀಲ ಉಪಸ್ಥಿತರಿದ್ದರು.



ಬಸವಕಲ್ಯಾಣ: ತ್ರಿಪುರಾಂತ ಗವಿಮಠದಲ್ಲಿ ನಡೆದ ಶ್ರೀ ರೇಣುಕಾಚಾರ್ಯ ಜಯಂತಿಯಲ್ಲಿ ಶ್ರೀ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ದಿನಾಂಕ 9-3-2012 ಶುಕ್ರವಾರ ಉದಯವಾಣಿ ದಿನಪತ್ರಿಕೆ.

# 'ಸಹಕಾರಿ ಬ್ಯಾಂಕ್ ಸಾಮಾನ್ಯರ ಬೆನ್ನೆಲುಬು'

**ಪ್ರಜಾವಾಣಿ ವಾರ್ತೆ**

ಬಸವಕಲ್ಯಾಣ: ದೇಶದಲ್ಲಿನ ಸಹಕಾರಿ ಬ್ಯಾಂಕ್‌ಗಳು ಜನಸಾಮಾನ್ಯರ ಬೆನ್ನೆಲುಬಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಮಾಜಿ ಸಚಿವರು ಹಾಗೂ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಗುರುಪಾದಪ್ಪ ನಾಗಮಾರಪಳ್ಳಿ ಅಭಿಪ್ರಾಯಪಟ್ಟರು.

ಇಲ್ಲಿ ಸೋಮವಾರ ಸಂಜೆ ಸ್ನೇಹ ಸೌಹಾರ್ದ ಸಹಕಾರಿ ಪತ್ತಿನ ಸಂಘವನ್ನು ಉದ್ಘಾಟಿಸಿ ಮಾತನಾಡಿದರು.

ಸಹಕಾರಿ ಬ್ಯಾಂಕುಗಳಲ್ಲಿ ರಾಜಕೀಯ ಸೇರಬಾರದು. ಬಾ ಿನ ಸಿಬ್ಬಂದಿಗಳು ಸ್ವತಃ ಸಾಲ ಪ ಬಾರದು. ಆದಾಯೋತ್ಪನ್ನ ಕೆಲಸಗಳಿಗೆ ಮಾತ್ರ ಸಾಲ ನೀಡಬೇಕು. ನಿಯಮಗಳನ್ನು ಮೀರಬಾರದು ಆಗ ಮಾತ್ರ ಇಂಥ ಸಂಸ್ಥೆಗಳು ಸರಿಯಾಗಿ ನಡೆಯುತ್ತವೆ ಎಂದರು.

ಬೀದರ ಕೇಂದ್ರ ಸಹಕಾರಿ ಬ್ಯಾಂಕ್ ತನ್ನ ಉತ್ತಮ ಕಾರ್ಯಸಾಧನೆಯಿಂದಾಗಿ ರಾಷ್ಟ್ರೀಯ ಮಟ್ಟದಲ್ಲಿ ಹೆಸರುಗಳಿಸಿದೆ ಎಂದರು.



ಬಸವಕಲ್ಯಾಣದ ಸೋ ವಾರ ಸಂಜೆ ನಡೆದ ಸ್ನೇಹ ಸೌಹಾರ್ದ ಸಹಕಾರಿ ಪತ್ತಿನ ಸಂಘವನ್ನು ಮ ಜಿ ಸಚಿವ ಗುರುಪಾದಪ್ಪ ನಾಗಮಾರಪಳ್ಳಿ ಉದ್ಘಾಟಿಸಿದರು. ಮಾಜಿ ಶಾಸಕ ಎಂ.ಜಿ.ಮುಳೆ, ಜಿಲ್ಲಾ ಪಂಚಾಯಿತಿ ಸದಸ್ಯ ಸಂಜೀವ ಕಾಳೇಕರ್, ಅಭಿನವ ರುದ್ರಮುನಿ ಶಿವಾಚಾರ್ಯರು, ಶಿವಬಸಪ್ಪ ಚ ನ್ನಮಲ್ಲೆ ಪಾ ಲ್ಗೊಂಡಿದ್ದರು

ಮಾಜಿ ಶಾಸಕ ಎಂ.ಜಿ.ಮುಳೆ ಮಾತನಾಡಿ ಸಹಕಾರ ಬ್ಯಾಂಕ್‌ಗಳ ಸಹಕಾರದಿಂದಾಗಿ ಜಿಲ್ಲೆಯಲ್ಲಿ ಸಹಕಾರ ಸಕ್ಕರೆ ಕಾರ್ಖಾನೆಗಳು ತಲೆ ಎತ್ತುವಂತಾಗಿದೆ. ರೈತರಿಗೆ, ಕೃಷಿ ಕೂಲಿ ಕಾರ್ಮಿಕರಿಗೆ ಮತ್ತು ಸಣ್ಣ ಉದ್ದಿಮೇದಾರರಿಗೆ ಸಹಾಯ ಆಗಿದೆ ಎಂದರು.

ಬೆಂಗಳೂರಿನ ಸಂಯುಕ್ತ ಸೌಹಾರ್ದ ಸಹಕಾರಿ ಬ್ಯಾಂಕ್ ಉಪಾಧ್ಯಕ್ಷ ಗುರುನಾಥ ಜಾಂತಿಕರ್ ಮಾತನಾಡಿ ಸಾಲ ಪಡೆಯುವುದಕ್ಕೆ ಎಷ್ಟು ಪ್ರಯತ್ನ ನಡೆಸುತ್ತೇವೋ ಅಷ್ಟು ಶ್ರಮವಹಿಸಿ ಮರುಪಾವತಿ ಮಾಡಬೇಕು. ಆಗ ಬ್ಯಾಂಕು ಬೆಳೆಯುತ್ತದೆ ಮತ್ತು ಸಾಲ ಪಡೆದವರಿಗೂ ಲಾಭ ಆಗುತ್ತದೆ ಎಂದರು.

ಬ್ಯಾಂಕಿನ ಅಧ್ಯಕ್ಷ ಶಿವಬಸಪ್ಪ ಚನ್ನಮಲ್ಲೆ ಮಾತನಾಡಿದರು. ತ್ರಿಪುರಾಂತ ಗವಿಮಠದ ಅಭನವ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿದ್ದರು. ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರಾದ ವಿಠ್ಠಲರೆಡ್ಡಿ ಯಡಮಲ್ಲೆ, ಬ್ರಹ್ಮಾನಂದರೆಡ್ಡಿ, ಜೀತೇಂದ್ರ, ಬಸವರಾಜ ಬಾಲಕಿಲೆ, ಪ್ರಕಾಶ ತೂಗಾವೆ, ಸಂಜೀವ ಶ್ರೀವಾಸ್ತವ, ಅಶೋಕರೆಡ್ಡಿ ಭೋಗಲೆ, ಶಿವಶಂಕರ ಜಮುಖಂಡಿ, ಮಹಾನಂದಾ ಪಾಟೀಲ, ಸಂಜಯಸಿಂಗ್ ಹಜಾರಿ ಉಪಸ್ಥಿತರಿದ್ದರು.

ಜಿಲ್ಲಾ ಪಂಚಾಯಿತಿ ಸದಸ್ಯ ಸಂಜೀವ ಕಾಳೇಕರ ಸ್ವಾಗತಿಸಿದರು. ಕಾರ್ಯನಿರ್ವಾಹಕ ಅಧಿಕಾರಿ ಗಣಪತಿ ಕಾಸ್ತೆ ವಂದಿಸಿದರು.

ದಿನಾಂಕ 14-3-2012 ಬುಧವಾರ ಪ್ರಜಾವಾಣಿ ದಿನಪತ್ರಿಕೆ.

Scanned by CamScanner

# ಕಲಾವಿದನ ಜೀವನ ಬಗ್ಗೆ ತಿಳಿಯಿರಿ

▪ ವಿಕ ಸುದ್ದಿಲೋಕ ಬಸವಕಲ್ಯಾಣ

ಇಲ್ಲಿನ ಕಲಾನಿಕೇತನದಲ್ಲಿ ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯದ 18ನೇ ಕಲಾ ಮಹೋತ್ಸವ ನಡೆಯಿತು.ಅ ಅಧ್ಯಕ್ಷತೆ ವಹಿಸಿದ್ದ ಎಂದು ಮಾಜಿ ಶಾಸಕ ಎಂ.ಜಿ.ಮುಳೆ ಮಾತನಾಡಿ, ಕಲೆ ಪ್ರತಿಯೊಬ್ಬರ ಜೀವನದಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ಕಲಾವಿದನ ಜೀವನದ ಬಗ್ಗೆ ತಿಳಿದುಕೊಳ್ಳುವುದರಿಂದ ವಿದ್ಯಾರ್ಥಿ ಗಳ ಜೀವನಕ್ಕೆ ಮಾರ್ಗದರ್ಶಿಯಾಗುತ್ತದೆ ಎಂದರು.

ಕಲಾವಿದ ಶ್ರೀಧರ ಚವ್ಹಾಣ ತಮ್ಮ ಜೀವನವೇ ಕಲೆಗಾಗಿ ಮುಡುಪಾಗಿಟ್ಟು, ಕಲಾ ಕ್ಷೇತ್ರಕ್ಕೆ ತಮ್ಮದೆಯಾದ ಕೊಡುಗೆ ನೀಡಿದ್ದಾರೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಕಲಾವಿದ ಬಸವರಾಜ ಮುಗಳಿ, ಕಲಾವಿದನ ಮನಸ್ಸು ಏಕಾಗ್ರತೆಯಿಂದಿರಬೇಕು. ಈ ಕ್ಷೇತ್ರದಲ್ಲಿ ಹೆಜ್ಜೆ ಹೆಜ್ಜೆಗೂ ಮುಳ್ಳಿನ ಹಾಸಿಗೆ ಇರುತ್ತವೆ. ಕಲಾವಿದರು ಎಚ್ಚರ ವಹಿಸಿ ಕಲೆಯ ಮಹತ್ವ ತೋರಿಸುವದು ಅವಶ್ಯಕ ಎಂದರು.

ನಂತರ ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಹುಲಸೂರಿನ ಶ್ರೀ ಶಿವಾನಂದ ಮಹಾಸ್ವಾಮಿಗಳು ಮಾತನಾಡಿದರು. ನಾನಾ ಕ್ಷೇತ್ರದಲ್ಲಿ ಸೇವೆಗೈದ



ಬಸವಕಲ್ಯಾಣದ ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯದ 18ನೇ ಕಲಾಮಹೋತ್ಸವ ಸಮಾರಂಭ ಮಾಜಿ ಶಾಸಕ ಎಂ.ಜಿ.ಮುಳೆ ಉದ್ಘಾಟಿಸಿದರು. ಶ್ರೀ ಶಿವಾನಂದ ಸ್ವಾಮಿಗಳು, ಶ್ರೀ ರುದ್ರಮುನಿ ಶಿವಾಚಾರ್ಯರು, ಬಸವರಾಜ ಮುಗಳಿ ಇದ್ದರು.

ವಿಶ್ವನಾಥ ಮುಕ್ತಾ (ಸಾಹಿತ್ಯ), ಪತ್ರಿಕಾ ರಂಗದಲ್ಲಿ ಸೇವೆ ಸಲ್ಲಿಸಿದ ಮುಕುಂದ ನಿಂಬಾಳಕರ, ಚಿತ್ರಕಲೆಯಲ್ಲಿ ಡಾಕ್ಟರೇಟ ಪಡೆದ ಗುಲ್ಬರ್ಗದ ಡಾ. ಸತಿಶ ವಲ್ಲೆಪೂರೆ, ಬಿಜಾಪುರಿನ ಕಲಾವಿದ ಶ್ರೀಧರ ಚವ್ಹಾಣ, ಬೆಂಗಳೂರಿನ ಬಸವರಾಜ ಕುರಿಯವರನ್ನು ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ನ್ಯಾಯವಾದಿ ಅಲಿಂ ಅಂಜುಂ, ಚಂದ್ರಕಾಂತ ಮಠಪತಿ, ವೀರಶೆಟ್ಟಿ ಮಲಶೆಟ್ಟಿ, ಬಸವಲಿಂಗ ಸುಬೇದಾರ, ಕಲಾ ಶಿಕ್ಷಕರಾದ ರೇವಣಸಿದ್ದ ಡೋಂಗರೆ, ವಿಶ್ವನಾಥ ಬನಸುಡೆ, ಉಪನ್ಯಾಸಕ ರಾದ ತಾರಾಸಿಂಗ್ ರಾಠೋಡ, ಮಲ್ಲಿ ಕಾರ್ಜುನ್ ಹಲಿಂಗೆ, ಯಲ್ಲಾಲಿಂಗ ಪೂಜಾರಿ ಹಾಗೂ ಸೂರ್ಯಕಾಂತ ಮದಕಟ್ಟಿ ವಿರೇಶ ಹೆಗ್ಗೆ, ನಾಗಪ್ಪಾ ನಿಣ್ಣೆ ಉಪಸ್ಥಿತರಿದ್ದರು.

ಪ್ರಾಚಾರ್ಯ ಪ್ರಭುಲಿಂಗಯ್ಯ ಟಂಕಸಾಲಿಮಠ ಸ್ವಾಗತಿಸಿದರು. ಅಶೋಕಕುಮಾರ ನಿರೂಪಿಸಿದರು. ಕಲ್ಯಾಣರಾವ ಮದರಗಾಂಕರ ವಂದಿಸಿದರು.

ದಿನಾಂಕ 7-3-2012 ಬುಧುವಾರ ವಿಜಯಕರ್ನಾಟಕ ದಿನಪತ್ರಿಕೆ

# ರೇಣುಕಾಚಾರ್ಯ ಜಯಂತಿ 10ರಂದು

ಬಸವಕಲ್ಯಾಣ: ಶ್ರೀಜಗದ್ಗುರು ರೇಣುಕಾಚಾರ್ಯ ಜಯಂತಿ ಮಹೋತ್ಸವ ಹಾಗೂ ಧರ್ಮ ಸಭೆ ಮಂಗಳವಾರ ಮಧ್ಯಾಹ್ನ 12-30ಕ್ಕೆ ತ್ರಿಪೂರಾಂತನ ಶ್ರೀಘನಲಿಂಗರುದ್ರಮುನಿ ಶಿವಾಚಾರ್ಯ ಗವಿ ಮಠದಲ್ಲಿ (ಮರಿದೇವರ ಗುಡ್ಡ) ಜರುಗಲಿದೆ.

ಜಯಂತಿ ಮಹೋತ್ಸವದ ನಿಮಿತ್ತ ಬೆಳಗ್ಗೆ ನಗರದ ಶ್ರೀ ಬಸವೇಶ್ವರ ದೇವಸ್ಥಾನದಿಂದ ಮುಖ್ಯ ರಸ್ತೆಯ ಮಾರ್ಗವಾಗಿ ಮರಿದೇವರ ಗುಡ್ಡದ ವರೆಗೆ ಶ್ರೀಜಗದ್ಗುರು ರೇಣುಕಾಚಾರ್ಯರ ಭಾವಚಿತ್ರದ ಮೆರವಣಿಗೆ ಸಾಂಸ್ಕೃತಿಕ ವೈಭವಗಳೊಂದಿಗೆ ಜರುಗಲಿದೆ. ಹಾರಕೂಡನ ಶ್ರೀ ಚನ್ನವೀರ ಶಿವಾಚಾರ್ಯರು ಮೆರವಣಿಗೆಗೆ ಚಾಲನೆ ನೀಡಲಿದ್ದು, ಸರಡಗಿಯ ಶ್ರೀ ರೇವಣಸಿದ್ಧ ಶಿವಾಚಾರ್ಯರು ನೇತೃತ್ವ ವಹಿಸುವರು. ಮಧ್ಯಾಹ್ನ 12-20ಕ್ಕೆ ಮರಿದೇವರ ಗುಡ್ಡದಲ್ಲಿ ನಡೆಯುವ ಧರ್ಮ ಸಭೆ ಸಾನ್ನಿಧ್ಯವನ್ನು ಶ್ರೀರಂಭಾಪುರಿ ಜಗದ್ಗುರುಗಳು ವಹಿಸುವರು. ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು, ಹಿರನಾಗಾಂವನ ಶ್ರೀಜಯಶಾಂತಲಿಂಗ ಮಹಾಸ್ವಾಮಿಜಿ, ತ್ರಿಪುರಾಂತನ ಶ್ರೀಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸುವರು. ಸಂಸದ ಧರ್ಮಸಿಂಗ್ ಸಮಾರಂಭದ ಉದ್ಘಾಟನೆ ನೆರವೇರಿಸಲಿದ್ದು, ಶಾಸಕ ಬಸವರಾಜ ಪಾಟೀಲ್ ಅಟ್ಟೂರ್ ಅಧ್ಯಕ್ಷತೆ ವಹಿಸುವರು. ಶಾಸಕರಾದ ಈಶ್ವರ ಖಂಡ್ರೆ, ರಾಜಶೇಖರ ಪಾಟೀಲ್ ಹುಮನಾಬಾದ ಇತರೆ ಗಣ್ಯರು ಭಾಗವಹಿಸುವರು.

ಪ್ರಶಸ್ತಿ: ಘನಲಿಂಗ ರುದ್ರಮುನಿ ಶ್ರೀಪ್ರಶಸ್ತಿಯನ್ನು ತ್ರಿಪುರಾಂತನ ಶರಣಪ್ಪ ಬಿರಾದಾರ ಅವರಿಗೆ ಪ್ರದಾನ ಮಾಡಲಾಗುತ್ತಿದೆ. ಸುನೀಲ ಪಾಟೀಲ, ಸಂಜು ಕಾಳೇಕರ್ ಸೇರಿದಂತೆ ನಾನಾ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಮುಖರ ಸನ್ಮಾನ ನಡೆಯುವುದು.

8-4-2012
ಭಾನುವಾರ
ವಿಜಯಕರ್ನಾಟಕ

# ಮಾಸಿಮಾಡೆ ಆಯ್ಕೆಗೆ ಹರ್ಷ

ಬಸವಕಲ್ಯಾಣ: ಕಸಾಪ ಜಿಲ್ಲಾ ಅಧ್ಯಕ್ಷರಾಗಿ ಪ್ರೊ.ಸಿದ್ರಾ ಮಪ್ಪ ಮಾಸಿಮಾಡೆ 3ನೇ ಬಾರಿಗೆ ಆಯ್ಕೆಯಾಗಿರುವುದಕ್ಕೆ ಹಾರಕೂಡದ ಶ್ರೀಚನ್ನವೀರ ಶಿವಾಚಾರ್ಯರು, ಶ್ರೀಅಭಿನವ ಘನಲಿಂಗ ರುದ್ರಮುನಿ ಶಿವಾಚಾ ರ್ಯರು, ಮಾಜಿ ಶಾಸಕ ಎಂ.ಜಿ. ಮುಳೆ, ಪ್ರಭುಲಿಂಗಯ್ಯ ಟಂಕಸಾಲಿ ಮಠ, ಶಿವಾಜಿ ಕಾಳೆ, ಚಂದ್ರಕಾಂತ ಜೋಕಾರೆ, ಕಲ್ಯಾಣ ರಾವ ಮದರ ಗಾಂವಕರ್, ಚಂದ್ರ ಕಾಂತ ಸ್ವಾಮಿ, ಬಸವ ಲಿಂಗ ಸುಬೇ ದಾರ ಅಭಿನಂದಿ ಸಿದ್ದಾರೆ.

ದಿನಾಂಕ 4-5-2012 ಶುಕ್ರವಾರ
ವಿಜಯಕರ್ನಾಟಕ

Scanned by CamScanner

# ಬೇಲೂರಿನಲ್ಲಿ ಜಾನುವಾರು ಸಂತೆ,ಪ್ರದರ್ಶನ




ಬಸವಕಲ್ಯಾಣ ತಾಲೂಕಿನ ಬೇಲೂರದಲ್ಲಿ ಶ್ರೀ ಸಿದ್ಧೇಶ್ವರ ಜಾತ್ರೆ ನಿಮಿತ್ತ ನಡೆದ ಪಶು ಪ್ರದರ್ಶನ ಮತ್ತು ಬಹುಮಾನ ವಿತರಣೆ ಸಮಾರಂಭದಲ್ಲಿ ಶ್ರೀ ಅಭಿನವ ಘನಲಿಂಗರುದ್ರಮುನಿ ಶಿವಾಚಾರ್ಯರು, ಎಪಿಎಂಸಿ ಅಧ್ಯಕ್ಷ ಪ್ರಕಾಶ ಮೆಂಡೋಳೆ, ತಾಪಂ ಅಧ್ಯಕ್ಷ ಗುರುಲಿಂಗಪ್ಪ ಸೈದಾಪೂರೆ, ಲಿಂಗರಾಜ ಪಾಟೀಲ್ ಅಟ್ಟೂರ್, ಲತಾ ಶಾಂತಕುಮಾರ, ಅಶೋಕ ತೆಲಂಗ, ಚಂದ್ರಕಾಂತ ಚಿಲ್ಲಾಬಟ್ಟೆ ಇದ್ದರು.

■ ವಿಕ ಸುದ್ದಿಲೋಕ ಬಸವ ಕಲ್ಯಾಣ

ತಾಲೂಕಿನ ಬೇಲೂರ ಗ್ರಾಮದಲ್ಲಿ ಶ್ರೀ ಸಿದ್ದೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಹಾಗೂ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಆಶ್ರಯದಲ್ಲಿ ಉತ್ತಮ ತಳಿಗಳ ಜಾನುವಾರು ಪ್ರದರ್ಶನ, ಬಹುಮಾನ ವಿತರಣೆ ಸಮಾರಂಭ ಮತ್ತು ಜಾನುವಾರು ಸಂತೆಯ ಉದ್ಘಾಟನೆ ಜರುಗಿತು.

ಸಾನ್ನಿಧ್ಯ ವಹಿಸಿದ್ದ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಜಾತ್ರೆಯ ನಿಮಿತ್ತ ಜಾನುವಾರು ಪ್ರದರ್ಶನ ಏರ್ಪಡಿಸಿ, ಬಹುಮಾನ ವಿತರಿಸುವ ಮೂಲಕ ಕೃಷಿಕರಿಗೆ ಪ್ರೋತ್ಸಾಹ ನೀಡುತ್ತಿರುವುದು ಶ್ಲಾಘನಾರ್ಹ ಎಂದರು.

ಅಧ್ಯಕ್ಷತೆ ವಹಿಸಿದ್ದ ರಾಜ್ಯ ಕೃಷಿ ಮಾರಾಟ ಮಂಡಳಿ ಸದಸ್ಯ, ಎಪಿಎಂಸಿ ಅಧ್ಯಕ್ಷ ಪ್ರಕಾಶ ಮೆಂಡೋಳೆ ಮಾತನಾಡಿ, ಕೃಷಿಕರಿಗೆ ಪ್ರೋತ್ಸಾಹ ನೀಡುವ ಕಾರ್ಯಕ್ರಮಗಳಿಗೆ ಆದ್ಯತೆ ನೀಡಲಾಗುತ್ತಿದೆ. ಬೇಲೂರನಲ್ಲಿ ಪ್ರಥಮ ಬಾರಿಗೆ ಪಶು ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಕೃಷಿ ಸಂತೆ ಆರಂಭಿಸಲಾಗಿದೆ. ಪ್ರತಿ ಬುಧ ವಾರ ಜಾನುವಾರು ಸಂತೆ ಜರುಗಲಿದ್ದು, ಇದಕ್ಕಾಗಿ ಅಗತ್ಯವಿರುವ ಸೌಲಭ್ಯಗಳನ್ನು ಕಲ್ಪಿಸಲಾಗುವುದು ಎಂದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸುಧಾರಣೆಗೆ ಕಾಳಜಿ ವಹಿಸಲಾಗುತ್ತಿದೆ. ರೈತರು ಉತ್ಪನ್ನಗಳನ್ನು ಬಸವಕಲ್ಯಾಣ ಎಪಿಎಂಸಿ ಮಾರುಕಟ್ಟೆಗೆ ತರಬೇಕು ಎಂದು ಮನವಿ ಮಾಡಿದ ಅವರು, ರೈತರ ಸಮಸ್ಯೆಗಳಿಗೆ ಸ್ಪಂದಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುವದಾಗಿ ಭರವಸೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಲಿಂಗರಾಜ ಪಾಟೀಲ್ ಅಟ್ಟೂರ್, ಕೃಷಿ ಸಂತೆ ಉದ್ಘಾಟಿಸಿದ ತಾಪಂ ಅಧ್ಯಕ್ಷ ಗುರುಲಿಂಗಪ್ಪ ಸೈದಾಪೂರೆ ಮಾತನಾಡಿ, ಸರಕಾರದ ಯೋಜನೆಗಳನ್ನು ಗ್ರಾಮೀಣರು ಸದುಪಯೋಗ ಮಾಡಿಕೊಳ್ಳಬೇಕು ಎಂದರು.

ದೇವಸ್ಥಾನ ಪಂಚ ಕಮಿಟಿಯ ಅಧ್ಯಕ್ಷ ಮಲ್ಲಯ್ಯ ಸ್ವಾಮಿ, ಗುಲ್ಬರ್ಗ ಕೃಷಿ ಮಾರಾಟ ಮಂಡಳಿ ಪ್ರಧಾನ ವ್ಯವಸ್ಥಾಪಕ ಲಚ್ಚು ನಾಯಕ, ಎಪಿಎಂಸಿ ಉಪಾಧ್ಯಕ್ಷ ದೇವಿದಾಸ ಭೂಸಾರೆ, ಪಶು ಸಂಗೋಪನಾ ಇಲಾಖೆ ಉಪ ನಿರ್ದೇಶಕ ಡಾ.ರವೀದ್ರಕುಮಾರ, ಜಿಪಂ ಸದಸ್ಯೆ ಲತಾ ಶಾಂತಕುಮಾರ, ನಗರಸಭೆ ಸದಸ್ಯ ಸೂರ್ಯಕಾಂತ ಚಿಲ್ಲಾಬಟ್ಟೆ, ತಾಪಂ ಸದಸ್ಯೆ ಸರಸ್ವತಿ ಕಾಶೆಪ್ಪ, ಗ್ರಾಪಂ ಅಧ್ಯಕ್ಷೆ ಶರಣಪ್ಪ ಗುಂಗೆ, ಅಶೋಕ ತೆಲಂಗ, ಮಚೇಂದ್ರ ಲಕಮಾಜಿ, ಫಾಳೆಪ್ಪ ಕಾಮಶೆಟ್ಟಿ, ಮಲ್ಲೇಶಪ್ಪ ನಾಟೇಕರ್, ಅಶೋಕ ವಕಾರೆ ಇದ್ದರು. ಉತ್ತಮ ತಳಿ ಜಾನುವಾರುಗಳಿಗೆ ಬಹುಮಾನ ವಿತರಿಸಲಾಯಿತು. ರಾತ್ರಿ ವೈಭವದ ರಥೋತ್ಸವ ಜರುಗಿತು.

ದಿನಾಂಕ 27-3-2012 ಮಂಗಳವಾರ ವಿಜಯ ಕರ್ನಾಟಕ

# 'ಡಾ.ಮಹಾಜನ್ ಸರಳತೆ ಮೈಗೂಡಿಸಿಕೊಂಡ ಶರಣಜೀವಿ'

ಬಸವಕಲ್ಯಾಣ: ಡಾ.ಎಸ್.ಬಿ.ಮಹಾಜನ ಸರಳತೆ ಮತ್ತು ಸಜ್ಜನಿಕೆ ಮೈಗೂಡಿಸಿಕೊಂಡ ಶರಣಜೀವಿ ಆಗಿದ್ದರು. ಪ್ರತಿಯೊಂದು ಕಾರ್ಯದಲ್ಲಿ ಹಲವುವರ್ಷದಿಂದ ಪಾಲ್ಗೊಂಡು ಈ ಭಾಗದ ಅಭಿವೃದ್ಧಿಯಲ್ಲಿ ಮಹತ್ವದ ಕೊಡುಗೆ ಕೊಟ್ಟಿದ್ದಾರೆ ಎಂದು ನಿವೃತ್ತ ಪ್ರಾಧ್ಯಾಪಕರು, ಸಾಹಿತಿಗಳಾದ ಡಾ.ಕಾಶಿನಾಥ ಅಂಬಲಗೆ ಅಭಿಪ್ರಾಯಪಟ್ಟರು.

ಇಲ್ಲಿನ ಶಿವಯೋಗಿ ಸಿದ್ಧರಾಮೇಶ್ವರ ಪದವಿಪೂರ್ವ ಕಾಲೇಜಿನಲ್ಲಿ ಭಾನುವಾರ ನಡೆದ ಈಚೆಗೆ ನಿಧನರಾದ ನಿವೃತ್ತ ಪ್ರಾಚಾರ್ಯ ಡಾ.ಎಸ್.ಬಿ.ಮಹಾಜನರ 'ನುಡಿನಮನ' ಕಾರ್ಯಕ್ರಮದಲ್ಲಿ ಮಾತನಾಡಿದರು.



ಬಸವಕಲ್ಯಾಣದ ಶಿವಯೋಗಿ ಸಿದ್ಧರಾಮೇಶ್ವರ ಕಾಲೇಜಿನಲ್ಲಿ ಭಾನುವಾರ ನಡೆದ ನಿವೃತ್ತ ಪ್ರಾಚಾರ್ಯ ಡಾ.ಎಸ್.ಬಿ.ಮಹಾಜನ 'ನುಡಿನಮನ' ಕಾರ್ಯಕ್ರಮದಲ್ಲಿ ಸುಶೀಲಾದೇವಿ ಪಟೇಲ್ ಮಾತನಾಡಿದರು.

ಹುಲಸೂರ ಶಿವಾನಂದ ಸ್ವಾಮೀಜಿ ಮಾತನಾಡಿದರು. ಮುಚಳಂಬ ಪ್ರಣವಾನಂದ ಸ್ವಾಮೀಜಿ, ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯರು, ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷೆ ಸುಶೀಲಾದೇವಿ ಪಟೇಲ್, ಹಿರಿಯರಾದ ಮಾಣಿಕಪ್ಪ ಗಾದಾ, ಡಾ.ಬಸವರಾಜ ಬಲ್ಲೂರ್, ವಿಭೂತಿ ಬಸವಾನಂದ, ಡಿ.ಎಸ್.ಪಾಟೀಲ, ಪಂಚಾಕ್ಷರಿ ಹಿರೇಮಠ, ಉಪನ್ಯಾಸಕ ಶಾಂತಲಿಂಗ ಮಠಪತಿ, ಮುಜಾಹೀದ್‌ಪಾಶಾ ಕುರೇಶಿ, ಭೀಮಾಶಂಕರ ಬಿರಾದಾರ ಮಾತನಾಡಿದರು. ಹಿರಿಯರಾದ ಕಾಶಪ್ಪ ಬಾಲಕಿಲೆ ಅಧ್ಯಕ್ಷತೆ ವಹಿಸಿದ್ದರು.

ಸಂಸ್ಥೆ ಉಪಾಧ್ಯಕ್ಷ ಮಂಜುನಾಥ ರಾಯವಾಡೆ, ನಿರ್ದೇಶಕರಾದ ನವೀನ ಶ್ರೀವಾಸ್ತವ, ರಾಜೀವ ನಿಂಗದ್, ಮಹೇಶ ಕಾರಬಾರಿ, ಗಜೇಂದ್ರ ಹಿಂಗೋಲೆ, ಮುಖ್ಯ ಶಿಕ್ಷಕಿ ಪುಷ್ಪಾ ಮಾಮಾ, ಗುಂಡಪ್ಪ ಮಡಕೆ, ಮಹಾರುದ್ರಪ್ಪ ರಾಜೋಳೆ, ನಾಗಯ್ಯ ಕೊಳ್ಳೂರ್, ರಘುಶಂಖ ಭಾತಂಬ್ರಾ, ಬಕ್ಕಯ್ಯ ಸ್ವಾಮಿ ಉಪಸ್ಥಿತರಿದ್ದರು.

ಉಪನ್ಯಾಸಕ ಬಸವರಾಜ ಪಾಟೀಲ ಸ್ವಾಗತಿಸಿದರು. ಚೆನ್ನಬಸಪ್ಪ ಶೆಟ್ಟೆಪ್ಪ ನಿರೂಪಿಸಿದರು. ಚೆನ್ನಬಸವ ಬಿರಾದಾರ ವಂದಿಸಿದರು.

ದಿನಾಂಕ 9-4-2012 ಸೋಮವಾರ ಪ್ರಜಾವಾಣಿ ದಿನಪತ್ರಿಕೆ

Scanned by CamScanner

# ಬಸವಕಲ್ಯಾಣ: ನಾಳೆ ರೇಣುಕಾಚಾರ್ಯ ಜಯಂತಿ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಇಲ್ಲಿನ ಐತಿಹಾಸಿಕ ಕ್ಷೇತ್ರವಾದ ತ್ರಿಪುರಾಂತದ ಮರಿದೇವರ ಗುಡ್ಡದ ಗವಿಮಠದಲ್ಲಿ ಏಪ್ರಿಲ್ 10 ರಂದು ಜಗದ್ಗುರು ರೇಣುಕಾಚಾರ್ಯರ ಜಯಂತಿ ಸಂಭ್ರಮದಿಂದ ನಡೆಯಲಿದ್ದು ರಂಭಾಪುರಿ ಜಗದ್ಗುರು ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರ ಸಾನಿಧ್ಯದಲ್ಲಿ ಧರ್ಮಸಭೆ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ ರೇಣುಕಾಚಾರ್ಯರ ಲಿಂಗೋದ್ಭವ ಮೂರ್ತಿಗೆ ಮತ್ತು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗದ್ದುಗೆಗೆ ಅಭಿಷೇಕ ಮತ್ತು ಮಹಾ ಮಂಗಳಾರತಿ ನಡೆಯುತ್ತದೆ. ನಂತರ 8.15 ಗಂಟೆಗೆ ಬಸವೇಶ್ವರ ದೇವಸ್ಥಾನದಿಂದ ತ್ರಿಪುರಾಂತದವರೆಗೆ ಭಾವಚಿತ್ರಗಳ ಭವ್ಯ ಮೆರವಣಿಗೆ ತೆಗೆಯಲಾಗುತ್ತದೆ. ಹಾರಕೂಡ ಚೆನ್ನವೀರ ಶಿವಾಚಾರ್ಯರು ಉದ್ಘಾಟಿಸುವರು. ಅಭಿನವ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸುವರು.

ಸರಡಗಿ ರೇವಣಸಿದ್ಧ ಶಿವಾಚಾರ್ಯರು, ರಾಜೇಶ್ವರ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಕಿಟ್ಟಾ ಸಿದ್ಧೇಶ್ವರ ಶಿವಾಚಾರ್ಯರು, ಅಫಜಲಪುರ ವಿಶ್ವಾರಾಧ್ಯ ಶಿವಾಚಾರ್ಯರು, ಸದ್ಲಾಪುರ ಸಿದ್ಧಲಿಂಗ ಶಿವಾಚಾರ್ಯರು, ಸಸ್ತಾಪುರ ಸದಾನಂದ ಅಪ್ಪಗಳು, ಹೂವಿನಹಳ್ಳಿ ಗುರುಲಿಂಗ ಮಹಾಸ್ವಾಮೀಜಿ, ಸಾಯಗಾಂವ ಶಿವಾನಂದ ದೇವರು, ಹುಮನಾಬಾದ್ ಗಂಗಾಧರ ಸ್ವಾಮೀಜಿ ಮೆರವಣಿಗೆಯಲ್ಲಿ ಪಾಲ್ಗೊಳ್ಳುವರು.



ಬಸವಕಲ್ಯಾಣದ ತ್ರಿಪುರಾಂತ ಮರಿದೇವರ ಗುಡ್ಡದ ಗವಿಮಠದ ಗರ್ಭಗೃಹದಲ್ಲಿನ ಜಗದ್ಗುರು ರೇಣುಕಾಚಾರ್ಯರ ಮತ್ತು ಘನಲಿಂಗ ರುದ್ರಮುನಿದೇವರ ಮೂರ್ತಿಗಳು.

ಮಧ್ಯಾಹ್ನ 12.10 ಗಂಟೆಗೆ ರಂಭಾಪುರಿ ಜಗದ್ಗುರು ವೀರಸೋಮೇಶ್ವರ ಶಿವಾಚಾರ್ಯರ ಭಗವತ್ಪಾದರ ಸಾನಿಧ್ಯದಲ್ಲಿ ಧರ್ಮಸಭೆ ನಡೆಯುತ್ತದೆ. ತಡೋಳಾ ರಾಜೇಶ್ವರ ಶಿವಾಚಾರ್ಯರು, ಹಿರೇನಾಗಾಂವ ಜಯಶಾಂತಲಿಂಗ ಶಿವಾಚಾರ್ಯರು, ಅಭಿನವ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸುವರು. ಸಂಸದ ಎನ್.ಧರ್ಮಸಿಂಗ್ ಉದ್ಘಾಟಿಸುವರು. ಶಾಸಕ ಬಸವರಾಜ ಪಾಟೀಲ ಅಟ್ಟೂರ್ ಅಧ್ಯಕ್ಷತೆ ವಹಿಸುವರು.

ಶಾಸಕರಾದ ಈಶ್ವರ ಖಂಡ್ರೆ, ರಾಜಶೇಖರ ಪಾಟೀಲ ಹುಮನಾಬಾದ್, ರೈತ ಮುಖಂಡ ಕೇದಾರಲಿಂಗಯ್ಯ ಹಿರೇಮಠ, ಮಾಜಿ ಶಾಸಕರಾದ ಮಲ್ಲಿಕಾರ್ಜುನ ಖೂಬಾ, ಎಂ.ಜಿ.ಮುಳೆ, ಸುಭಾಷ ಕಲ್ಲೂರ್, ಪ್ರಮುಖರಾದ ಬಿ.ನಾರಾಯಣರಾವ, ಮಂಗಲಾಬಾಯಿ ಉದ್ರೆ, ಗುರುಲಿಂಗಪ್ಪ ಸೈದಾಪುರೆ, ಎಚ್.ಪ್ರಸನ್ನಕುಮಾರ ಅತಿಥಿಗಳಾಗಿ ಪಾಲ್ಗೊಳ್ಳುವರು. ಶರಣಪ್ಪ ಬಿರಾದಾರ ಹಾಗೂ ಇತರರನ್ನು ಸನ್ಮಾನಿಸಲಾಗುತ್ತದೆ.

ಪುಟ್ಟರಾಜ ಗವಾಯಿ ಸಂಗೀತ ಕಲಾ ಬಳಗದಿಂದ ಸಂಗೀತ ಕಾರ್ಯಕ್ರಮವಿರುತ್ತದೆ. ಸಮಾರಂಭದಲ್ಲಿ ಹೆಚ್ಚಿನ ಸಂಖ್ಯೆಯ ಭಕ್ತರು ಪಾಲ್ಗೊಳ್ಳಬೇಕು ಎಂದು ಕಾರ್ಯಕ್ರಮ ಸ್ವಾಗತ ಸಮಿತಿಯಿಂದ ವಿನಂತಿಸಲಾಗಿದೆ.

ದಿನಾಂಕ 9-4-12 ಸೋಮವಾರ ಪ್ರಜಾವಾಣಿ ದಿನಪತ್ರಿಕೆ.

Scanned by CamScanner



ಬಸವಕಲ್ಯಾಣದಲ್ಲಿ ಡಾ. ಎಸ್.ಬಿ.ಮಹಾಜನ್‌ರಿಗೆ ನುಡಿ ನಮನ ಸಲ್ಲಿಸಲಾಯಿತು.

# ಪ್ರಾಮಾಣಿಕತೆ ಇನ್ನೊಂದು ಹೆಸರು ಮಹಾಜನ್

**ವಿಕ ಸುದ್ದಿಲೋಕ** ಬಸವಕಲ್ಯಾಣ

ಪ್ರಾಮಾಣಿಕತೆಗೆ ಸಮನಾರ್ಥಕ ಪದ ಡಾ.ಎಸ್.ಬಿ.ಮಹಾಜನ್ ಎಂದು ಸಾಹಿತಿ ಡಾ.ಕಾಶೀನಾಥ ಅಂಬಲಗೆ ಹೇಳಿದರು.

ಶಿಕ್ಷಣ ತಜ್ಞ ಡಾ.ಎಸ್.ಬಿ.ಮಹಾಜನ್ ಅವರಿಗೆ ನುಡಿ ನಮನ ಸಲ್ಲಿಸಲು ಭಾನುವಾರ ಶಿವಯೋಗಿ ಸಿದ್ಧರಾಮೇಶ್ವರ ಕಾಲೇಜಿನಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಮಾತನಾಡಿ, ಮಹಾಜನ್ ಸದಾ ತಮ್ಮನ್ನು ತಾವು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು ಎಂದರು.

ಸಾನ್ನಿಧ್ಯ ವಹಿಸಿದ ಹುಲಸೂರಿನ ಶಿವಾನಂದ ಮಹಾಸ್ವಾಮೀಜಿ, ಕೆಲಸದಲ್ಲಿ ಶಿಸ್ತು, ಪ್ರಾಮಾಣಿಕತೆ, ಸರಳತೆ ಮೈಗೂಡಿಸಿಕೊಂಡಿದ್ದ ಮಹಾಜನ್ ಸಮಾಜದ ಋಣ ಅಚ್ಚುಕಟ್ಟಾಗಿ ತೀರಿಸಿದ್ದಾರೆ. ಅವರದು ಶರಣಮಯ ಜೀವನವಾಗಿತ್ತು ಎಂದರು.

ಮುಚಳಂಬಿಯ ಪ್ರಣವಾನಂದ ಸ್ವಾಮೀಜಿ, ಸಮಯವನ್ನು ಗೌರವಿಸಿ ಜನ ನೆನಪಿಸುವಂಥ ಸಾಧನೆಯನ್ನು ಮಹಾಜನ್ ಮಾಡಿದ್ದಾರೆ. ಅವರು ಕಟ್ಟಿದ ಶಿಕ್ಷಣ ಸಂಸ್ಥೆ ಉನ್ನತ ಮೌಲ್ಯಗಳೊಂದಿಗೆ ಬೆಳೆಸುವ ಜವಾಬ್ದಾರಿ ಮುಂದಿನವರ ಮೇಲಿದೆ ಎಂದರು.

ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಅಧ್ಯಕ್ಷತೆ ವಹಿಸಿದ್ದ ಶರಣ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಕಾಶಪ್ಪ ಬಾಲಕಿಲೆ, ಹುಮನಾಬಾದನ ಮಾಣಿಕಪ್ಪ ಗಾದಾ, ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ಸುಶೀಲಾಬಾಯಿ ಪಟೇಲ್, ಬಸವಾನಂದ ವಿಭೂತಿ, ಮುಜಾಹಿದ್ ಪಾಶ ಖುರೇಶಿ, ಭೀಮಾಶಂಕರ ಬಿರಾದಾರ, ಡಾ.ಬಸವರಾಜ ಬಲ್ಲೂರ, ಪ್ರೊ.ಡಿ.ಎಸ್. ಪಾಟೀಲ್, ಡಾ. ಬಸವರಾಜ ಸ್ವಾಮಿ, ಸಾಹಿತಿ ಪಂಚಾಕ್ಷರಿ ಹಿರೇಮಠ, ಪ್ರತಿಮಾ ಮಾತನಾಡಿದರು. ಬಸವರಾಜ ಮಾಲಿ ಪಾಟೀಲ್ ಸ್ವಾಗತಿಸಿದರು. ಶಾಂತಲಿಂಗ ಮಠಪತಿ ಪ್ರಾಸ್ತಾವಿಕ ಮಾತನಾಡಿದರು. ಚನ್ನಬಸಪ್ಪ ಬಿರಾದಾರ ವಂದಿಸಿದರು. ಚನ್ನಬಸಪ್ಪ ಶೆಟ್ಟೆಪ್ಪ ನಿರೂಪಿಸಿದರು. ಪ್ರಾಚಾರ್ಯ ಮಂಜುನಾಥ ರಾಯವಾಡೆ, ನಾಗಯ್ಯ ಕೊಳ್ಳೂರ, ಗುಂಡಪ್ಪ ಮಡಕೆ, ಡಾ.ಚಿತ್ರಶೇಖರ್ ಚಿರಳ್ಳಿ, ಗಜೇಂದ್ರ ಇಂಗೋಲೆ ಅನೇಕರಿದ್ದರು.

ದಿನಾಂಕ 9-4-12 ಸೋಮವಾರ ವಿಜಯಕರ್ನಾಟಕ

Scanned by CamScanner

# ಧರ್ಮದಲ್ಲಿ ರಾಜಕೀಯ ಪ್ರವೇಶದಿಂದ ಸಂಘರ್ಷ

## ರೇಣುಕಾಚಾರ್ಯರ ಜಯಂತಿ ಮಹೋತ್ಸವದಲ್ಲಿ ಜಗದ್ಗುರು ಪ್ರಸನ್ನ ರೇಣುಕ ಅಭಿಮತ

**ಬಸವಕಲ್ಯಾಣ:** ಧರ್ಮದಲ್ಲಿ ರಾಜಕಾರಣ ಪ್ರವೇಶ ಮಾಡುವುದರಿಂದ ಜಾತಿ ಜನಾಂಗವನ್ನು ಹುಟ್ಟು ಹಾಕಿ ಸಂಘರ್ಷಗಳು ಶುರುವಾಗುತ್ತವೆ. ಸಾಮಾಜಿಕ ಶಾಂತಿ ಕದಡುವುದರ ಮೂಲಕ ಪಕ್ಷಪಾತವನ್ನು ಮೆರೆಯುತ್ತಾರೆ ಎಂದು ವೀರ ಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಬಾಳೆಹೊನ್ನೂರಿನ 1008 ಜಗದ್ಗುರು ಪ್ರಸನ್ನ ರೇಣುಕ ಅಭಿಪ್ರಾಯಪಟ್ಟರು.

ನಗರದ ತ್ರಿಪುರಾಂತ ಮರಿದೇವರ ಗುಡ್ಡ ಘನ ಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠದಲ್ಲಿ ಮಂಗಳವಾರ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವ ಹಾಗೂ ಧರ್ಮಸಭೆ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು.

ಜಾತಿ ಜಂಜಡಗಳನ್ನು ಕಿತ್ತೊಗೆದು ಧರ್ಮದ ಸಂಸ್ಕೃತಿಯನ್ನು ಉಳಿಸಿ ಬೆಳೆಸಿ, ಧರ್ಮ ಕಾರ್ಯಗಳ ಜೊತೆಗೆ ಸಾಮಾಜಿಕ ಕಾರ್ಯಗಳು ನಿರ್ವಹಿಸಿ ಮಾರ್ಗದರ್ಶನ ನೀಡಿದ ಜಗದ್ಗುರು ರೇಣುಕಾಚಾರ್ಯರ ಸಾಧನೆ ಅಪೂರ್ವವಾಗಿದೆ ಎಂದರು.

**ಆಚರಣೆ ಮುಖ್ಯ:** ಜಾತಿಗಿಂತ ನೀತಿ, ತತ್ವಕ್ಕಿಂತ ಆಚರಣೆ, ಬೋಧನೆಗಿಂತ ಸಾಧನೆ, ಚರಿತ್ರೆಗಿಂತ ಚಾರಿತ್ರ್ಯ ಮುಖ್ಯವಾಗಿರುತ್ತದೆ. ಸತ್ಯವನ್ನು ಮರೆಮಾಚುವ ಕೆಲಸ ಮಾಡಬಾರದು. ಗುರು ಶಿಷ್ಯರ ಪರಂಪರೆ ಆದಿ, ಅನಾದಿ ಕಾಲದಿಂದಲೂ ಬಂದಿರುವುದು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಹೇಳಿದರು.

ಇತಿಹಾಸ ಅರಿಯದ ಕೆಲವರು ಧರ್ಮದ ಹೆಸರಿನಲ್ಲಿ ತಪ್ಪು ಮಾಡುತ್ತಿರುವುದು ನೋವಿನ ಸಂಗತಿಯಾಗಿದೆ. ಸತ್ಯ ಶುದ್ಧ ಮತ್ತು ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಪರಂಪರೆ ಬೆಳೆದು ಬಂದರೆ ಸರ್ವಾಂಗಿಣ ಅಭಿವೃದ್ಧಿಯಾಗುತ್ತದೆ. ತ್ರಿಪುರಾಂತದ ಘನಲಿಂಗ ರುದ್ರಮುನಿ ಶಿವಾಚಾರ್ಯರ ತಾಣ ಪುರಾತನವಾದುದ್ದಾಗಿದೆ ಎಂದು ವಿವರಿಸಿದರು.



ಬಸವಕಲ್ಯಾಣ ನಗರದ ತ್ರಿಪುರಾಂತ ಮರಿದೇವರ ಗುಡ್ಡ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠದಲ್ಲಿ ಮಂಗಳವಾರ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವ ಹಾಗೂ ಧರ್ಮಸಭೆ ಕಾರ್ಯಕ್ರಮ ಉದ್ಘಾಟಿಸುತ್ತಿರುವ ರೈತ ಮುಖಂಡ ಕೇದಾರಲಿಂಗಯ್ಯ ಹಿರೇಮಠ.

ಉಜ್ವಲ ಇತಿಹಾಸ ಹೊಂದಿರುವ ತ್ರಿಪುರಾಂತ ಘನಲಿಂಗ ರುದ್ರಮುನಿ ಶಿವಾಚಾರ್ಯರ ಅಭಿವೃದ್ಧಿ ಕಾರ್ಯ ಈ ಭಾಗದಲ್ಲಿ ನಡೆಯಬೇಕಾದ್ದು ತುಂಬಾ ಅವಶ್ಯವಿದೆ. ಇಲ್ಲಿನ ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ಕೈಗೆತ್ತಿಕೊಂಡಿರುವ 12ನೇ ಶತಮಾನದ ಶರಣರ ಸ್ಮಾರಕಗಳ ಜೀರ್ಣೋದ್ಧಾರ ಕಾರ್ಯಗಳು ಶ್ಲಾಘನೀಯ ಎಂದರು.

**ಪರಂಪರೆ ಮರೆವು ಒಳ್ಳೆಯದಲ್ಲ:** ವಿಶ್ವ ಬಂಧುತ್ವವನ್ನು ಸಾರಿದ ವೀರಶೈವ ಧರ್ಮದ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಭೂಮಂಡಲದಲ್ಲಿ ಸಂಸ್ಥಾಪಿಸಿದರು. ಅಸ್ಪೃಶ್ಯರೋದ್ಧಾರಕ್ಕಾಗಿ ಶ್ರಮಿಸಿದ ಮೊದಲಿಗರ ಕೀರ್ತಿಗೆ ರೇಣುಕಾಚಾರ್ಯ ಪಾತ್ರರಾಗುತ್ತಾರೆ. ವಿಜ್ಞಾನ ಮತ್ತು ವೈಚಾರಿಕತೆ ಬೆಳೆದಂತೆ ಜನರು ಪ್ರಾಚೀನ ಪರಂಪರೆ ಮರೆಯುತ್ತಿರುವುದು ಒಳ್ಳೆಯದಲ್ಲ ಎಂದು ವಿಷಾದಿಸಿದರು.

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶಿರ್ವಚನ ನೀಡಿ ಮಾತನಾಡಿ, ಧರ್ಮದ ಸಾತ್ವಿಕ ತಳಹದಿಯ ಮೇಲೆ ಆರೋಗ್ಯಪೂರ್ಣ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ. ಧರ್ಮದ ಆಶ್ರಯಗಳಲ್ಲಿ ಎಲ್ಲಾ ಧರ್ಮದ ಆಶಯಗಳು ಬೆಳೆಯುತ್ತವೆ ಎಂದರು.

ತಡೋಳಾ ರಾಜೇಶ್ವರ ಶಿವಾಚಾರ್ಯರು ಮಾತನಾಡಿ, ಮನೆ ಮನಗಳಲ್ಲಿ ವೀರ ಶೈವರ ದಿವ್ಯ ಪರಂಪರೆ ಅಳಿಸಿ ಹೋಗುತ್ತಿರುವುದು ಜಾಗೃತಗೊಳಿಸಬೇಕಾಗಿದೆ. ಆದರ್ಶಗಳನ್ನು ಸೃಷ್ಟಿ ಮಾಡುವುದೇ ಧರ್ಮವಾಗಿದೆ. ಮನುಷ್ಯನಿಗೆ ಮನುಷ್ಯತ್ವದ ಸಂಸ್ಕಾರ ಸಿಗಬೇಕು ಎಂದು ನುಡಿದರು.

**ಹೋರಾಟ ಅವಶ್ಯ:** ರೈತ ಮುಖಂಡ ಕೇದಾರಲಿಂಗಯ್ಯ ಹಿರೇಮಠ ಮುಖ್ಯ ಅತಿಥಿಗಳಾಗಿ ಮಾತನಾಡಿ, ಶಾಂತಿ, ಸುವ್ಯವಸ್ಥೆಯ ಸಮಾಜ ನಿರ್ಮಿಸಲು ಮಠಗಳಿಂದ ಮಾತ್ರ ಸಾಧ್ಯವಾಗುತ್ತದೆ. ರೈತರಿಗೆ ಹೋರಾಟದ ಶಕ್ತಿ ಅವಶ್ಯವಾಗಿದೆ ಎಂದು ಕರೆ ನೀಡಿದರು. ಹಿಂದುಳಿದ ವರ್ಗಗಳ ಸಮಾಜ ಮುಖಂಡ ಬಿ. ನಾರಾಯಣ, ಮಾಜಿ ಶಾಸಕ ಎಂ.ಜಿ. ಮೂಳೆ ಮಾತನಾಡಿದರು. ಲಿಂಗರಾಜ ಪಾಟೀಲ ಅಟ್ಟೂರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

**ಉಪಸ್ಥಿತಿ:** ವೇದಿಕೆಯಲ್ಲಿ ರಾಜೇಶ್ವರ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಸದಾನಂದ ಅಪ್ಪ, ಗುರುಲಿಂಗ ಮಹಾಸ್ವಾಮಿ, ಶಿವಾನಂದ ಮಹಾಸ್ವಾಮಿ ಸಾಯಗಾಂವ, ಗಂಗಾಧರ ಮಹಾಸ್ವಾಮಿ ಹುಮನಾಬಾದ ಉಪಸ್ಥಿತರಿದ್ದರು.

ಪ್ರಮುಖರಾದ ನಗರಸಭೆ ಅಧ್ಯಕ್ಷೆ ಮಂಗಲಾಬಾಯಿ ಉದರೆ, ಸುನೀಲ ಪಾಟೀಲ, ತಾ.ಪಂ. ಅಧ್ಯಕ್ಷ ಗುರುಲಿಂಗಪ್ಪ ಸೈದಾಪೂರೆ, ಕೇಶವ ಮಹಾರಾಜ, ಜೈದ್ರತ್ ಮಾಡ್ಜೆ, ಎಸ್.ಜಿ.ಕಲ್ಯಾಣಿ, ಪ್ರಭುಲಿಂಗಯ್ಯ ಟಂಕಸಾಲಿಮಠ, ಸೂರ್ಯಕಾಂತ ಶೀಲವಂತ, ರುದ್ರೇಶ ಮಠಪತಿ ಮುಂತಾದವರು ಪಾಲ್ಗೊಂಡಿದ್ದರು.

ಇದೇ ಸಂದರ್ಭದಲ್ಲಿ ಶಿಕ್ಷಕರ ಸಂಘದ ಅಧ್ಯಕ್ಷ ಶರಣಬಸಪ್ಪ ಬಿರಾದಾರ ಅವರಿಗೆ ಘನಲಿಂಗ ರುದ್ರಮುನಿ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಚಂದ್ರಕಾಂತ ಸ್ವಾಮಿ ಸ್ವಾಗತಿಸಿದರು. ರಮೇಶ ರಾಜೋಳೆ ನಿರೂಪಿಸಿದರು. ರಾಮಚಂದ್ರ ಹಿಪ್ಪರಗಾ, ಶಾಂತಯ್ಯ ಮಠಪತಿ ಹಾಗೂ ಗಾನಯೋಗಿ ಡಾ. ಪಂಡಿತ ಪುಟ್ಟರಾಜ ರವಾಯಿ ಅವರ ಸಂಗೀತ ಕಲಾ ಬಳಗದಿಂದ ಸಂಗೀತ ಸೇವೆ ನೆರವೇರಿತು.

ದಿನಾಂಕ 11-4-12 ಬುಧುವಾರ ಕನ್ನಡ ಪ್ರಭಾ ದಿನಪತ್ರಿಕೆ.

Scanned by CamScanner

# ‘ಧರ್ಮದಲ್ಲಿ ರಾಜಕೀಯ ಸಲ್ಲದು’

ದಿನಾಂಕ 11-4-12 ಬುಧವಾರ ಪ್ರಜಾವಾಣಿ ದಿನಪತ್ರಿಕೆ.

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಧರ್ಮದಲ್ಲಿ ರಾಜಕೀಯ ಸೇರಬಾರದು. ಲಿಂಗಾಯತ ಮತ್ತು ವೀರಶೈವ ಬೇರೆ ಬೇರೆ ಎಂದು ಹೇಳಿ ಸಮಾಜದಲ್ಲಿ ಒಡಕು ಮೂಡಿಸುವುದು ಸಲ್ಲದು ಎಂದು ರಂಭಾಪುರಿ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ಶಿವಾಚಾರ್ಯರು ಹೇಳಿದರು.

ಇಲ್ಲಿನ ತ್ರಿಪುರಾಂತ ಮರಿದೇವರ ಗುಡ್ಡದ ಘನಲಿಂಗ ರುದ್ರಮುನಿ ಗವಿಮಠದಲ್ಲಿ ಮಂಗಳವಾರ ಹಮ್ಮಿಕೊಂಡ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮತ್ತು ಧರ್ಮಸಭೆಯ ಸಾನಿಧ್ಯ ವಹಿಸಿ ಮಾತನಾಡಿದರು.

ಪಂಚಪೀಠಗಳು ಎಲ್ಲ ಜಾತಿಧರ್ಮದವರನ್ನು ಸಮನಾಗಿ ನೋಡುತ್ತವೆ. ದೂರವಿದ್ದು ದೂರುವುದನ್ನು ಬಿಟ್ಟು ಸಮೀಪ ಬಂದು ನೋಡಿದರೆ ಅದು ಗೊತ್ತಾಗುತ್ತದೆ. ವೀರಕ್ತರು ಮತ್ತು ಪಂಚಾಚಾರ್ಯರ ಹೆಸರಲ್ಲಿ ಸಮಾಜವನ್ನು ಒಡೆಯುವ ಹುನ್ನಾರ ಮೊದಲಿನಿಂದಲೂ ನಡೆಯುತ್ತಿದೆ ಎಂದು ಪುನರುಚ್ಚರಿಸಿದರು.

ಉದ್ಘಾಟನೆ ನೆರವೇರಿಸಿದ ರೈತ ಮುಖಂಡ ಕೇದಾರಲಿಂಗಯ್ಯ ಹಿರೇಮಠ ಮಾತನಾಡಿ ನಾಡಿನಲ್ಲಿ ಶಾಂತಿ, ಸೌಹಾರ್ದತೆ ಉಳಿಯುವಲ್ಲಿ ವೀರಶೈವ ಮಠಾಧೀಶರ ಪಾತ್ರ ಪ್ರಮುಖವಾಗಿದೆ ಎಂದರು. ಮಳೆ ಆಧಾರಿತ ಪ್ರದೇಶದ ರೈತರು ಸಂಕಟದಲ್ಲಿದ್ದು ಇದಕ್ಕಾಗಿ ಹೋರಾಟ ನಡೆಸುವುದು ಅನಿವಾರ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.



ಬಸವಕಲ್ಯಾಣದಲ್ಲಿ ಮಂಗಳವಾರ ನಡೆದ ರೇಣುಕಾಚಾರ್ಯರ ಜಯಂತಿಯಲ್ಲಿ ರಂಭಾಪುರಿ ಜಗದ್ಗುರು ವೀರಸೋಮೇಶ್ವರ ಶಿವಾಚಾರ್ಯರು, ಅಭಿನವ ರುದ್ರಮುನಿ ಶಿವಾಚಾರ್ಯರು, ಕೇದಾರಲಿಂಗಯ್ಯ, ಮಾಜಿ ಶಾಸಕ ಎಂ.ಜಿ.ಮುಳೆ, ಬಿ.ನಾರಾಯಣರಾವ, ಲಿಂಗರಾಜ ಪಾಟೀಲ ಅಟ್ಟೂರ್, ನಗರಸಭೆ ಅಧ್ಯಕ್ಷೆ ಮಂಗಲಾಬಾಯಿ, ಸುನಿಲ ಪಾಟೀಲ ಪಾಲ್ಗೊಂಡಿದ್ದರು.

ತಡೋಳಾ ರಾಜೇಶ್ವರ ಶಿವಾಚಾರ್ಯರು ಮಾತನಾಡಿ ಘನಲಿಂಗ ರುದ್ರಮುನಿ ಗವಿಮಠದಲ್ಲಿ ಬೃಹತ್ ಭವನ ನಿರ್ಮಿಸಿ ಸಿದ್ಧಾಂತ ಶಿಖಾಮಣಿಯ ಶ್ಲೋಕಗಳನ್ನು ಕೆತ್ತಿಸಬೇಕಾಗಿದೆ ಎಂದರು. ಮಠಾಧಿಪತಿ ಅಭಿನವ ರುದ್ರಮುನಿ ಶಿವಾಚಾರ್ಯರು ಮಾತನಾಡಿ ರೇಣುಕಾಚಾರ್ಯರ ಜಯಂತಿಯ ಮಹತ್ವವನ್ನು ಹೇಳಿದರು.

ಮಾಜಿ ಶಾಸಕ ಎಂ.ಜಿ.ಮುಳೆ, ಹಿರಿಯ ಮುಖಂಡ ಬಿ.ನಾರಾಯಣರಾವ, ಯುವ ಮುಖಂಡ ಲಿಂಗರಾಜ ಪಾಟೀಲ ಅಟ್ಟೂರ್ ಮಾತನಾಡಿದರು. ಗುರುಲಿಂಗ ಮಹಾಸ್ವಾಮೀಜಿ ಹೂವಿನಹಳ್ಳಿ, ಸದ್ಲಾಪುರ ಸಿದ್ಧಲಿಂಗ ಶಿವಾಚಾರ್ಯರು, ಸಾಯಗಾಂವ ಶಿವಾನಂದ ದೇವರು, ಮುಖಂಡರಾದ ಸುನಿಲ ಪಾಟೀಲ, ಜಯದ್ರತ್ ಮಾಡ್ಜೆ, ನಗರಸಭೆ ಅಧ್ಯಕ್ಷೆ ಮಂಗಲಾಬಾಯಿ ಉದ್ರೆ, ಶಿವರಾಜ ನರಶೆಟ್ಟೆ, ಶರಣಬಸಪ್ಪ ಬಿರಾದಾರ, ಪ್ರಭುಲಿಂಗಯ್ಯ ಟಂಕಸಾಲಿ ಮಠ, ಡಾ.ಬಸವರಾಜ ಸ್ವಾಮಿ, ಕೇಶವರಾವ ತಳಘಟಕರ್ ಉಪಸ್ಥಿತರಿದ್ದರು.

ಸ್ವಾಗತ ಸಮಿತಿ ಅಧ್ಯಕ್ಷ ಚಂದ್ರಕಾಂತ ಸ್ವಾಮಿ ನಾರಾಯಣಪುರ ಸ್ವಾಗತಿಸಿದರು. ರಮೇಶ ರಾಜೋಳೆ ನಿರೂಪಿಸಿದರು. ಈ ಸಂದರ್ಭದಲ್ಲಿ ನಿವೃತ್ತ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಶರಣಪ್ಪ ಬಿರಾದಾರ ಅವರಿಗೆ ಪ್ರಶಸ್ತಿಕೊಟ್ಟು ಸನ್ಮಾನಿಸಲಾಯಿತು.

ಕಾರ್ಯಕ್ರಮದ ಮೊದಲು ಬಸವೇಶ್ವರ ದೇವಸ್ಥಾನದಿಂದ ರೇಣುಕಾಚಾರ್ಯರ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯಿತು. ಹಾರಕೂಡ ಚೆನ್ನವೀರ ಶಿವಾಚಾರ್ಯರು ಮೆರವಣಿಗೆ ಉದ್ಘಾಟಿಸಿದರು. ಅನೇಕ ಭಕ್ತರು ಪಾಲ್ಗೊಂಡಿದ್ದರು.

# धर्मात राजकारण नको

## रंभापुरीचे जगद्गुरू रेणुका वीर सोमेश्वर

बसवकल्याण | दि. ११ (वार्ताहर)



लिंगायत आणि वीरशैव धर्म वेगवेगळे म्हणून समाजामध्ये फूट पाडण्याचे काम राजकीय नेते आपल्या फायद्यासाठी करीत आहेत. त्यामुळे धर्मामध्ये राजकारण नको, असे मत रंभापुरीचे जगद्गुरू प्रसन्न रेणुका वीर सोमेश्वर शिवाचार्य यांनी व्यक्त केले.

त्रिपुरांत मरीदेवर गुड्डा धनलिंग रूद्रमुनी गवी मठात धर्मसभेत ते बोलत होते. उद्घाटन केदार लिंगाया हिरेमठ यांच्या हस्ते करण्यात आले. मंचावर राजशेखर शिवाचार्य, माजी आमदार एम.जी.मुळे, वीर नारायणराव, लिंबराज पाटील, गुरूलिंग महास्वामी, सिद्धलिंग शिवाचार्य, शिवानंद देवरू, हारकुंड मठाचे चन्नवीर शिवाचार्य आदींची उपस्थिती होती. पंचपीट सर्व जाती-धर्मांना समान असल्याचे सांगून, जगद्गुरू वीर सोमेश्वर यांनी वीरक्त आणि पंचाचार्य यांच्या नावावर समाज फोडण्याचे काम प्रारंभीपासून चालत आली आहे. तसे होता कामा नये. धर्मामध्ये राजकारण येता कामा नये, असे सांगून समाजात फूट पाडण्याचे काम केले जात असल्याची खंत त्यांनी व्यक्त केली. आता समाजानेच जागरूक राहणे गरजेचे आहे, असे सांगितले. केदार लिंगाया हिरेमठ म्हणाले, समाजामध्ये शांती, समानता राहण्यामध्ये वीरशैव मठाधिशांची भूमिका अत्यंत महत्वाची आहे. यावेळी उपस्थितांची भाषणे झाली. प्रारंभी महात्मा बसवेश्वर मंदिरापासून रेणुकाचार्य यांच्या प्रतिमेची भव्य मिरवणूक काढण्यात आली. उद्घाटन हारकुड मठाचे चन्नवीर शिवाचार्य यांच्या हस्ते करण्यात आले. भाविकांची मोठ्या संख्येने उपस्थिती होती. धर्मसभेस नगराध्यक्षा मंगलाबाई उद्रे, शिवराज नरशेट्टे, शरण बसप्पाबी प्रभुलिंगाय्या टंकशालीमठ, स्वागत समितीचे अध्यक्ष चंद्रकांत स्वामी आदींसह नागरिकांची उपस्थिती होती.

ದಿನಾಂಕ 12-4-12 ಗುರುವಾರ लोकमत

# ಸಾಂಸ್ಕೃತಿಕ ವೈಭವದೊಂದಿಗೆ ಮೆರವಣಿಗೆ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಶ್ರೀ ರೇಣುಕಾ ಚಾರ್ಯರ ಜಯಂತಿ ಮಹೋತ್ಸವದ ನಿಮಿತ್ತ ಮಂಗಳವಾರ ನಗರದ ಶ್ರೀ ಬಸವೇಶ್ವರ ದೇವಸ್ಥಾನದಿಂದ ಮುಖ್ಯ ರಸ್ತೆಯ ಮಾರ್ಗವಾಗಿ ಮರಿದೇವರ ಗುಡ್ಡದ ವರೆಗೆ ಶ್ರೀ ರೇಣುಕಾಚಾರ್ಯರರ ಭಾವಚಿತ್ರದ ಭವ್ಯ ಮೆರವಣಿಗೆ ಸಾಂಸ್ಕೃತಿಕ ವೈಭವಗಳೊಂದಿಗೆ ನಡೆಯಿತು.

ಹಾರಕೂಡನ ಶ್ರೀ ಚನ್ನವೀರ ಶಿವಾಚಾರ್ಯರು ಮೆರವಣಿಗೆಗೆ ಚಾಲನೆ ನೀಡಿದರು. ಶ್ರೀ ರೇವಣಸಿದ್ಧ ಶಿವಾಚಾರ್ಯರು, ಹೂವಿನ ಹಳ್ಳಿಯ ಶ್ರೀ ಗುರುಲಿಂಗ ಮಹಾಸ್ವಾಮಿಜಿ, ಸಾಯಗಾಂವನಶ್ರೀ ಶಿವಾನಂದದೇವರು ನೇತೃತ್ವ ವಹಿಸಿದ್ದರು.



ಬಸವಕಲ್ಯಾಣದ ಶ್ರೀ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರದ ಭವ್ಯ ಮೆರವಣಿಗೆಗೆ ಹಾರಕೂಡನ ಶ್ರೀ ಚನ್ನವೀರ ಶಿವಾಚಾರ್ಯರು ಚಾಲನೆ ನೀಡಿದರು.

ಪ್ರಮುಖರಾದ ಬಸವರಾಜ ಮಠಪತಿ, ಶರಣಪ್ಪ ಬಿರಾದಾರ, ಮಲ್ಲಯ್ಯ ಹಿರೇಮಠ, ಡಾ.ಮಂಡಿ, ದಯಾನಂದ ಶೀಲವಂತ, ಡಾ. ಬಸವರಾಜ ಸ್ವಾಮಿ, ವೀರಣ್ಣ ಶೀಲವಂತ, ಪ್ರಭುಲಿಂಗಯ್ಯ ಟಂಕಸಾಲಿಮಠ, ಶಾಂತಲಿಂಗ ಮಠಪತಿ, ಎಜೆ ಪಾಟೀಲ್, ಗುರುಲಿಂಗಯ್ಯ ಸ್ವಾಮಿ, ಸೂರ್ಯಕಾಂತ ಶೀಲವಂತ, ಬಕ್ಕಯ್ಯ ಸ್ವಾಮಿ, ಮಲ್ಲಿಕಾರ್ಜುನ ಕಾಡಾದಿ, ರುದ್ರೇಶ್ವರ ಗೋರ್ಟಾ, ಜಗನ್ನಾಥ ರಾವಣ್ಣನವರ, ರೇವಣಸಿದ್ದಯ್ಯ ಮಠಪತಿ ಭಾಗವಹಿಸಿದ್ದರು.

ದಿನಾಂಕ 11-4-12 ಬುಧವಾರ ವಿಜಯಕರ್ನಾಟಕ

Scanned by CamScanner

# ರೇಣುಕಾಚಾರ್ಯರ ಜಯಂತಿ ಮಹೋತ್ಸವ



ಬಸವಕಲ್ಯಾಣ: ಶ್ರೀ ರೇಣುಕಾಚಾರ್ಯರ ಜಯಂತಿ ಮಹೋತ್ಸವ ಸಮಾರಂಭವನ್ನು ರೈತ ಮುಖಂಡ ಕೇದಾರಲಿಂಗಯ್ಯ ಹಿರೇಮಠ ಉದ್ಘಾಟಿಸಿದರು.

ಬಸವಕಲ್ಯಾಣ: ವೀರಶೈವ ಧರ್ಮ ಸಂಸ್ಥಾಪಕ ಜಗದ್ಗುರು ರೇಣುಕಾಚಾರ್ಯರ ಧಾರ್ಮಿಕ, ಸಾಮಾಜಿಕ ಕ್ರಾಂತಿಯನ್ನು ಯಾರು ಮರೆಯಲು ಸಾಧ್ಯವಿಲ್ಲ ಎಂದು ಬಾಳೆಹೊನ್ನೂರಿನ ಶ್ರೀ ರಂಭಾಪುರಿ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವ ನಿಮಿತ್ತ ತ್ರಿಪುರಾಂತದ ಮರಿದೇವರ ಗುಡ್ಡದಲ್ಲಿರುವ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠದಲ್ಲಿ ಆಯೋಜಿಸಲಾಗಿದ್ದ ಧರ್ಮಸಭೆಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ವೀರಶೈವ ಧರ್ಮದ ಪಂಚ ಪೀಠಗಳ ಕುರಿತು ಕೆಲವರು ಇಲ್ಲಸಲ್ಲದ ಮಾತುಗಳನ್ನಾಡುತ್ತಿದ್ದಾರೆ. ಆದರೆ ಯಾರು ಏನೇ ಹೇಳಲಿ ನಮ್ಮ ಪೀಠಗಳಲ್ಲಿರುವಂತಹ ಆದರ್ಶ ವಿಚಾರಧಾರೆಗಳು ವಿಶಾಲವಾಗಿವೆ. ಕೇವಲ ಯಾವುದೋ ಒಂದು ವರ್ಗದ ಜನಸಮುದಾಯದ ಹಿತ ಕಾಪಾಡಿಲ್ಲ. ಎಲ್ಲ ವರ್ಗದ ಜನರಿಗೆ ಸಮಾನ ಅವಕಾಶ ನೀಡಲಾಗಿದೆ. ಈ ಬಗ್ಗೆ ಆಚಾರ್ಯರ ಚರಿತ್ರೆಗಳಿಂದ ತಿಳಿದುಕೊಳ್ಳಬಹುದು ಎಂದು ಹೇಳಿದರು.

ನೇತೃತ್ವವಹಿಸಿದ್ದತಡೋಳಾದಶ್ರೀರಾಜೇಶ್ವರಶಿವಾಚಾರ್ಯರು ಮಾತನಾಡಿ, ವೀರಶೈವ ಧರ್ಮ ಸಂಸ್ಕೃತಿ ಮನಮನೆಗಳಲ್ಲಿ ಮೂಡಿಸುವುದು ಅವಶ್ಯಕವಾಗಿದೆ. ಆದರ್ಶ ಸಮಾಜ, ಆದರ್ಶ ದೇಶ ನಿರ್ಮಾಣ ಧರ್ಮದಿಂದ ಮಾತ್ರ ಸಾಧ್ಯ ಎಂದರು.

ಸರಡಗಿಯ ಶ್ರೀ ರೇವಣಸಿದ್ಧ ಶಿವಾಚಾರ್ಯರು, ಅಫಜಲಪುರನ ಶ್ರೀ ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯರು, ಸಾಯಿಗಾಂವದ ಶ್ರೀ ಶಿವಾನಂದ ದೇವರು, ರಾಜೇಶ್ವರದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಮರಿದೇವರ ಗುಡ್ಡದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು.

ರೈತ ಮುಖಂಡ ಕೇದರಾಲಿಂಗಯ್ಯ ಹಿರೇಮಠ, ಮಾಜಿ ಶಾಸಕ ಮಾರುತಿರಾವ ಮುಳೆ, ಲಿಂಗರಾಜ ಪಾಟೀಲ ಅಟ್ಟೂರ, ಬಿ.ನಾರಾಯಣರಾವ ಮಾತನಾಡಿದರು. ನಗರಸಭೆ ಅಧ್ಯಕ್ಷೆ ಮಂಗಲಾಬಾಯಿ ಉದ್ರೆ, ಸುನೀಲ ಪಾಟೀಲ, ಶರಣಬಸಪ್ಪ ಬಿರಾದಾರ, ಕೇಶವ ಮಹಾರಾಜ ತಳಘಟಗಿ, ಗುರುಲಿಂಗ ಮಹಾಸ್ವಾಮಿ, ಗಂಗಾಧರ ಸ್ವಾಮೀಜಿ, ಶಿವರಾಜ ನರಶೆಟ್ಟಿ, ದತ್ತು ಪದ್ಮೆ, ಜಯದ್ರತ ಮಾಡ್ಜೆ ಇದ್ದರು.

ಈ ಸಂದರ್ಭದಲ್ಲಿ ಸಮಾಜ ಸೇವಕ ಶರಣಪ್ಪಾ ಬಿರಾದಾರ ತ್ರಿಪುರಾಂತ ಅವರಿಗೆ ಶ್ರೀ ಘನಲಿಂಗ ರುದ್ರಮುನಿ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ರಮೇಶ ರಾಜೋಳೆ ನಿರೂಪಿಸಿದರು. ಪ್ರಭುಲಿಂಗಯ್ಯಾ ಟಂಕ ಸಾಲಿಮಠ ವಂದಿಸಿದರು.

ದಿನಾಂಕ 11-4-12 ಬುಧುವಾರ ಉದಯವಾಣಿ ದಿನಪತ್ರಿಕೆ.



ನವರಾತ್ರಿ ನಿಮಿತ್ತ ಬಸವಕಲ್ಯಾಣದ ತ್ರಿಪುರಾಂತದ ಮಾತೆ ಅಂಬಾ ಭವಾನಿ ಮಂದಿರದಲ್ಲಿ ನಡೆದ ಕಾರ್ಯಕ್ರಮವನ್ನು ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಆನಂದ ದೇವಪ್ಪ ಉದ್ಘಾಟಿಸಿದರು. ತ್ರಿಪುರಾಂತ ಶ್ರೀ, ಪಂಚಾಕ್ಷರಿ ಸ್ವಾಮೀಜಿ, ಮಾಜಿ ಶಾಸಕ ಮಲ್ಲಿಕಾರ್ಜುನ ಖುಬಾ, ನಗರಸಭೆ ಅಧ್ಯಕ್ಷೆ ಮಂಗಲಾಬಾಯಿ ಉದ್ರೆ, ರಾಜು ಮಂಠಾಳೆ ಉಪಸ್ಥಿತರಿದ್ದರು.

ದಿನಾಂಕ 25-9-2012 ಗುರುವಾರ ಉದಯವಾಣಿ ದಿನಪತ್ರಿಕೆ

# ದಸರಾ: ಸಂಗೀತ ರಸಮಂಜರಿ

ಬಸವಕಲ್ಯಾಣ: ಧರ್ಮ ಮಾರ್ಗದಲ್ಲಿ ನಡೆದರೆ ಸಮಾಜ ಸುವ್ಯವಸ್ಥಿತ ಆಗಿರುತ್ತದೆ. ಭಕ್ತಿ ಇದ್ದಡೆ ಶಾಂತಿ ನೆಲೆಸಿರುತ್ತದೆ ಎಂದು ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯರು ಹೇಳಿದರು.

ತ್ರಿಪುರಾಂತದ ಜೈ ಭವಾನಿ ಮಂದಿರದಲ್ಲಿ ಈಚೆಗೆ ದಸರಾ ಅಂಗವಾಗಿ ಹಮ್ಮಿಕೊಂಡಿದ್ದ ಸಂಗೀತ ರಸಮಂಜರಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದ ನೇತೃತ್ವ ವಹಿಸಿ ಅವರು ಮಾತನಾಡಿದರು.

ಬೇಲೂರ ಪಂಚಾಕ್ಷರಿ ಉರಿಲಿಂಗ ಪೆದ್ದಿ ಸ್ವಾಮೀಜಿ ಮಾತನಾಡಿ ಜೈಭವಾನಿ ಸುಧಾರಣಾ ಸಮಿತಿಯಿಂದ ನವರಾತ್ರಿ ಉತ್ಸವವನ್ನು ಸಂಭ್ರಮದಿಂದ ಆಚರಿಸುತ್ತಿರುವುದಕ್ಕೆ ಮೆಚ್ಚುಗೆ ಸೂಚಿಸಿದರು.

ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಕಾಂಗ್ರೆಸ್ ಮುಖಂಡ ಆನಂದ ದೇವಪ್ಪ, ಮುಖಂಡ ವಾಲ್ಮೀಕಿ ಖನಕೋರೆ ಮಾತನಾಡಿದರು.

ಬಿ.ನಾರಾಯಣರಾವ, ನಗರಸಭೆ ಅಧ್ಯಕ್ಷೆ ಮಂಗಲಾಬಾಯಿ ಉದ್ರೆ, ಜಿಲ್ಲಾ ಪಂಚಾಯಿತಿ ಸದಸ್ಯ ಸಂಜೀವ ಕಾಳೇಕರ್, ಸಂಜಯಸಿಂಗ ಹಜಾರಿ, ರಾಜೀವ ಮಂಠಾಳೆ, ಶರಣಪ್ಪ ಬಿರಾದಾರ, ಮರೆಪ್ಪ ಪೊಲೀಸ್ ಪಾಟೀಲ, ರಾಮಣ್ಣ ಮಂಠಾಳೆ, ಗೋವಿಂದ ಚಾಮುಲ್ಲೆ, ರಾಜೀವ ಇರ್ಲೆ, ಬಾಲಾಜಿ ಚಂಡಕಾಪುರೆ, ಬಂಡೆಪ್ಪ, ಹಣಮಂತಪ್ಪ ಬೊಕ್ಕೆ ಉಪಸ್ಥಿತರಿದ್ದರು.

ಪ್ರತಿದಿನ ಸಂಜೆ ಗುರುಚರಿತ ಮಾನಸ ಪುರಾಣ ಹೇಳಲಾಯಿತು. ಈಶ್ವರ ಬೊಕ್ಕೆ, ಷಣ್ಮುಖಪ್ಪ ಬೊಕ್ಕೆ, ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದ ಬೀರಪ್ಪ ಪ್ರವಚನ ಹೇಳಿದರು.

ಇದಲ್ಲದೆ ಸಂಜೆ ಮಕ್ಕಳಿಂದ ಸಾಂಸ್ಕೃತಿಕ ಚಟುವಟಿಕೆಗಳು ನಡೆದವು. ರಂಗೋಲಿ ಮತ್ತು ಇತರೆ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ಕಾಳಮಂದರಗಿ ಕಲಾ ತಂಡದಿಂದ ಪುಂಡ ಪರಶುರಾಮ ನಾಟಕ ಪ್ರದರ್ಶಿಸಲಾಯಿತು. ವಿಜಯದಶಮಿಯ ದಿನ ದೇವಿ ಮೂರ್ತಿಯ ಭವ್ಯ ಮೆರವಣಿಗೆ ನಡೆಯಿತು.



ಬಸವಕಲ್ಯಾಣದ ತ್ರಿಪುರಾಂತದಲ್ಲಿನ ಜೈಭವಾನಿ ಮಂದಿರದಲ್ಲಿ ದಸರಾ ಅಂಗವಾಗಿ ಈಚೆಗೆ ಹಮ್ಮಿಕೊಂಡ ಸಂಗೀತ ರಸಮಂಜರಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಅಭಿನವ ರುದ್ರಮುನಿ ಶಿವಾಚಾರ್ಯರು, ಬೇಲೂರ ಪಂಚಾಕ್ಷರಿ ಸ್ವಾಮಿ ಪಾಲ್ಗೊಂಡಿದ್ದರು

ದಿನಾಂಕ 27-10-12 ಶನಿವಾರ ಪ್ರಜಾವಾಣಿ

Scanned by CamScanner

# ಜಾತಿ ಜಂಜಡದ ಬೀಜವನ್ನು ಕಿತ್ತೊಗೆದು ಧರ್ಮದ ಸಂಸ್ಕೃತಿ ಉಳಿಸಿ–ರಂಭಾಪುರಿ ಶ್ರೀ



ಬಸವಕಲ್ಯಾಣಂ ಏ.೧೧ ಜಾತಿ ಜಂಜಡದ ಬೀಜವನ್ನು ಕಿತ್ತೋಗೆದು ಧರ್ಮದ ಸಂಸ್ಕೃತಿಯುನ್ನು ಉಳಿಸಬೇಕು ಅಲ್ಲದೆ ಬೆಳೆಸಬೇಕು ,ಧರ್ಮದಲ್ಲಿ ರಾಜಕಾರಣ ಪ್ರವೇಶ ಮಾಡುವುದರಿಂದ ಜಾತಿ ಜನಾಂಗವನ್ನು ಹುಟ್ಟು ಹಾಕಿ ಸಮಾಜದಲ್ಲಿ ಸಂಘರ್ಷಗಳನ್ನು ಶುರುವಾಗುತ್ತವೆ. ಸಾಮಾಜಿಕ ಶಾಂತಿ ಕದಡುವದರ ಮೂಲಕ ಪಕ್ಷಪಾತವನ್ನು ಮೆರೆಯುತ್ತಾರೆ ಎಂದು ರಂಭಾಪುರಿ ಪೀಠದ ಶ್ರೀಶ್ರೀಶ್ರೀ ವೀರ ಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಬಾಳೆಹೋನ್ನುರಿನ ೧೦೦೮ ಜಗದ್ಗುರು ಪ್ರಸನ್ನ ರೇಣುಕ ಮಹಾ ಸನ್ನಿಧಿಯುವರು ಅಭಿಪ್ರಾಯ ಪಟ್ಟರು.

ನಗರದ ತ್ರಿಪೂರಾಂತನ ಮರಿದೇವರ ಗುಡ್ಡದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠದಲ್ಲಿ ಮಂಗಳವಾರ ಹಮ್ಮಿಕೊಂಡ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವ ಹಾಗೂ ಧರ್ಮ ಸಭೆ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಜಗದ್ಗುರುಗಳು ಧರ್ಮ ಕಾರ್ಯಗಳೊಂದಿಗೆ ಸಾಮಾಜಿಕ ಕಾರ್ಯಗಳಲ್ಲಿ ಎಲ್ಲರು ಮುಂದಾಗಬೇಕೆಂದರು.

ಸಾಮ್ಮಾಜಿಕ ಬದುಕಿನಲ್ಲಿ ಇತಿಹಾಸ ಅರಿಯದ ಕೆಲವರು ಧರ್ಮದ ಹೆಸರಿನಲ್ಲಿ ತಪ್ಪು ಮಾಡುತ್ತಿರುವದು ನೋವಿನ ಸಂಗತಿಯಾಗಿದೆ ಸತ್ಯ ಶುದ್ಧ ಕಾಯಕ ನೆಲೆಗಟ್ಟಿನಲ್ಲಿ ಒಳ್ಳೆಯ ಪರಂಪರೆ ಬೆಳೆದು ಬಂದರೆ ಅಭಿವೃದ್ಧಿಯಾಗುತ್ತದೆ ಎಂದರು.ನೆತೃತ್ವವಹಿಸಿ ಮಾತನಾಡಿದ ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶಿರ್ವಚನ ನೀಡಿ ಧರ್ಮದ ಸಾತ್ವಿಕ ತಳಹದಿಯ ಮೇಲೆ ಎಲ್ಲರು ಬದುಕುತ್ತಾರೆ ಆದರೆ ಜಾತಿ – ಧರ್ಮ ಎಂದು ಕಚ್ಚಾಡುವದನ್ನು ಕೈಬಿಟ್ಟು ನಾವೆಲ್ಲರು ಒಂದೆ ಎಂಬ ಭಾವನೆ ಬಂದಾಗ ಮಾತ್ರ ಶಾಂತಿ ನೆಮ್ಮದಿ ಆರೋಗ್ಯ ಪೂರ್ಣ ಸಮಾಜ ನಿರ್ಮಿಸಲಿ ಸಾಧ್ಯ ,ಮತ್ತು ಮಠಗಳು ಸಮಾಜ ಸುಧಾರಣೆಯಲ್ಲಿ ಮಹತ್ವದ ಕಾರ್ಯಗಳು ಮಾಡುತ್ತಾ ಬರುತ್ತಿದ್ದು ಜನರು ಕೂಡ ಸಹಕರಿಸುವದು ಅವಶ್ಯಕ ಎಂದರು. ನಂತರ ತಡೋಳಾ ಶಿವಾಚಾರ್ಯರು ಮಾತನಾಡಿ ಮನೆ ಮನಗಳಲ್ಲಿ ವೀರ ಶೈವರ ದಿವ್ಯ ಪರಂಪರೆ ಅಳಿಸಿ ಹೋಗುತ್ತಿದೆ ಈ ನಿಟ್ಟಿನಲ್ಲಿ ಜಾಗ್ರತಿಗೊಳಿಸುವದು ಅಗತ್ಯವಿದೆ ಮನುಷ್ಯನಿಗೆ ಮನುಷ್ಯತ್ವದ ಸಂಸ್ಕಾರ ಸಿಗಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ರೈತ ಮುಖಂಡ ಕೇದಾರಲಿಂಗಯ್ಯ ಹಿರೇಮಠ ಸಮಾಜದಲ್ಲಿ ಶಾಂತಿ ಸುಧಾರಣೆಯಾಗ ಬೇಕಾದರೆ ಅದು ಮಠಗಳಿಂದ ಮಾತ್ರ ಸಾಧ್ಯ ಸದ್ಭಕ್ತರೆಲ್ಲ ಉದಾರ ದೇಣಿಗೆ ನೀಡುವ ಮೂಲಕ ಮಠಗಳನ್ನು ಬೇಳಸಬೇಕು ಎಂದರು. ರೈತರು ತಮ್ಮ ಹಕ್ಕಿಗಾಗಿ ಹೋರಾಟಕ್ಕೆ ಮುಂದಾಗಬೇಕು ಎಂದು ಕರೆ ನೀಡಿದರು. ರಾಜಕೀಯ ಕಾಂಗ್ರೇಸ್ ಮುಖಂಡ ಬಿ.ನಾರಾಯಣ, ಮಾಜಿ ಶಾಸಕ ಎಂ.ಜಿ. ಮೂಳೆ, ಲಿಂಗರಾಜ ಪಾಟೀಲ್ ಅಟ್ಟೂರ, ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ವೇದಿಕೆಯಲ್ಲಿ ರಾಜೇಶ್ವರನ ಶ್ರೀಘನಲಿಂಗ ರುದ್ರಮುನಿ ಶಿವಾಚಾಯರ್ತರು, ಅಫಜಲಪೂರದ ಶ್ರೀ ವಿಶ್ವರಾಧ್ಯ ಮಳೇಂದ್ರ ಶಿವಾಚಾರ್ಯರು, ಸಸ್ತಾಪೂರದ ಸದಾನಂದ ಅಪ್ಪ, ಶ್ರೀ ಗುರುಲಿಂಗ ಮಹಾಸ್ವಾಮಿ,ಶ್ರೀ ಶಿವಾನಂದ ದೇವರು ಸಾಯಾಗಾಂವ, ಶ್ರೀ ಗಂಗಾಧರ ಮಹಾಸ್ವಾಮಿ ಹುಮನಾಬಾದ, ಉಪಸ್ಥಿತರಿದ್ದರು.

ಬಿಜೆಪಿ ತಾಲೂಕಾ ಅಧ್ಯಕ್ಷ ಜಯದ್ರತ ಮಾಡ್ಜೆ, ನಗರಸಭೆ ಅದ್ಯಕ್ಷೆ ಮಂಗಲಬಾಯಿ ಉದ್ರೆ, ಯುವ ಮುಖಂಡ ಸುನೀಲ ಪಾಟೀಲ್, ಹಿರಿಯರಾದ ಎಸ್.ಜಿ.ಕಲ್ಯಾಣಿ, ಸರಕಾರಿ ನೌಕರರ ಸಂಘದ ತಾಲೂಕಾ ಅಧ್ಯಕ್ಷ ಶರಣಬಸಪ್ಪ ಬೀರಾದಾರ,ತಾಲೂಕಾ ಕಸಾಪ ಅಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ, ಹುಮನಾಬಾದನ ರಮೇಶ ಸೀಗಿ, ನಾಗನಾಥ ಎಸ್ ಚಾಮಲ್ಯೆ, ಚಂದ್ರಶೆಟ್ಟಿ ಬಾಬನೂರೆ, ಮಲ್ಲಿಕಾರ್ಜುನ್ ಬೊಕ್ಕೆ, ಮಡಿವಾಳಪ್ಪ ಪೋಲಿಸ್ ಪಾಟೀಲ್, ಜಗನ್ನಾತ ಬೀರಾದಾರ ಉಪಸ್ಥಿತರಿದ್ದರು.

ಸ್ವಾಗತ ಸಮಿತಿಯ ಅಧ್ಯಕ್ಷ ಚಂದ್ರಕಾಂತ ಸ್ವಾಮಿ ನಾರಾಯಣಪೂರ ಸ್ವಾಗತಿಸಿದರು. ರಮೇಶ ರಾಜೋಳೆ ನಿರೂಪಿಸಿದರು. ಗಾನಯೋಗಿ ಪಂಡೀತ ಪುಟ್ಟರಾಜ ಕವಿ ಗವಾಯಿಗಳವರ ಸಂಗೀತ ಕಲಾ ಬಳಗದಿಂದ ಪ್ರಾರ್ಥನೆ ವಾಗು ಆಚಾರ ಪರಂಪರೆ ಗೀತೆಗಳು ಜನಮನ ಸುರೆಗೋಂಡವು.

ದಿನಾಂಕ 12-4-12 ಗುರುವಾರ ಕಾರಂಜಾ ಎಕ್ಸ್‌ಪ್ರೆಸ್ ದಿನಪತ್ರಿಕೆ

Scanned by CamScanner

# ಬಸವಕಲ್ಯಾಣದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ

## ಜಾತಿ ಜಂಜಡದ ಬೀಜವನ್ನು ಕಿತ್ತೊಗೆದು ಧರ್ಮದ

ಬಸವಕಲ್ಯಾಣ ಏ.11 ಜಾತಿ ಜಂಜಡದ ಬೀಜವನ್ನು ಕಿತ್ತೊಗೆದು ಧರ್ಮದ ಸಂಸ್ಕ್ರತಿಯನ್ನು ಉಳಿಸಬೇಕು ಅಲ್ಲದೆ ಬೆಳೆಸಬೇಕು ,ಧರ್ಮದಲ್ಲಿ ರಾಜಕಾರಣ ಪ್ರವೇಶ ಮಾಡುವುದರಿಂದ ಜಾತಿ ಜನಾಂಗವನ್ನು ಹುಟ್ಟು ಹಾಕಿ ಸಮಾಜದಲ್ಲಿ ಸಂಘರ್ಷ ಗಳನ್ನು ಶುರುವಾಗುತ್ತವೆ. ಸಾಮಾಜಿಕ ಶಾಂತಿ ಕದಡುವದರ ಮೂಲಕ ಪಕ್ಷಪಾತವನ್ನು ಮೆರೆಯುತ್ತಾರೆ ಎಂದು ರಂಭಾಪುರಿ ಪೀಠದ ಶ್ರೀಶ್ರೀಶ್ರೀ ವೀರ ಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಬಾಳೆಹೊನ್ನೂರಿನ 1008 ಜಗದ್ಗುರು ಪ್ರಸನ್ನ ರೇಣುಕ ಮಹಾ ಸನ್ನಿಧಿಯವರು ಅಭಿಪ್ರಾಯ ಪಟ್ಟರು.

ನಗರದ ತ್ರಿಪೂರಾಂತನ ಮರಿದೇವರ ಗುಡ್ಡದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠದಲ್ಲಿ ಮಂಗಳವಾರ ಹಮ್ಮಿಕೊಂಡ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವ ಹಾಗೂ ಧರ್ಮಸಭೆ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಜಗದ್ಗುರುಗಳು ಧರ್ಮ ಕಾರ್ಯಗಳೊಂದಿಗೆ ಸಾಮಾಜಿಕ ಕಾರ್ಯಗಳಲ್ಲಿ ಎಲ್ಲರು ಮುಂದಾಗಬೇಕೆಂದರು. ಸಾಮಾಜಿಕ ಬದುಕಿನಲ್ಲಿ ಇತಿಹಾಸ ಅರಿಯದ ಕೆಲವರು ಧರ್ಮದ ಹೆಸರಿನಲ್ಲಿ ತಪ್ಪು ಮಾಡುತ್ತಿರುವದು ನೋವಿನ ಸಂಗತಿಯಾಗಿದೆ ಸತ್ಯ ಶುದ್ಧ ಕಾಯಕ ನೆಲೆಗಟ್ಟಿನಲ್ಲಿ ಒಳ್ಳೆಯ ಪರಂಪರೆ ಬೆಳೆದು ಬಂದರೆ ಅಭಿವೃದ್ಧಿಯಾಗುತ್ತದೆ ಎಂದರು.

ನೆತೃತ್ವವಹಿಸಿ ಮಾತನಾಡಿದ ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶಿರ್ವಚನ ನೀಡಿ ಧರ್ಮದ ಸಾತ್ವಿಕ ತಳಹದಿಯ ಮೇಲೆ ಎಲ್ಲರು ಬದುಕುತ್ತಾರೆ



ಆದರೆ ಜಾತಿ -ಧರ್ಮ ಎಂದು ಕಚ್ಚಾಡುವದನ್ನು ಕೈಬಿಟ್ಟು ನಾವೆಲ್ಲರು ಒಂದೆ ಎಂಬ ಭಾವನೆ ಬಂದಾಗ ಮಾತ್ರ ಶಾಂತಿ ನೆಮ್ಮದಿ ಆರೋಗ್ಯ ಪೂರ್ಣ ಸಮಾಜ ನಿರ್ಮಿಸಲಿ ಸಾಧ್ಯ ,ಮತ್ತು ಮಠಗಳು ಸಮಾಜ ಸುಧಾರಣೆಯಲ್ಲಿ ಮಹತ್ವದ ಕಾರ್ಯಗಳು ಮಾಡುತ್ತಾ ಬರುತ್ತಿದ್ದು ಜನರು ಕೂಡ ಸಹಕರಿಸುವದು ಅವಶ್ಯಕ ಎಂದರು.

ನಂತರ ತಡೋಳಾ ಶಿವಾಚಾರ್ಯರು ಮಾತನಾಡಿ ಮನೆ ಮನಗಳಲ್ಲಿ ವೀರ ಶೈವರ ದಿವ್ಯ ಪರಂಪರೆ ಅಳಿಸಿ ಹೋಗುತ್ತಿದೆ ಈ ನಿಟ್ಟಿನಲ್ಲಿ ಜಾಗ್ರತಿಗೋಳಿಸುವದು ಅಗತ್ಯವಿದೆ ಮನುಷ್ಯನಿಗೆ ಮನುಷ್ಯತ್ವದ ಸಂಸ್ಕಾರ ಸಿಗಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ರೈತ ಮುಖಂಡ ಕೇದಾರ ಲಿಂಗಯ್ಯ ಹಿರೇಮಠ ಸಮಾಜದಲ್ಲಿ ಶಾಂತಿ ಸುಧಾರಣೆಯಾಗಬೇಕಾದರೆ ಅದು ಮಠಗಳಿಂದ ಮಾತ್ರ ಸಾಧ್ಯ ಸದ್ಭಕ್ತರೆಲ್ಲ ದೇಣಿಗೆ ಮೂಲಕ ... ಬೇಳಸಬೇಕು ರೈತರು ತಮ್ಮ ... ಹೋರಾಟಕ್ಕೆ ... ಗಬೇಕು ಎ... ನೀಡಿದರು. ... ಕಾಂಗ್ರೆಸ್ ಮ... ನಾರಾಯಣ ... ಶಾಸಕ ಎಂ. ಲಿಂಗರಾಜ ಅಟ್ಟೂರ, ... ಕ್ರಮದಲ್ಲಿ ಭ... ಮಾತ ನಾ... ವೇದಿಕೆಯಲ್ಲಿ ...

...ಲಕ್ಷದಲ್ಲಿ ವ್ಯತ್ಯಾಸವಾದಾಗ ತಮ್ಮದೇ ಆದ ಲಕ್ಷಣವನ್ನು ಹೊಂದುತ್ತದೆ ಎರಡರಲ್ಲಿ ಒಂದು ... ಹೆಚಿನ ಸಂದರ್ಭದಲ್ಲಿ ಉಪಯೋಗವಾಗುತ್ತದೆ. ...ಉಪಯೋಗವಾಗದೆ ಇರುವ ಇನ್ನೊಂದು ... ಕಾಲಕ್ರಮೇಣ ಕ್ಷೀಣಗೊಂಡು ಇದೇ ಪರಿಸ್ಥಿತಿ ಮಗು... ...೮-೧೦ ವರ್ಷ ವಯಸ್ಸಾಗುವವರೆ... ಮುಂದುವರಿದಾಗ ತನ್ನ ದೃಷ್ಟಿಯ ಗ್ರಹಿಸುವ ಕೆಲಸ... ...ಸಂಪೂರ್ಣ ಕಳೆದುಕೊಂಡು ಹೆಸರಿಗೆ ಮಾತ್ರ ಅಥ... ...ನೋಡಲು ಮಾತ್ರ ಕಣ್ಣು ಇರುತ್ತದೆ. ಈ ಕಠೋ... ...ತ್ಯನನ್ನು ಹೆಚು ಉಪಯೋಗವಾಗುವ ಕಣ್ಣನ್ನು ... ...ಉದ್ದೇಶಪೂರ್ವಕವಾಗಿ ಮುಚಿಕೊಂಡ... ...ಂಡುಕೊಳ್ಳಬಹುದು ಇಂತಹ ಸಂದರ್ಭಗಳು ತೀ... ...ರ... ಮೆಳ್ಳೆಗಣ್ಣು ಎಂದರೇನ...


ಚಂದ್ರಕಲಾ ಆ...

All types of Print...

Poster * Bo...

Sangmeshwar co...

ಗ್ರಾಮ ಪಂಚ...

BIDAR KRANTI Kannad...

Sangameshwar Complex, Near...


ದಿನಾಂಕ 13-4-2012 ಶುಕ್ರವಾರ ಬೀದರ ಕ್ರಾಂತಿ ದಿನಪತ್ರಿಕೆ.

ಸುನಿಧಿ ಚವ್ಹಾಣ...

## ಬಸವಕಲ್ಯಾಣದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜ

# ಜಾತಿ ಜಂಜಡದ ಬೀಜವನ್ನು ಕಿತ್ತೊಗೆದು ಧರ್ಮ





ಬಸವಕಲ್ಯಾಣಂ ಏ.11 ಜಾತಿ ಜಂಜಡದ ಬೀಜವನ್ನು ಕಿತ್ತೋಗೆದು ಧರ್ಮದ ಸಂಸ್ಕೃತಿಯನ್ನು ಉಳಿಸಬೇಕು ಅಲ್ಲದೆ ಬೆಳೆಸಬೇಕು ,ಧರ್ಮದಲ್ಲಿ ರಾಜಕಾರಣ ಪ್ರವೇಶ ಮಾಡುವುದರಿಂದ ಜಾತಿ ಜನಾಂಗವನ್ನು ಹುಟ್ಟು ಹಾಕಿ ಸಮಾಜದಲ್ಲಿ ಸಂಘರ್ಷಗಳನ್ನು ಶುರುವಾಗುತ್ತವೆ. ಸಾಮಾಜಿಕ ಶಾಂತಿ ಕದಡುವದರ ಮೂಲಕ ಪಕ್ಷಪಾತವನ್ನು ಮೆರೆಯುತ್ತಾರೆ ಎಂದು ರಂಭಾಪುರಿ ಪೀಠದ ಶ್ರೀಶ್ರೀಶ್ರೀ ವೀರ ಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಬಾಳೆಹೋನ್ನುರಿನ 1008 ಜಗದ್ಗುರು ಪ್ರಸನ್ನ ರೇಣುಕ ಮಹಾ ಸನ್ನಿಧಿಯವರು ಅಭಿಪ್ರಾಯ

ನಗರದ ತ್ರಿಪುರಾಂತದ ಮರಿದೇವರ ಗುಡ್ಡದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠದಲ್ಲಿ ಮಂಗಳವಾರ ಹಮ್ಮಿಕೊಂಡ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವ ಹಾಗೂ ಧರ್ಮಸಭೆ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಜಗದ್ಗುರುಗಳು ಧರ್ಮ ಕಾರ್ಯಗಳೊಂದಿಗೆ ಸಾಮಾಜಿಕ ಕಾರ್ಯಗಳಲ್ಲಿ ಎಲ್ಲರು ಮುಂದಾಗಬೇಕೆಂದರು, ಸಾಮಾಜಿಕ ಬದುಕಿನಲ್ಲಿ ಇತಿಹಾಸ ಅರಿಯದ ಕೆಲವರು ಧರ್ಮದ ಹೆಸರಿನಲ್ಲಿ ತಪ್ಪು ಮಾಡುತ್ತಿರುವದು ನೋವಿನ ಸಂಗತಿಯಾಗಿದೆ ಸತ್ಯ ಶುದ್ಧ ಕಾಯಕ ನೆಲೆಗಟ್ಟಿನಲ್ಲಿ ಒಳ್ಳೆಯ ಪರಂಪರೆ ಬೆಳೆದು ಬಂದರೆ ಅಭಿವೃದ್ಧಿಯಾಗುತ್ತದೆ ಎಂದರು.

ನೆತೃತ್ವವಹಿಸಿ ಮಾತನಾಡಿದ ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶಿರ್ವಚನ ನೀಡಿ ಧರ್ಮದ ಸಾತ್ವಿಕ ತಳಹದಿಯ ಮೇಲೆ ಎಲ್ಲರು ಬದುಕುತ್ತಾರೆ ಆದರೆ ಜಾತಿ –ಧರ್ಮ ಎಂದು ಕಚ್ಚಾಡುವದನ್ನು ಕೈಬಿಟ್ಟು

ನಾವೆಲ್ಲರು
ನೆಮ್ಮದಿ ಆ
,ಮತ್ತು ವ
ಕಾರ್ಯಗ
ಸಹಕರಿಸು

ನಂತರ
ಮನೆಗಳಲ್ಲಿ
ಈ ನಿಟ್ಟಿನ
ಮನುಷ್ಯತ್ವ
ಉದ್ಘಾಟಿಸಿ
ಹಿರೇಮಠ
ಅದು
ದೇಣಿಗ

## ಮಹಾನಗರ ಪಾಲಿಕೆ :
## ಕಚೇರಿಯಿಂದ ಸ್ವಚ್ಛತಾ

ಮೈಸೂರು, ಏ. 11 – ಮೈಸೂರು ಮಹಾನಗರ ಪಾಲಿಕೆಯ ವಲಯ ಕಚೇರಿ 5ರ ವ್ಯಾಪ್ತಿಯಲ್ಲಿ ಹೆಬ್ಬಾಳು ಮುಖ್ಯ ರಸ್ತೆ, ಕೆ.ಆರ್.ಎಸ್ ಮುಖ್ಯ ರಸ್ತೆ ಹಾಗೂ ರಸ್ತೆಬದಿಗಳಲ್ಲಿ ಮಾಂಸದ ಅಂಗಡಿಗಳು, ಗ್ಲಾಸ್ ಅಳವಡಿಸದೇ ಮತ್ತು ಸ್ವಚ್ಛತೆ ಕಾಪಾಡದೇ ತಾತ್ಕಾಲಿಕವಾಗಿ ಶೆಡ್‌ಗಳನ್ನು ಹಾಕಿ ಮಾಂಸ ಮಾರಾಟ ನಡೆಸುತ್ತಿರುವ ವರನ್ನು ಇಂದು ಸಮಯ ಬೆಳಗ್ಗೆ ಪಶುವೈದಾಧಿಕಾರಿ ಡಾ: ಲಿಂಗರಾಜು, ಸಹಾಯಕ ಆಯುಕ್ತ ಶ್ರೀ ಎಂ.ಬಿ. ಗೋವಿಂದರಾಜು ಅವರ ನೇತ್ರತ್ವದಲ್ಲಿ ಸಹಾಯಕ ಇಂಜಿನಿಯರ್ ಶ್ರೀ ಪಿ. ಮಹೇಶ್, ಆರೋಗ್ಯ ಪರಿವಿ ೀಕ್ಷಕರಾದ ಶ್ರಿ. ಶ್ರೀಕಾಂತ್ ಎಸ್. ವಿಭೂತಿ ಮತ್ತು ಶ್ರೀ ಕಾಂತರಾಜು, ಕಾಮಗಾರಿ ಪರಿವೀಕ್ಷಕರಾದ ಶ್ರೀ ಹೆಚ್.

ಹಾಗೂ
ತ'ಂಡ'
ಅನಧಿಕೃತ
ಕೊಂಡಿದ
ಶೆಡ್
ತೆರವುಗೊ

ಇನ್ನು
ಮಹಾನ
ವ್ಯಾಪ್ತಿಯಲ್ಲಿ
ಬದಿಗಳಲ್ಲಿ
ಶೆಡ್‌ಗಳ
ಕಾಪಾಡ
ಸಾಂಕ್ರಮಿಕ
ತಡೆಗಟ್ಟುವ
ಆಯಾ ವ
ಕಾಂ
ಮಾಡಲಾ
ಆರೋಗ
ಟಿ.ಎಸ್.
ಎಚ್ಚರಿಸಿದ

ಕನ್ನಡ
ಕನ್ನ

ದಿನಾಂಕ 12-4-2012 ಗುರುವಾರ ಉತ್ತರ ಕರ್ನಾಟಕ ದಿನಪತ್ರಿಕೆ.

Scanned by CamScanner

# ಇಂದು ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಮಹೋತ್ಸವ

ಬಸವಕಲ್ಯಾಣ: ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಮಹೋತ್ಸವ ಹಾಗೂ ಧರ್ಮ ಸಭೆ ನಾಳೆ ಮಂಗಳವಾರ ಮಧ್ಯಾಹ್ನ 12-30ಕ್ಕೆ ತ್ರಿಪೂರಾಂತದ ಮರಿದೇವರ ಗುಡ್ಡದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿ ಮಠದಲ್ಲಿ ಜರುಗಲಿದೆ.



ಜಯಂತಿ ಮಹೋತ್ಸವದ ನಿಮಿತ್ತ ಬೆಳಗ್ಗೆ ಜಗದ್ಗುರು ರೇಣುಕಾಚಾರ್ಯರ ಉದ್ಭವ ಮೂರ್ತಿಗೆ ಮಹಾರುದ್ರಾಭಿಷೇಕ ಹಾಗೂ ಮಹಾ ಮಂಗಳಾರತಿ ನಂತರ ನಗರದ ಶ್ರೀ ಬಸವೇಶ್ವರ ದೇವಸ್ಥಾನದಿಂದ ಮುಖ್ಯ ರಸ್ತೆಯ ಮಾರ್ಗವಾಗಿ ಮರಿದೇವರ ಗುಡ್ಡದ ವರೆಗೆ ಶ್ರೀ ಜಗದ್ಗುರು ರೇಣುಕಾ ಚಾರ್ಯರರ ಭಾವಚಿತ್ರದ ಭವ್ಯ ಮೆರವಣಿಗೆ ಜರುಗಲಿದೆ. ಹಾರಕೂಡನ ಶ್ರೀ ಚನ್ನವೀರ ಶಿವಾಚಾರ್ಯರು ಮೆರವಣಿಗೆಗೆ ಚಾಲನೆ ನೀಡಲಿದ್ದು, ಸರಡಗಿಯ ಶ್ರೀ ರೇವಣಸಿದ್ಧ ಶಿವಾಚಾರ್ಯರು, ಮರಿದೇವರ ಗುಡ್ಡದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಅಫಜಲಪುರಿನ ಶ್ರೀ ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯರು ಸೇರಿದಂತೆ ಅನೇಕ ಮಠಾಧಿಶರು, ಪ್ರಮುಖರು ಭಾಗವಹಿಸುವರು. ಮಧ್ಯಾಹ್ನ 12-20ಕ್ಕೆ



ದಿನಾಂಕ 10-4-2012 ಮಂಗಳವಾರ ಯುವರಂಗ ದಿನಪತ್ರಿಕೆ

# ಡಾ.ಎಸ್.ಬಿ. ಮಹಾಜನಗೆ ನುಡಿ ನಮನ

ಬಸವಕಲ್ಯಾಣ: ಶರಣರ ಧರ್ಮದೊಂದಿಗೆ ಅನ್ಯುನವಾದ ಸಂಬಂಧ ಹೊಂದ್ದಿ ಕಲ್ಯಾಣ ನಾಡಿನ ಶರಣ ಸಮಾಜದ ಋಣ ತೀರಿಸಿದ ವ್ಯಕ್ತಿ ದಿ. ಡಾ. ಎಸ್.ಬಿ. ಮಹಾಜನ ಎಂದು ಹುಲಸೂರಿನ ಗುರು ಬಸವೇಶ್ವರ ಸಂಸ್ಥಾನ ಮಠದ ಶ್ರೀ ಶಿವಾನಂದ ಮಹಾಸ್ವಾಮಿಗಳು ಹೇಳಿದರು.



ನಗರ ಶಿವಯೋಗಿ ಸಿದ್ಧರಾಮೇಶ್ವರ ಪ.ಪೂ. ಮಹಾವಿದ್ಯಾಲಯದಲ್ಲಿ ಇಚೆಗೆ ನಿಧನರಾದ ದಿ. ಡಾ. ಎಸ್.ಬಿ. ಮಹಾಜನ ಅವರಿಗಾಗಿ ಏರ್ಪಡಿಸಿದ ನುಡಿ ನಮನ (ಶ್ರದ್ಧಾಂಜಲಿ) ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು ಶಿಕ್ಷಣ, ಸಾಹಿತ್ಯ ಸಂಸ್ಕೃತಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಮಹಾಜನ ಅವರ ಸೇವೆ ಅನ್ಯುನವಾದದ್ದು. ಶರಣ ಸಂಸ್ಕೃತಿಯನ್ನು ಮೈಗೂಡಿಸಿ ಕೊಂಡಿದ ಅವರು ವೃತ್ತಿ ಜೀವನದಲ್ಲಿ ಎಲ್ಲಾ ಕೆಲಸಗಳಲ್ಲಿ ಅಚ್ಚುಕಟ್ಟುತನ ಹೊಂದಿದ್ದರು ಎಂದರು.

ಸರಳತೆ ಮನೋಭಾವದಿಂದ ಕೂಡಿದ ಅವರ ಜೀವನ ಇಂದಿನ ಸಮಾಜಕ್ಕೆ ಮಾದರಿಯಾಗಿದೆ. ನಾವೆಲ್ಲರೂ ಅವರ ಮಾರ್ಗದರ್ಶನದಲ್ಲಿ ನಡೆದುಕೊಂಡು ಹೋಗಬೇಕಾಗಿರುವುದು ಅವಶ್ಯಕವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ ಶರಣ ಸಾಹಿತ್ಯ ಪರಿಷತ್ತಿನ ತಾಲೂಕಾ ಅಧ್ಯಕ್ಷ ಕಾಶಪ್ಪಾ ಬಾಲಕಿಲೆ ಮಾತನಾಡಿ ಸಮಾಜದ ಬಗ್ಗೆ ಕಳಕಳಿಹೊಂದಿದ್ದ ಡಾ. ಮಹಾಜನ ಶೈಕ್ಷಣಿಕವಾಗಿ ಹಿಂದುಳಿದ ಈ ಭಾಗದ ಶೈಕ್ಷಣಿಕ,ಬೆಳವಣಿಗೆಗೆ ಅವರು ನೀಡಿದ ಕೊಡುಗೆ ಬಹುದೊಡ್ಡದು ಎಂದು ಹೇಳಿದರು.

ನೇತೃತ್ವ ವಹಿಸಿದ ಮುಚಳಂಬದ ಶ್ರೀ ಪ್ರಣವಾನಂದ ಮಹಾಸ್ವಾಮಿಗಳು, ಮರಿದೇವರ ಗುಡ್ಡದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಡಾ. ಮಹಾಜನ ಅವರ ಆದರ್ಶ ಜೀವನ ಕುರಿತು ತಮ್ಮ (4ನೇ ಪುಟಕ್ಕೆ)

ದಿನಾಂಕ 10-4-2012 ಮಂಗಳವಾರ ಯುವರಂಗ ದಿನಪತ್ರಿಕೆ

Scanned by CamScanner

### ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ

# ಧರ್ಮದಿಂದ ಆರೋಗ್ಯಪೂರ್ಣ ಸಮಾಜ ನಿರ್ಮಾಣ

▪ ವಿಕ ಸುದ್ದಿಲೋಕ ಬಸವಕಲ್ಯಾಣ



ಬಸವಕಲ್ಯಾಣದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವ ನಿಮಿತ್ತ ನಡೆದ ಧರ್ಮ ಸಭೆಯನ್ನು ಶ್ರೀ ರಂಭಾಪುರಿ ಜಗದ್ಗುರುಗಳ ಸಾನ್ನಿಧ್ಯದಲ್ಲಿ ರೈತ ಮುಖಂಡ ಕೇದಾರ ಲಿಂಗಯ್ಯ ಉದ್ಘಾಟಿಸಿದರು. ಶ್ರೀ ರಾಜೇಶ್ವರ ಶಿವಾಚಾರ್ಯರು, ತ್ರಿಪುರಾಂತ ಶ್ರೀಗಳು, ಶ್ರೀ ಶಿವಾನಂದ ದೇವರು, ಎಂ.ಜಿ.ಮುಳೆ, ಬಿ.ನಾರಾಯಣರಾವ, ಲಿಂಗರಾಜ ಪಾಟೀಲ್ ಅಟ್ಟೂರ್, ಜೈದ್ರತ ಮಾಡ್ಜೆ ಇದ್ದರು.'

ಧರ್ಮದ ಸಾತ್ವಿಕ ತಳ ಹದಿಯ ಮೇಲೆ ಆರೋಗ್ಯ ಪೂರ್ಣ ಸಮಾಜ ನಿರ್ಮಾಣವಾಗಬೇಕು ಎನ್ನುವ ಆಶಯದೊಂದಿಗೆ ಪಂಚ ಪೀಠಗಳು ಸಂಚರಿಸುತ್ತಿವೆ ಎಂದು ಬಾಳೆಹೊನ್ನೂರನ ರಂಭಾಪುರಿ ಜಗದ್ಗುರು ಪ್ರಸನ್ನ ರೇಣುಕ ವೀರ ಸೋಮೇಶ್ವರ ಶಿವಾಚಾರ್ಯರು ಭಗತ್ಪಾದರು ನುಡಿದರು.

ತ್ರಿಪುರಾಂತನ ಶ್ರೀ ಘನಲಿಂಗರುದ್ರ ಮುನಿ ಶಿವಾ ಚಾರ್ಯರರ ಗವಿ ಮಠ' (ಮರಿದೇವರ ಗುಡ್ಡ)ದಲ್ಲಿ ಮಂಗಳವಾರ ನಡೆದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಮಹೋತ್ಸವ ಹಾಗೂ ಧರ್ಮ ಸಭೈ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಜಗದ್ಗುರುಗಳು, ಪವಿತ್ರವಾದ ಧರ್ಮವನ್ನು ಜಾತಿಗೆ ಹೋಲಿಸುವ ಯತ್ನ ಕೆಲವರು ಮಾಡುತ್ತಿದ್ದಾರೆ. ಇದಾಗಬಾರದು ಎನ್ನುವುದೇ ಪಂಚ ಧರ್ಮದ ಉದ್ದೇಶ ಎಂದರು.

ಬಸವಕಲ್ಯಾಣ ಅಭಿವೃದ್ಧಿ ಮಂಡಳಿಯಿಂದ ಬಸವಕಲ್ಯಾಣದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಪವಿತ್ರವಾಗಿರುವ 'ಶ್ರೀ ಗವಿ ಮಠ ಅಭಿವೃದ್ಧಿಗೆ ಆಸಕ್ತಿ ವಹಿಸಬೇಕು ಎಂದು ಸಲಹೆ ನೀಡಿದರು.

ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು ಆಶೀರ್ವಚನ ನೀಡಿದರು. ಗವಿಮಠದ ಶ್ರೀ ಅಭಿನವ ಘನಲಿಂಗರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿದ್ದರು. ಗುಲ್ಬರ್ಗದ ರೈತ ಮುಖಂಡ ಕೇದಾರಲಿಂಗಯ್ಯ ಹಿರೇಮಠ ಉದ್ಘಾಟಿಸಿದರು. ಅಧ್ಯಕ್ಷತೆ ವಹಿಸಿದ್ದ ಯುವ ಮುಖಂಡ ಲಿಂಗರಾಜ ಪಾಟೀಲ್ ಅಟ್ಟೂರ್, ಮಾಜಿ ಶಾಸಕ ಎಂ.ಜಿ.ಮುಳೆ, ಕಾಂಗ್ರೆಸ್ ಮುಖಂಡ ಬಿ.ನಾರಾಯಣರಾವ ಮಾತನಾಡಿದರು.

ಸರಡಗಿಯ ಶ್ರೀ ರೇವಣಸಿದ್ಧ ಶಿವಾಚಾರ್ಯರು ನೇತ್ರತ್ವ ವಹಿಸು ವರು. ರಾಜೇಶ್ವರನ ಶ್ರೀ ಘನಲಿಂಗ ರುದ್ರಮುನಿ ಶಿವಾಚಾ ರ್ಯರು, ಕಿಟ್ಟಾದ ಶ್ರೀ ಸಿದ್ದೇಶ್ವರ ಶಿವಾಚಾರ್ಯರು, ಅಫಜಲಪುರದ ಶ್ರೀ ವಿಶ್ವಾರಾಧ್ಯ ಮಳೇಂದ್ರ ಶಿವಾಚಾ ರ್ಯರು, ಶ್ರೀ ಸದಾನಂದ ಅಪ್ಪಗಳು, ಸದಲಾಪೂರನ ಶ್ರೀ ಸಿದ್ಧಲಿಂಗ ಶಿವಾಚಾರ್ಯರು, ಹೂವಿನ ಹಳ್ಳಿಯ ಶ್ರೀ ಗುರುಲಿಂಗ ಮಹಾಸ್ವಾಮಿಜಿ, ಸಾಯಗಾಂವನ ಶ್ರೀ ಶಿವಾನಂದದೇವರು ಸಮ್ಮುಖ ವಹಿಸಿದ್ದರು. ನಗರಸಭೆ ಅಧ್ಯಕ್ಷೆ ಮಂಗಲಾಬಾಯಿ ಉದರೆ, ಕೇಶವ ಮಹಾರಾಜ ತಳಘಟಕರ್, ಶಿವರಾಜ ನರಶೆಟ್ಟಿ ಉಪಸ್ಥಿತರಿದ್ದರು.

ಪ್ರಶಸ್ತಿ: ಇದೇ ಸಂದರ್ಭದಲ್ಲಿ ಘನಲಿಂಗ ರುದ್ರಮುನಿ ಶ್ರೀ ಪ್ರಶಸ್ತಿಯನ್ನು ತ್ರಿಪುರಾಂತನ ಶರಣಪ್ಪ ಬಿರಾದಾರ ಅವರಿಗೆ ಪ್ರದಾನ ಮಾಡಲಾಯಿತು. ಗುತ್ತಿದೆ. ಪ್ರಮುಖರಾದ ಸುನೀಲ ಪಾಟೀಲ್, ಎಸ್.ಜಿ.ಕಲ್ಯಾಣಿ, ಬಸವಂತಪ್ಪ ಲವಾರೆ, ಎಂ.ಕೆ.ನಂದಿ, ಡಾ.ಬಸವರಾಜ ಸ್ವಾಮಿ, ದಯಾನಂದ ಶೀಲವಂತದತ್ತು ಪದ್ಮೆ ಅವರನ್ನೂ ಸನ್ಮಾನಿಸಲಾಯಿತು. ಸ್ವಾಗತ ಸಮಿತಿ ಅಧ್ಯಕ್ಷ ಚಂದ್ರಕಾಂತ ಸ್ವಾಮಿ, ರಮೇಶ ರಾಜೋಳೆ ನಿರೂಪಿಸಿದರು. ರುದ್ರೇಶ್ವರ ಗೋರ್ಟಾ ವಂದಿಸಿದರು.

ದಿನಾಂಕ 11-4-2012 ಬುಧುವಾರ ವಿಜಯ ಕರ್ನಾಟಕ ದಿನಪತ್ರಿಕೆ

### ■ ಕೋಹಿನೂರದಲ್ಲಿ ವಲಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ತೆರೆ

# ಗಡಿಯಲ್ಲಿ ನಿರ್ಮಾಣವಾಗಲಿ ಕನ್ನಡಮಯ ವಾತಾವರಣ

**ಬಸವಕಲ್ಯಾಣ:** ಗಡಿ ಭಾಗದಲ್ಲಿ ಕನ್ನಡಮಯ ವಾತಾವರಣ ನಿರ್ಮಾಣಕ್ಕೆ ಸಮ್ಮೇಳನಗಳು ಸಹಕಾರಿಯಾಗುತ್ತವೆ ಎಂದು ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಅಭಿಪ್ರಾಯಪಟ್ಟರು.

ಕೋಹಿನೂರ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಬುಧವಾರ ನಡೆದ ವಲಯ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪದಲ್ಲಿ ಸಾನ್ನಿಧ್ಯ ವಹಿಸಿದ್ದ ಅವರು, ಗಡಿ ಭಾಗದಲ್ಲಿ ಇಂಥ ಸಮ್ಮೇಳನಗಳ ಮೂಲಕ ಕನ್ನಡಮಯ ವಾತಾವರಣ ನಿರ್ಮಿಸುವ ಕೆಲಸ ನಡೆಯಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕಸಾಪ ತಾಲೂಕು ಅಧ್ಯಕ್ಷ ಚಂದ್ರಕಾಂತ ಸ್ವಾಮಿ, ತಾಲೂಕಿನ ಎಲ್ಲ ವಲಯಗಳಲ್ಲೂ ಸಮ್ಮೇಳನ ಆಯೋಜಿಸಲಾಗುವುದು. ಮಾರ್ಚ್‌ನಲ್ಲಿ ಬಸವಕಲ್ಯಾಣದಲ್ಲಿ ತಾಲೂಕು ಮಟ್ಟದ ಸಮ್ಮೇಳನ ನಡೆಸಲಾಗುವುದು ಎಂದರು. ಸಮ್ಮೇಳನಾಧ್ಯಕ್ಷ ಡಾ.ವಿಕ್ರಮ ವಿಸಾಜಿ, ಜಿಪಂ ಉಪಾಧ್ಯಕ್ಷೆ ಲತಾ ಶಾಂತಕುಮಾರ ಹಾರಕೂಡೆ, ಕಾಂಗ್ರೆಸ್ ಮುಖಂಡ ಡಾ.ಪ್ರಕಾಶ ಪಾಟೀಲ್, ಸುಭಾಷ ಪಾಟೀಲ್ ಮಾತನಾಡಿದರು.




ಕೋಹಿನೂರದಲ್ಲಿ ನಡೆದ ವಲಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಸಮ್ಮೇಳನಾಧ್ಯಕ್ಷ ಡಾ.ವಿಕ್ರಮ ವಿಸಾಜಿ, ಡಾ.ಅಮರನಾಥ ಜಮಾದಾರ, ಚಂದ್ರಕಾಂತ ಸ್ವಾಮಿ ಇತರರಿದ್ದರು.

ಬಿಜೆಪಿ ತಾಲೂಕು ಅಧ್ಯಕ್ಷ ಸುಧೀರ ಕಾಡಾದಿ, ನಗರ ಘಟಕ ಅಧ್ಯಕ್ಷ ಸೂರ್ಯಕಾಂತ ಚಿಲ್ಲಾಬಟ್ಟೆ, ಪ್ರಮುಖರಾದ ರಾಜಕುಮಾರ ಸಿರಗಾಪುರ, ಸಂಜು ಜಾಧವ್, ಪಿಎಸ್ಐ ವಿಠ್ಠಲರಾವ ಗೋಖಲೆ, ಶ್ರೀನಿವಾಸ ಪಾಟೀಲ್ ಉಪಸ್ಥಿತರಿದ್ದರು. ವಲಯ ಅಧ್ಯಕ್ಷ ಶಿವಶರಣಪ್ಪ ಸಂತಾಜಿ ಸ್ವಾಗತಿಸಿದರು. ಕಲ್ಲಪ್ಪ ಹಾರಕೂಡೆ ವಂದಿಸಿದರು. ವೈಜನಾಥ ಪೂಜಾರಿ ನಿರೂಪಿಸಿದರು. ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

**ಗೋಷ್ಠಿ:** ಸಮ್ಮೇಳನದಲ್ಲಿ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಪ್ರೊ.ದೇವೇಂದ್ರ ಮಂಠಾಳಕರ್, ಗ್ರಾಮೀಣ ಪ್ರದೇಶದ ಪ್ರತಿಭಾವಂತ ಲೇಖಕರನ್ನು ಗುರುತಿಸಿ ಪ್ರೋತ್ಸಾಹಿಸುವ ಅಗತ್ಯವಿದೆ. ಸಾಹಿತ್ಯ ರಚನೆಗೆ ಮಕ್ಕಳನ್ನು ಹುರಿದುಂಬಿಸುವ ಕೆಲಸ ನಡೆಯಬೇಕಿದೆ ಎಂದರು. ಬೇಲೂರಿನ ಶ್ರೀ ಪಂಚಾಕ್ಷರಿ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸರಸ್ವತಿ ಪಾಟೀಲ್, ಶರಣಯ್ಯ ಮಠಪತಿ, ಅಂಬಾರಾವ ಗಡ್ಡದ, ಮಚ್ಛೇಂದ್ರ ಲಕಮಾಜಿ ಮಾತನಾಡಿದರು.

ಜಿಲ್ಲೆಯ ಭಾಷಾ ವೈಶಿಷ್ಟ್ಯ ಕುರಿತು ಜವಾಹರ ನವೋದಯ ವಿದ್ಯಾಲಯದ ವಿದ್ಯಾರ್ಥಿನಿ ಕಾವೇರಿ ಎಂ.ಬಿ.ಮಾಡಿದ ಭಾಷಣ ಗಮನ ಸೆಳೆಯಿತು.

**ಕವಿಗೋಷ್ಠಿ:** ಸಮ್ಮೇಳನ ನಿಮಿತ್ತ ನಡೆದ ಕವಿಗೋಷ್ಠಿಯಲ್ಲಿ ಅಧ್ಯಕ್ಷತೆ ವಹಿಸಿದ್ದ ಡಾ.ಅಮರನಾಥ ಜಮಾದಾರ, ಕೋಹಿನೂರ ಗ್ರಾಮದ ಇತಿಹಾಸ, ಪರಂಪರೆ ಮತ್ತು ವೈಶಿಷ್ಟ್ಯವನ್ನು ಬಿಚ್ಚಿಟ್ಟರು.

ಹಣಮಂತರಾವ ವಿಸಾಜಿ, ಅಶೋಕಕುಮಾರ ಎಂ.ಬಿ., ಸುಗ್ರೀವ್ ಬಟಗೇರಾ, ವಿಲಾಸ ಪೂಜಾರಿ, ಸಚಿನ್ ಲೋಖಂಡೆ, ರತಿಕಾಂತ ಸಿರ್ಸಿವಾಡೆ, ಓಂನಾಥ ಇಂಡೆ, ಕವಿತಾ ಮಾಶೆಟ್ಟೆ ಕವನ ವಾಚನ ಮಾಡಿದರು. ಸೂರ್ಯಕಾಂತ ಮಾಡೋಳೆ, ಚಂದ್ರಕಾಂತ ಲಕಮಾಜಿ, ಚನ್ನಮಲ್ಲಪ್ಪ ಲಕಮಾಜಿ, ವೀರಶೆಟ್ಟಿ ಪಾಟೀಲ್ ಉಪಸ್ಥಿತರಿದ್ದರು.

Scanned by CamScanner

# ರೇಣುಕಾಚಾರ್ಯರ ಧಾರ್ಮಿಕ ಕ್ರಾಂತಿಯನ್ನು ಮರೆಯುವುದಕ್ಕೆ ಸಾಧ್ಯವಿಲ್ಲ : ರಂಭಾಪುರಿ ಶ್ರೀ



ಬಸವಕಲ್ಯಾಣ: ವೀರಶೈವ ಧರ್ಮ ಸಂಸ್ಥಾಪಕ ಜಗದ್ಗುರು ರೇಣುಕಾಚಾರ್ಯರ ಧಾರ್ಮಿಕ, ಸಾಮಾಜಿಕ ಸತಕ್ರಾಂತಿಯನ್ನ ಯಾರು ಯಾವುದೇ ಸಂದರ್ಭದಲ್ಲಿ ಮರಿಲಿಕ್ಕೆ ಸಾಧ್ಯವಿಲ್ಲ ಎಂದು ಬಾಳೆಹೊನ್ನುರಿನ ಶ್ರೀ ರಂಭಾಪುರಿ ಜಗದ್ಗುರು ಪ್ರಸನ್ ರೇಣುಕ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಜಗದ್ಗುರು ರೇಣುಕಾಚಾರ್ಯರ ಜಯಂತ ಮಹೋತ್ಸವ ನಿಮಿತ್ಯ ತ್ರಿಪುರಾಂತಧ ಮರಿದೇವರ ಗುಡ್ಡದಲ್ಲಿರುವ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠದಲ್ಲ ಆಯೋಜಿಸದ ಧರ್ಮ ಸಭೆಯ ಸಾನಿಧ್ಯವಹಿಸಿ ಮಾತನಾಡಿದ ಅವರು ಜಾತಿ ಜಂಜಡಗಳನ್ನು ಕಿತ್ತೊಗೆದು ನಿಜವಾದಂತಹ ಅಧ್ಯಾತ್ಮದ ತಳಹದಿಯ ಮೇಲೆ ಅವರು ಮಾಡಿದಂತಹ ಮಹಾನ ಕಾರ್ಯಗಳನ್ನ ಅಂದು, ಇಂದು, ಮುಂದು, ಎಂದೆಂದು ಕೂಡಾ ಎಲ್ಲಾ ಸಮಾಜದ ಜನತೆಗೆ ದಾರಿದೀಪ ಅನ್ನುವುದನ್ನ ನಾವ್ಯಾರು ಮರೆಯಬಾರದು ಎಂದು ಹೇಳಿದರು.

ವೀರಶೈವ ಧರ್ಮದ ಪಂಚ ಪೀಠಗಳ ಕುರಿತು ಕೆಲವರು ಇಲ್ಲ ಸಲ್ಲದ ಮಾತುಗಳನ್ನಾಡುತ್ತಿದ್ದಾರೆ. ಆದರೆ ಯಾರು ಏನೇ ಹೇಳಲಿ ನಮ್ಮ ಪೀಠಗಳಲ್ಲಿರುವಂತಹ ಆದರ್ಶ ವಿಚಾರಧಾರಿಗಳು ವಿಶಾಲವಾಗಿದ್ದು, ಕೇವಲ ಯಾವುದೋ ಒಂದು ವರ್ಗದ ಜನಸಮುದಾಯದ ಹಿತವನ್ನು ಕಾಪಾಡಿಲ್ಲ. ಭೂಮಿ ಮೇಲೆ ಬದುಕಿ ಮಾಳುವಂತಹ ಎಲ್ಲಾ ವರ್ಗದ ಜನರಿಗೆ ಸಮಾನವಾಂದಹ ಅವಕಾಶಗಳನ್ನ ಮಾರ್ಗದರ್ಶನ ಕೊಟ್ಟಂತಹ ಆಚಾರ್ಯರ ಚರಿತ್ರೆಗಳಿಂದ ತಿಳಿದುಕೊಳ್ಳಬಹುದು ಎಂದು ತಿಳಿಸಿದರು.

ನೇತೃತ್ವ ವಹಿಸಿದ ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು ಮಾತನಾಡಿ ವೀರಶೈವ ಧರ್ಮ ಸಂಸ್ಕೃತಿ ಮನ ಮನಗಳಲ್ಲಿ ಮೂಡಿ ಸಿವುದು ಅವಶ್ಯಕವಾಗಿದೆ ಆದರ್ಶ ಸಮಾಜ, ಆದರ್ಶ ದೇಶ ನಿರ್ಮಾಣಕ್ಕೆ ಆದರ್ಶ ನಾಗರಿಕರನ್ನು ರೂಪಿಸುವ ಅವಶ್ಯಕತೆ ಇದೆ. ಇದು ಧರ್ಮದಿಂದ ಮಾತ್ರ ಸಾಧ್ಯ ಎಂದ ಅವರು ಶಿಕ್ಷಣ ವ್ಯವಸ್ಥೆಯಲ್ಲಿ ದೋಶದಿಂದಾಗಿ ಸಮಸ್ಯೆಗಳು ಉದ್ಭವಿಸುತ್ತಿವೆ. ಧರ್ಮ ಆಧಾರಿತ ಶಿಕ್ಷಣ ವ್ಯವಸ್ಥೆ ಜಾರಿಗೆ ಬರಬೇಕಾಗಿರುವುದು ಅಗತ್ಯವಾಗಿದೆ ಎಂದು ಹೇಳಿದರು.

ಸರಡಗಿಯ ಶ್ರೀ ರೇವಣಸಿದ್ಧ ಶಿವಾಚಾರ್ಯರು, ಅಫಜಲಪುರನ ಶ್ರೀ ವಿಶ್ವರಾಧ್ಯ ಮಳೇಂದ್ರ ಶಿವಾಚಾರ್ಯರು, ಸಾಯಿಗಾಂವದ ಶ್ರೀ ಶಿವಾನಂದ ದೇವರು, ರಾಜೇಶ್ವರದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಮರಿದೇವರ ಗುಡ್ಡದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶಿರ್ವಚನ ನೀಡಿದರು.

ಸಮಾರಂಭ ಉದ್ಘಾಟಿಸಿದ ರೈತ ಮುಖಂಡ ಕೇದರಾಲಿಂಗಯ್ಯಾ ಹಿರೆಮಠ, ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ ಮಾಜಿ ಶಾಸಕ

(4ನೇ ಪುಟಕ್ಕೆ)

ದಿನಾಂಕ 13-4-2012 ಶುಕ್ರವಾರ ಯುವರಂಗ ದಿನಪತ್ರಿಕೆ

Scanned by CamScanner



ಬಸವಕಲ್ಯಾಣ: ತ್ರಿಪುರಾಂತನ ಶ್ರೀ ಘನಲಿಂಗ ರುದ್ರಮುಣಿ ಶಿವಾಚಾರ್ಯರ ಗವಿ ಮಠದಲ್ಲಿ ಆಯೋಜಿಸಿದ ಶ್ರೀ ರೇಣುಕಾಚಾರ್ಯರ ಜಯಂತಿ ಮಹೋತ್ಸವ ಸಮಾರಂಭವನ್ನು ರೈತ ಮುಖಂಡ ಕೇದರಾಲಿಂಗಯ್ಯಾ ಹಿರೆಮಠ ಉದ್ಘಾಟಿಸಿದರು. ಶ್ರೀ ರಂಭಾಪುರ ಜಗದ್ಗುರುಗಳು ಉಪಸ್ಥಿತರಿದ್ದರು.

Scanned by CamScanner

# ಉತ್ತಮ ಕಾರ್ಯನಿರ್ವಹಣೆ: ಭರವಸೆ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ತಾವು ಹಿಂದಿನ ಅವಧಿಯಲ್ಲಿ ಅಧ್ಯಕ್ಷಸ್ಥಾನವಹಿಸಿ ಒಳ್ಳೆಯ ಕೆಲಸ ಮಾಡಿದ್ದು ಈ ಸಲವೂ ಆಯ್ಕೆಯಾದರೆ ಕನ್ನಡದ ಕಾರ್ಯವನ್ನು ಉತ್ತಮವಾಗಿ ನಿರ್ವಹಿಸುತ್ತೇನೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರ ಸ್ಥಾನಕ್ಕೆ ಸ್ಪರ್ಧಿಸಿರುವ ಸಿದ್ರಾಮಪ್ಪ ಮಾಸಿಮಾಡೆ ಹೇಳಿದರು.

ಇಲ್ಲಿನ ಬಸವೇಶ್ವರ ಚಿತ್ರಕಲಾ ಕಾಲೇಜಿನಲ್ಲಿ ಮಂಗಳವಾರ ನಡೆದ ಚುನಾವಣಾ ಪ್ರಚಾರದ ಉದ್ಘಾಟನಾ ಸಭೆಯಲ್ಲಿ ಮಾತನಾಡಿದರು.

ತಮ್ಮ ಅವಧಿಯಲ್ಲಿ ಜಿಲ್ಲೆಯಲ್ಲಿ ವಲಯಮಟ್ಟದ ಸಾಹಿತ್ಯ ಸಮ್ಮೇಳನ ಒಳಗೊಂಡು ಒಟ್ಟು 25 ಸಮ್ಮೇಳನಗಳನ್ನು ಯಶಸ್ವಿಯಾಗಿ ಜರುಗಿಸಲಾಗಿದೆ. ಬೀದರನಲ್ಲಿ ಪ್ರತಿಭಾ ಕಾರಂಜಿ ಮತ್ತು ಪ್ರತಿ ತಾಲ್ಲೂಕುಗಳಲ್ಲಿ ಶಾಲೆಗೊಂದು ಮತ್ತು ಮನೆಗೊಂದು ಕಾರ್ಯಕ್ರಮ ನಡೆಸಲಾಗಿದೆ ಎಂದರು. ಈ ಸಲವೂ ಗೆಲ್ಲುವ ವಿಶ್ವಾಸವಿದೆ ಎಂದು ಹೇಳಿದರು.

ಸಾಹಿತಿ ಎಚ್.ಕಾಶಿನಾಥರೆಡ್ಡಿ ಮಾತನಾಡಿ ಸಿದ್ರಾಮಪ್ಪ ಮಾಸಿಮಾಡೆಯವರು ಅಧ್ಯಕ್ಷರಾಗಿ ಕನ್ನಡ ಕಟ್ಟುವ ಕೆಲಸ ಉತ್ತಮವಾಗಿ ನಿರ್ವಹಿಸಿದ್ದಾರೆ. ಅವರನ್ನು ಈ ಬಾರಿಯೂ ಬಹುಮತದಿಂದ ಗೆಲ್ಲಿಸಬೇಕು ಎಂದು ಕೇಳಿಕೊಂಡರು.

ನೇತೃತ್ವ ವಹಿಸಿದ್ದ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಪರಿಷತ್ತಿನ ಮಾಜಿ ತಾಲ್ಲೂಕು ಅಧ್ಯಕ್ಷ ಧನರಾಜ ಫುಲಾರೆ, ಸಿದ್ಧಲಿಂಗ ಬಂಕುಲಗಿ, ಸುಭಾಷ ಹುಲಸೂರೆ, ಬಸವಲಿಂಗ ಸುಬೇದಾರ, ಅಂಬಾರಾಯ ಉಗಾಜಿ, ಶಿವಾಜಿ ಕಾಳೆ, ಪಂಕಜ, ರಾಕೇಶ ಪುರವಂತ ಮುಂತಾದವರು ಉಪಸ್ಥಿತರಿದ್ದರು.

ಪರಿಷತ್ತಿನ ಮಾಜಿ ತಾಲ್ಲೂಕು ಅಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ ಸ್ವಾಗತಿಸಿದರು. ನಾಗಪ್ಪ ನಿಣ್ಣೆ ನಿರೂಪಿಸಿದರು. ಚಂದ್ರಕಾಂತ ಸ್ವಾಮಿ ನಾರಾಯಣಪುರ ವಂದಿಸಿದರು. ನಂತರ ಮತದಾರರ ಮನೆಗಳಿಗೆ ಹೋಗಿ ಮತಯಾಚಿಸಲಾಯಿತು.



ಬಸವಕಲ್ಯಾಣದಲ್ಲಿ ಮಂಗಳವಾರ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣಾ ಪ್ರಚಾರದ ಉದ್ಘಾಟನೆಯಲ್ಲಿ ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯ, ಅಭ್ಯರ್ಥಿ ಸಿದ್ರಾಮಪ್ಪ ಮಾಸಿಮಾಡೆ, ಪರಿಷತ್ತಿನ ತಾಲ್ಲೂಕು ಘಟಕದ ಮಾಜಿ ಅಧ್ಯಕ್ಷರಾದ ಪ್ರಭುಲಿಂಗಯ್ಯ ಟಂಕಸಾಲಿಮಠ, ಧನರಾಜ ಫುಲಾರೆ, ಕಾಶಿನಾಥರೆಡ್ಡಿ ಪಾಲ್ಗೊಂಡಿದ್ದರು

ದಿನಾಂಕ 18-4-12 ಬುಧುವಾರ ಪ್ರಜಾವಾಣಿ

# ಜ್ಯೋತಿ ಯಾತ್ರೆಗೆ ಚಾಲನೆ

ಬಸವಕಲ್ಯಾಣ: ಶರಣರ ಕಾರ್ಯಕ್ರಮಗಳಲ್ಲಿ ಪಾಲ್ಗೊಳುವ ಮೂಲಕ ಅವರ ತತ್ತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹುಲಸೂರಿನ ಶ್ರೀ ಶಿವಾನಂದ ಮಹಾಸ್ವಾಮಿ ಹೇಳಿದರು.

ಆಂಧ್ರಪ್ರದೇಶದ ಶ್ರೀಶೈಲಂ ಕ್ಷೇತ್ರದಲ್ಲಿ ಬುಧವಾರ ನಡೆಯಲಿರುವ ಅಕ್ಕನ 75ನೇ ಜಯಂತಿ ವಜ್ರ ಮಹೋತ್ಸವ ಹಾಗೂ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭ ನಿಮಿತ್ತ ಬಸವಕಲ್ಯಾಣದಿಂದ ಹೊರಟ ಜ್ಯೋತಿ ಯಾತ್ರೆಗೆ ನಗರದ ಬಸವೇಶ್ವ ದೇವಸ್ಥಾನದಲ್ಲಿ ಚಾಲನೆ ನೀಡಿ ಮಾತನಾಡಿದರು.

ಮುಚಳಂಬದ ಶ್ರೀ ಪ್ರಣವಾನಂದ ಮಹಾಸ್ವಾಮಿ ಸಾನ್ನಿಧ್ಯ ವಹಿಸಿದ್ದರು. ಹಾರಕೂಡದ ಶ್ರೀ ಚನ್ನವೀರ ಶಿವಾಚಾರ್ಯ, ಮರಿದೇವರ ಗುಡ್ಡದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಮಂಠಾಳದ ಶ್ರೀ ಗುಹೇಶ್ವರ ಮಹಾಸ್ವಾಮಿ, ಶ್ರೀ ಪರಮಾನಂದ ಸ್ವಾಮಿ, ಮಾಣಿಕ ನಗರದ ಶ್ರೀ ಆನಂದರಾಜ ಪ್ರಭುಗಳು ನೇತೃತ್ವ ವಹಿಸಿದ್ದರು.

ಶಿವರಾಜ ನರಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ನಗರಸಭೆ ಅಧ್ಯಕ್ಷ ಮಂಗಲಾಬಾಯಿ ಉದ್ರೆ, ಬಿಡಿಪಿಸಿ ಅಧ್ಯಕ್ಷ ಅನೀಲ ಕುಮಾರ ರಗಟೆ, ಬಿಎಸ್‌ಎಸ್‌ಕೆ ಅಧ್ಯಕ್ಷ ಸುಭಾಷ ಕಲ್ಲೂರ್, ಗುಲ್ಬರ್ಗ ಜಿಲ್ಲಾ ಬಸವ ಸಮಿತಿ ಅಧ್ಯಕ್ಷೆ ವಿಲಾಸವತಿ ಖೂಬಾ, ಪ್ರೊ. ಜಯಶ್ರೀ ದಂಡೆ, ಸುನೀಲ್ ಪಾಟೀಲ್, ಬಾಬುಹೊನ್ನಾ ನಾಯಕ ಸೇರಿದಂತೆ ಅನೇಕ ಗಣ್ಯರು ಇದ್ದರು. ಜ್ಯೋತಿಯೊಂದಿಗೆ ಸುಮಾರು ಐದುನೂರಕ್ಕು ಹೆಚ್ಚು ಭಕ್ತಾಧಿಗಳು ಶ್ರೀಶೈಲಂನ ಕದಳಿವನಕ್ಕೆ ಪ್ರಯಾಣ ಬೆಳೆಸಿದರು.



ಶ್ರೀಶೈಲಂ ಕ್ಷೇತ್ರಕ್ಕೆ ಹೊರಟ ಜ್ಯೋತಿ ಯಾತ್ರೆಗೆ ಬಸವಕಲ್ಯಾಣದಲ್ಲಿ ಹುಲಸೂರಿನ ಶ್ರೀ ಶಿವಾನಂದ ಮಹಾಸ್ವಾಮಿ ಚಾಲನೆ ನೀಡಿದರು, ಶಿವರಾಜ ನರಶಟ್ಟಿ, ಶ್ರೀ ಪ್ರಣವಾನಂದ ಸ್ವಾಮಿ, ಗುಹೇಶ್ವರ ಸ್ವಾಮಿ, ವಿಲಾಸವತಿ ಖೂಬಾ ಇದ್ದರು.

ದಿನಾಂಕ 6-7-2012 ಬುಧುವಾರ ವಿಜಯಕರ್ನಾಟಕ



ಬಸವಕಲ್ಯಾಣದ ಶ್ರೀ ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯದ 19ನೇ ಕಲಾ ಮಹೋತ್ಸವದಲ್ಲಿ ಕಲಾವಿದ ಎಂ.ಎಸ್.ಮಠ, ಪತ್ರಕರ್ತರಾದ ಶಿವಪುತ್ರ ಪಾಟೀಲ್, ಶಾಂತಲಿಂಗ ವರವಟ್ಟೆ ಅವರನ್ನು ಸನ್ಮಾನಿಸಲಾಯಿತು. ಶ್ರೀ ಶಿವಾನಂದ ಸ್ವಾಮೀಜಿ, ತ್ರಿಪುರಾಂತ ಶ್ರೀ, ಎಂ.ಜಿ.ಮುಳೆ, ಪ್ರಭುಲಿಂಗಯ್ಯ ಟಂಕಸಾಲಿಮಠ, ಕಾಶೀನಾಥರಡ್ಡಿ, ಚಂದ್ರಕಾಂತ ಸ್ವಾಮಿ ಇದ್ದರು.

ವಿಜಯವಾಣಿ
ಸೋಮವಾರ 11 ಮಾರ್ಚ್ 2013

Scanned by CamScanner

# ಸಂಗೀತದಿಂದ ಮನಸ್ಸು ಪ್ರಫುಲ್ಲ

▪ ವಿಕ ಸುದ್ದಿಲೋಕ ಬಸವಕಲ್ಯಾಣ



ಬಸವಕಲ್ಯಾಣದ ಶಾಂತಿನಿಕೇತನ ಶಾಲೆಯಲ್ಲಿ ವಸಂತ ಸಂಗೀತ, ನೃತ್ಯ ಶಿಬಿರದ ಸಮಾರೋಪ ಸಮಾರಂಭ ನಡೆಯಿತು.

ಮನಸ್ಸನ್ನು ಅರಳಿಸಿ, ಜೀವನದಲ್ಲಿ ಆನಂದ ತುಂಬುವ ಶಕ್ತಿ ಸಂಗೀತಕ್ಕಿದೆ ಎಂದು ಸರಕಾರಿ ನೀಲಾಂಬಿಕಾ ಕಾಲೇಜಿನ ಪ್ರಾಚಾರ್ಯ ಎಂ.ಕೆ.ಗಾದಗೆ ಹೇಳಿದರು.

ಗಾನಯೋಗಿ ಪಂಡಿತ ಪುಟ್ಟರಾಜ ಕವಿ ಗವಾಯಿಗಳವರ ಸಂಗೀತ ಕಲಾ ಬಳಗದಿಂದ ಇಲ್ಲಿಯ ಶಾಂತಿನಿಕೇತನ ಶಾಲಾ ಆವರಣದಲ್ಲಿ ನಡೆದ ವಸಂತ ಸಂಗೀತ, ಭರತ ನಾಟ್ಯ ಶಿಬಿರದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಾನ್ನಿಧ್ಯ ವಹಿಸಿದ್ದ ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಮಕ್ಕಳಲ್ಲಿ ಸಂಗೀತ-ಸಂಸ್ಕೃತಿ-ಕಲೆಯ ಬಗ್ಗೆ ಆಸಕ್ತಿ ಬೆಳೆಸಲು ಇಂಥ ಶಿಬಿರಗಳು ಆಗಾಗ ನಡೆಯುತ್ತಿರಬೇಕು ಎಂದರು.

ವೈದ್ಯಾಧಿಕಾರಿ ಡಾ.ಜ್ಯೋತಿ ಖಂಡ್ರೆ , ಕಸಾಪ ತಾಲೂಕು ನಿಕಟಪೂರ್ವ ಅಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ ಮಾತನಾಡಿದರು. ಮುಖ್ಯಗುರು ಮಾಣಿಕರಾವ ಗೋರಮುಡೆ, ಪಾಂಡುರಂಗರೆಡ್ಡಿ, ಭರತ ನಾಟ್ಯ ತರಬೇತಿದಾರ ಗಣೇಶ ಗುಮಾಸ್ತೆ, ಶಶಿಧರ ಪಾಟೀಲ್ ಉಪಸ್ಥಿತರಿದ್ದರು. ತಡ ರಾತ್ರಿಯವರೆಗೆ ಮಕ್ಕಳಿಂದ ಸಂಗೀತ, ವಚನ ಗಾಯನ ಮತ್ತು ಭರತ ನಾಟ್ಯ ನಡೆಯಿತು.

ರಾಮಚಂದ್ರ ಕಲಹಿಪ್ಪರಗಿ ತಬಲಾ ಸಾಥ್ ನೀಡಿದರು. ರಮೇಶ ಗರುಡಕರ್ ಹಾರ್ಮೋನಿಯಂ, ಪ್ರವೀಣ ದಾಂಡೇಕರ್ ಢೋಲಕ್, ಸಿದ್ದಲಿಂಗ ನೇತೆ ತಾಳ ನುಡಿಸಿದರು. ಇದೇ ವೇಳೆ ಶಿಬಿರದಲ್ಲಿ ಪಾಲ್ಗೊಂಡಿದ್ದ 45 ಮಕ್ಕಳಿಗೆ ಪ್ರಶಸ್ತಿ ಪತ್ರ ವಿತರಿಸಲಾಯಿತು. ಶಾಂತಯ್ಯ ಮಠಪತಿ ನಿರೂಪಿಸಿದರು. ಶ್ರೀದೇವಿ ಖಂಡಾಳೆ ವಂದಿಸಿದರು.

ದಿನಾಂಕ 7-5-2012 ಸೋಮವಾರ ವಿಜಯಕರ್ನಾಟಕ

# ಭಸ್ಮದಲ್ಲಿ ಅಗಣಿತ ಶಕ್ತಿ, ರೋಗನಿವಾರಕ

▪ ವಿಕ ಸುದ್ದಿಲೋಕ ಭಾಲ್ಕಿ



ಭಾಲ್ಕಿಯಲ್ಲಿ ನಡೆದ ರೇಣುಕಾಜ್ಯೋತಿ ಕಾರ್ಯಕ್ರಮದಲ್ಲಿ ರಾಜೇಶ್ವರ ಶಿವಾಚಾರ್ಯರು ಮಾತನಾಡಿದರು. ಮಾಜಿ ಸಚಿವ ಭೀಮಣ್ಣ ಖಂಡ್ರೆ ಇದ್ದರು.

ವೀರಶೈವ ಜನಾಂಗದವರು ಧರಿಸುವ ಭಸ್ಮದಲ್ಲಿ ಅಗಣಿತ ಶಕ್ತಿ ತುಂಬಿದೆ. ವೈಜ್ಞಾನಿಕ ದೃಷ್ಟಿಯಿಂದಲೂ ಭಸ್ಮದಲ್ಲಿ ರೋಗ ನಿವಾರಕ ಶಕ್ತಿ ಇದೆ ಎಂದು ಮೆಹಕರ-ತಡೋಳದ ಶ್ರೀರಾಜೇಶ್ವರ ಶಿವಾಚಾರ್ಯರು ತಿಳಿಸಿದರು.

ಪಟ್ಟಣದ ದತ್ತ ಮಂದಿರದಲ್ಲಿ ಆಯೋಜಿಸಿದ್ದ ರೇಣುಕಾಜ್ಯೋತಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ನಮ್ಮ ದೇಹದಲ್ಲಿ 2 ವಿಧಗಳಲ್ಲಿ ರೋಗಗಳು ಹುಟ್ಟುತ್ತವೆ. ಒಂದು ಸೂಕ್ಷ್ಮ ಜೀವಾಣುಗಳಿಂದ ಇನ್ನೊಂದು ವೈರಸ್‌ಗಳಿಂದ.

ಭಸ್ಮಧಾರಣೆ ಮಾಡುವುದರಿಂದ ಸೂಕ್ಷ್ಮ ಜೀವಾಣುಗಳು ಮತ್ತು ವೈರಸ್‌ಗಳು ನಾಶ ಹೊಂದುತ್ತವೆ, ಆದ್ದರಿಂದ ಎಲ್ಲರೂ ಭಸ್ಮವನ್ನು ಧರಿಸಿ ಭೂಷಣ ರಾಗಬೇಕು ಎಂದು ನುಡಿದರು.

ಮಾಜಿ ಸಚಿವ ಭೀಮಣ್ಣ ಖಂಡ್ರೆ ಉದ್ಘಾಟಿಸಿ ಮಾತನಾಡಿ, ಸಮಾಜ ಸಂಘಟನೆ ಮತ್ತು ಯುವ ಜನಾಂಗಕ್ಕೆ ಧರ್ಮದ ಸಂಸ್ಕಾರ ದೊರಕಬೇಕಾದರೆ ಈ ಬಗೆಯ ಕಾರ್ಯಕ್ರಮಗಳು ಅತ್ಯಗತ್ಯ ಎಂದು ಹೇಳಿದರು.

ಹುಡುಗಿ ಮಠದ ಶ್ರೀವಿರೂಪಾಕ್ಷ ಶಿವಾಚಾರ್ಯರು ಆಶೀರ್ವಚನ ನೀಡಿದರು. ಶಿವಣಿ ಮಠದ ಹಾವಗಿಲಿಂಗೇಶ್ವರ ಶಿವಾಚಾರ್ಯರು, ತ್ರಿಪುರಾಂತ ರುದ್ರಮುಣಿ ಶಿವಾಚಾರ್ಯರು, ಹಳೆಂಬರ ನಾಗಭೂಷಣ ಶಿವಾಚಾರ್ಯರು, ಸಿದ್ದಲಿಂಗ ಶಿವಾಚಾರ್ಯರು ಇದ್ದರು.

ಸಂಗಪ್ಪಾ ಬಿರಾದಾರ ಡೊಣಗಾಪೂರ ಪ್ರಾಸ್ತಾವಿಕ ಮಾತನಾಡಿದರು. ಪಂಚಾಕ್ಷರಿ ಸ್ವಾಮಿ ಸ್ವಾಗತಿಸಿದರು. ಬಾಬುರಾವ ಬಿರಾದಾರ ನಿರೂಪಿಸಿದರು. ರೈತ ಸಂಘದ ಮಲ್ಲಿಕಾರ್ಜುನ ಸ್ವಾಮಿ ಶರಣು ಸಮರ್ಪಣೆ ಮಾಡಿದರು.

ದಿನಾಂಕ 7-5-2012 ಸೋಮವಾರ ವಿಜಯಕರ್ನಾಟಕ

# ಪ್ರಣವಾನಂದ ಮಹಾಸ್ವಾಮಿಗಳ 44 ಜಯಂತಿ ಉತ್ಸವ ಇಂದು

ಬಸವಕಲ್ಯಾಣ,29– ತಾಲೂಕಿನ ಮುಚಳಂಬ ಗ್ರಾಮದ ಶ್ರೀ ನಾಗಭೂಷಣ ಶಿವಯೋಗಿ ಮಠದಲ್ಲಿ ಶ್ರೀ ಸದ್ಗುರು ಪ್ರಣವಾನಂದ ಮಹಾಸ್ವಾಮಿಗಳ 44 ಜಯಂತಿ ಉತ್ಸವ ಇಂದು ದಿ. 30 ರಂದು ರವಿವಾರ ಬೆಳಗ್ಗೆ 9 ಗಂಟೆಗೆ ಶ್ರೀ ಮಠದ ಸದ್ಭಕ್ತರಾದ ಶ್ರೀಮತಿ ರತ್ನಮ್ಮಾ ಬಂಡೆಪ್ಪಾ ಬಿರಾದಾರ ಇವರ ಸುಪುತ್ರರಾದ ಬಸವರಾಜ ಬಿರಾದಾರ ಇವರ ವತಿಯಿಂದ ನಡೆಯಲಿದೆ.

ಮಠದ ಪೂಜ್ಯರಾದ ಶ್ರೀ ಪ್ರಣವಾನಂದ ಮಹಸ್ವಾಮಿಗಳು ಸಾನಿಧ್ಯ, ಬೆಂಗಳೂರಿನ ಶ್ರೀ ಜಗದ್ಗುರು ನರೇಂದ್ರಬಾಬು ಶರ್ಮಾಜಿ ನೇತೃತ್ವ, ಸಸ್ತಾಪೂರ ಶರಣ ಶಿವಲಿಂಗೇಶ್ವರ ಮಠದ ಶ್ರೀ ಸದ್ಗುರು ಸದಾನಂದ ಸ್ವಾಮಿಗಳು ಅಧ್ಯಕ್ಷತೆ, ತ್ರಿಪುರಾಂತದ ಶ್ರೀ ಅಭಿನವ ಘನಲಿಂಗರುದ್ರಮುನಿ ಶಿವಾಚಾರ್ಯರು ಕಾರ್ಯಕ್ರಮದ ಸಮ್ಮುಖ ವಹಿಸಲಿದ್ದಾರೆ. ಇದೆ ಸಂದರ್ಭದಲ್ಲಿ ಭಕ್ತರಿಂದ ಶ್ರೀ ಪ್ರಣವಾನಂದ ಸ್ವಾಮಿಗಳ ತುಲಾಭಾರ ಸೇವೆ ನೆರವೇರಲಿದೆ. ತಾ. ಪಂ. ಅಧ್ಯಕ್ಷ ಗುರುಲಿಂಗಪ್ಪಾ ಸೈದಾಪುರೆ, ಸದಸ್ಯ ನಾಮಾನಂದ ಜಾಧವ, ಗ್ರಾ. ಪಂ. ಅಧ್ಯಕ್ಷೆ ಶ್ರೀಮತಿ ಶಿವಮ್ಮ ಬಸವರಾಜ ಮೇತ್ರೆ ಜಿಲ್ಲಾ ಯುವ ಕಾಂಗ್ರೆಸ ಅಧ್ಯಕ್ಷ ಆನಂದ ದೇವಪ್ಪಾ, ಖ್ಯಾತ ಉದ್ಯಮಿ ವೈಜನಾಥ ಕಾಮಶೆಟ್ಟಿ ಕಾಂಗ್ರೇಸ ಮುಖಂಡರಾದ ಶಿವಶರಣ ಬಿರಾದಾರ, ಶಿವರಾಜ ನರಶೆಟ್ಟಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ದಿನಾಂಕ 30-9-12 ಸಂಯುಕ್ತ ಕರ್ನಾಟಕ



ಬಸವಕಲ್ಯಾಣದಲ್ಲಿ ವಾಲ್ಮೀಕಿ ಜಯಂತಿ ನಿಮಿತ್ತ ನಡೆದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಆನಂದ ದೇವಪ್ಪ ಚಾಲನೆ ನೀಡಿದರು. ಪಂಚಾಕ್ಷರಿ ಸ್ವಾಮೀಜಿ, ತ್ರಿಪುರಾಂತ ಶ್ರೀ, ಮಂಗಲಾಬಾಯಿ ಇತರರಿದ್ದರು.

ದಿನಾಂಕ 3-11-12 ಉದಯವಾಣಿ



ಬಾಳೆ ಹೊನ್ನೂರಿನಲ್ಲಿ ನಡೆದ ಜಗದ್ಗುರು ರೇಣುಕಾಚಾರ್ಯರ ಜಯಂತಿ, ಯುಗಮಾನೋತ್ಸವದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ಶಿವಶರಣ ದೀಕ್ಷಾ ಸ್ಥಲ ಶ್ರೇಷ್ಠ ಶ್ರೀ ಪ್ರಶಸ್ತಿಯನ್ನು ರಂಭಾಪುರಿ ಜಗದ್ಗುರುಗಳು ಪ್ರದಾನ ಮಾಡಿ ಆಶೀರ್ವದಿಸಿದರು.

ವಿಜಯ ಕರ್ನಾಟಕ
ಭಾನುವಾರ,7 ಏಪ್ರಿಲ್ 2013, ಗುಲ್ಬರ್ಗ

Scanned by CamScanner

# ಇತಿಹಾಸ ಅರಿತರೆ ಮಾತ್ರ ಭವಿಷ್ಯ

▪ ವಿಕ ಸುದ್ದಿಲೋಕ ಬಸವಕಲ್ಯಾಣ

ಯಾವ ಸಮಾಜಕ್ಕೆ ಭವ್ಯ ಇತಿಹಾಸವಿದೆಯೋ ಆ ಸಮಾಜಕ್ಕೆ ಉಜ್ವಲ ಭವಿಷ್ಯವೂ ಇರುತ್ತದೆ. ನಾವುಗಳು ಇತಿಹಾಸ ಅರಿತು, ಭವಿಷ್ಯ ರೂಪಿಸಿಕೊಳ್ಳಬೇಕಾಗುತ್ತದೆ ಎಂದು ಮಾಜಿ ಶಾಸಕ ಎಂ.ಜಿ.ಮುಳೆ ಹೇಳಿದರು.

ತಾಲೂಕು ರೆಡ್ಡಿ ಸಮಾಜದಿಂದ ನಗರದಲ್ಲಿ ಗುರುವಾರ ನಡೆದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ಜಯಂತ್ಯುತ್ಸವದಲ್ಲಿ ಮಾತನಾಡಿದರು.

ದೇಶದ ಪ್ರಗತಿಗೆ ರೆಡ್ಡಿ ಸಮಾಜದ ಕೊಡುಗೆ ಮಹತ್ವದ್ದು, ರೆಡ್ಡಿ ಸಮಾಜದ ಜನರು ಶ್ರಮಜೀವಿಗಳು, ಪ್ರಾಮಾಣಿಕರು, ಧನಾತ್ಮಕ ವಿಚಾರ ಉಳ್ಳವರು ಎಂದು ಶ್ಲಾಘಿಸಿದರು.

ಸಾನ್ನಿಧ್ಯ ವಹಿಸಿದ್ದ ಖಾಜಾ ಜಿಯಾಉಲ್ ಹಸನ ಜಾಗೀರದಾರ್ ಆಶೀರ್ವಚನ ನೀಡಿ, ಮನುಷ್ಯನಲ್ಲಿ ಮನುಷ್ಯತ್ವವನ್ನು ಬೆಳೆಸಲು ಶಿಕ್ಷಣದಿಂದ ಮಾತ್ರ ಆಗದು, ಶಿಕ್ಷಣದ ಜತೆಗೆ ಉತ್ತಮ ಸಂಸ್ಕಾರವು ಅವಶ್ಯಕ. ಪರಸ್ಪರ ಪ್ರೀತಿ-ವಿಶ್ವಾಸ ಬೆಳೆಸುವ ಕಾರ್ಯ ಎಲ್ಲರಿಂದಲೂ ನಡೆಯಬೇಕಿದೆ ಎಂದರು.

ಉದ್ಘಾಟಿಸಿದ ತ್ರಿಪೂರಾಂತದ ಶ್ರೀಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ಹೇಮರೆಡ್ಡಿ ಮಲ್ಲಮ್ಮ ಮಹಾನ್ ಭಕ್ತೆ ಎಂದು ಬಣ್ಣಿಸಿದರು. ಸಮಾಜದ ಸಂಘಟನೆ ಅವಶ್ಯಕ, ಸಂಘಟನೆಯ ಮೂಲಕ ರಚನಾತ್ಮಕ ಕಾರ್ಯಗಳು ನಡೆಯಬೇಕು ಎಂದರು.

ಕೌಡಿಯಾಳ ಕ್ರಿಸ್ತಾಶ್ರಮದ ಫಾದರ್ ಜೇರಾಲ್ಡ್, ರಾಜೇಶ್ವರದ ಶ್ರೀಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ತಾಲೂಕು ರೆಡ್ಡಿ ಸಮಾಜದ ಅಧ್ಯಕ್ಷ ರಾಜರೆಡ್ಡಿ ಮಂಠಾಳೆ ಅಧ್ಯಕ್ಷತೆ ವಹಿಸಿದ್ದರು.

ಮಾಜಿ ಶಾಸಕ ಎಂಜಿ ಮುಳೆ, ಜಿಪಂ ಸದಸ್ಯ ರವೀಂದ್ರರೆಡ್ಡಿ ಪಾಟೀಲ್, ಮಾಜಿ ಸದಸ್ಯ ಬಾಬುರೆಡ್ಡಿ ಪಾಟೀಲ್ ನಾರಾಯಣಪೂರ್, ಬಿಎಸ್ಎಸ್‌ಕೆ ನಿರ್ದೇಶಕ ಸಂಜುರೆಡ್ಡಿ ಯರಬಾಗ, ಉಪ ತಹಸೀಲ್ದಾರ್ ಜಗನ್ನಾಥರೆಡ್ಡಿ, ತಾಪಂ ಸದಸ್ಯ ರಾಮಲಿಂಗರೆಡ್ಡಿ, ಅರ್ಜುನ ಕನಕ, ಜೈದ್ರತ್ ಮಾಡ್ಜೆ, ದೀಪಕ ಗಾಯಕವಾಡ, ಮೀರ್ ವಾರಿಸ್ ಅಲಿ, ನಾರಾಯಣರೆಡ್ಡಿ, ಬಾಲಾಜಿ ಯಾಚೆ, ಸಮಾಜದ ಅಧ್ಯಕ್ಷ ರಾಜರೆಡ್ಡಿ ಪಾಟೀಲ್, ಕಾರ್ಯದರ್ಶಿ ನಾರಾಯಣರೆಡ್ಡಿ, ಬಾಬುರೆಡ್ಡಿ ಚಾಮಾಲೆ, ಕೃಷ್ಣಾರೆಡ್ಡಿ, ವಿಠ್ಠಲರೆಡ್ಡಿ ನಿರಗುಡಿ, ಪ್ರಕಾಶರೆಡ್ಡಿ, ಅಶೋಕರೆಡ್ಡಿ, ಮಲ್ಲರೆಡ್ಡಿ ಪಾಟೀಲ್, ಮಲ್ಲಿಕಾರ್ಜುನ ರೆಡ್ಡಿ, ವೀರಾರೆಡ್ಡಿ ಇದ್ದರು. ಉಪನ್ಯಾಸಕ ನರಸಿಂಗರೆಡ್ಡಿ ಗದಲೇಗಾಂವ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ಅಶೋಕರೆಡ್ಡಿ ನಿಂಗಾವರೆ ನಿರೂಪಿಸಿದರು.

**ಸನ್ಮಾನ:** ಇದೇ ವೇಳೆ, ನಾನಾ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು. ಕಾಶಿನಾಥರೆಡ್ಡಿ ಕನಾಟೆ, ಗೋವಿಂದರೆಡ್ಡಿ ಪಾಟೀಲ್, ಜಗನ್ನಾಥರೆಡ್ಡಿ ಹುಡೆ, ಗಣೇಶರೆಡ್ಡಿ ಪಾಟೀಲ್, ಬಾಬುರೆಡ್ಡಿ ಚಾಮಾಲೆ, ಕೃಷ್ಣಾರೆಡ್ಡಿ ಯಡಮಲ್ಲೆ, ಅಣ್ಣಾರೆಡ್ಡಿ ಭೋಗಲೆ, ರವೀಂದ್ರರೆಡ್ಡಿ, ಪ್ರಕಾಶರೆಡ್ಡಿ ನರಹರೆ, ಸಂಜೀವರೆಡ್ಡಿ ಗೌಂಡಗಾಂವರನ್ನು ಸತ್ಕರಿಸಲಾಯಿತು.

**ಮೆರವಣಿಗೆ:** ಅಲಂಕೃತ ವಾಹನದಲ್ಲಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ಭಾವಚಿತ್ರದ ಭವ್ಯ ಮೆರೆವಣಿಗೆ ಸಾಂಸ್ಕೃತಿಕ ವೈಭವದೊಂದಿಗೆ ಜರುಗಿತು. ತ್ರಿಪುರಾಂತದ ಪ್ರವಾಸಿ ಮಂದಿರದಿಂದ ಮುಖ್ಯ ರಸ್ತೆಯ ಮಾರ್ಗವಾಗಿ ಬಸವ ವೃತ್ತದವರೆಗೆ ನಡೆದ ಮೆರವಣಿಗೆಯಲ್ಲಿ ಡೊಳ್ಳು, ಭಜನೆ ಸೇರಿದಂತೆ ಇತರ ಕಲಾ ತಂಡದವರು ಭಾಗವಹಿಸಿದ್ದರು. ಕುಂಭ-ಕಳಸ ಹೊತ್ತ ಮಹಿಳೆಯರು ಮೆರವಣಿಗೆ ಮೆರಗು ತಂದರು.



ಬಸವಕಲ್ಯಾಣ ತಾಲೂಕು ರೆಡ್ಡಿ ಸಮಾಜದಿಂದ ನಗರದಲ್ಲಿ ಗುರುವಾರ ಆಯೋಜಿಸಲಾಗಿದ್ದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ಜಯಂತ್ಯುತ್ಸವ ಸಮಾರಂಭದಲ್ಲಿ ಶ್ರೀಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಮಾಜಿ ಶಾಸಕ ಎಂಜಿ.ಮುಳೆ, ಜಿಪಂ ಸದಸ್ಯ ವೀರರೆಡ್ಡಿ ಪಾಟೀಲ್, ರಾಜರೆಡ್ಡಿ ಮಂಠಾಳೆ, ಇದ್ದರು.

ದಿನಾಂಕ 11-5-2012 ಶುಕ್ರವಾರ ವಿಜಯಕರ್ನಾಟಕ ದಿನಪತ್ರಿಕೆ.

# ವ್ಯಸನ ಮುಕ್ತಿಗಾಗಿ ಜನಜಾಗೃತಿ



ಬಸವಕಲ್ಯಾಣದಲ್ಲಿ ದುಶ್ಚಟಗಳ ಮುಕ್ತಿಗಾಗಿ ಜನಜಾಗೃತಿ ಅಭಿಯಾನದಲ್ಲಿ ಶ್ರೀ.ಷ.ಬ. ಅಭಿನವ ಘನಲಿಂಗ ಶಿವಾಚಾರ್ಯರು ನಗರಸಭೆ ಸದಸ್ಯ ಸೂರ್ಯಕಾಂತ ಚಿಲ್ಲಾಬಟ್ಟೆ, ರವಿಕೋಳಕೂರ, ವೀರಪಣ್ಣಾ ಬಿರಾದಾರ ಸೇರಿದಂತೆ ಹಲವರು ಇದ್ದರು.

▪ ವಿಕ ಸುದ್ದಿಲೋಕ ಬಸವಕಲ್ಯಾಣ

ಇಂದಿನ ಯುವ ಪೀಳಿಗೆ ದುಶ್ಚಟಗಳಿಂದ ಮುಕ್ತರಾಗಿ ಹೊಸ ಜೀನವ ನಡೆಸಲು ಮುಂದಾಗಬೇಕು ಎಂದು ತ್ರಿಪುರಾಂತ ಮರಿದೇವರ ಗುಡ್ಡದ ಅಭಿನವ ಘನಲಿಂಗ ಶಿವಾಚಾರ್ಯರು ಹೇಳಿದರು. ವ್ಯಸನ ಮುಕ್ತ ಜನಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಯುವಕರು ದುಶ್ಚಟಗಳನ್ನು ಸ್ವಾಮೀಜಿಗಳ ಜೋಳಿಗೆಗೆ ಹಾಕಿ. ಹೆಚ್ಚಿನ ಸಂಖ್ಯೆಯಲ್ಲಿ ದುಶ್ಚಟಕ್ಕೆ ಬಲಿಯಾಗುತ್ತಿರುವುದು ವಿಷಾದದ ಸಂಗತಿ. ಪಾಶ್ಚಾತ್ಯ ಸಂಸ್ಕೃತಿಗೆ ಮಾರು ಹೋಗಿದ್ದಾರೆ ಎಂದರು. ಬಳಿಕ ಅಂಬೇಡ್ಕರ ಭವನದಿಂದ ಪ್ರಮುಖ ರಸ್ತೆಗಳಲ್ಲಿ ಪಾದಯಾತ್ರೆ ನಡೆಸಿ ಜನಜಾಗೃತಿ ಮೂಡಿಸಿದರು.

ನಗರಸಭೆ ಸದಸ್ಯ ಸೂರ್ಯಕಾಂತ ಚಿಲ್ಲಾಬಟ್ಟೆ ಮಾತನಾಡಿ, ಸರಕಾರ ಕೂಡಲೇ ಗುಟಕಾ, ಸಾರಾಯಿ, ಸಿಗರೇಟು ತಂಬಾಕುಗಳಂಥ ಮಾದಕ ವಸ್ತುಗಳು ನಿಷೇಧಿಸಬೇಕು ಎಂದು ಒತ್ತಾಯಿಸಿದರು.

ರವಿ ಕೋಳಕೂರ, ಮರೆಪ್ಪಾ ಪಾಟಿಲ, ವೀರಪಣ್ಣಾ ಬಿರಾದಾರ, ಎಬಿವಿಪಿ ಜಿಲ್ಲಾ ಸಂಚಾಲಕ ದಿಗಂಬರ ಬೊಕ್ಕೆ ತಾಲೂ ಕಾ ಪದಾಧಿಕಾರಿಗಳು ಮತ್ತು ಗ್ರಾಮ ಸ್ಥರು ಭಾಗವ ಹಿಸಿದರು.

ದಿನಾಂಕ
18-7-2012
ಬುಧವಾರ
ವಿಜಯ ಕರ್ನಾಟಕ
ದಿನ ಪತ್ರಿಕೆ

Scanned by CamScanner

# ಹೇಮರೆಡ್ಡಿ ಮಲ್ಲಮ್ಮ ಜಯಂತಿ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಯಾವುದೇ ದೇಶದ ಮತ್ತು ಸಮಾಜದ ಇತಿಹಾಸದ ಅರಿವು ಇದ್ದರೆ ನವಪೀಳಿಗೆಗೆ ಮುಂದೆ ಉಜ್ವಲ ಭವಿಷ್ಯ ನಿರ್ಮಿಸುವುದು ಸುಗಮ ಆಗುತ್ತದೆ. ತಮ್ಮ ಸಂಸ್ಕೃತಿ, ಪರಂಪರೆ ಬಗ್ಗೆ ಪ್ರತಿಯೊಬ್ಬರಿಗೂ ಅಭಿಮಾನ ಇರಬೇಕು ಎಂದು ಮಾಜಿ ಶಾಸಕ ಎಂ.ಜಿ.ಮುಳೆ ಅಭಿಪ್ರಾಯಪಟ್ಟರು.

ಇಲ್ಲಿನ ಬಿಕೆಡಿಬಿ ಸಭಾಂಗಣದಲ್ಲಿ ಗುರುವಾರ ತಾಲ್ಲೂಕು ರೆಡ್ಡಿ ಸಮಾಜದಿಂದ ಹಮ್ಮಿಕೊಂಡ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತ್ಯುತ್ಸವದಲ್ಲಿ ಮಾತನಾಡಿದರು.

ಮಹಾಶಿವಭಕ್ತೆ ಹೇಮರೆಡ್ಡಿ ಮಲ್ಲಮ್ಮನವರ ನಿಷ್ಠೆ ಮತ್ತು ಭಕ್ತಿಗೆ ಮೆಚ್ಚಿ ದೇವರು ರೆಡ್ಡಿ ಸಮಾಜದವರಿಗೆ ಸುಖ, ಸಂಪತ್ತನ್ನು ಕೊಟ್ಟಿದ್ದಾನೆ. ಸಮಾಜದ ಜನರು ಸಹ ಮಲ್ಲಮ್ಮನವರ ಇಚ್ಛೆಯಂತೆ ನಡೆದುಕೊಳ್ಳುತ್ತಿದ್ದಾರೆ. ಸಹಕಾರ, ಶಿಕ್ಷಣ ಮತ್ತು ರಾಜಕೀಯ ಕ್ಷೇತ್ರದಲ್ಲಿ ತನ್ನದೇಯಾದ ಛಾಪು ಮೂಡಿಸಿದ್ದಾರೆ. ಮುಖ್ಯಮಂತ್ರಿ ಕೆ.ಸಿ.ರೆಡ್ಡಿ ಯವರು ರಾಜ್ಯದ ಅಭಿವೃದ್ಧಿಗೆ ದೊಡ್ಡ ಕೊಡುಗೆ ಕೊಟ್ಟಿದ್ದಾರೆ ಎಂದರು.



ಬಸವಕಲ್ಯಾಣದಲ್ಲಿ ಗುರುವಾರ ನಡೆದ ಹೇಮರೆಡ್ಡಿ ಮಲ್ಲಮ್ಮ ಜಯಂತ್ಯುತ್ಸವದ ಉದ್ಘಾಟನೆ ಸಂದರ್ಭದಲ್ಲಿ ಮಾಜಿ ಶಾಸಕ ಎಂ.ಜಿ.ಮುಳೆ, ಜಿಲ್ಲಾ ಪಂಚಾಯಿತಿ ಸದಸ್ಯ ರವೀಂದ್ರರೆಡ್ಡಿ ಗೋಕುಳ, ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ರಾಜರೆಡ್ಡಿ ಮಂಠಾಳ, ಜಯದ್ರತ್ ಮಾಡ್ಜೆ ಪಾಲ್ಗೊಂಡಿದ್ದರು

ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯರು, ರಾಜಾ ಬಾಗಸವಾರ ದರ್ಗಾದ ಜಿಯಾಪಾಶಾ ಜಾಗೀರ ದಾರ, ಫಾದರ ಜೆರಾಲ್ಡ್ ಸಾಗರ ಮಾತನಾಡಿದರು. ಉಪನ್ಯಾಸಕ ನರಸಿಂಗರೆಡ್ಡಿಯವರು ಹೇಮರೆಡ್ಡಿ ಮಲ್ಲಮ್ಮನವರ ಜೀವನ ಮತ್ತು ಸಾಧನೆ ಕುರಿತು ಹೇಳಿದರು.

ಜಿಲ್ಲಾ ಪಂಚಾಯಿತಿ ಸದಸ್ಯ ರವೀಂದ್ರರೆಡ್ಡಿ ಗೋಕುಳ, ರಾಜೇಶ್ವರ ಘನಲಿಂಗ ರುದ್ರಮುನಿ ಶಿವಾಚಾರ್ಯರು, ತಾಲ್ಲೂಕು ರೆಡ್ಡಿ ಸಮಾಜ ಸಂಘದ ಅಧ್ಯಕ್ಷ ರಾಜರೆಡ್ಡಿ ಮಂಠಾಳ, ಗ್ರಾಮ ಪಂಚಾಯಿತಿ ಅಧ್ಯಕ್ಷ ಬಾಬುರೆಡ್ಡಿ ಚಾಮಲ್ಲೆ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬಾಬುರೆಡ್ಡಿ ನಾರಾಯಣಪುರ, ಬಿಜೆಪಿ ತಾಲ್ಲೂಕು ಅಧ್ಯಕ್ಷ ಜಯದ್ರತ್ ಮಾಡ್ಜೆ, ವಾರೀಸ ಅಲಿ, ಅರ್ಜುನ ಕನಕ, ಬಿಜೆಪಿ ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ದೀಪಕ ಗಾಯಕವಾಡ, ಬೀದರ ಸಹಕಾರ ಸಕ್ಕರೆ ಕಾರ್ಖಾನೆ ನಿರ್ದೇಶಕ ಸಂಜೀವರೆಡ್ಡಿ ಯರಬಾಗ, ನಾಡ ತಹಸೀಲ್ದಾರ ಜಗನ್ನಾಥರೆಡ್ಡಿ, ಅಣ್ಣಾರೆಡ್ಡಿ ಭೋಗಲೆ, ಕಾಶಿನಾಥರೆಡ್ಡಿ ಕನಾಟೆ, ಗೋವಿಂದರೆಡ್ಡಿ ಪಾಟೀಲ, ಕೃಷ್ಣಾರೆಡ್ಡಿ ಯಡಮಲ್ಲೆ, ಜಗನ್ನಾಥರೆಡ್ಡಿ ಹುಡೆ, ಪ್ರಕಾಶರೆಡ್ಡಿ ನರಹರೆ, ಸಂಜೀವರೆಡ್ಡಿ ಗೌಡಗಾಂವೆ ಉಪಸ್ಥಿತರಿದ್ದರು.

ಅಶೋಕರೆಡ್ಡಿ ನಿರೂಪಿಸಿದರು. ಕಾರ್ಯಕ್ರಮದ ಮೊದಲು ತ್ರಿಪುರಾಂತದಿಂದ ಬಸವೇಶ್ವರ ವೃತ್ತದವರೆಗೆ ಹೇಮರೆಡ್ಡಿ ಮಲ್ಲಮ್ಮನವರ ಭಾವಚಿತ್ರದ ಭವ್ಯ ಮೆರವಣಿಗೆ ನಡೆಸಲಾಯಿತು. ಮಹಿಳೆಯರು ಕುಂಭಗಳನ್ನು ಹೊತ್ತುಕೊಂಡಿದ್ದರು. ವಿವಿಧ ಕಲಾ ತಂಡದ: ಪಾಲ್ಗೊಂಡಿದ್ದರು.

ದಿನಾಂಕ 11-5-2012 ಶುಕ್ರವಾರ ಪ್ರಜಾವಾಣಿ ದಿನಪತ್ರಿಕೆ



ಬಸವಕಲ್ಯಾಣದಲ್ಲಿ ಬುಧವಾರ ನಡೆದ ಪುಣ್ಯಕೋಟಿ ಪದವಿಪೂರ್ವ ಕಾಲೇಜಿನ ಉದ್ಘಾಟನಾ ಕಾರ್ಯಕ್ರಮದಲ್ಲಿ ಪ್ರೊ.ಸೂರ್ಯಕಾಂತ ಶೀಲವಂತ ಮಾತನಾಡಿದರು. ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ರಮೇಶ ರಾಜೋಳೆ ಪಾಲ್ಗೊಂಡಿದ್ದರು

# 'ವ್ಯಕ್ತಿತ್ವ ವಿಕಾಸದ ಗುರಿ ಇರಲಿ'

ಬಸವಕಲ್ಯಾಣ: ಶಿಕ್ಷಣ ಸಂಸ್ಥೆಗಳಲ್ಲಿ ಬರೀ ಪರೀಕ್ಷೆಗಳಲ್ಲಿ ಮಾತ್ರ ಪಾಸಾಗಾವುದನ್ನು ಕಲಿಸದೆ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸದ ಗುರಿ ಇಟ್ಟುಕೊಂಡು ಪಾಠಬೋಧನೆ ಮಾಡಬೇಕು ಎಂದು ಪ್ರೊ. ಸೂರ್ಯಕಾಂತ ಶೀಲವಂತ ಅಭಿಪ್ರಾಯಪಟ್ಟರು.

ಇಲ್ಲಿ ಬುಧವಾರ ಹಮ್ಮಿಕೊಂಡ ಪುಣ್ಯಕೋಟಿ ಪದವಿಪೂರ್ವ ಕಲಾ ಕಾಲೇಜಿನ ಉದ್ಘಾಟನೆ ಮತ್ತು ತರಗತಿಗಳ ಆರಂಭೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಇತ್ತೀಚಿಗೆ ಸಾಕಷ್ಟು ಶಾಲಾ ಕಾಲೇಜುಗಳನ್ನು ಆರಂಭಿಸಲಾಗುತ್ತಿದೆ. ಈ ಶಿಕ್ಷಣ ಕೇಂದ್ರಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ದೊರೆಯುವುದು ಅವಶ್ಯಕವಾಗಿದೆ ಎಂದರು. ಪುಣ್ಯಕೋಟಿ ಕಾಲೇಜನ್ನು ಇಂಥ ಸದುದ್ದೇಶದಿಂದಲೇ ಸ್ಥಾಪಿಸಲಾಗುತ್ತಿದೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಎಲ್ಲ ರೀತಿಯಿಂದಲೂ ಮಕ್ಕಳನ್ನು ಸಿದ್ಧಗೊಳಿಸಬೇಕಾಗಿದ್ದು ಅದಕ್ಕಾಗಿಯೂ ಕಾಲೇಜಿನಿಂದ ಸರ್ವಪ್ರಯತ್ನ ಮಾಡಲಾಗುವುದು ಎಂದು ಹೇಳಿದರು.

ಉದ್ಘಾಟನೆ ನೆರವೇರಿಸಿದ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಕಾಲೇಜಿನ ವಿದ್ಯಾರ್ಥಿಗಳು ಪರಿಶ್ರಮಪಟ್ಟು ಓದುವುದರೊಂದಿಗೆ ಶಿಸ್ತಿನ ಸಿಪಾಯಿಗಳಾಗಬೇಕು. ಪಾಶ್ಚಾತ್ಯ ಸಂಸ್ಕೃತಿಗೆ ಎಲ್ಲರೂ ಮಾರುಹೋಗುತ್ತಿರುವುದು ಸರಿಯಲ್ಲ. ದೇಶಿಯ ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕು ಎಂದರು.

ಜೀವನದಲ್ಲಿ ಉನ್ನತ ಮೌಲ್ಯಗಳನ್ನು ರೂಢಿಸಿಕೊಳ್ಳಬೇಕು. ಉದಾತ್ತ ಭಾವನೆ ಹೊಂದಿರಬೇಕು. ಜೀವನದಲ್ಲಿ ಯಶಸ್ಸು ಸಾಧಿಸುವ ಗುರಿ ಇಟ್ಟುಕೊಂಡು ಸತತ ಅಧ್ಯಯನಶೀಲ ಆಗಿರಬೇಕು. ವಿದ್ಯಾರ್ಥಿಗಳು ಪ್ರತಿದಿನ ತಪ್ಪದೇ ತರಗತಿಗೆ ಹಾಜರಾಗುವುದು ಸಹ ಮುಖ್ಯ ಎಂದು ಹೇಳಿದರು.

ದೀಪಾಲಿ ಬಿರಾದಾರ ಸ್ವಾಗತಿಸಿದರು. ರಮೇಶ ರಾಜೋಳೆ ನಿರೂಪಿಸಿದರು. ಉಮಾಕಾಂತ ಶೀಲವಂತ ವಂದಿಸಿದರು. ಶಿಕ್ಷಣ ಸಂಸ್ಥೆಯ ಪದಾಧಿಕಾರಿಗಳು, ಉಪನ್ಯಾಸಕರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ದಿನಾಂಕ 29-6-2012 ಶುಕ್ರವಾರ ಪ್ರಜಾವಾಣಿ.

## ಮಂಠಾಳದಲ್ಲಿ ದೀಪೋತ್ಸವ ನಾಳೆ

**ಬಸವಕಲ್ಯಾಣ:** ಮಹಾಶಿವರಾತ್ರಿ ನಿಮಿತ್ತ ಮಂಠಾಳದ ಶ್ರೀ ಮಹಾದೇವ ದೇವಸ್ಥಾನದಲ್ಲಿ ಭಾನುವಾರ ರಾತ್ರಿ 8ಕ್ಕೆ 1001 ದೀಪೋತ್ಸವ, ಪ್ರವಚನ, ಶಿವಭಜನೆ, ಜಾಗರಣೆ ಕಾರ್ಯಕ್ರಮ ಜರುಗಲಿದೆ. ರಾತ್ರಿ 9ಕ್ಕೆ ಪ್ರವಚನ ನಡೆಯಲಿದ್ದು, ಮಂಠಾಳದ ಶ್ರೀ ಗುಹೇಶ್ವರ ಮಹಾಸ್ವಾಮೀಜಿ ನೇತೃತ್ವ, ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಅಧ್ಯಕ್ಷತೆ ವಹಿಸುವರು. ರಾತ್ರಿ 11ಕ್ಕೆ ಘಾಟಹಿಪ್ಪರಗಾದ ಶ್ರೀ ರಾಮಲಿಂಗೇಶ್ವರ ಭಜನಾ ಮಂಡಳಿ ಮತ್ತು ಗುಂಡೂರಿನ ಶ್ರೀ ಬೀರಲಿಂಗೇಶ್ವರ ಭಜನಾ ಮಂಡಳಿಯಿಂದ ಶಿವ ಭಜನೆ ಜರುಗಲಿದೆ. ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಆನಂದ ದೇವಪ್ಪ, ಮಹಾದೇವ ಮಂದಿರ ಸಮಿತಿ ಅಧ್ಯಕ್ಷ ಜಗನ್ನಾಥ ಪಾಟೀಲ್, ತಾಪಂ ಸದಸ್ಯ ನಾಗೇಶ ಮಾಳಿ, ಗ್ರಾಪಂ ಅಧ್ಯಕ್ಷ ವೆಂಕಣ್ಣ ಪದ್ಮೆ, ಉಪಾಧ್ಯಕ್ಷೆ ಮಧುಮತಿ ಪ್ರಕಾಶರೆಡ್ಡಿ ಭಾಗವಹಿಸುವರು ಎಂದು ಶ್ರೀ ಬುರಾಣಪೂರ ಸಿದ್ದಯ್ಯ ಯುವಕ ಸಂಘದ ಅಧ್ಯಕ್ಷ ಗುರುರಾಜ ಬಿರಾದಾರ, ಕಾರ್ಯಾಧ್ಯಕ್ಷ ಶಂಕರ ಪಾಟೀಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Scanned by CamScanner



ಬಸವಕಲ್ಯಾಣದ ತ್ರಿಪುರಾಂತದಲ್ಲಿ ಮಂಗಳವಾರ ದುಶ್ಚಟಗಳ ನಿರ್ಮೂಲನೆಗಾಗಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಜೋಳಿಗೆ ಹಿಡಿದು ಪಾದಯಾತ್ರೆ ಕೈಗೊಂಡರು. ನಗರಸಭೆ ಸದಸ್ಯ ಸೂರ್ಯಕಾಂತ ಚಿಲ್ಲಾಬಟ್ಟೆ, ರವಿ ಕೊಳಕೂರ, ದಿಗಂಬರ ಬೊಕ್ಕೆ ಪಾಲ್ಗೊಂಡಿದ್ದರು

# 'ಗುಟ್ಕಾ ಬಿಟ್ಟು ಗೌರವದಿಂದ ಬದುಕಿ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಗುಟ್ಕಾ ತಿನ್ನುವುದನ್ನು ಬಿಟ್ಟು ಗೌರವದ ಬದುಕು ಸಾಗಿಸಬೇಕು. ಆರೋಗ್ಯವಂತರಾಗಿ ಜೀವನ ಸಾರ್ಥಕ ಮಾಡಿಕೊಳ್ಳಬೇಕು ಎಂದು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಲಹೆ ಕೊಟ್ಟರು.

ಅವರು ತ್ರಿಪುರಾಂತದಲ್ಲಿ ಮಂಗಳವಾರ ಜೋಳಿಗೆ ಹಿಡಿದು ಪಾದ ಯಾತ್ರೆ ನಡೆಸುವ ಮೂಲಕ ದುಶ್ಚಟಗಳ ನಿರ್ಮೂಲನೆ ಅಭಿಯಾನದಲ್ಲಿ ಪಾಲ್ಗೊಂಡು ಮಾತನಾಡಿದರು.

ಯುವಕರು ಸಾರಾಯಿ, ಗುಟ್ಕಾಕ್ಕೆ ಬಲಿಯಾಗಿ ಕೌಟುಂಬಿಕ ಸೌಖ್ಯ ಕಳೆದುಕೊಳ್ಳುತ್ತಿದ್ದಾರೆ. ಹೆಂಡತಿ, ಮಕ್ಕಳು ಸಂಕಟ ಅನುಭವಿಸಬೇಕಾಗುತ್ತಿದೆ. ಆದ್ದರಿಂದ ದುಶ್ಚಟಗಳನ್ನು ಬಿಡಿಸುವುದಕ್ಕಾಗಿ ಜೋಳಿಗೆ ಹಿಡಿದು ಮನೆಮನೆಗೆ ಹೋಗುವ ಅಭಿಯಾನ ಪ್ರತಿ ಓಣಿ, ಊರುಗಳಲ್ಲಿ ನಡೆಸುವುದು ಅತ್ಯವಶ್ಯಕವಾಗಿದೆ ಎಂದರು.

ನಗರಸಭೆ ಸದಸ್ಯ ಸೂರ್ಯಕಾಂತ ಚಿಲ್ಲಾಬಟ್ಟೆ, ಸರ್ಕಾರ ಗುಟ್ಕಾ, ಸಾರಾಯಿ, ಸಿಗರೇಟು ಮಾರಾಟ ನಿಷೇಧಿಸಬೇಕು ಎಂದು ಆಗ್ರಹಿಸಿದರು. ಇಂದಿನ ಯುವಕರು ಗುಟ್ಕಾ ಸೇವನೆ ಫ್ಯಾಶನ್ ಮಾಡಿಕೊಂಡಿದ್ದಾರೆ ಎಂದರು.

ಸಾರಾಯಿ ಮತ್ತು ಗುಟ್ಕಾದಿಂದ ಆರೋಗ್ಯ ಮತ್ತು ಮಾನಸಿಕ ನೆಮ್ಮದಿ ಹಾಳಾಗುತ್ತದೆ ಎಂಬುದು ಅವರಿಗೆ ಗೊತ್ತಿಲ್ಲ. ಆದ್ದರಿಂದ ಈ ಕುರಿತು ಜಾಗೃತಿ ಮೂಡಿಸಬೇಕಾಗಿದೆ. ಈ ಬಗ್ಗೆ ಶೀಘ್ರದಲ್ಲಿಯೇ ತಾಲ್ಲೂಕಿನ ಎಲ್ಲ ಮಠಾಧೀಶರ ನೇತೃತ್ವದಲ್ಲಿ ಬೃಹತ್ ಅಭಿಯಾನ ಕೈಗೊಳ್ಳಲಾಗುವುದು ಎಂದೂ ತಿಳಿಸಿದರು.

ಮುಖಂಡರಾದ ಮರೆಪ್ಪ ಪಾಟೀಲ, ರವೀಂದ್ರ ಕೊಳಕೂರ್, ಎಬಿವಿಪಿ ಸಂಚಾಲಕ ವಿರುಪಣ್ಣ ಬಿರಾದಾರ, ದಿಗಂಬರ ಬೊಕ್ಕೆ ಹಾಗೂ ಇತರರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಓಣಿಯಲ್ಲಿನ ಪ್ರತಿ ರಸ್ತೆಯಲ್ಲಿ ತಿರುಗಿ ಸ್ವಾಮೀಜಿಯವರು ಯುವಕರಿಂದ ಗುಟ್ಕಾ ಮತ್ತು ತಂಬಾಕುವಿನ ಪಾಕೆಟ್‌ಗಳನ್ನು ಜೋಳಿಗೆಯಲ್ಲಿ ಹಾಕಿಸಿಕೊಂಡು ಮುಂದೆ ಇಂಥ ಚಟ ಬಿಡುವುದಾಗಿ ಅವರಿಂದ ಪ್ರಮಾಣ ಮಾಡಿಸಿದರು.

ದಿನಾಂಕ 18-7-2012 ಬುಧವಾರ ಪ್ರಜಾವಾಣಿ ದಿನಪತ್ರಿಕೆ



Scanned by CamScanner

# ಧರ್ಮ ಸಿದ್ಧಾಂತ ತಿಳಿದಿರಬೇಕು: ಬಸವಂತಪ್ಪ ಲವಾರೆ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಧರ್ಮ, ಸಿದ್ಧಾಂತ ಎಲ್ಲರಿಗೂ ತಿಳಿದಿರಬೇಕು. ಮಹಾಪುರುಷರು ಸಾರಿದ ತತ್ವಗಳನ್ನು ಪಾಲಿಸಿದರೆ ಜೀವನದಲ್ಲಿ ಯಶಸ್ಸು ದೊರೆಯುತ್ತದೆ ಎಂದು ಸಹಾಯಕ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ ಅಭಿಪ್ರಾಯಪಟ್ಟರು.

ಇಲ್ಲಿನ ತ್ರಿಪುರಾಂತ ಘನಲಿಂಗ ರುದ್ರಮುನಿ ಗವಿಮಠದಲ್ಲಿ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ವತಿಯಿಂದ ಶ್ರಾವಣ ಮಾಸದ ಅಂಗವಾಗಿ ಈಚೆಗೆ ಹಮ್ಮಿಕೊಂಡ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ಶರಣರು, ಸಂತರು ಜೀವನದ ನಿಜ ಮಾರ್ಗ ತೋರಿದ್ದಾರೆ. ಧರ್ಮವು ಒಳ್ಳೆಯ ದಾರಿಯಲ್ಲಿ ನಡೆಯಲು ಸೂಚಿಸುತ್ತದೆ. ಅದರಂತೆ ನಾವು ಬದುಕು ಸಾಗಿಸಬೇಕು ಎಂದರು.



ಬಸವಕಲ್ಯಾಣದ ಘನಲಿಂಗ ರುದ್ರಮುನಿ ಗವಿಮಠದಲ್ಲಿ ಶ್ರಾವಣ ಮಾಸದ ಅಂಗವಾಗಿ ಈಚೆಗೆ ನಡೆದ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆಯ ಉದ್ಘಾಟನಾ ಸಮಾರಂಭದಲ್ಲಿ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ ಅವರನ್ನು ಸನ್ಮಾನಿಸಲಾಯಿತು. ಅಭಿನವ ರುದ್ರಮುನಿ ಶಿವಾಚಾರ್ಯರು, ಸೂರ್ಯಕಾಂತ ಶೀಲವಂತ, ವೀರಣ್ಣ ಶೀಲವಂತ ಇದ್ದರು

ನೇತೃತ್ವ ವಹಿಸಿದ್ದ ಅಭಿನವ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಶ್ರಾವಣ ತಿಂಗಳಲ್ಲಿ ಶಿವಧ್ಯಾನ ಮಾಡಿದರೆ ಇಡೀ ವರ್ಷ ಸುಖ ಶಾಂತಿಯಿಂದ ಇರಲು ಸಾಧ್ಯ ಎಂದರು. ಸಿದ್ಧಾಂತ ಶಿಖಾಮಣಿ ಗ್ರಂಥದ ನಿತ್ಯ ಪಾರಾಯಣ ನಡೆಯುವುದು ಅವಶ್ಯಕವಾಗಿದೆ ಎಂದು ಹೇಳಿದರು.

ಪ್ರಾಚಾರ್ಯ ಸೂರ್ಯಕಾಂತ ಶೀಲವಂತ ಮಾತನಾಡಿ ಗುರು, ಲಿಂಗ, ಜಂಗಮರನ್ನು ಆರಾಧಿಸುವವರಿಗೆ ಎಂದಿಗೂ ಕಷ್ಟ ಬರುವುದಿಲ್ಲ ಎಂದರು. ಆಚಾರ್ಯ ಪರಂಪರೆಯ ಮಹತ್ವ ತಿಳಿಸಿದರು. ಶ್ರಾವಣವೆಂದರೆ ಉತ್ತಮ ವಿಚಾರಗಳನ್ನು ಶ್ರವಣ ಮಾಡುವುದಾಗಿದೆ ಎಂದರು.

ಮುಖ್ಯ ಶಿಕ್ಷಕಿ ಸರಸ್ವತಿ ಬೆಂಬಳಗೆ ಮಾತನಾಡಿ ಧ್ಯಾನ, ಅನುಷ್ಠಾನದಿಂದ ಮನಸ್ಸು ನಿರ್ಮಲಗೊಳ್ಳುತ್ತದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ಅಧ್ಯಕ್ಷ ವೀರಣ್ಣ ಶೀಲವಂತ ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಚಂದ್ರಕಾಂತ ಸ್ವಾಮಿ ನಾರಾಯಣಪುರ, ಬಸವತೀರ್ಥಯ್ಯ ಸ್ವಾಮಿ, ಮಲ್ಲಿಕಾರ್ಜುನ ನಂದಿ, ರೇವಣಸಿದ್ಧಯ್ಯ ಮಠಪತಿ ಉಪಸ್ಥಿತರಿದ್ದರು. ಪ್ರಭುಲಿಂಗಯ್ಯ ಟಂಕಸಾಲಿಮಠ ಸ್ವಾಗತಿಸಿದರು. ರಮೇಶ ರಾಜೋಳೆ ನಿರೂಪಿಸಿದರು. ದಯಾನಂದ ಶೀಲವಂತ ವಂದಿಸಿದರು.

ಉಪನ್ಯಾಸ: ಜುಲೈ 30ರಂದು ಮತ್ತು ಆಗಸ್ಟ್ 2,6,9,13 ರಂದು ಸಂಜೆ ತ್ರಿಪುರಾಂತ ಘನಲಿಂಗ ರುದ್ರಮುನಿ ಗವಿಮಠದಲ್ಲಿ ಸಿದ್ಧಾಂತ ಶಿಖಾಮಣಿ ಗ್ರಂಥದ ಉಪನ್ಯಾಸ ಇರುತ್ತದೆ. 17 ರಂದು ಸಮಾರೋಪ ಸಮಾರಂಭ ಇರುತ್ತದೆ ಎಂದು ತಿಳಿಸಲಾಗಿದೆ.

ದಿನಾಂಕ 26-7-2012 ಗುರುವಾರ ಪ್ರಜಾವಾಣಿ ದಿನಪತ್ರಿಕೆ.

# 'ಕಾಯಕದಲ್ಲಿ ಕೈಲಾಸ ಕಾಣಬೇಕು'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಪ್ರತಿಯೊಬ್ಬರು ಕಾಯಕ ಮಾಡುವುದು ಅತ್ಯಂತ ಅವಶ್ಯಕವಾಗಿದೆ. ಕೆಲಸದಲ್ಲಿ ನಿರತನಾದಡೆ ಲಿಂಗ, ಜಂಗಮವಾದರೂ ಮರೆಯಬೇಕು ಎಂದು ಅದಕ್ಕಾಗಿಯೇ ಶರಣರು ಹೇಳಿದ್ದಾರೆ ಎಂದು ವೀರಶೈವ ಸದ್ಬೋಧನಾ ಸಂಸ್ಥೆ ತಾಲ್ಲೂಕು ಅಧ್ಯಕ್ಷ ವೀರಣ್ಣ ಶೀಲವಂತ ಹೇಳಿದರು.

ಇಲ್ಲಿನ ತ್ರಿಪುರಾಂತ ಘನಲಿಂಗ ರುದ್ರಮುನಿ ಗವಿಮಠದಲ್ಲಿ ಈಚೆಗೆ ಹಮ್ಮಿಕೊಂಡ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ–5 ಕಾರ್ಯಕ್ರಮದಲ್ಲಿ ಮಾತನಾಡಿದರು.

ವೀರಶೈವರಲ್ಲಿನ ಆಚಾರ್ಯ ಪರಂಪರೆ ಪುರಾತನವಾದದ್ದು ಈ ಬಗ್ಗೆ ಮಕ್ಕಳಿಗೆ ತಿಳಿಹೇಳಬೇಕು. ಯುವಕರನ್ನು ಧರ್ಮವಂತರನ್ನಾಗಿ ಮಾಡಬೇಕು ಎಂದರು.

ಶಿಕ್ಷಕಿ ಕಲ್ಪನಾ ಶೀಲವಂತ ಮಾತನಾಡಿ ಸ್ತ್ರೀಯರು ಮೂಢನಂಬಿಕೆ ಬಿಟ್ಟು ನಿಜ ಧರ್ಮಾಚರಣೆಯಲ್ಲಿ ತೊಡಗಬೇಕು ಎಂದರು.



ಬಸವಕಲ್ಯಾಣದ ತ್ರಿಪುರಾಂತ ಘನಲಿಂಗ ರುದ್ರಮುನಿ ಗವಿಮಠದಲ್ಲಿ ಈಚೆಗೆ ಹಮ್ಮಿಕೊಂಡ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆಯಲ್ಲಿ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ಅಧ್ಯಕ್ಷ ವೀರಣ್ಣ ಶೀಲವಂತ ಮಾತನಾಡಿದರು. ಅಭಿನವ ರುದ್ರಮುನಿ ಶಿವಾಚಾರ್ಯರು, ಸಿದ್ರಾಮಪ್ಪ ಸುಗೂರೆ, ಎಂ.ಕೆ.ನಂದಿ ಪಾಲ್ಗೊಂಡಿದ್ದರು

ಸಾನಿಧ್ಯ ವಹಿಸಿದ್ದ ಅಭಿನವ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಹರ ಮುನಿದರೂ ಗುರು ಕಾಯುವನು. ಆದ್ದರಿಂದ ಜೀವನದಲ್ಲಿ ಕಷ್ಟ, ತಾಪತ್ರಯ ಎದುರಾದಾಗ ಗುರುವಿನ ಸಾನಿಧ್ಯಕ್ಕೆ ಹೋಗಿ ಪರಿಹಾರ ಕಂಡುಕೊಳ್ಳಬೇಕು ಎಂದರು.

ಪ್ರಾಚಾರ್ಯ ದಯಾನಂದ ಶೀಲವಂತ ಮಾತನಾಡಿ ಮನೆ ಮನೆಯಲ್ಲಿ ಸಿದ್ಧಾಂತ ಶಿಖಾಮಣಿ ಪ್ರವಚನ ನಡೆಯಲಿ, ಧರ್ಮಜ್ಯೋತಿ ಎಲ್ಲೆಡೆ ಹೊತ್ತಲಿ ಎಂದರು. ಅಲ್ಲದೆ ಬಸವೇಶ್ವರ ಚಿತ್ರಕಲಾ ಕಾಲೇಜಿನ ಗ್ರಂಥಾಲಯಕ್ಕೆ ಅವರು ಸಿದ್ಧಾಂತ ಶಿಖಾಮಣಿ ಗ್ರಂಥಗಳನ್ನು ಕಾಣಿಕೆಯಾಗಿ ನೀಡಿದರು.

ಈಚೆಗೆ ನಿವೃತ್ತರಾದ ಕೃಷಿ ಅಧಿಕಾರಿಗಳಾದ ಮಲ್ಲಿಕಾರ್ಜುನ ನಂದಿ ಮತ್ತು ಬಸವಂತಪ್ಪ ಲವಾರೆ ಅವರನ್ನು ಸತ್ಕರಿಸಲಾಯಿತು. ಹಿರಿಯರಾದ ಸಿದ್ರಾಮಪ್ಪ ಸುಗೂರೆ, ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಅಧ್ಯಕ್ಷ ಚಂದ್ರಕಾಂತ ಸ್ವಾಮಿ ನಾರಾಯಣಪುರ, ಮಾಜಿ ಅಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ, ಪ್ರಾಚಾರ್ಯ ಸೂರ್ಯಕಾಂತ ಶೀಲವಂತ, ಸಿದ್ಧಯ್ಯ ಮಠಪತಿ ಉಪಸ್ಥಿತರಿದ್ದರು.

ರಮೇಶ ರಾಜೋಳೆ ನಿರೂಪಿಸಿದರು. ವಿಶ್ವನಾಥ ಬಿರಾದಾರ ವಂದಿಸಿದರು.

ದಿನಾಂಕ 11-8-2012 ಶನಿವಾರ ಪ್ರಜಾವಾಣಿ ದಿನಪತ್ರಿಕೆ.

Scanned by CamScanner

■ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ-5

# ಸತ್ಯ-ಶುದ್ಧ ಕಾಯಕ ಶ್ರೇಷ್ಠ: ಶೀಲವಂತ

**ಬಸವಕಲ್ಯಾಣ:** ಸತ್ಯ ಶುದ್ಧ ಕಾಯಕ ಶ್ರೇಷ್ಠ ಮತ್ತು ಪವಿತ್ರವಾದುದು ಎಂದು ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ತಾಲೂಕಾಧ್ಯಕ್ಷರಾದ ವೀರಣ್ಣ ಶೀಲವಂತ ನುಡಿದರು.

ತ್ರಿಪುರಾಂತದ ಶ್ರೀ ಘನಲಿಂಗ ರುದ್ರಮುನಿ ಗವಿಮಠದಲ್ಲಿ ಶ್ರಾವಣ ಮಾಸದ ನಿಮಿತ್ತ ಹಮ್ಮಿಕೊಂಡಿರುವ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ-5 ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ಅವರು, ಸತ್ಯ ಶುದ್ಧ ಕಾಯಕದಲ್ಲಿ ನಿರತನಾದೊಡೆ ಗುರು, ಲಿಂಗ, ಜಂಗಮವಾದರೂ ಮರೆಯಬೇಕೆಂದು ಹೇಳಿದರು.

ಆಚಾರ್ಯ ಪರಂಪರೆ ಪುರಾತನವಾದದ್ದು. ಅದರ ಮಹತ್ವವನ್ನು ಮಕ್ಕಳಿಗೆ ತಿಳಿಸಿಕೊಡಬೇಕಾದ ಅಗತ್ಯವಿದೆ. ಯುವಕರು ಧರ್ಮದ ದಾರಿಯಲ್ಲಿ ನಡೆಯಬೇಕಿದೆ ಎಂದರು. ಮುಖ್ಯಗುರು ಕಲ್ಪನಾ ದಯಾನಂದ ಶೀಲವಂತ ವಿಶೇಷ ಉಪನ್ಯಾಸ ಮಂಡಿಸಿದರು. ಸಾನ್ನಿಧ್ಯ ವಹಿಸಿದ್ದ ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಒತ್ತಡದ ಬದುಕಿನಲ್ಲಿ ನೆಮ್ಮದಿ ಪಡೆಯಬೇಕಾದರೆ ಧರ್ಮದ ದಾರಿ ಮತ್ತು ಗುರುವಿನ ಮಾರ್ಗದರ್ಶನ ಅವಶ್ಯಕವಾಗಿದೆ ಎಂದರು.

ಪ್ರಾಸ್ತಾವಿಕ ಮಾತನಾಡಿದ ದಯಾನಂದ ಶಿಲವಂತರು ಮಾತನಾಡಿ, ಬಸವಕಲ್ಯಾಣದಲ್ಲಿ ಮನೆ ಮನೆಯಲ್ಲಿ ಸಿದ್ಧಾಂತ ಸಿಖಾಮಣಿ ಉಪನ್ಯಾಸಲಾಲೆ ಜರುಗಲಿ ಮಕ್ಕಳಲ್ಲಿ ಧರ್ಮದ ಜ್ಯೋತಿ ಬೆಳಗಲಿ ಎಂದು ಆಶಯ ವ್ಯಕ್ತಪಡಿಸಿದರು. ಹಿರಿಯರಾದ ಸಿದ್ರಾಮಪ್ಪ ಸೂಗರೆ, ಪ್ರೊ.ಸೂರ್ಯಕಾಂತ ಶೀಲವಂತ, ರೇವಣಸಿದ್ದಯ್ಯ ಮಠಪತಿ, ಹಾವಯ್ಯ ಸ್ವಾಮಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಚಂದ್ರಕಾಂತ ಸ್ವಾಮಿ ಅಲ್ಲದೆ ಸದ್ಬೋಧನಾ ಸಂಸ್ಥೆಯ ಪದಾಧಿಕಾರಿಗಳು, ಪ್ರಮುಖರು ಪಾಲ್ಗೊಂಡಿದ್ದರು. ರಮೇಶ ರಾಜೋಳೆ ನಿರೂಪಿಸಿದರು. ವಿಶ್ವನಾಥ ಬಿರಾದಾರ ವಂದಿಸಿದರು.

ಸೇವಾ ನಿವೃತ್ತ ಸಹಾಯಕ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ ದಂಪತಿ ಮತ್ತು ನಿವೃತ್ತ ಇನ್ನೊಬ್ಬ ಸಹಾಯಕ ಕೃಷಿ ಅಧಿಕಾರಿ ಮಲ್ಲಿಕಾರ್ಜುನ ನಂದಿ ದಂಪತಿಗಳನ್ನು ಸನ್ಮಾನಿಸಲಾಯಿತು. ಬಸವೇಶ್ವರ ಚಿತ್ರಕಲಾ ಕಾಲೇಜಿನ ಗ್ರಂಥಾಲಯಕ್ಕಾಗಿ ಪ್ರಾಚಾರ್ಯ ಪ್ರಭುಲಿಂಗಯ್ಯ ಬಿ.ಟಂಕಸಾಲಿಮಠ ಅವರಿಗೆ ಸಿದ್ಧಾಂತ ಶಿಖಾಮಣಿಯ 12 ಪುಸ್ತಕಗಳನ್ನು ದೇಣಿಗೆಯಾಗಿ ದಯಾನಂದ ಶೀಲವಂತ ನೀಡಿದರು.



ತ್ರಿಪುರಾಂತ ಗವಿಮಠದಲ್ಲಿ ನಡೆದ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ನಿವೃತ್ತ ಸಹಾಕ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ ದಂಪತಿಯನ್ನು ಸನ್ಮಾನಿಸಲಾಯಿತು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ವೀರಣ್ಣ ಶೀಲವಂತ, ಸೂರ್ಯಕಾಂತ ಶೀಲವಂತ, ಎಂ.ಕೆ.ನಂದಿ, ಸಿದ್ರಾಮಪ್ಪ ಸುಗರೆ ಉಪಸ್ಥಿತರಿದ್ದರು.

ದಿನಾಂಕ 9-8-2012 ಗುರುವಾರ ವಿಜಯವಾಣಿ ದಿನಪತ್ರಿಕೆ

# ರೋಗ ನಿಯಂತ್ರಿಸುವ ಶಕ್ತಿ ರುದ್ರಾಕ್ಷಿಗಿದೆ

■ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ



ಬಸವಕಲ್ಯಾಣ: ತ್ರಿಪುರಾಂತನ ರುದ್ರಮುನಿ ಶಿವಾಚಾರ್ಯ ಗವಿಮಠದಲ್ಲಿ ನಡೆದ ಸಿದ್ಧಾಂತ ಶಿಖಾಮಣಿ ಉಪನ್ಯಾಸಮಾಲೆ-7ರಲ್ಲಿ ಪ್ರಭುಲಿಂಗಯ್ಯ ಟಂಕಸಾಲಿಮಠ ಮಾತನಾಡಿದರು. ರುದ್ರಮುನಿ ಶಿವಾಚಾರ್ಯರು, ಅಂಬಾರಾಯ, ವೀರಣ್ಣ, ಎ.ಜಿ.ಪಾಟೀಲ್ ಉಪಸ್ಥಿತರಿದ್ದರು.

**ಬಸವಕಲ್ಯಾಣ:** ರುದ್ರಾಕ್ಷಿ ಧಾರಣೆಯಿಂದ ಕ್ಯಾನ್ಸರ್‌ನಂತಹ ಮಾರಕ ರೋಗ ಹತೋಟಿಯಲ್ಲಿ ಬರುತ್ತದೆ ಎನ್ನುವದು ವೈಜ್ಞಾನಿಕವಾಗಿ ಧೃಡಪಟ್ಟಿದೆ ಎಂದು ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರಭುಲಿಂಗಯ್ಯ ಟಂಕಸಾಲಿಮಠ ಹೇಳಿದರು.

ತ್ರಿಪುರಾಂತನ ರುದ್ರಮುನಿ ಶಿವಾಚಾರ್ಯ ಗವಿಮಠದಲ್ಲಿ ಶ್ರಾವಣ ನಿಮಿತ್ತ ಸದ್ಬೋಧನಾ ಸಂಸ್ಥೆಯಿಂದ ಹಮ್ಮಿಕೊಂಡ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ-7 ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ, ರುದ್ರಾಕ್ಷಿಯಲ್ಲಿ ರಕ್ತದೊತ್ತಡ, ಸಕ್ಕರೆ ಕಾಯಿಲೆ ಸೇರಿದಂತೆ ಇತರ ರೋಗಗಳನ್ನು ನಿಯಂತ್ರಿಸಲು ಸಾಧ್ಯ ಎಂದರು. ರುದ್ರಾಕ್ಷಿಗಳಲ್ಲಿ ಎರಡು ಮುಖದಿಂದ ಕೂಡಿದ ಗೌರಿಶಂಕರ ಬಹು ಉತ್ತಮವಾದುದ್ದು, ಇದು ಉಮಾ ಮಹೇಶ್ವರರ ಸ್ವರೂಪವೂ ಆಗಿದೆ. ನಾಲ್ಕು ಮುಖ ಬ್ರಹ್ಮ ಸ್ವರೂಪ, ಪಂಚಮುಖ ಶಿವ ಸ್ವರೂಪ, ಆರು ಮುಖ ಷಣ್ಮುಖ ಸ್ವರೂಪ, ಎಂಟು ಮುಖದ ರುದ್ರಾಕ್ಷಿ ಅಷ್ಟ ಲಕ್ಷ್ಮೀ ಸ್ವರೂಪವಾಗಿದ್ದು, ಇವುಗಳ ಧಾರಣೆಯಿಂದ ಉತ್ತಮ ಫಲ ಪಡೆಯಬಹುದಾಗಿದೆ ಎಂದರು.

ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿ ಆಶೀರ್ವಚನ ನೀಡಿದರು. ವೀರಣ್ಣ ಶೀಲವಂತ ಅಧ್ಯಕ್ಷತೆ ವಹಿಸಿದ್ದರು. ಅಂಬಾರಾಯ ಉಗಾಜಿ, ಎ.ಜಿ.ಪಾಟೀಲ್, ಪ್ರೊ.ಸೂರ್ಯಕಾಂತ ಶೀಲವಂತ, ವಿಶ್ವನಾಥ ಬಿರಾದಾರ, ದಯಾನಂದ ಶೀಲವಂತ, ಶರಣಪ್ಪ ಬಿರಾದಾರ ಉಪಸ್ಥಿತರಿದ್ದರು.

ರೇವಣಸಿದ್ದಯ್ಯ ಮಠಪತಿ ಸ್ವಾಗತಿಸಿದರು. ರಮೇಶ ರಾಜೋಳೆ ನಿರೂಪಿಸಿದರು.

ದಿನಾಂಕ 15-8-2012 ಬುಧವಾರ ವಿಜಯವಾಣಿ ದಿನಪತ್ರಿಕೆ

Scanned by CamScanner

## ಬಸವ ಉತವ ಪ್ರತಿ ವರ್ಷ ಆಚರಿಸಿ: ಬೆಲ್ದಾಳ ಶರಣರು

# ಕರವೇ ಅನಿರ್ದಿಷ್ಟಾವಧಿ ಧರಣಿ

▪ ವಿಕಸುದ್ದಿಲೋಕ ಬಸವಕಲ್ಯಾಣ

ಪ್ರತಿವರ್ಷ ತಪ್ಪದೇ ಬಸವ ಉತ್ಸವ ಆಚರಿಸಬೇಕು. ಪ್ರಾಧಿಕಾರಕ್ಕೆ 100 ಕೋಟಿ ಅನುದಾನ ಶೀಘ್ರವೇ ಬಿಡುಗಡೆ ಮಾಡಬೇಕು ಎಂದು ಕೌಠಾದ ಶ್ರೀ ಸಿದ್ದರಾಮ ಶರಣರು ಬೆಲ್ದಾಳ ಒತ್ತಾಯಿಸಿದ್ದಾರೆ.

ನಗರದ ಹಳೆ ತಹಸೀಲ್ ಕಚೇರಿ ಎದುರು ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ ಶೆಟ್ಟಿ ಬಣ) ಹಮ್ಮಿಕೊಂಡ ಅನಿರ್ದಿಷ್ಟಾವಧಿ ಧರಣಿಯಲ್ಲಿ ಪಾಲ್ಗೊಂಡು ಮಾತನಾಡಿದರು. ಹೈ.ಕ.ವಿಭಾಗೀಯ ಸಂಚಾ ಲಕ ಶಶಿಧರ ಕೋಸಂಬೆ ಮಾತನಾಡಿ, ಬಿಕೆಡಿಬಿಗೆ ರಾಜ್ಯ ಸರಕಾರ 50 ಕೋಟಿ ರೂ ಅನುದಾನ ಬಿಡುಗಡೆ ಮಾಡಬೇಕು.ಪ್ರಾಧಿಕಾರದ ಆಯುಕ್ತರನ್ನಾಗಿ ಮನೀಷ್ ಮೌದ್ಗಿಲ್ ಅವರನ್ನು ನೇಮಕ ಮಾಡಬೇಕು .ವಿಶೇಷ ಅಧಿಕಾರಿಯಾಗಿ ಹರ್ಷಗುಪ್ತಾ ಅವರನ್ನ ನೇಮಕ ಮಾಡಬೇಕು ಎಂದು ಒತ್ತಾಯಿಸಿದರು.

ಭಾಲ್ಕಿ ಹಿರೇಮಠದ ಡಾ. ಬಸವಲಿಂಗ ಪಟ್ಟದೇವರು ಮಾತನಾಡಿ ಸೆ.17 ರಂದು ಜಿಲ್ಲೆಯ ಎಲ್ಲಾ ಮಠಾಧೀಶರ ನಿಯೋಗ ಹೋಗಿ ಮುಖ್ಯಮಂತ್ರಿ ಯವರಿಗೆ ಮನವಿ ಪತ್ರ ಸಲ್ಲಿಸಿ ಒತ್ತಡ ಹೇರಬೇಕು ಎಂದು ಸಲಹೆ ನೀಡಿದರು.

ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು, ಹುಲಸೂರಿನ ಶ್ರೀ ಶಿವಾನಂದ ಮಹಾ ಸ್ವಾಮೀಜಿ ,ಮುಚಳಂಬದ ಶ್ರೀ ಪ್ರಣವಾನಂದ ಶ್ರೀ,ಯುವ ಕಾಂಗ್ರೆಸ ಜಿಲ್ಲಾ ಅಧ್ಯಕ್ಷ ಆನಂದ ದೇವಪ್ಪ, ಕಾಂಗ್ರೆಸ್ ಯುವ ಮುಖಂಡ ಶಿವರಾಜ ನರಶೆಟ್ಟಿ, ತಾಲೂಕು ಕಸಾಪ ಅಧ್ಯಕ್ಷ ಚಂದ್ರಕಾಂತ ಸ್ವಾಮಿ ಮಾತನಾಡಿದರು.

ಗಡಿ ಗೌಡಗಾಂವನ ಶ್ರೀ ಶಾಂತಲಿಂಗ ಶಿವಾಚಾರ್ಯರು, ರಾಜೇಶ್ವರದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು, ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಭಾಲ್ಕಿಯ ಗುರುಬಸವ ದೇವರು ,ಜಿಲ್ಲಾ ಬಸವ ಕೇಂದ್ರದ ಅಧ್ಯಕ್ಷ ಶರಣಪ್ಪಾ ಮಿಠಾರೆ, ಯುವ ಅಧ್ಯಕ್ಷ ಸುರೇಶ ಚನಶೆಟ್ಟಿ ಉಪಸ್ಥಿತರಿದ್ದರು.

ಇದಕ್ಕೂ ಮುನ್ನ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಮೌನ ಮೆರವಣಿಗೆ ಮೂಲಕ ಹಳೆ ತಹಸೀಲ ಕಚೇರಿವರೆಗೆ ಬರಲಾಯಿತು.ಈ ಈ ಪಾದಯಾತ್ರೆಯಲ್ಲಿ ಮಾಜಿ ಶಾಸಕ ಎಂ.ಜಿ. ಮೂಳೆ,ಶಶಿಧರ ಕೋಸಂಬೆ, ಜಿಲ್ಲಾ ಕರವೇ ಅಧ್ಯಕ್ಷ ಸೋಮನಾಥ ಮುಧೋಳ ,ತಾಲೂಕು ಅಧ್ಯಕ್ಷ ಸುಭಾಷ ಕೆನಾಡೆ,ಕಾರ್ಯಾಧ್ಯಕ್ಷ ಲಾಲಪ್ಪ ಬೊಕ್ಕೆ, ಉಪಾಧ್ಯಕ್ಷ ರುಕ್ಮೇಶ ಪೂಜಾರಿ, ನಗರ ಅಧ್ಯಕ್ಷ ರಾಜಕುಮಾರ ಬೋಕ್ಕೆ, ಕಾರ್ಯಾಧ್ಯಕ್ಷ ಬಸವರಾಜ ತೋಗಲೆ, ಉಪಾಧ್ಯಕ್ಷ ವೀರ ಭದ್ರಯ್ಯ ಸ್ವಾಮಿ, ಬಸವರಾಜ ಕಾಮಶೆಟ್ಟಿ ಗುರುನಾಥ ಗಡ್ಡೆ ಪ್ರಭುಲಿಂಗಯ್ಯ ಟಂಕಸಾಲಿಮಠ, ಬಾಬುರಾವ ಗುಂಡೂರು,ನಾಗನಾಥ ಜಾಫರವಾಡಿ, ದತ್ತು ಬಿರಾದಾರ ಕೌಡ್ಯಾಳ, ವಂದನಾಬಾಯಿ ನೀಲಕಂಠ ವಾಡಿ, ನಾಗೇಶ ಕಲ್ಯಾಣ ಕರ್, ಶಿವಕುಮಾರ ಬಿರಾದಾರ, ಸುನೀಲ ನರಶೆಟ್ಟೆ ಅಶೋಕ ವರವಟ್ಟೆ ಇತರೆ ಗಣ್ಯರು ಪಾಲ್ಗೊಂಡಿದ್ದರು.



ನಾನಾ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ, ಬಸವಕಲ್ಯಾಣದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ ಶೆಟ್ಟಿ ಬಣ)ನೇತೃತ್ವದಲ್ಲಿ ಹಮ್ಮಿಕೊಂಡ ಅನಿರ್ದಿಷ್ಟಾವಧಿ ಧರಣಿಯಲ್ಲಿ ಜಿಲ್ಲೆಯ ಎಲ್ಲಾ ಮಠಾಧೀಶರು ಮತ್ತು ನಾನಾ ಕನ್ನಡ ಪರ ಸಂಘಟನೆಗಳ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ದಿನಾಂಕ 16-9-2012 ರವಿವಾರ ವಿಜಯವಾಣಿ ದಿನಪತ್ರಿಕೆ.

ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ ಸಮಾರೋಪ

# ಆಚಾರ್ಯ ಪರಂಪರೆಯಲ್ಲಿ ಸಮಾನತೆ

**ಬಸವಕಲ್ಯಾಣ:** ಪ್ರಾಚೀನ ಕಾಲದಿಂದಲೂ ಆಚಾರ್ಯ ಪರಂಪರೆಯಲ್ಲಿ ಪಂಚ ಪೀಠಾಧೀಶರು ಸಮಾನತೆ ಸಂದೇಶ ಸಾರಿರುವುದನ್ನೇ 12ನೇ ಶತಮಾನದ ಬಸವಾದಿ ಶರಣರು ವಚನಗಳ ಮೂಲಕ ಹೇಳಿದ್ದಾರೆ ಎಂದು ಡಾ.ಬಸವರಾಜ ಸ್ವಾಮಿ ತಿಳಿಸಿದರು.

ತ್ರಿಪುರಾಂತದ ರುದ್ರಮುನಿ ಶಿವಾಚಾರ್ಯರ ಗವಿ ಮಠದಲ್ಲಿ ನಡೆದ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ ಸಮಾರೋಪದಲ್ಲಿ ಮಾತನಾಡಿ, ಕಾಶಿ ಜಗದ್ಗುರುಗಳು ವಚನಗಳೊಂದಿಗೆ ಆಚಾರ್ಯ ಪರಂಪರೆ ಉಲ್ಲೇಖಿಸಿರುವುದನ್ನು ಕಾಣುತ್ತೇವೆ. ಪಂಚಾಚಾರ್ಯರು ಅಸಮಾನತೆ ಹೋಗಲಾಡಿಸಲು ಶ್ರಮಿಸುತ್ತಿದ್ದಾರೆ. ಇಂದಿನ ಒತ್ತಡದ ಬದುಕಿಗೆ ನೆಮ್ಮದಿ ಪಡೆಯಬೇಕಾದರೆ ಅಧ್ಯಾತ್ಮಕ್ಕೆ ಮೊರೆ ಹೋಗಬೇಕು ಎಂದರು.

ನೇತೃತ್ವ ವಹಿಸಿದ್ದ ಶ್ರೀ ರುದ್ರಮುನಿ ಶಿವಾಚಾರ್ಯರು, ಪವಿತ್ರ ಶ್ರಾವಣದಲ್ಲಿ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ ನಡೆದಿರುವುದು ಔಚಿತ್ಯಪೂರ್ಣವಾಗಿದೆ. ಧರ್ಮದ ಮಾರ್ಗದಲ್ಲಿ ನಡೆಯಲು ಇಂಥ ಕಾರ್ಯಕ್ರಮಗಳ ಅಗತ್ಯವಿದೆ ಎಂದರು.

ಪ್ರಮುಖರಾದ ಮಲ್ಲಯ್ಯ ಸ್ವಾಮಿ ಹಿರೇಮಠ, ಪ್ರೊ.ದಯಾನಂದ ಶೀಲವಂತ, ವೀರಣ್ಣ ಶೀಲವಂತ, ರೇವಣಸಿದ್ದಯ್ಯ ಮಠಪತಿ, ಬಸವತೀರ್ಥಯ್ಯ ಕಾಡಾದಿ, ಮಲ್ಲಿಕಾರ್ಜುನ ನಂದಿ, ಬಸವಂತಪ್ಪ ಲವಾರೆ ಉಪಸ್ಥಿತರಿದ್ದರು. ಪ್ರೊ. ಸೂರ್ಯಕಾಂತ ಶೀಲವಂತ ಸ್ವಾಗತಿಸಿದರು. ರುದ್ರೇಶ ಮಠಪತಿ ನಿರೂಪಿಸಿದರು.



ಬಸವಕಲ್ಯಾಣದಲ್ಲಿ ನಡೆದ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ ಸಮಾರೊಪದಲ್ಲಿ ಡಾ.ಬಸವರಾಜ ಸ್ವಾಮಿ ಮಾತನಾಡಿದರು. ರುದ್ರಮುನಿ ಶಿವಾಚಾರ್ಯರು, ಮಲ್ಲಯ್ಯ ಸ್ವಾಮಿ ಇದ್ದರು.

ದಿನಾಂಕ 20-8-2012 ಸೋಮವಾರ ವಿಜಯವಾಣಿ ದಿನಪತ್ರಿಕೆ.

## ದರ್ಶನ

ಬಸವಕಲ್ಯಾಣದ ಬಿಕೆಡಿಬಿ ಸಭಾಂಗಣದಲ್ಲಿ ಮಂಗಳವಾರ ಕೇದಾರ ಜಗದ್ಗುರುಗಳು ಇಷ್ಟಲಿಂಗ ಪೂಜೆ ನಡೆಸಿದ ನಂತರ ಭಕ್ತರು ದರ್ಶನ ಪಡೆದರು



ದಿನಾಂಕ 19-9-2012 ಬುಧವಾರ ಪ್ರಜಾವಾಣಿ

Scanned by CamScanner

# ಬಸವಕಲ್ಯಾಣ: ಇಂದಿನಿಂದ ಭಾವೈಕ್ಯ ಸಭೆ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಇಲ್ಲಿನ ಬಿಕೆಡಿಬಿ ಸಭಾಂಗಣದಲ್ಲಿ ಸೆಪ್ಟೆಂಬರ್ 17 ರಿಂದ 20ರ ವರೆಗೆ ಕೇದಾರ ಜಗದ್ಗುರು ಭೀಮಾಶಂಕರಲಿಂಗ ಶಿವಾಚಾರ್ಯ ಭಗವತ್ಪಾದರ ನೇತೃತ್ವದಲ್ಲಿ ಭಾವೈಕ್ಯ ಜನಜಾಗೃತಿ ಮಹಾಸಭೆ ಮತ್ತು ಇಷ್ಟಲಿಂಗ ಮಹಾಪೂಜೆ ನೆರವೇರಲಿದೆ.

17 ರಂದು ಮಧ್ಯಾಹ್ನ 3.30 ಗಂಟೆಗೆ ತ್ರಿಪುರಾಂತದಿಂದ ಬಸವೇಶ್ವರ ವೃತ್ತದವರೆಗೆ ಜಗದ್ಗುರುಗಳ ಭವ್ಯ ಮೆರವಣಿಗೆ ನಡೆಯಲಿದೆ.

ತಡೋಳಾ ರಾಜೇಶ್ವರ ಶಿವಾಚಾರ್ಯರು, ಹಾರಕೂಡ ಚೆನ್ನವೀರ ಶಿವಾಚಾರ್ಯರು, ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಒಳಗೊಂಡು ಅನೇಕ ಧಾರ್ಮಿಕ ಮುಖಂಡರು ಪಾಲ್ಗೊಳ್ಳುವರು.

ನಂತರ ಮೂರು ದಿನಗಳವರೆಗೆ ಪ್ರತಿದಿನ ಎರಡು ಗೋಷ್ಠಿಗಳು ನಡೆಯಲಿವೆ.

20 ರಂದು ಸಮಾರೋಪ ಸಮಾರಂಭ ನಡೆಯುತ್ತದೆ. ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯ ಭಕ್ತರು ಪಾಲ್ಗೊಳ್ಳಬೇಕು ಎಂದು ತಡೋಳಾ ರಾಜೇಶ್ವರ ಶಿವಾಚಾರ್ಯರು, ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಕೇಳಿಕೊಂಡಿದ್ದಾರೆ.

ದಿನಾಂಕ 17-9-2012 ಸೋಮವಾರ

# ಬಸವಕಲ್ಯಾಣ: ಜನ ಜಾಗೃತಿ ಧರ್ಮ ಸಭೆ ನಾಳೆಯಿಂದ

■ ವಿಕ ಸುದ್ದಿಲೋಕ ಬಸವಕಲ್ಯಾಣ

ವಿಶ್ವಶಾಂತಿ ಹಾಗೂ ಲೋಕ ಕಲ್ಯಾಣಾರ್ಥವಾಗಿ ಕೇದಾರ ಜಗದ್ಗುರು ಭೀಮಾಶಂಕರ ಲಿಂಗ ಶಿವಾಚಾರ್ಯರಿಂದ ಸೆ.17ರಿಂದ 20ರವರೆಗೆ ಇಷ್ಟಲಿಂಗ ಮಹಾಪೂಜೆ ಜನ ಜಾಗೃತಿ ಧರ್ಮ ಸಭೆ ನಗರದ ಬಿಕೆ ಡಿಬಿ ಗ್ರಂಥಾಲಯದ ಸಭಾಂಗಣ ದಲ್ಲಿ ನಡೆಯಲಿದೆ.

ಸೋಮವಾರ ಮಧ್ಯಾಹ್ನ 3.30ರಿಂದ ನಗರದ ತ್ರಿಪುರಾಂತ ಪ್ರವಾಸಿ ಮಂದಿರದಿಂದ ಬಿಕೆಡಿಬಿ ಗ್ರಂಥಾಲಯದ ವರೆಗೆ ಮಹಾರ ಥೋತ್ಸವದ ಮೆರವಣಿಗೆ ನಡೆ ಯಲಿದೆ. ಕೇದಾರ ಶ್ರೀ ಸಾನಿಧ್ಯ ,ತಡೋಳಾದ ರಾಜೇಶ್ವರ ಶ್ರೀ, ತ್ರಿಪು ರಾಂತದ ರುದ್ರಮುನಿ ಸ್ವಾಮೀಜಿ ನೇತೃತ. ವಿರೂಪಾಕ್ಷ ಶ್ರೀ, ಚನ್ನವೀರ ಶಿವಚಾ ರ್ಯರು, ರುದ್ರ ಮುನಿ ಶಿವಚಾ ರ್ಯರು, ಶಾಂತವೀರ ಶ್ರೀ; ಸಿದ್ದಲಿಂಗ ಶಿವಚಾರ್ಯರು, ಜಯಶಾಂತಲಿಂಗ ಸ್ವಾಮೀಜಿ, ಗಂಗಾಧರ ಸ್ವಾಮೀಜಿ,, ವಿಶ್ವರಾಧ್ಯ ಮಳೇಂದ್ರ ಶ್ರೀ, ವಿಜಯಕುಮಾರ ಸ್ವಾಮೀ ಜಿ ಪಾಲ್ಗೊಳ್ಳಲಿದ್ದಾರೆ.

ಸಂಜೆ 7ಗಂಟೆಗೆ ರಾಷ್ಟ್ರೀಯ ಭಾವೈಕ್ಯ ಜನ ಜಾಗೃತಿ ಧರ್ಮ ಸಭೆ ನಡೆ ಯಲಿದೆ.

ಕೇದಾರ ಜಗದ್ಗುರು ಸಾನಿಧ್ಯ, ರಾಜೇಶ್ವರ ಶಿವಾಚಾರ್ಯ ರು, ರುದ್ರ ಮುನಿ ಶಿವಾಚಾರ್ಯರು ನೇತೃತ್ವ . ಡಾ ಜಯ ಸಿದ್ದೇಶ್ವರ ಶಿವಾ ಚಾರ್ಯರು ಉದ್ಘಾ ಟಿಸಿ ಉಪದೇಶಾಮೃತ ನೀಡಲಿದ್ದಾರೆ.

ಉದ್ಯಮಿ ಸುನೀಲ ಪಾಟೀಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಮಂಗಳವಾರ ಬೆಳಗ್ಗೆ 8ಕ್ಕೆ ಇಷ್ಟಲಿಂಗ ಮಹಾಪೂಜೆ. ಸಂಜೆ 5.30ಕ್ಕೆ ನಡೆಯಲಿರುವ ಧರ್ಮ ಸಭೆ ಯ ಸಾನ್ನಿಧ್ಯ ಕೇದಾರ ಶ್ರೀ ವಹಿಸಲಿದ್ದು, ತಡೋಳಾದ ರಾಜೇಶ್ವರ ಶ್ರೀ, ತ್ರಿಪುರಾಂತದ ರುದ್ರಮುನಿ ಸ್ವಾಮೀಜಿ ನೇತೃತ್ವ ವಹಿಸಲಿದ್ದಾರೆ.

ಮುಚಳಂಬದ ಪ್ರಣವಾನಂದ ಶ್ರೀಉಪದೇಶಾಮೃತ ನೀಡಲಿದ್ದಾರೆ. ಶಾಂತವೀರ ಶ್ರೀಗಳು, ಸಿದ್ದಲಿಂಗ ಶ್ರೀ, ಗಂಗಾಧರ ಸ್ವಾಮೀಜಿ,ಶಿವಾನಂದ ಶ್ರೀ ಉಪಸ್ಥಿತರಿರುವರು. ಸಮಿತಿಯ ಅಧ್ಯಕ್ಷ ಚಂದ್ರಶೇಖರ ಲಾತೂರೆ ಅಧ್ಯಕ್ಷತೆ ವಹಿಸುವರು.ಬುಧವಾರ ಬೆಳಗ್ಗೆ 8ಕ್ಕೆ ಇಷ್ಟಲಿಂಗ ಮಹಾಪೂಜೆ. ಸಂಜೆ 5.30ಕ್ಕೆ ಜರಗುವ ಧರ್ಮ ಸಭೆಯಲ್ಲಿ ಕೇದಾರ ಶ್ರೀ ಸಾನ್ನಿಧ್ಯ , ತಡೋಳಾ ದ ರಾಜೇಶ್ವರ ಶ್ರೀ , ತ್ರಿಪು ರಾಂತದ ರುದ್ರಮನಿ ಸ್ವಾಮೀ ಜಿ ನೇತೃತ್ವ. ಹಾರಕೂಡನ ಚನ್ನವೀರ ಶಿವಾಚಾರ್ಯರಿಂದ ಆಶೀರ್ವಚನ . ಜಯ ಶಾಂತಲಿಂಗ ಶ್ರೀ ,ರಾಜೇಶ್ವರದ ರುದ್ರ ಮನಿ ಶಿವಾ ಚಾರ್ಯರು, ವಿಶ್ವರಾಧ್ಯ ಮಳೇಂದ್ರ ಶ್ರೀ,ಪಂಡಿತಾರಾಧ್ಯ ಶ್ರೀ, ಉದ ಯರಾಜ ಯೋಗೇಂದ್ರ ಶ್ರೀಗಳು ಉಪಸ್ಥಿತರಿರುವರು.ಉದ್ಯಮಿ ಮಲ್ಲಪ್ಪ ಲಾತೂರೆ ಅಧ್ಯಕ್ಷತೆ ವಹಿಸಲಿದ್ದಾರೆ.

ಸೆ.20 ರಂದು ಬೆಳಗ್ಗೆ 8ಕ್ಕೆ ಇಷ್ಟಲಿಂಗ ಮಹಾಪೂಜೆ ಸಂಜೆ 5.30ಕ್ಕೆ ಧರ್ಮ ಸಭೆಯ ಸಮಾ ರೋಪ ಜರುಗಲಿದೆ. ಕೇದಾರ ಶ್ರೀ ಸಾನ್ನಿಧ್ಯ, ತ್ರಿಪುರಾಂತದ ರುದ್ರಮನಿ ಶ್ರೀ ನೇತೃತ್ವ,ವಿರೂಪಾಕ್ಷ ಶಿವಚಾ ರ್ಯರು, ಪ್ರಭು ಪಂಡಿತಾರಾಧ್ಯರು ಆಶೀ ರ್ವಚನ ನೀಡುವರು. ರಾಜ ಗುರು ಸಿದ್ದಲಿಂಗ ಶ್ರೀ, ವಿಜಯ ಕುಮಾರ ಸ್ವಾಮೀಜಿ ,ಹಾವ ಲಿಂಗೇಶ್ವರ ಶ್ರೀ, ಮೃತ್ಯುಂಜಯ ಸ್ವಾಮೀ ಜಿ ಪಾಲ್ಗೊಳ್ಳಲಿದ್ದಾರೆ. ಸಮಿ ತಿಯ ಕಾರ್ಯಾಧ್ಯಕ್ಷ ಸುನೀಲ್ ಎಂ. ಪಾಟೀಲ ಅಧ್ಯಕ್ಷತೆ ವಹಿಸಲಿದ್ದಾರೆ.

ದಿನಾಂಕ 16-9-2012 ರವಿವಾರ



# 18ರಿಂದ ರಾಷ್ಟ್ರೀಯ ಭಾವೈಕ್ಯತೆ ಜನ ಜಾಗೃತಿ ಧರ್ಮ ಸಭೆ

**ಬಸವಕಲ್ಯಾಣ:** ವಿಶ್ವಶಾಂತಿ ಹಾಗೂ ಲೋಕ ಕಲ್ಯಾಣಾರ್ಥವಾಗಿ ಕೇದಾರ ಜಗದ್ಗುರು ಭೀಮಾಶಂಕರಲಿಂಗ ಶಿವಾಚಾರ್ಯರಿಂದ ನಾಲ್ಕು ದಿನ ಇಷ್ಟಲಿಂಗ ಮಹಾಪೂಜೆ ರಾಷ್ಟ್ರೀಯ ಭಾವೈಕ್ಯ ಜನ ಜಾಗೃತಿ ಧರ್ಮಸಭೆ ನಗರದ ಬಿಕೆಡಿಬಿ ಗ್ರಂಥಾಲಯ ಸಭಾಂಗಣದಲ್ಲಿ ಜರುಗಲಿದೆ ಎಂದು ತಡೋಳಾದ ರಾಜೇಶ್ವರ ಶಿವಾಚಾರ್ಯರು ತಿಳಿಸಿದ್ದಾರೆ.

ಜಗದ್ಗುರುಗಳಿಂದ ಮೂರು ದಿನಗಳ ಕಾಲ ಇಷ್ಟಲಿಂಗ ಪೂಜೆ, ಜನ ಜಾಗೃತಿ ಧರ್ಮ ಸಭೆ ಜರುಗಲಿದೆ. ತ್ರಿಪುರಾಂತನ ರುದ್ರಮುನಿ ಶಿವಾಚಾರ್ಯರು, ಸ್ವಾಗತ ಸಮಿತಿ ಅಧ್ಯಕ್ಷ ಚಂದ್ರಶೇಖರ ಲಾತೂರೆ, ಕಾರ್ಯಾಧ್ಯಕ್ಷ ಸುನೀಲ ಪಾಟೀಲ್, ಪ್ರಮುಖರಾದ ವೀರಣ್ಣಶೀಲವಂತ, ಚಂದ್ರಶೇಖರ ಪಾಟೀಲ್, ರಮೇಶ ರಾಜೋಳೆ, ಶರಣಪ್ಪ ಬಿರಾದಾರ್, ದಿಲೀಪಕುಮಾರ ಮಡ್ಡೆ, ಪ್ರಮುಖರಿದ್ದರು.

**ವಿವರ:** 17ರಂದು ಮಧ್ಯಾಹ್ನ 3. 30ರಿಂದ ನಗರದ ತ್ರಿಪುರಾಂತ ಪ್ರವಾಸಿ ಮಂದಿರದಿಂದ ಬಿಕೆಡಿಬಿ ಗ್ರಂಥಾಲಯವರೆಗೆ ಕೇದಾರ ಜಗದ್ಗುರುಗಳ ಮಹಾ ರಥೋತ್ಸವ.

ರಾಜೇಶ್ವರ ಶ್ರೀ, ರುದ್ರಮುನಿ ಶ್ರೀಗಳ ನೇತೃತ್ವ, ವಿರೂಪಾಕ್ಷ ಶ್ರೀ, ಚನ್ನವೀರ ಶಿವಾಚಾರ್ಯರು, ರುದ್ರಮುನಿ ಶಿವಾಚಾರ್ಯರು, ಶಾಂತವೀರ ಶ್ರೀ, ಸಿದ್ಧಲಿಂಗ ಶಿವಾಚಾರ್ಯರು, ಜಯಶಾಂತಲಿಂಗ ಸ್ವಾಮಿಜಿ, ಗಂಗಾಧರ ಸ್ವಾಮಿಜಿ, ವಿಶ್ವರಾಧ್ಯ ಮಳೇಂದ್ರ ಶ್ರೀ, ವಿಜಯಕುಮಾರ ಸ್ವಾಮಿಜಿ ಸೇರಿದಂತೆ ವಿವಿಧ ಮಠಾಧೀಶರು ಭಾಗವಹಿಸುವರು. ಸಂಜೆ 7ಕ್ಕೆ ರಾಷ್ಟ್ರೀಯ ಭಾವೈಕ್ಯ ಜನ ಜಾಗೃತಿ ಧರ್ಮ ಸಭೆ ಜರುಗಲಿದ್ದು, ಕೇದಾರ ಜಗದ್ಗುರು ಸಾನ್ನಿಧ್ಯ, ರಾಜೇಶ್ವರ ಶಿವಾಚಾರ್ಯರು, ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸುವರು. ಡಾ.ಜಯಸಿದ್ಧೇಶ್ವರ ಶಿವಾಚಾರ್ಯರು ಉದ್ಘಾಟಿಸುವರು. ಉದ್ಯಮಿ ಸುನೀಲ ಪಾಟೀಲ್ ಅಧ್ಯಕ್ಷತೆ ವಹಿಸುವರು. 18ರಂದು ಬೆಳಗ್ಗೆ 8ಕ್ಕೆ ಇಷ್ಟಲಿಂಗ ಪೂಜೆ ಜರುಗಲಿದ್ದು, ಸಂಜೆ 5.30ಕ್ಕೆ ಧರ್ಮ ಸಭೆ, ಗಂಗಾಧರ ಶಿವಾಚಾರ್ಯರು, ಸಾಯಶಿವಾನಂದ ದೇವರು ಸಮ್ಮುಖ, ಚಂದ್ರಶೇಖರ ಲಾತೂರೆ ಅಧ್ಯಕ್ಷತೆ ವಹಿಸುವರು. ಪತ್ರಕರ್ತ ಶಿವಯೋಗಿ ಕಂಬಾಳಿಮಠ ಉಪನ್ಯಾಸ ನೀಡುವರು.

19ರಂದು ಬೆಳಗ್ಗೆ ಇಷ್ಟಲಿಂಗಪೂಜೆ ಸಂಜೆ 5.30ಕ್ಕೆ ಧರ್ಮ ಸಭೆ ಜರುಗುವದು. ತಡೋಳಾ, ತ್ರಿಪುರಾಂತ ಶ್ರೀಗಳು ನೇತೃತ್ವ ವಹಿಸಲಿದ್ದು, ಹಾರಕೂಡನ ಚನ್ನವೀರ ಶಿವಾಚಾರ್ಯರು ಆಶೀರ್ವಚನ ನೀಡುವರು. 20ರಂದು ವಿರೂಪಾಕ್ಷ ಶಿವಾಚಾರ್ಯರು, ಪ್ರಭು ಪಂಡಿತಾರಾಧ್ಯರು ಆಶೀರ್ವಚನ ನೀಡುವರು.

ದಿನಾಂಕ 14-9-12 ಶುಕ್ರವಾರ

Scanned by CamScanner

# ಮಾತೃ ಭಾಷೆ ಪ್ರೀತಿ ಹೆಚ್ಚಲಿ

ಬಸವಕಲ್ಯಾಣ: ಮಾತೃ ಭಾಷೆ ಪ್ರೀತಿ ಕನ್ನಡಿ ಗರೆಲ್ಲರಲ್ಲಿಯೂ ಹೆಚ್ಚಿದಾಗ ಮಾತ್ರ ಕನ್ನಡ ಉಳಿಸಿ, ಬೆಳೆಸಲು ಸಾಧ್ಯ ಎಂದು ತ್ರಿಪು ರಾಂತನ ರುದ್ರಮುನಿ ಶಿವಾಚಾರ್ಯರು ನುಡಿದರು.

ತಾಲೂಕಿನ ನಾರಾಯಣಪೂರನ ಸರ್ಕಾರಿ ಪ್ರೌಢ ಶಾಲೆಯಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ ನಾರಾ ಯಣ ಪುರ ವಲಯ ಮಟ್ಟದ ಕಾರ್ಯ-ಚಟುವಟಿಕೆಗಳ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿ, ಗಡಿ ಭಾಗದಲ್ಲಿ ಕನ್ನಡಪರ ಚಟುವಟಿಕೆಗಳು ನಿರಂತರವಾಗಿ ನಡೆಯಲಿ. ಪರ ಭಾಷಾ ವ್ಯಾಮೋಹಕ್ಕೆ ಒಳಗಾಗದೇ ಕನ್ನಡವನ್ನು ಉಳಿಸಿ-ಬೆಳೆಸುವ ಕಾರ್ಯ ಎಲ್ಲರೂ ಅಭಿಮಾನ ಹಾಗೂ ಸ್ವಾಭಿಮಾನದಿಂದ ಮಾಡಬೇಕಾಗಿದೆ ಎಂದರು.

ಎಂ.ಎಂ.ತಂಬಾಕೆ ಉದ್ಘಾಟಿಸಿ ಮಾತ ನಾಡಿ, ಕನ್ನಡ ಭಾಷೆ ವಿಶ್ವದಲ್ಲಿಯೇ ಅತ್ಯಂತ ಶ್ರೀಮಂತ ಭಾಷೆ, ಹೃದ ಯದಿಂದ ಬಂದು ಹೃದಯ ತುಂಬುವ ಶಕ್ತಿ ಮಾತ್ರ ಭಾಷೆಗಿದೆ ಎಂದರು.



ಬಸವಕಲ್ಯಾಣ ತಾಲೂಕಿನ ನಾರಾಯಣಪುರ ಕಸಾಪ ವಲಯ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಪ್ರಲ್ಹಾದರೆಡ್ಡಿ, ಕೃಷ್ಣಾರೆಡ್ಡಿ, ಚಂದ್ರಕಾಂತ ಸ್ವಾಮಿ ಇತರರಿದ್ದರು.

ಪ್ರೊ.ಸೂರ್ಯಕಾಂತ ಶೀಲವಂತ ಮಾತನಾಡಿ, ಕನ್ನಡ ಸಾಹಿತ್ಯ, ಕಲೆ, ಸಂಸ್ಕೃತಿ ಉಳಿಸಿ ಬೆಳೆಸುವದರ ಜತೆಗೆ ಐತಿಹಾಸಿಕ ಹಾಗೂ ಪುರಾಣ ಪ್ರಸಿದ್ಧ ನಾರಾಯಣಪುರ ಗ್ರಾಮದ ಶಿವ ಮಂದಿರ, ವಾಸ್ತು-ಶಿಲ್ಪ ಕಲೆಯನ್ನು ಸಂರಕ್ಷಿಸುವಲ್ಲಿಯೂ ಆಸಕ್ತಿ ವಹಿಸಬೇಕಾದ ಅವಶ್ಯಕತೆ ಇದೆ ಎಂದರು. ಪರಿಷತ್ ತಾಲೂಕಾಧ್ಯಕ್ಷ ಚಂದ್ರಕಾಂತ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಪ್ರಮುಖರಾದ ಕೃಷ್ಣಾರೆಡ್ಡಿ ಯಡಮಲ್ಲೆ, ಶಕುಂತಲಾ ದಾಂಡೇಕರ್, ಕಲಾವತಿ ರೆಡ್ಡಿ, ಪ್ರಲ್ಹಾದರೆಡ್ಡಿ ಸೇರಿಕಾರ, ರವೀಂದ್ರ ಮಠ, ಕರಬಸಪ್ಪ ಪಟ್ನೆ, ಅಹ್ಮದ್ ಪಾಶಾ ಸೇರಿದಂತೆ ಇತರರು ಭಾಗವಹಿಸಿದ್ದರು. ದೇವೇಂದ್ರ ಬರಗಾಲೆ ಸ್ವಾಗತಿಸಿದರೆ, ದೇವೇಂದ್ರ ಕಾದೇಪೂರ ನಿರೂಪಿಸಿದರು. ಸಂದೀಪ ವಂದಿಸಿದರು.

ದಿನಾಂಕ 14-9-2012 ಶುಕ್ರವಾರ ವಿಜಯವಾಣಿ.

ವಿಜಯವಾಣಿ

ಇಷ್ಟಲಿಂಗ ಪೂಜೆ....

ಕೇದಾರ ಜಗದ್ಗುರು ಭೀಮಾಶಂಕರಲಿಂಗ ಶಿವಾಚಾರ್ಯರಿಂದ ಬಸವಕಲ್ಯಾಣದ ಬಿಕೆಡಿಬಿ ಗ್ರಂಥಾಲಯ ಸಭಾಂಗಣದಲ್ಲಿ ಮಂಗಳವಾರ ಸಾಮೂಹಿಕ ಇಷ್ಟಲಿಂಗ ಮಹಾಪೂಜೆ ನಡೆಯಿತು.



ದಿನಾಂಕ 19-9-2012 ಬುಧವಾರ

# ಜಗದ್ಗುರುಗಳಿಂದ ಮಹಾಪೂಜೆ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಆಕರ್ಷಕವಾಗಿ ಸಿಂಗರಿಸಿದ ವೇದಿಕೆಯ ಮೇಲೆ ಇಡಲಾಗಿದ್ದ ಲಿಂಗಕ್ಕೆ ಪೀಠದ ಮೇಲೆ ಕುಳಿತಿದ್ದ ಕೇದಾರ ಜಗದ್ಗುರು ಭೀಮಾಶಂಕರಲಿಂಗ ಶಿವಾಚಾರ್ಯ ಭಗವತ್ಪಾದರು ಮಂಗಳವಾರ ಮಹಾಪೂಜೆ ಸಲ್ಲಿಸಿದರು.

ವಿವಿಧ ಬಗೆಯ ಪುಷ್ಪಗಳು, ಧೂಪ, ದೀಪದೊಂದಿಗೆ ಸುಮಾರು ನಾಲ್ಕು ಗಂಟೆಗಳವರೆಗೆ ಪೂಜೆ ನಡೆಯಿತು. ಗೋರಟಾದ ರುದ್ರ ಸಂಘವರು ರುದ್ರಮಂತ್ರಗಳನ್ನು ಹೇಳಿದರು. ವೇದಘೋಷ ಮಾಡಿದರು. ನಂತರ ಭಕ್ತರಿಗೆ ಜಗದ್ಗುರುಗಳು ದರ್ಶನ ಕೊಟ್ಟರು. ವಿವಿಧೆಡೆಯಿಂದ ಆಗಮಿಸಿದ್ದ ಅನೇಕ ಭಕ್ತರು ಸಹ ಸಾಮೂಹಿಕವಾಗಿ



ಬಸವಕಲ್ಯಾಣದ ಬಿಕೆಡಿಬಿ ಸಭಾಂಗಣದಲ್ಲಿ ಮಂಗಳವಾರ ಕೇದಾರ ಜಗದ್ಗುರುಗಳು ಇಷ್ಟಲಿಂಗ ಪೂಜೆ ನಡೆಸಿದ ಒಂದು ಭಂಗಿ

ಇಷ್ಟಲಿಂಗ ಪೂಜೆ ನಡೆಸಿದರು.

ಸಂಜೆ ರಾಷ್ಟ್ರೀಯ ಭಾವೈಕ್ಯ ಜನ ಜಾಗೃತಿ ಧರ್ಮಸಭೆ ನಡೆಯಿತು. ಕೇದಾರ ಜಗದ್ಗುರು ಭೀಮಾಶಂಕರಲಿಂಗ ಶಿವಾಚಾರ್ಯರು ಮಾತನಾಡಿ ಇಷ್ಟಲಿಂಗ ಪೂಜೆಯ ಮಹತ್ವ ತಿಳಿಸಿದರು.

ಶಿವಯೋಗಿ ಸ್ವಾಮಿ ಉಪನ್ಯಾಸ ನೀಡಿದರು. ತ್ರಿಪುರಾಂತ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸ್ವಾಗತಿಸಿದರು. ಮುಚಳಂಬ ಪ್ರಣವಾನಂದ ಸ್ವಾಮೀಜಿ, ತಡೋಳಾ ರಾಜೇಶ್ವರ ಶಿವಾಚಾರ್ಯರು, ಹಿರೇನಾಗಾಂವ ಜಯಶಾಂತಲಿಂಗ ಶಿವಾಚಾರ್ಯರು, ಗಡಿಗೌಡಗಾಂವ ಶಾಂತವೀರ ಶಿವಾಚಾರ್ಯರು ಪಾಲ್ಗೊಂಡಿದ್ದರು.

ಕಾರ್ಯಕ್ರಮ ಸಮಿತಿ ಕಾರ್ಯಾಧ್ಯಕ್ಷ ಸುನಿಲ ಪಾಟೀಲ, ಅಧ್ಯಕ್ಷ ಚಂದ್ರಶೇಖರ ಲಾತೂರೆ, ಮುಖಂಡರಾದ ಸಿದ್ರಾಮಪ್ಪ ಗುದಗೆ, ಶರಣಪ್ಪ ಬಿರಾದಾರ, ರಾಜಕುಮಾರ ಮಂಠಾಳೆ, ಹಣಮಂತ ಅಂಬಲಗೆ, ವೀರಣ್ಣ ಶೀಲವಂತ, ಶಿವರಾಜ ರಾಜೋಳೆ, ಬಕ್ಕಯ್ಯ ಸ್ವಾಮಿ, ಮುಂತಾದವರು ಪಾಲ್ಗೊಂಡಿದ್ದರು.

ದಿನಾಂಕ 19-9-2012 ಬುಧವಾರ ಪ್ರಜಾವಾಣಿ ದಿನಪತ್ರಿಕೆ

Scanned by CamScanner

# ಇಷ್ಟಲಿಂಗ ಪೂಜೆಯಿಂದ ಅನಿಷ್ಟ ಪರಿಹಾರ: ಕೇದಾರ ಜಗದ್ಗುರು

**ಬಸವಕಲ್ಯಾಣ:** ಇಷ್ಟಲಿಂಗ ಪೂಜೆಯಿಂದ ಅನಿಷ್ಟ ಪರಿಹಾರವಾಗುತ್ತದೆ. ಹೀಗಾಗಿ ಪ್ರತಿಯೊಬ್ಬರು ಶ್ರದ್ಧಾ ಭಕ್ತಿಯಿಂದ ಇಷ್ಟಲಿಂಗ ಪೂಜೆ ಮಾಡಬೇಕು ಎಂದು ಶ್ರೀಮದ್ ಕೇದಾರ ಜಗದ್ಗುರು ಭೀಮಾಶಂಕರಲಿಂಗ ಶಿವಾಚಾರ್ಯರು ನುಡಿದರು.

ಇಲ್ಲಿನ ಬಿಕೆಡಿಬಿ ಗ್ರಂಥಾಲಯ ಸಭಾಂಗಣದಲ್ಲಿ ಸೋಮವಾರ ನಡೆದ ರಾಷ್ಟ್ರೀಯ ಭಾವಕ್ಯ ಜನಜಾಗೃತಿ ಧರ್ಮಸಭೆಯಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಜಗದ್ಗುರುಗಳು, ಇಷ್ಟಲಿಂಗ ಪೂಜೆಯನ್ನು ಶ್ರದ್ಧೆಯಿಂದ ಮಾಡಿದರೆ ಜೀವನದಲ್ಲಿ ಸಾರ್ಥಕತೆ ಕಂಡುಕೊಳ್ಳಬಹುದಾಗಿದೆ ಎಂದರು.

ನೇತೃತ್ವ ವಹಿಸಿದ್ದ ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು, ಇಷ್ಟಲಿಂಗ ಪೂಜೆಯಿಂದ ಮನಸ್ಸು ಶುದ್ಧಿಯಾಗುತ್ತದೆ. ಜೀವನದಲ್ಲಿ ಶಾಂತಿ-ನೆಮ್ಮದಿಯೂ ಸಿಗುತ್ತದೆ ಎಂದರು.

ಮೂರು ದಿನಗಳವರೆಗೆ ಪ್ರತಿದಿನ ಬೆಳಗ್ಗೆ 8ರಿಂದ ಇಷ್ಟಲಿಂಗ ಮಹಾಪೂಜೆ ಮತ್ತು ಸಂಜೆ 5.30ಕ್ಕೆ ಜನಜಾಗೃತಿ ಧರ್ಮಸಭೆ ನಡೆಯಲಿದ್ದು, ಪ್ರತಿಯೊಬ್ಬರು ಭಾಗವಹಿಸಿ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ತ್ರಿಪುರಾಂತದ ಶ್ರೀ ಅಭಿನವ ಘನಲಿಂಗರುದ್ರಮುನಿ ಶಿವಾಚಾರ್ಯರು, ಶ್ರೀ ವೀರೂಪಾಕ್ಷ ಶಿವಾಚಾರ್ಯರು ಸಮ್ಮುಖ ಹಾಗೂ ಸ್ವಾಗತ ಸಮಿತಿ ಕಾರ್ಯಾಧ್ಯಕ್ಷ ಉದ್ಯಮಿ ಸುನೀಲ ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು. ಪ್ರಮುಖರಾದ ಚಂದ್ರಕಾಂತ ಲಾತೂರೆ, ಶಿವರಾಜ ನರಶೆಟ್ಟಿ, ಸಿದ್ರಾಮಪ್ಪ ಗುದಗೆ, ಬಸವಂತಪ್ಪ ಲವಾರೆ, ಮಲ್ಲಪ್ಪ ಲಾತೂರೆ ಉಪಸ್ಥಿತರಿದ್ದರು.



ಬಸವಕಲ್ಯಾಣದಲ್ಲಿ ಸೋಮವಾರ ನಡೆದ ರಾಷ್ಟ್ರೀಯ ಭಾವೈಕ್ಯ ಜನಜಾಗೃತಿ ಧರ್ಮಸಭೆಯಲ್ಲಿ ಶ್ರೀಮದ್ ಕೇದಾರ ಜಗದ್ಗುರುಗಳು, ರಾಜೇಶ್ವರ ಶಿವಾಚಾರ್ಯರು, ತ್ರಿಪುರಾಂತ ಸ್ವಾಮೀಜಿ, ಸುನೀಲ ಪಾಟೀಲ್, ಅನೀಲ ಹಲಶೆಟ್ಟೆ, ಶಿವರಾಜ ನರಶೆಟ್ಟೆ ಮಲ್ಲಪ್ಪ ಲಾತೂರೆ, ವೀರಣ್ಣ ಶೀಲವಂತ, ವಿವೇಕ ಬಿರಾದಾರ ಇತರರಿದ್ದರು.

■ ಮೆರವಣಿಗೆಯುದ್ದಕ್ಕೂ ತಲೆ ಮೇಲೆ ಕುಂಭ-ಕಳಸ ಹೊತ್ತು ನೀರೆಯರು...

# ಸಾಂಸ್ಕೃತಿಕ ವೈಭವದ ಮಧ್ಯೆ ಕೇದಾರ ಜಗದ್ಗುರುಗಳ ಅದ್ದೂರಿ ರಥೋತ್ಸವ



ಅಲಂಕೃತ ರಥದಲ್ಲಿ ಆಸೀನರಾಗಿರುವ ಕೇದಾರ ಜಗದ್ಗುರುಗಳು.

**ಬಸವಕಲ್ಯಾಣ:** ನಗರದಲ್ಲಿ ಮೂರು ದಿನದ ಇಷ್ಟಲಿಂಗ ಮಹಾಪೂಜೆ ಮತ್ತು ಜನಜಾಗೃತಿ ಧರ್ಮಸಭೆ ನಿಮಿತ್ತ ಶ್ರೀಮದ್ ಕೇದಾರ ಜಗದ್ಗುರು ಭೀಮಾಶಂಕರಲಿಂಗ ಶಿವಾಚಾರ್ಯ ಭಗವತ್ಪಾದರ ಮಹಾ ರಥೋತ್ಸವ ಸಾಂಸ್ಕೃತಿಕ ವೈಭವದೊಂದಿಗೆ ಸೋಮವಾರ ನಡೆಯಿತು.

ವಿಶ್ವ ಶಾಂತಿ ಹಾಗೂ ಲೋಕ ಕಲ್ಯಾಣಾರ್ಥ ಮಂಗಳವಾರದಿಂದ ಇಷ್ಟಲಿಂಗ ಮಹಾಪೂಜೆ, ಜನಜಾಗೃತಿ ಧರ್ಮಸಭೆ ನಡೆಸಿಕೊಡಲು ಇಂದು ನಗರಕ್ಕೆ ಆಗಮಿಸಿದ ಜಗದ್ಗುರುಗಳಿಗೆ ಭವ್ಯ ಸ್ವಾಗತ ಕೋರಿ ಅದ್ದೂರಿ ರಥೋತ್ಸವ ನೆರವೇರಿಸಲಾಯಿತು. ಜೈಘೋಷಗಳ ಮಧ್ಯೆ ತ್ರಿಪುರಾಂತದಿಂದ ಮುಖ್ಯರಸ್ತೆ ಮಾರ್ಗವಾಗಿ ಬಸವ ಭವನದವರೆಗೆ ತಾಳ-ಮೇಳ, ವಾದ್ಯಗಳೊಂದಿಗೆ ಮೆರವಣಿಗೆಯುದ್ದಕ್ಕೂ ತಲೆ ಮೇಲೆ ಕುಂಭ-ಕಳಸ ಹೊತ್ತು ಭಾಗವಹಿಸಿದ ಮಹಿಳೆಯರು ಸಂಭ್ರಮಕ್ಕೆ ಕಳೆ ತಂದುಕೊಟ್ಟರು. ಮಾರ್ಗದುದ್ದಕ್ಕೂ ಭಕ್ತರು ಅಲಂಕೃತ ರಥದಲ್ಲಿ ಆಸೀನರಾಗಿದ್ದ ಜಗದ್ಗುರುಗಳ ದರ್ಶನ ಪಡೆದು ಕೃತಾರ್ಥರಾದರು.

ಶ್ರೀಗಳಾದ ತಡೋಳಾದ ರಾಜೇಶ್ವರ ಶಿವಾಚಾರ್ಯ, ತ್ರಿಪುರಾಂತದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದ ಮೆರವಣಿಗೆಯಲ್ಲಿ ಸ್ವಾಗತ ಸಮಿತಿ ಅಧ್ಯಕ್ಷ ಚಂದ್ರಶೇಖರ ಲಾತೂರೆ, ಕಾರ್ಯಾಧ್ಯಕ್ಷ ಸುನೀಲ ಪಾಟೀಲ್, ಪದಾಧಿಕಾರಿ ಪ್ರಮುಖರಾದ ವಿವೇಕ ಬಿರಾದಾರ, ಮಲ್ಲಪ್ಪ ಲಾತೂರೆ, ದಿಲೀಪ ಮಡ್ಡೆ, ಹಣಮಂತ ಅಂಬುಲಗೆ, ಚಂದ್ರಕಾಂತ ಪಾಟೀಲ್, ಶಿವರಾಜ ನರಶೆಟ್ಟಿ, ಪ್ರಭು ಸ್ವಾಮಿ, ದಯಾನಂದ ಶೀಲವಂತ, ರಾಜಕುಮಾರ ಮಂಠಾಳೆ, ರಮೇಶ ರಾಜೋಳೆ, ಶರಣಪ್ಪ ಬಿರಾದಾರ, ಶಂಕರ ಅಗರಗೆ, ಅನೀಲಕುಮಾರ ಹಲಶೆಟ್ಟಿ, ದಿಲೀಪಕುಮಾರ ಮಡ್ಡೆ, ಆನಂದ ದೇವಪ್ಪ, ಡಾ.ಬಸವರಾಜ ಸ್ವಾಮಿ, ವೀರಣ್ಣ ಶೀಲವಂತ, ಬಸವಂತಪ್ಪ ಲವಾರೆ, ಸುರ್ಯಕಾಂತ ಶೀಲವಂತ, ಮಲ್ಲಿಕಾರ್ಜುನ ನಂದಿ, ಪ್ರಮುಖರಾದ ಅರ್ಜುನ ಕನಕ, ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ರಾಮಪ್ಪ ಗುದಗೆ, ನಾಗಯ್ಯ ಸ್ವಾಮಿ, ನಗರಸಭೆ ಮಾಜಿ ಅಧ್ಯಕ್ಷ ರಾಜಕುಮಾರ ಸುಗರೆ, ಮನೋಜ ಮಾಶೆಟ್ಟಿ, ಸುಭಾಷ ಬಿರಾದಾರ, ಶಿವಕುಮಾರ ಮಠಪತಿ, ಸಂಗಮೇಶ ಬೆಲ್ಲೆ, ರಾಮಯ್ಯ ಸ್ವಾಮಿ ಭಾಗವಹಿಸಿದ್ದರು.

ಇದಕ್ಕೂ ಮುನ್ನ ಸಸ್ತಾಪೂರ ಬಂಗ್ಲಾ ಬಳಿ ಜಗದ್ಗುರುಗಳನ್ನು ಸ್ವಾಗತಿಸಿ ಬರಮಾಡಿಕೊಳ್ಳಲಾಯಿತು. ಇದೇ ಸಂದರ್ಭದಲ್ಲಿ ಬಂಗ್ಲಾದಿಂದ ನಗರದ ತ್ರಿಪುರಾಂತವರೆಗೆ ಯುವಕರು ಬೈಕ್ ರ್‍ಯಾಲಿ ನಡೆಸಿದರು.



ಬಸವಕಲ್ಯಾಣದಲ್ಲಿ ಸೋಮವಾರ ನಡೆದ ಕೇದಾರ ಜಗದ್ಗುರುಗಳ ಮಹಾ ರಥೋತ್ಸವದಲ್ಲಿ ಭಾಗವಹಿಸಿದ ಸಹಸ್ರಾರು ಭಕ್ತರು.

Scanned by CamScanner

# ಜ್ಞಾನದ ಸದ್ಬಳಕೆಗೆ ಬೇಕು ಸಂಸ್ಕಾರ: ಕೇದಾರ ಜಗದ್ಗುರು

ಬಸವಕಲ್ಯಾಣ: ಸಾಕಷ್ಟು ಜ್ಞಾನವಿದ್ದರೂ ಅದರ ಸದ್ಬಳಕೆಗೆ ಉತ್ತಮ ಸಂಸ್ಕಾರದ ಅಗತ್ಯವಿದೆ ಎಂದು ಶ್ರೀಮದ್ ಕೇದಾರ ಜಗದ್ಗುರು ಭೀಮಾಶಂಕರಲಿಂಗ ಶಿವಾಚಾರ್ಯರು ನುಡಿದರು.

ಅಕ್ಕನ ಬಳಗದ ಗ್ರಂಥಾಲಯ ಸಭಾಂಗಣದಲ್ಲಿ ಮಂಗಳವಾರ ಸಂಜೆ ನಡೆದ ರಾಷ್ಟ್ರೀಯ ಧಾರ್ಮಿಕ ಜನಜಾಗೃತಿ ಧರ್ಮ ಸಭೆಯಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಜಗದ್ಗುರುಗಳು, ಮಕ್ಕಳು ಪ್ರೌಢಾವಸ್ಥೆಗೆ ಬರುವವರೆಗೆ ತಿಳುವಳಿಕೆಯೊಂದಿಗೆ ಮನೆಯಲ್ಲಿ ಉತ್ತಮ ಸಂಸ್ಕಾರ ನೀಡಬೇಕು ಎಂದು ಹಿತೋಪದೇಶ ನೀಡಿದರು.

ಭಾಷೆ-ಸಾಹಿತ್ಯ ಬೇರೆ-ಬೇರೆಯಾದರೂ ತತ್ವಗಳ ಸಾರ ಒಂದೇ ಆಗಿದೆ. ಒತ್ತಡದ ದಿನಗಳಲ್ಲಿ ಶಾಂತಿ, ನೆಮ್ಮದಿಯ ಬದುಕು ಧರ್ಮ ಮಾರ್ಗದಿಂದ ಮಾತ್ರ ಸಿಗಲು ಸಾಧ್ಯ ಎಂದ ಅವರು, ಇಷ್ಟಲಿಂಗ ಪೂಜೆಯ ಮಹತ್ವ, ಭಕ್ತಿಯ ಪ್ರಕಾರಗಳನ್ನು ವಿಶ್ಲೇಷಿಸಿದರು.

ಹಲಬುರ್ಗದ ಡಾ.ಸಾರಂಗಧರ ಶಿವಾಚಾರ್ಯರು ಆಶೀರ್ವಚನ ನೀಡಿ, ಜೀವನದಲ್ಲಿ ಬೆಳಕು ಬೇಕಾದರೆ ಧಾರ್ಮಿಕತೆಗೆ ಶರಣಾಗಬೇಕಿದೆ. ಶಾಂತಿ-ನೆಮ್ಮದಿ ಸಿಗುವುದು ಧರ್ಮ ಮಾರ್ಗದಿಂದ ಮಾತ್ರ ಸಾಧ್ಯ. ಆತ್ಮ ಸಮರ್ಪಣೆ ಇಲ್ಲದೇ ಮನುಷ್ಯ ಧಾರ್ಮಿಕನಾಗಲಾರ. ವಿನಮ್ರತೆ ಮತ್ತು ಆತ್ಮ ಸಮರ್ಪಣಾ ಮನೋಭಾವ ಧರ್ಮದ ಮೊದಲ ಮೆಟ್ಟಿಲುಗಳು ಎಂದು ಹೇಳಿದರು.

ಮುಚಳಂಬದ ಶ್ರೀ ಪ್ರಣವಾನಂದ ಮಹಾಸ್ವಾಮಿ ಮಾತನಾಡಿ, ಧರ್ಮವು ಜೋಡಿಸುವ ಕೆಲಸ ಮಾಡುತ್ತದೆ. ಎಲ್ಲ ಧರ್ಮದ ಸಾರ ಒಂದೇ ಆಗಿದೆ ಎಂದರು. ಹರಿಹರದ ಶಿವಯೋಗಿ ಕಂಬಳಿಮಠ ವಿಶೇಷ ಉಪನ್ಯಾಸ ನೀಡಿದರು.

ಶ್ರೀಗಳಾದ ತಡೋಳಾದ ರಾಜೇಶ್ವರ ಶಿವಾಚಾರ್ಯರು, ತ್ರಿಪುರಾಂತದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿದ್ದರು. ಸದಲಾಪುರದ ಸಿದ್ಧಲಿಂಗ ಶಿವಾಚಾರ್ಯರು, ಗುರುಪಾದ ಸ್ವಾಮೀಜಿ ಸಮ್ಮುಖ ವಹಿಸಿದ್ದರು. ಸ್ವಾಗತ ಸಮಿತಿ ಅಧ್ಯಕ್ಷ ಚಂದ್ರಶೇಖರ ಲಾತೂರೆ ಅಧ್ಯಕ್ಷತೆ ವಹಿಸಿದ್ದರು. ಸಮಿತಿ ಕಾರ್ಯಾಧ್ಯಕ್ಷ ಸುನೀಲ ಪಾಟೀಲ್, ಪ್ರಭು ಕಾಡಾದಿ ಉಪಸ್ಥಿತರಿದ್ದರು. ಪ್ರೊ. ಸೂರ್ಯಕಾಂತ ಶೀಲವಂತ ಸ್ವಾಗತಿಸಿದರು. ಬಸವರಾಜ ವರಕಾಲೆ ವಂದಿಸಿದರು. ರಮೇಶ ರಾಜೋಳೆ ನಿರೂಪಿಸಿದರು.



ಬಸವಕಲ್ಯಾಣದಲ್ಲಿ ನಡೆದ ಜನಜಾಗೃತಿ ಧರ್ಮ ಸಭೆಯಲ್ಲಿ ಕೇದಾರ ಜಗದ್ಗುರುಗಳು ಆಶೀರ್ವಚನ ನೀಡಿದರು. ಸುನೀಲ ಪಾಟೀಲ್, ಚಂದ್ರಶೇಖರ ಲಾತೂರೆ, ಶಿವಯೋಗಿ ಕಂಬಳಿಮಠ, ಪ್ರಣವಾನಂದ ಶ್ರೀ, ರಾಜೇಶ್ವರ ಶ್ರೀ, ಘನಲಿಂಗ ರುದ್ರಮುನಿ ಶ್ರೀಗಳು ಇದ್ದರು.

ದಿನಾಂಕ 19-9-2012 ಬುಧವಾರ ವಿಜಯವಾಣಿ ದಿನಪತ್ರಿಕೆ

# ಮಠಾಧೀಶರು ಸಮಾಜದ ಆಸ್ತಿ



ಮರಿದೇವರ ಗುಡ್ಡ ತ್ರಿಪುರಾಂತದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 27 ನೇ ಹುಟ್ಟು ಹಬ್ಬ ಹಾಗೂ 7 ನೇ ವರ್ಧಂತಿ ಮಹೋತ್ಸವದಲ್ಲಿ ಯುವ ನಾಯಕ ಸುನೀಲ್ ಪಾಟೀಲ್ ,ಅನಿಲ ಹಲಶೆಟ್ಟೆ, ದಿಲೀಪಕುಮಾರ ಮಡ್ಡೆ ಸೇರಿದಂತೆ ಹಲವು ಗಣ್ಯರು ಇದ್ದರು.

■ ವಿಕ ಸುದ್ದಿಲೋಕ ಬಸವಕಲ್ಯಾಣ

ಮಠಾಧೀಶರು ಸಮಾಜದ ಆಸ್ತಿಯಾಗಿದ್ದು ,ಸದ್ಭಕ್ತರ ದುಖವನ್ನು ದೂರಮಾಡುವ ಶಕ್ತಿ ಅವರಲ್ಲಿದೆ ಎಂದು

ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಚಂದ್ರಕಾಂತ ಸ್ವಾಮಿ ಹೇಳಿದರು.

ತ್ರಿಪುರಾಂತದ ಮರಿದೇವರ ಗುಡ್ಡದಲ್ಲಿ ನಡೆದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 27 ನೇ ಹುಟ್ಟು ಹಬ್ಬ ಮತ್ತು ಪಟ್ಟಾಧಿಕಾರದ 7ನೇ ವರ್ಧಂತಿ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರಭುಲಿಂಗಯ್ಯ ಟಂಕಸಾಲಿಮಠ ಮಾತನಾಡಿದರು.

ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆಯ ತಾಲೂಕು ಅಧ್ಯಕ್ಷ ವೀರಣ್ಣ ಶೀಲವಂತ,ಶರಣಪ್ಪ ಬಿರಾ ದಾರ, ಯುವನಾಯಕ ಸುನಿಲ ಪಾಟೀಲ, ಮಾತ ನಾಡಿದರು. ಅನಿಲ ಹಲಶೆಟ್ಟೆ, ದಲೀಪಕುಮಾರ ಮಡ್ಡೆ, ಶಾಸ್ತ್ರೀ ಬಿರಾದಾರ, ಸುನೀಲ ಕುಮಾರ ಮೂಳೆ ಜಾಫ್ರವಾಡಿ, ಜಗನ್ನಾಥ ಬಿರಾದಾರ ತ್ರಿಪುರಾಂತ, ಸಂಜುಕುಮಾರ ಸೂಗರೆ, ರಾಮಯ್ಯ ಸ್ವಾಮಿ, ರಾಜಕುಮಾರ ಮೇತ್ರೆ, ಚನ್ನವೀರಯ್ಯ ಸ್ವಾಮಿ ಖಾನಾಪೂರ, ಕಾಂಗ್ರೆಸ್ ಮುಖಂಡರಾದ ಶಿವಶರಣ ಬಿರಾದಾರ, ಆನಂದ ದೇವಪ್ಪ ಪಾಲ್ಗೊಂಡಿದ್ದರು.

ದಿನಾಂಕ 30-9-12 ರವಿವಾರ ವಿಜಯಕರ್ನಾಟಕ ದಿನಪತ್ರಿಕೆ

# ಶಿವಪೂರ: ಕೋಟಿ ಜಪಯಜ್ಞ ರುದ್ರಪೂಜೆ ಸಮಾರೋಪ ನಾಳೆ

ಹುಲಸೂರ,29– ಶಿವಪೂರ ಗ್ರಾಮದಲ್ಲಿ ಶ್ರೀ ಸದ್ಗುರು ಸಿದ್ಧಲಿಂಗೇಶ್ವರ ಕಮರಿ ಮಠದಲ್ಲಿ ಸುಮಾರು ಎರಡೂವರೆ ತಿಂಗಳಿಂದ ಜಪಯಜ್ಞ ನಡೆದಿತ್ತು.

ಬೆಳಗ್ಗೆ 7 ಗಂಟೆಯಿಂದ 10 ರವರೆಗೆ ಶ್ರೀ ಸದ್ಗುರು ಸಿದ್ಧಲಿಂಗೇಶ್ವರ ಮೂರ್ತಿಗೆ ಮಹಾ ರುದ್ರಾಭಿಷೇಕ ಪ್ರತಿದಿನ ಸಾಯಂಕಾಲ ಸಾಂಸ್ಕೃತಿಕ ಧಾರ್ಮಿಕ ಕಾರ್ಯಕ್ರಮಗಳು ಜರುಗುತ್ತಿವೆ. ಅ.1 ರಂದು ಮಧ್ಯಾಹ್ನ 1 ಗಂಟೆಗೆ ಶ್ರೀ ವೃಷಭಲಿಂಗ ಮಹಾಸ್ವಾಮಿಗಳು (ಲಜ್ಯಾಣ ಬಂಥನಾಳ) ಸಾನಿಧ್ಯದಲ್ಲಿ ಮುಚಳಂಬ ಶ್ರೀಗಳು ಸಸ್ತಾಪೂರದ ಸದಾನಂದ ಅಪ್ಪಾಜಿ ತಿಂಪರಾಂತದ ಶ್ರೀ ಷ.ಬ್ರ.ಅಭಿನವ ಘನಲಿಂಗ ರುದ್ರಮುನಿ, ಶಿವಚಾರ್ಯರು ಪಾಲ್ಗೊಳುವರು.

ಈ ಸಮಾರಂಭದಲ್ಲಿ ಮಾತೋಶ್ರೀ ಕಸ್ತೂರಬಾಯಿ ಶರಣಮ್ಮ, ಪ್ರಭಾವತಿ ಸಸ್ತಾಪೂರೆ, ಬಸಮ್ಮಾ ತಾಯಿ ಅಲ್ಲದೇ ಕಾರ್ತಿಕಯ್ಯಾ ಶಾಸ್ತ್ರಿ ಪಾಲ್ಗೊಳ್ಳುವರು. ಬಂದಂತಹ ಭಕ್ತಾದಿಗಳಿಗೆ ಮಹಾಪ್ರಸಾದ ವ್ಯವಸ್ಥೆ ಏರ್ಪಡಿಸಲಾಗಿದೆ ಎಂದು ಕವಿರಾಜ ಕಣಗಿ ತಿಳಿಸಿದ್ದಾರೆ.

ದಿನಾಂಕ 30-9-12 ಸಂಯುಕ್ತ ಕರ್ನಾಟಕ

Scanned by CamScanner

# ವೀರಶೈವ ಧರ್ಮದ ನೆಲೆ ದೇಶ-ವಿದೇಶದಲ್ಲಿ ಹರಡಿದೆ



ಬಸವಕಲ್ಯಾಣದ ಬಿಕೆಡಿಬಿ ಸಭಾಂಗಣದಲ್ಲಿ ನಡೆಯುತ್ತಿರುವ ಜನಜಾಗೃತಿ ಧರ್ಮ ಸಮಾರೋಪ ಸಮಾರಂಭದಲ್ಲಿ ಕೇದಾರ ಜಗದ್ಗುರುಗಳು ಆಶೀರ್ವಚನ ನೀಡಿದರು.

**ಬಸವಕಲ್ಯಾಣ:** ಇಲ್ಲಿಯ ಬಿಕೆಡಿಬಿ ಗ್ರಂಥಾಲಯದ ಸಭಾಂಗಣದಲ್ಲಿ ಮೂರು ದಿವಸ ನಡೆದ ಇಷ್ಟಲಿಂಗ ಮಹಾಪೂಜೆ ಮತ್ತು ರಾಷ್ಟ್ರೀಯ ಭಾವೈಕ್ಯ ಜನಜಾಗೃತಿ ಧರ್ಮಸಭೆಯ ಸಮಾರೋಪ ಸಮಾರಂಭ ಗುರುವಾರ ಸಂಜೆ ಜರುಗಿತು.

ಸಾನ್ನಿಧ್ಯ ವಹಿಸಿದ ಕೇದಾರ ಜಗದ್ಗುರು ಭೀಮಾಶಂಕರಲಿಂಗ ಶಿವಾಚಾರ್ಯರು ಆಶೀರ್ವಚನ ನೀಡಿ, ಭಕ್ತಿ ಭಂಡಾರಿ ಬಸವಣ್ಣನವರ ಕಾರ್ಯ ಕ್ಷೇತ್ರ ಬಸವಕಲ್ಯಾಣ ಪವಿತ್ರವಾದ ಪುಣ್ಯ ಭೂಮಿ ಎಂದು ನುಡಿದರು.

ವೀರಶೈವ ಧರ್ಮದ ನೆಲೆ ಇಂದು ದೇಶ-ವಿದೇಶದಲ್ಲಿಯೂ ಹರಡಿದ್ದು, ಸಾತ್ವಿಕ ನೆಲೆಗಟ್ಟಿನಲ್ಲಿ ನಡೆವ ಧರ್ಮ ಕಾರ್ಯಕ್ಕೆ ಎಲ್ಲಿಯಾದರು, ಯಾವುದೇ ಅಡೆ-ತಡೆಗಳು ಎದುರಾದರೆ ಇದನ್ನು ನಿವಾರಿಸಲು ಕೇದಾರ ಪೀಠ ಸದಾ ನಿಮ್ಮ ಬೆನ್ನಿಗಿದೆ ಎಂದು ನುಡಿದರು.

ಇಲ್ಲಿ ನಡೆದ ಇಷ್ಟಲಿಂಗ ಮಹಾಪೂಜೆ ಮತ್ತು ಸತ್ಸಂಗ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ನಡೆದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ ಶ್ರೀಗಳು, ಸಮಾರಂಭದ ಯಶಸಿಗಾಗಿ ಶ್ರಮಿಸಿದ ಪ್ರಮುಖರ ಕಾರ್ಯ ಶ್ಲಾಘಿಸಿದರು.

ನೇತ್ರತ್ವ ವಹಿಸಿದ ತಡೋಳಾದ ರಾಜೇಶ್ವರ ಶಿವಾಚಾರ್ಯರು, ಹುಡಗಿಯ ವಿರೂಪಾಕ್ಷ ಶಿವಾಚಾರ್ಯರು, ತ್ರಿಪುರಾಂತನ ರುದ್ರಮುನಿ ಶಿವಾಚಾರ್ಯರು, ಮಾಜಲಗಾಂವನ ಪ್ರಭು ಪಂಡಿತಾರಾಧ್ಯ ಶಿವಾಚಾರ್ಯರು, ತಾಂಬೋಳನ ವಿಜಯಕುಮಾರ ಸ್ವಾಮೀಜಿ, ಶಿವಣಿಯ ಹಾವಗಿಲಿಂಗೇಶ್ವರ ಶಿವಾಚಾರ್ಯರು ಸಮ್ಮುಖ ವಹಿಸಿದ್ದರು.

ಸ್ವಾಗತ ಸಮಿತಿ ಕಾರ್ಯಾಧ್ಯಕ್ಷ ಸುನೀಲ ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು. ತ್ವರಿತಗತಿ ವಿಲೇವಾರಿ ನ್ಯಾಯಾಲಯದ ಜಿಲ್ಲಾ ನ್ಯಾಯಾಧೀಶ ವಿ.ಎಚ್.ವಡಾರ, ಸಿವಿಲ್ ಹಿರಿಯ ಶ್ರೇಣಿ ನ್ಯಾಯಾಧೀಶೆ ಎಂ.ಎಸ್.ಹಿರೇಮಠ, ಸಿವಿಲ್ ನ್ಯಾಯಾಧೀಶ ಎಂ.ಆರ್.ಒಡೆಯರ್, ತಹಸೀಲ್ದಾರ ಶಿವರಾಜ ಹಲಬರ್ಗಿ, ಸಿಪಿಐ ಎನ್.ಡಿ.ಸನದಿ, ಸ್ವಾಗತ ಸಮಿತಿ ಅಧ್ಯಕ್ಷ ಚಂದ್ರಶೇಖರ ಲಾತೂರೆ, ಪ್ರಮುಖರಾದ ಆನಂದ ದೇವಪ್ಪ, ಶಿವರಾಜ ನರಶೆಟ್ಟಿ, ಮಲ್ಲಪ್ಪ ಲಾತೂರೆ, ವಿವೇಕ ಬಿರಾದಾರ, ದಿಲೀಪ ಮಡ್ಡೆ, ಶರಣಪ್ಪ ಬಿರಾದಾರ, ಬಸವಂತಪ್ಪ ಲವಾರೆ, ವೀರಣ್ಣ ಶೀಲವಂತ, ರಾಜಕುಮಾರ, ಹಣಮಂತ ಅಂಬಲಗೆ, ಚಂದ್ರಶೇಖರ ಪಾಟೀಲ್ ಸೇರಿದಂತೆ ಸ್ವಾಗತ ಸಮಿತಿ ಪ್ರಮುಖರನ್ನು ಜಗದ್ಗುರುಗಳು ಸನ್ಮಾನಿಸಿ ಆಶೀರ್ವದಿಸಿದರು.

ಬಸವರಾಜ ವರಕಾಲೆ ಸ್ವಾಗತಿಸಿದರು. ರಮೇಶ ರಾಜೋಳೆ, ಸೂರ್ಯಕಾಂತ ಶೀಲವಂತ ನಿರೂಪಿಸಿದರು.

ದಿನಾಂಕ 22-9-2012 ಶನಿವಾರ ವಿಜಯವಾಣಿ ದಿನಪತ್ರಿಕೆ.

# ಭಾವೈಕ್ಯ ಜನಜಾಗೃತಿ ಸಭೆ ಸಮಾರೋಪ

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣದ ಬಿಕೆಡಿಬಿ ಸಭಾಂಗಣದಲ್ಲಿ ಬುಧವಾರ ಸಂಜೆ ನಡೆದ ರಾಷ್ಟ್ರೀಯ ಭಾವೈಕ್ಯ ಜನಜಾಗೃತಿ ಸಭೆಯಲ್ಲಿ ಕೇದಾರ ಜಗದ್ಗುರು ಭೀಮಾಶಂಕರಲಿಂಗ ಶಿವಾಚಾರ್ಯರು ಮಾತನಾಡಿದರು. ಹಾರಕೂಡ ಚೆನ್ನವೀರ ಶಿವಾಚಾರ್ಯರು, ತಡೋಳಾ ರಾಜೇಶ್ವರ ಶಿವಾಚಾರ್ಯರು, ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಪಾಲ್ಗೊಂಡಿದ್ದರು

ಬಸವಕಲ್ಯಾಣ: ಇಲ್ಲಿನ ಬಿಕೆಡಿಬಿ ಸಭಾಂಗಣಗಲ್ಲಿ ಕೇದಾರ ಜಗದ್ಗುರು ಭೀಮಾಶಂಕರಲಿಂಗ ಶಿವಾಚಾರ್ಯ ಭಗವತ್ಪಾದರ ನೇತೃತ್ವದಲ್ಲಿ ಮೂರು ದಿನಗಳಿಂದ ನಡೆದ ಇಷ್ಟಲಿಂಗ ಮಹಾಪೂಜೆಯ ಸಮಾರೋಪ ಗುರುವಾರ ನಡೆಯಿತು.

ಆಕರ್ಷಕವಾಗಿ ಸಿಂಗರಿಸಿದ ವೇದಿಕೆಯ ಮೇಲೆ ಇಡಲಾಗಿದ್ದ ಲಿಂಗಕ್ಕೆ ಪೀಠದ ಮೇಲೆ ಕುಳಿತಿದ್ದ ಕೇದಾರ ಜಗದ್ಗುರುಗಳು ಮಹಾಪೂಜೆ ಸಲ್ಲಿಸಿದರು. ವಿವಿಧ ಬಗೆಯ ಪುಷ್ಪಗಳು, ಧೂಪ, ದೀಪದೊಂದಿಗೆ ಸುಮಾರು ನಾಲ್ಕು ಗಂಟೆಗಳವರೆಗೆ ಪೂಜೆ ನಡೆಯಿತು. ರುದ್ರಮಂತ್ರ ಹಾಡಲಾಯಿತು. ವೇದಘೋಷ ಮಾಡಲಾಯಿತು.

ಸಂಜೆ ಸಮಾರೋಪ ಸಮಾರಂಭ ನಡೆಯಿತು. ಜಗದ್ಗುರು ಭೀಮಾಶಂಕರ ಲಿಂಗ ಶಿವಾಚಾರ್ಯರು ಮಾತನಾಡಿ ಲೋಕಕಲ್ಯಾಣವೇ ಪ್ರತಿಯೊಬ್ಬರ ಧ್ಯೇಯವಾಗಬೇಕು ಎಂದರು. ಪೂಜೆ, ಧ್ಯಾನದಿಂದ ಮನುಷ್ಯನು ಅಧ್ಯಾತ್ಮೀಕವಾಗಿ ಉನ್ನತ ಸ್ಥಾನಕ್ಕೆ ಏರುತ್ತಾನೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾ( ಗರು. ಗುರುಲಿಂಗಯ್ಯ ಹಿತ್ತಲಶಿ‌ೂರ ಅವರಿಂದ ಗಾಯನ ನಡೆಯಿತು. ಸುನಿಲ ಪಾಟೀಲ, ಚಂದ್ರಶೇಖರ ಲಾತೂರೆ ಉಪಸ್ಥಿತರಿದ್ದರು. ದಯಾನಂದ ಶೀಲವಂತ ಸ್ವಾಗತಿಸಿದರು. ರಮೇಶ ರಾಜೋಳೆ ನಿರೂಪಿಸಿದರು. ಸೂರ್ಯಕಾಂತ ಶೀಲವಂತ ವಂದಿಸಿದರು.

ಬುಧವಾರ 2 ನೇ ದಿನ ನಡೆದ ಭಾವೈಕ್ಯ ಜನಜಾಗೃತಿ ಸಭೆಯಲ್ಲಿ ಜಗದ್ಗುರು ಭೀಮಾಶಂಕರಲಿಂಗ ಶಿವಾಚಾರ್ಯರು, ಹಾರಕೂಡ ಚೆನ್ನವೀರ ಶಿವಾಚಾರ್ಯರು, ತಡೋಳಾ ರಾಜೇಶ್ವರ ಶಿವಾಚಾರ್ಯರು ಪಾಲ್ಗೊಂಡಿದ್ದರು.

ದಿನಾಂಕ 21-9-2012 ಶುಕ್ರವಾರ ಪ್ರಜಾವಾಣಿ ದಿನಪತ್ರಿಕೆ.

Scanned by CamScanner

# ಗವಿ ಮಠದಲ್ಲಿ ಪಟ್ಟಾಧಿಕಾರದ 7ನೇ ವರ್ಧಂತಿ



ಬಸವಕಲ್ಯಾಣದಲ್ಲಿ ತ್ರಿಪುರಾಂತದ ರುದ್ರಮುನಿ ಶಿವಾಚಾರ್ಯರ 27ನೇ ಜನ್ಮ ದಿನಾಚರಣೆ ಹಾಗೂ 7ನೇ ವರ್ಧಂತಿ ಮಹೋತ್ಸವ ಜರುಗಿತು. ಪ್ರಮುಖರಾದ ಸುನೀಲ ಪಾಟೀಲ, ಅನೀಲ, ದಿಲೀಪಕುಮಾರ ಇತರರು ಉಪಸ್ಥಿತರಿದ್ದರು.

**ಬಸವಕಲ್ಯಾಣ:** ಇಲ್ಲಿಯ ತ್ರಿಪುರಾಂತನ ಗವಿಮಠ (ಮರಿದೇವರ ಗುಡ್ಡ)ದಲ್ಲಿ ರುದ್ರಮುನಿ ಶಿವಾಚಾರ್ಯರರ 27ನೇ ಜನ್ಮ ದಿನಾಚರಣೆ ಮತ್ತು 7ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ವೈಭವಪೂರ್ಣವಾಗಿ ಜರುಗಿತು.

ಕಸಾಪ ತಾಲೂಕಾಧ್ಯಕ್ಷ ಚಂದ್ರಕಾಂತ ಸ್ವಾಮಿ ಮಾತನಾಡಿ, ಚಿಕ್ಕ ವಯಸ್ಸಿನಲ್ಲಿ ಮಹತ್ತರ ಜವಾಬ್ದಾರಿಯನ್ನು ವಹಿಸಿಕೊಂಡಿರುವ ಶ್ರೀಗಳು ಭಕ್ತರಿಗೆ ಮಾರ್ಗದರ್ಶಕರಾಗಿದ್ದಾರೆ ಎಂದರು.

ಪ್ರಭುಲಿಂಗಯ್ಯ ಟಂಕಸಾಲಿಮಠ ಮಾತನಾಡಿ, ಆರೋಗ್ಯಪೂರ್ಣ ಸಮಾಜ ನಿರ್ಮಾಣವಾಗಬೇಕು ಎನ್ನುವ ಉದ್ದೇಶದಿಂದ ದುಶ್ಚಟಗಳನ್ನು ತಮ್ಮ ಜೋಳಿಗೆಯಲ್ಲಿ ಹಾಕಿ ಎಂದು ಜೋಳಿಗೆ ಹಿಡಿದು ಜನ ಜಾಗೃತಿ ಪಾದಯಾತ್ರೆ ಮಾಡುವ ಮೂಲಕ ಯುವಕರನ್ನು ದುಶ್ಚಟಗಳಿಂದ ಮುಕ್ತರನ್ನಾಗಿಸಲು ಶ್ರಮಿಸುತ್ತಿರುವ ಶ್ರೀಗಳ ಕಾರ್ಯ ಶ್ಲಾಘನೀಯ ಎಂದರು.

ಪ್ರಮುಖರಾದ ವೀರಣ್ಣ ಶೀಲವಂತ, ಸುನೀಲ ಪಾಟೀಲ್, ಶರಣಪ್ಪ ಬಿರಾದಾರ್, ಅನೀಲ ಹಲಶೆಟ್ಟೆ, ದಿಲೀಪಕುಮಾರ ಮಡ್ಡೆ, ಶಾಸ್ತ್ರೀ ಬಿರಾದಾರ, ಸುನೀಲಕುಮಾರ ಮೂಳೆ, ಜಗನ್ನಾಥ ಬಿರಾದಾರ, ಸಂಜುಕುಮಾರ ಸೂಗರೆ, ರಾಮಯ್ಯ ಸ್ವಾಮಿ, ರಾಜಕುಮಾರ ಮೇತ್ರೆ,ಚನ್ನವೀರಯ್ಯ ಸ್ವಾಮಿ, ಆನಂದ ದೇವಪ್ಪಾ, ಶರಣು ಬಿರಾದಾರ ಸೇರಿದಂತೆ ಇತರರು ಶ್ರೀಗಳಿಗೆ ಸನ್ಮಾನಿಸಿ, ಆಶಿರ್ವಾದ ಪಡೆದರು.

ದಿನಾಂಕ 29-9-2012 ಶನಿವಾರ ವಿಜಯವಾಣಿ ದಿನಪತ್ರಿಕೆ.

## ಕಲ್ಯಾಣ: ಸಾಂಸ್ಕೃತಿಕ ಕಾರ್ಯಕ್ರಮ

■ ವಿಕ ಸು ದ್ದಿಲೋಕ ಬಸವಕಲ್ಯಾಣ

ನಗರದ ತ್ರೀಪುರಾಂತನಲ್ಲಿ ಮಾತೆ ಅಂಬಾ ಭವಾನಿ ಮಂದಿರದಲ್ಲಿ ಜೈ ಭವಾನಿ ಸುಧಾರಣಾ ಸಮಿತಿ ಮತ್ತು ನವರಾತ್ರಿ ಹಾಗೂ ವಿಜಯ ದಶಮಿ ಉತ್ಸವದ ನಿಮಿತ್ತ ಸಂಗೀತ ಸಂಜೆ ಕಾರ್ಯಕ್ರಮಕ್ಕೆ ಯೂತ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಆನಂದ ದೇವಪ್ಪ ಪೂಜೆ ನೆರವೇರಿಸಿ ಚಾಲನೆ ನೀಡಿದರು.

ಬಳಿಕ ಮಾತನಾಡಿ, ಪ್ರತಿಯೊಬ್ಬರು ಮಾತೆ ಅಂಬಾಭವಾನಿಯನ್ನು ಪೂಜಿಸಬೇಕು .ಅಂಬಾ ಭವಾನಿಯನ್ನು ನೆನೆದರೆ ಜೀವನದಲ್ಲಿ ಒಳ್ಳೆಯದಾಗುತ್ತದೆ ಎಂದರು.

ಗವಿ ಮಠದ ಪೂಜ್ಯ ಶ್ರೀಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಪಂಚಾಕ್ಷರಿ ಸ್ವಾಮಿಜಿ, ನಗರ ಸಭೆ ಅಧ್ಯಕ್ಷೆ ಮಂಗಲಾಬಾಯಿ ಉದ್ರೆ, ರಾಜು ಮಂಠಾಳೆ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

ದಿನಾಂಕ 26-10-12
ವಿಜಯವಾಣಿ

## ಮಹೋತ್ಸವ



ಬಸವಕಲ್ಯಾಣ: ತ್ರಿಪುರಾಂತನ ಶ್ರೀಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 27 ನೇ ಜನ್ಮ ದಿನಾಚರಣೆ ಹಾಗೂ 7 ನೇ ವರ್ಧಂತಿ ಮಹೋತ್ಸವ ಜರುಗಿತು.

# ತ್ರಿಪುರಾಂತ ಶ್ರೀಗಳ ಜನ್ಮದಿನ-ವರ್ಧಂತಿ ಆಚರಣೆ

**ಬಸವಕಲ್ಯಾಣ:** ಶ್ರೀಗಳು ಸಮಾಜದ ಆಸ್ತಿಯಾಗಿದ್ದಾರೆ. ಚಿಕ್ಕ ವಯಸ್ಸಿನಲ್ಲಿ ಮಹತ್ವದ ಜವಾಬ್ದಾರಿ ವಹಿಸಿಕೊಂಡಿರುವ ಅವರು, ಭಕ್ತರ ಬಾಳಿಗೆ ಮಾರ್ಗದರ್ಶಕರಾಗಿದ್ದಾರೆ ಎಂದು ಕಸಾಪ ತಾಲೂಕು ಅಧ್ಯಕ್ಷ ಚಂದ್ರಕಾಂತ ಸ್ವಾಮಿ ತಿಳಿಸಿದರು.

ಇಲ್ಲಿಯ ತ್ರಿಪುರಾಂತನ ಗವಿಮಠ(ಮರಿದೇವರ ಗುಡ್ಡ)ದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರ 27ನೇ ಜನ್ಮ ದಿನಾಚರಣೆ ಮತ್ತು ಅವರ 7ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತ್ರಿಪುರಾಂತ ಶ್ರೀಗಳ ಸಮಾಜಪರ ಕಾಳಜಿಯನ್ನು ಶ್ಲಾಘಿಸಿದರು.

ಪ್ರಾ।ಪ್ರಭುಲಿಂಗಯ್ಯ ಟಂಕಸಾಲಿಮಠ ಮಾತನಾಡಿ, ಶ್ರೀ ಅಭಿನವ ಘನಲಿಂಗರುದ್ರಮುನಿ ಶಿವಾಚಾರ್ಯರು ಸಮಾಜದ ಬಗ್ಗೆ ಅತ್ಯಂತ ಕಾಳಜಿ ಹೊಂದಿದ್ದಾರೆ. ಸ್ವಾಸ್ಥ ಸಮಾಜ ನಿರ್ಮಾಣವಾಗಬೇಕು ಎನ್ನುವ ಉದ್ದೇಶದಿಂದ ದುಶ್ಚಟಗಳನ್ನು ತಮ್ಮ ಜೋಳಿಗೆಯಲ್ಲಿ ಹಾಕಿ ಎಂದು ಜೋಳಿಗೆ ಹಿಡಿದು ಜನ ಜಾಗೃತಿ ಪಾದಯಾತ್ರೆ ನಡೆಸಿದ್ದಾರೆ ಎಂದು ಶ್ರೀಗಳ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆಯ ತಾಲೂಕು ಅಧ್ಯಕ್ಷ ವೀರಣ್ಣ ಶೀಲವಂತ, ಮುಖಂಡ ಸುನೀಲ ಪಾಟೀಲ, ಪ್ರಮುರಾದ ಶರಣಪ್ಪ ಬಿರಾದಾರ ಮಾತನಾಡಿದರು. ಪ್ರಮುಖರಾದ ಅನಿಲ ಹಲಶೆಟ್ಟೆ, ದಿಲೀಪಕುಮಾರ ಮಡ್ಡೆ ಶಾಸ್ತ್ರೀ ಬಿರಾದಾರ, ಸುನೀಲಕುಮಾರ ಮೂಳೆ ಜಾಫ್‌ರವಾಡಿ, ಜಗನ್ನಾಥ ಬಿರಾದಾರ, ಸಂಜುಕುಮಾರ ಸೂಗರೆ, ರಾಮಯ್ಯಾ ಸ್ವಾಮಿ, ರಾಜಕುಮಾರ ಮೇತ್ರೆ, ಚನ್ನವೀರಯ್ಯಾ ಸ್ವಾಮಿ ಖಾನಾಪುರ, ಕಾಂಗ್ರೆಸ್ ಮುಖಂಡರಾದ ಆನಂದ ದೇವಪ್ಪ, ಶರಣು ಬಿರಾದಾರ ಸೇರಿದಂತೆ ಇತರರು ಶ್ರೀಗಳಿಗೆ ಸನ್ಮಾನಿಸಿ, ಆಶೀರ್ವಾದ ಪಡೆದರು.

ದಿನಾಂಕ 29-9-12 ಶನಿವಾರ ವಿಜಯವಾಣಿ ದಿನಪತ್ರಿಕೆ

Scanned by CamScanner



*ಬಸವಕಲ್ಯಾಣದ ತ್ರಿಪುರಾಂತ ಗವಿ ಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 27 ನೇ ಹುಟ್ಟು ಹಬ್ಬ ಹಾಗೂ 7ನೇ ವರ್ದಂತಿ ಮಹೋತ್ಸವ ನಿಮಿತ್ಯ ಅನೇಕ ಮುಖಂಡರು ಪೂಜ್ಯರಿಗೆ ಸನ್ಮಾನಿಸಿ ಗೌರವಿಸಿದರು.*

# ತ್ರಿಪುರಾಂತ ಶ್ರೀಗಳ 7ನೇ ವರ್ಧಂತಿ ಮಹೋತ್ಸವ

ಬಸವಕಲ್ಯಾಣ,29–ತ್ರಿಪುರಾಂತ ಗವಿ ಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 27 ನೇ ಹುಟ್ಟು ಹಬ್ಬ ಮತ್ತು ಪಟ್ಟಾಧಿಕಾರದ 7ನೇ ವರ್ಧಂತಿ ಮಹೋತ್ಸವ ಶುಕ್ರವಾರ ಮಠದಲ್ಲಿ ನಡೆಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ತಾಲೂಕಾ ಕನ್ನಡ ಸಾಹಿತ್ಯ ಪರಿಷತ ಅಧ್ಯಕ್ಷ ಚಂದ್ರಕಾಂತ ಸ್ವಾಮಿ ಮಾತನಾಡಿ ಶ್ರೀಗಳು ಸಮಾಜದ ಆಸ್ತಿ ಯಾಗಿದ್ದು ಸದ್ಭಕ್ತರ ದು:ಖವನ್ನು ದೂರಮಾಡುವ ಶಕ್ತಿ ಅವರಲ್ಲಿದೆ ಎಂದರು.

ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ರಭುಲಿಂಗಯ್ಯಾ ಟಂಕಸಾಲಿಮಠ ಮಾತನಾಡಿ ಇಂದಿನ ದಿನಗಳಲ್ಲಿ ಯುವಕರು ದುಶ್ಚಟಗಳಿಗೆ ಬಲಿಯಾಗುತ್ತಿದ್ದು, ಶ್ರೀಗಳು ದುಶ್ಚಟಗಳ ವಿರುದ್ಧ ಜನಜಾಗೃತಿ ನಡೆಸುವ ಮೂಲಕ ಗಮನ ಜಿಲ್ಲಾದ್ಯಂತ ಸೆಳೆದಿದ್ದರು ಎಂದರು. ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆಯ ತಾಲೂಕಾ ಅಧ್ಯಕ್ಷ ವೀರಣ್ಣ ಶೀಲವಂತ, ಹಿರಿಯರಾದ ಶರಣಪ್ಪ ಬಿರಾದಾರ, ಯುವ ಮುಖಂಡರಾದ ಸುನೀಲ ಪಾಟೀಲ ಇನ್ನಿತರರು ಸಹ ಮಾತನಾಡಿದರು. ಅನೀಲ ಹಲಶೆಟ್ಟಿ, ದಲೀಪಕುಮಾರ ಮಡ್ಡೆ, ಶಾಸ್ತ್ರೀ ಬಿರಾದಾರ, ಸುನೀಲಕುಮಾರ ಮೂಳೆ, ಜಗನ್ನಾಥ ಬಿರಾದಾರ, ಸಂಜು ಸೂಗರೆ, ರಾಮಯ್ಯಾ ಸ್ವಾಮಿ,ಚಂದ್ರಕಾಂತ ಸ್ವಾಮಿ ಟೇಲರ. ರಾಜಕುಮಾರ ಮೇತ್ರೆ, ಚನ್ನವೀರಯ್ಯಾ ಸ್ವಾಮಿ, ಜಿಲ್ಲಾ ಯುತ್ ಕಾಂಗ್ರೇಸ ಅಧ್ಯಕ್ಷ ಆನಂದ ದೇವಪ್ಪಾ, ಪ್ರಮುಖರಾದ ಶರಣು ಬಿರಾದಾರ ಶ್ರೀಗಳಿಗೆ ಗೌರವಿಸಿ ಆಶಿರ್ವಾದ ಪಡೆದರು.

ದಿನಾಂಕ 30-9-12 ರವಿವಾರ
ಸಂಯುಕ್ತ ಕರ್ನಾಟಕ ದಿನಪತ್ರಿಕೆ.



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಶುಕ್ರವಾರ ನಡೆದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಟ್ಟಾಭಿಷೇಕದ 7 ನೇ ವರ್ಧಂತಿ ಉತ್ಸವವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಚಂದ್ರಕಾಂತ ಸ್ವಾಮಿ ಉದ್ಘಾಟಿಸಿದರು. ಪ್ರಭುಲಿಂಗಯ್ಯ, ಶರಣಪ್ಪ ಬಿರಾದಾರ, ಸುನಿಲ ಮುಳೆ ಪಾಲ್ಗೊಂಡಿದ್ದರು

# ‘ತ್ರಿಪುರಾಂತ ಸ್ವಾಮೀಜಿ ಕಾರ್ಯ ಮಾದರಿ’

ಬಸವಕಲ್ಯಾಣ: ಗುಟ್ಕಾ, ಬೀಡಿ, ಸಿಗರೇಟ್‌ಗಳನ್ನು ಜೋಳಿಗೆಯಲ್ಲಿ ಹಾಕಿಸಿಕೊಂಡು ದುಶ್ಚಟದ ವಿರುದ್ಧ ನಿರಂತರವಾಗಿ ಆಂದೋಲನ ನಡೆಸುತ್ತಿರುವ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾದರಿಯ ಕಾರ್ಯ ಕೈಗೊಂಡಿದ್ದಾರೆ ಎಂದು ಪ್ರಾಚಾರ್ಯ ಪ್ರಭುಲಿಂಗಯ್ಯ ಟಂಕಸಾಲಿಮಠ ಅಭಿಪ್ರಾಯ ವ್ಯಕ್ತಪಡಿಸಿದರು.

ತ್ರಿಪುರಾಂತ ಗವಿಮಠದಲ್ಲಿ ಶುಕ್ರವಾರ ಹಮ್ಮಿಕೊಂಡ ಸ್ವಾಮೀಜಿಯವರ ಪಟ್ಟಾಭಿಷೇಕದ 7 ನೇ ವರ್ಧಂತಿ ಮಹೋತ್ಸವದಲ್ಲಿ ಪಾಲ್ಗೊಂಡು ಮಾತನಾಡಿದರು. ಯುವಕರು ಸನ್ಮಾರ್ಗದಲ್ಲಿ ಸಾಗಲು ಸ್ವಾಮೀಜಿಯವರು ಉತ್ತಮ ರೀತಿಯಲ್ಲಿ ಮಾರ್ಗದರ್ಶನ ಮಾಡುತ್ತಿದ್ದಾರೆ ಎಂದರು.

ದೀಪ ಬೆಳಗಿಸಿ ಉದ್ಘಾಟನೆ ನೆರವೇರಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಅಧ್ಯಕ್ಷ ಚಂದ್ರಕಾಂತ ಸ್ವಾಮಿ ನಾರಾಯಣಪುರ ಮಾತನಾಡಿ ಸ್ವಾಮೀಜಿಯವರು ಸಮಾಜದ ಆಸ್ತಿಯಾಗಿದ್ದು ಸದ್ಭಕ್ತರ ದುಃಖ ದೂರ ಮಾಡುವ ಶಕ್ತಿ ಅವರಲ್ಲಿದೆ ಎಂದರು. ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ತಾಲ್ಲೂಕು ಅಧ್ಯಕ್ಷ ವೀರಣ್ಣ ಶೀಲವಂತ ಮಾತನಾಡಿ ಸ್ವಾಮೀಜಿ ವಿವಿಧ ರಚನಾತ್ಮಕ ಕಾರ್ಯಗಳನ್ನು ಮಾಡುತ್ತ ಸಮಾಜ ಕಾರ್ಯದಲ್ಲಿ ತೊಡಗಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಸ್ವಾಮೀಜಿಯವರನ್ನು ಮುಖಂಡರು ಮತ್ತು ಭಕ್ತರು ಶಾಲು ಹೊದಿಸಿ ಸನ್ಮಾನಿಸಿದರು. ಮುಖಂಡರಾದ ಸುನಿಲ ಪಾಟೀಲ, ಶರಣಪ್ಪ ಬಿರಾದಾರ, ಅನಿಲ ಹಲಶೆಟ್ಟಿ, ದಿಲೀಪಕುಮಾರ ಮಡ್ಡೆ, ಜಗನ್ನಾಥ ಬಿರಾದಾರ, ಸಂಜೀವ ಸುಗೂರೆ, ರಾಮಯ್ಯ ಸ್ವಾಮಿ, ರಾಜಕುಮಾರ ಮೇತ್ರೆ, ಚೆನ್ನವೀರಯ್ಯ ಸ್ವಾಮಿ, ಶಾಸ್ತ್ರೀ ಬಿರಾದಾರ, ಸುನಿಲ ಮುಳೆ ಮುಂತಾದವರು ಪಾಲ್ಗೊಂಡಿದ್ದರು. ಕಾಂಗ್ರೆಸ್ ಮುಖಂಡರಾದ ಆನಂದ ದೇವಪ್ಪ ಮತ್ತು ಶರಣು ಬಿರಾದಾರ ಸಹ ಸ್ವಾಮೀಜಿಯವರನ್ನು ಸನ್ಮಾನಿಸಿದರು.

ದಿನಾಂಕ 1-10-12 ಪ್ರಜಾವಾಣಿ
ಸೋಮವಾರ ದಿನಪತ್ರಿಕೆ.



ಬಸವಕಲ್ಯಾಣ ತಾಲ್ಲೂಕಿನ ಜಾಪೂರವಾಡಿಯಲ್ಲಿ ಈಚೆಗೆ ಗಣೇಶ ವಿಸರ್ಜನೆ ನಿಮಿತ್ತ ಹಮ್ಮಿಕೊಂಡ ಧರ್ಮಸಭೆಯಲ್ಲಿ ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಪಾಲ್ಗೊಂಡಿದ್ದರು

# ‘ಉತ್ಸವಗಳಿಂದ ಜನರಲ್ಲಿ ಏಕತೆ’

ಬಸವಕಲ್ಯಾಣ: ಉತ್ಸವಗಳು ಮತ್ತು ಹಬ್ಬಗಳು ಜನರಲ್ಲಿ ಏಕತೆ ಮೂಡಿಸುತ್ತವೆ ಎಂದು ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಹೇಳಿದರು.

ತಾಲ್ಲೂಕಿನ ಜಾಪೂರವಾಡಿಯಲ್ಲಿ ಈಚೆಗೆ ಗಣೇಶ ಉತ್ಸವದ ಅಂಗವಾಗಿ ಹಮ್ಮಿಕೊಂಡ ಧರ್ಮಸಭೆಯಲ್ಲಿ ಅವರು ಮಾತನಾಡಿದರು.

ದೇವರ ಮೇಲೆ ಭಕ್ತಿ, ಶ್ರದ್ಧೆ ಇಲ್ಲದಿದ್ದರೆ ಜೀವನದಲ್ಲಿ ಶಾಂತಿ, ನೆಮ್ಮದಿ ಸಿಗುವುದಿಲ್ಲ. ಗ್ರಾಮಸ್ಥರು ಗಣೇಶ ಹಬ್ಬವನ್ನು ವಿಜೃಂಭಣೆಯಿಂದ ಮತ್ತು ಸಂಭ್ರಮದಿಂದ ಹಮ್ಮಿಕೊಂಡಿರುವುದಕ್ಕೆ ಶ್ಲಾಘಿಸಿದರು.

ತ್ರಿಪುರಾಂತ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಯುವಕರು ಧರ್ಮ, ಸಂಸ್ಕೃತಿಯನ್ನು ಪಾಲಿಸಬೇಕು. ದುಶ್ಚಟ, ದುರ್ಗುಣ ಬಿಡಬೇಕು ಎಂದರು.

ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಆನಂದ ದೇವಪ್ಪ, ರಾಮಯ್ಯ ಸ್ವಾಮಿ, ಮನೋಜ ಮಾಶೆಟ್ಟೆ ಮಾತನಾಡಿದರು.

ಪ್ರಮುಖರಾದ ಚೆನ್ನಪ್ಪ ಪೊಲೀಸ್ ಪಾಟೀಲ, ಮಹಾರಾಜಪ್ಪ ಮುಳೆ, ಶಾಂತವಿಜಯ ಪಾಟೀಲ, ದಾನಪ್ಪ ಮುಳೆ, ಶರಣಪ್ಪ ಕಮಲನಗರ, ಸುನಿಲಕುಮಾರ ಮುಳೆ, ಶಿಖರೇಶ್ವರ ಆಲಗೂಡೆ, ಕಾರ್ತಿಕಯ್ಯ ಸ್ವಾಮಿ, ಮಲ್ಲಿಕಾರ್ಜುನ ಭಂಡೆ, ಸುರೇಶ, ಸಿದ್ಧಲಿಂಗ ಬಿರಾದಾರ ಉಪಸ್ಥಿತರಿದ್ದರು.

ಜೈಗಣೇಶ ಯುವಕ ಸಂಘದ ಅಧ್ಯಕ್ಷ ಶಾಸ್ತ್ರೀ ಬಿರಾದಾರ ಸ್ವಾಗತಿಸಿದರು. ಮೆರವಣಿಗೆ ನಡೆಸಿ ಗಣೇಶ ವಿಸರ್ಜನೆ ಭಕ್ತಿಭಾವದಿಂದ ನೆರವೇರಿಸಲಾಯಿತು.

ದಿನಾಂಕ 5-10-12 ಶುಕ್ರವಾರ ಪ್ರಜಾವಾಣಿ

Scanned by CamScanner

# ಮುಚಳಂಬದಲ್ಲಿ ಪ್ರಣವಾನಂದ ಶ್ರೀಗಳ ಜನ್ಮ ದಿನ



ಮುಚಳಂಬದಲ್ಲಿ ಪ್ರಣವಾನಂದ ಮಹಾಸ್ವಾಮೀಜಿ ಜನ್ಮ ದಿನಾಚರಣೆ ಉದ್ಘಾಟನಾ ಸಮಾರಂಭದಲ್ಲಿ ಮುಚಳಂಬ, ತ್ರಿಪುರಾಂತ, ಸಸ್ತಾಪೂರ ಶ್ರೀಗಳು, ವೈಜಿನಾಥ ಕಾಮಶೆಟ್ಟಿ, ಆನಂದ ದೇವಪ್ಪ ಶಿವರಾಜ ನರಶೆಟ್ಟಿ ಉಪಸ್ಥಿತರಿದ್ದರು.

**ಬಸವಕಲ್ಯಾಣ:** ಮುಚಳಂಬ ಗ್ರಾಮದಲ್ಲಿ ನಾಗಭೂಷಣ ಶಿವಯೋಗಿ ಸಂಸ್ಥಾನ ಮಠದ ಪೀಠಾಧಿಪತಿ ಶ್ರೀ ಪ್ರಣವಾನಂದ ಮಹಾಸ್ವಾಮಿ ಜನ್ಮ ದಿನವನ್ನು ಸಂಭ್ರಮದಿಂದ ಭಾನುವಾರ ಆಚರಿಸಲಾಯಿತು.

ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿದ ಪ್ರಣವಾನಂದ ಶ್ರೀ, ಭಾರತೀಯ ಸಂಸ್ಕೃತಿ ಸರ್ವಶ್ರೇಷ್ಠ. ಇಲ್ಲಿನ ಸಮೃದ್ಧ ಸಂಸ್ಕೃತಿ ಮತ್ತು ಅಧ್ಯಾತ್ಮದಿಂದ ನಮ್ಮ ದೇಶ ವಿಶ್ವಕ್ಕೆ ಗುರುವಾಗಿದೆ. ಸಂಸ್ಕೃತಿಯ ಅನುಕರಣೆಯಿಂದ ಶಾಂತಿ-ನೆಮ್ಮದಿಯಿಂದ ಬದುಕಲು ಸಾಧ್ಯ ಎಂದರು. ದೀಪ ಜ್ಞಾನದ ಸಂಕೇತ. ದೀಪ ಹಚ್ಚುವುದು ನಮ್ಮ ಸಂಸ್ಕೃತಿಯಾಗಿದೆ ಹೊರತು ದೀಪ ಆರಿಸುವುದಲ್ಲ. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದಾಗಿ ಪುರಾತನವಾದ ಭವ್ಯ ಸಂಸ್ಕೃತಿ ಮರೆಯುತ್ತಿರುವುದರಿಂದ ಮನುಷ್ಯ ನಿಗೆ ಎಷ್ಟೆಲ್ಲ ಆಸ್ತಿ- ಐಶ್ವರ್ಯವಿದ್ದರೂ ಜೀವನದಲ್ಲಿ ಶಾಂತಿ ನೆಮ್ಮದಿ ಇಲ್ಲದಂತಾಗಿದೆ ಎಂದರು.

ಮಾಜಿ ಶಾಸಕ ಎಂ.ಜಿ.ಮುಳೆ ಮಾತನಾಡಿ, ಮಠದ ಪರಂಪರೆ ಮುಂದುವರಿಸಿಕೊಂಡು ಹೋಗುವುದರೊಂದಿಗೆ ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರಣವಾನಂದ ಶ್ರೀಗಳು ಸಲ್ಲಿಸುತ್ತಿರುವ ಸೇವೆಯನ್ನು ಶ್ಲಾಘಿಸಿದರು.

ಶ್ರೀಗಳಾದ ಸದಾನಂದ ಸ್ವಾಮೀಜಿ, ರುದ್ರಮುನಿ ಶಿವಾಚಾರ್ಯರು, ಗೋಪಾಲ ಶಾಸ್ತ್ರಿಗಳು ನೇತೃತ್ವ ವಹಿಸಿ ಆಶೀರ್ವಚನ ನೀಡಿದರು. ಶ್ರೀಗಳಾದ ಪರಮಾನಂದ ಸ್ವಾಮೀಜಿ, ಮಲ್ಲಿಕಾರ್ಜುನ ಸ್ವಾಮೀಜಿ ಸಮ್ಮುಖ ವಹಿಸಿದ್ದರು. ಪ್ರಮುಖರಾದ ವೈಜಿನಾಥ ಕಾಮಶೆಟ್ಟಿ, ಆನಂದ ದೇವಪ್ಪ, ಶಿವಶರಣ ಬಿರಾದಾರ, ಶಿವರಾಜ ನರಶೆಟಿ , ಶಿವಮ್ಮ ಮೇತ್ರೆ, ಬಸವರಾಜ ಬಿರಾದಾರ್ ಉಪಸ್ಥಿತರಿದ್ದರು.

ಕೆ.ಕಾಶಪ್ಪ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ರೇವಣಸಿದ್ಧ ಹಂಡಗೆ ನಿರೂಪಿಸಿದರು. ಮಲ್ಲಯ್ಯ ಸ್ವಾಮಿ ಮತ್ತು ಶಿವಕುಮಾರ ಶಾಸ್ತ್ರಿ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಇದೇ ವೇಳೆ ಶ್ರೀಗಳ ತುಲಾಭಾರ ಹಾಗೂ ತೊಟ್ಟಿಲು ಕಾರ್ಯಕ್ರಮವೂ ಜರುಗಿತು.

ದಿನಾಂಕ 1-10-12 ಸೋಮವಾರ ವಿಜಯವಾಣಿ ದಿನಪತ್ರಿಕೆ.

# ಧರ್ಮದ ತಳಹದಿಯ ಬದುಕು ನಿಮ್ಮದಾಗಲಿ



ಶಿವಪುರದ ಕಮರಿಮಠದಲ್ಲಿ ನಡೆದ ಕೋಟಿ ಜಪಯಜ್ಞ ಸಮಾರೋಪದಲ್ಲಿ ಭಂತನಾಳದ ವೃಷಭಲಿಂಗೇಶ್ವರ ಸ್ವಾಮೀಜಿ ಆಶೀರ್ವಚನ ನೀಡಿದರು. ರುದ್ರಮುನಿ ಶ್ರೀ ಇತರರು ಉಪಸ್ಥಿತರಿದ್ದರು.

**ಬಸವಕಲ್ಯಾಣ:** ಮನುಷ್ಯನನ್ನು ನೀತಿವಂತನಾಗಿ ಬದುಕುವ ಕಲೆ ಕಲಿಸಿಕೊಟ್ಟವರು ಅಣ್ಣ ಬಸವಣ್ಣ ಎಂದು ಭಂತನಾಳದ ವೃಷಭಲಿಂಗೇಶ್ವರ ಮಹಾ ಶಿವಯೋಗಿಗಳು ನುಡಿದರು.

ಶಿವಪುರದ ಕಮರಿಮಠದಲ್ಲಿ ಮಹಿಳೆಯರಿಂದ ನಡೆದ ಎರಡು ತಿಂಗಳ ಕೋಟಿ ಜಪಯಜ್ಞದ ಸಮಾರೋಪದಲ್ಲಿ ಸಾನ್ನಿಧ್ಯ ವಹಿಸಿದ್ದ ಅವರು, ಧರ್ಮದ ವಿಶಾಲವಾದ ತಳಹದಿ ಮೇಲೆ ಬದುಕು ರೂಪಿಕೊಂಡಾಗ ಮಾತ್ರ ಮನುಷ್ಯ ಮನುಷ್ಯನಾಗಿ ಬದುಕಲು ಸಾಧ್ಯವಿದೆ ಎಂದು ಪ್ರತಿಪಾದಿಸಿದರು.

ಬಸವಣ್ಣನವರ ಕಾರ್ಯಕ್ಷೇತ್ರ ಬಸವಕಲ್ಯಾಣ ಪವಿತ್ರ ನೆಲ. ಮನುಷ್ಯ ಮನುಷ್ಯನಾಗಿ ಬದುಕಲು ಬೇಕಾಗುವ ಅಮೂಲ್ಯ ವಿಚಾರ ತಿಳಿಸುವ ಕಾರ್ಯ ಇಲ್ಲಿ ನಡೆದಿದೆ. ಮಹಿಳೆಯರಿಂದ ಕೋಟಿ ಜಪಯಜ್ಞ ನಡೆದಿರುವುದು ಮತ್ತೊಂದು ವಿಶೇಷ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸೃಷ್ಟಿಯಲ್ಲಿ ಬದುಕುವ ಪ್ರತಿಯೊಂದು ಪ್ರಾಣಿಗಳು ಮತ್ತೊಂದು ಪ್ರಾಣಿ ವೈರಿಯಾಗಿವೆ. ಆದರೆ ಮನುಷ್ಯನಿಗೆ ಮಾತ್ರ ಮನುಷ್ಯನೇ ವೈರಿಯಾಗುತ್ತಿದ್ದಾನೆ. ಇದಕ್ಕೆ ಸಂಕುಚಿತ ಮನೋಭಾವವೇ ಕಾರಣವಾಗಿದ್ದು, ಧರ್ಮದ ತಳಹದಿ ಮೇಲೆ ವಿಶಾಲ ಮನೋಭಾವ ಬೆಳೆಸಿಕೊಂಡಾಗ ಶಾಂತಿ-ನೆಮ್ಮದಿ ಬದುಕು ನಿಮ್ಮದಾಗಲಿದೆ ಎಂದರು.

ಶ್ರೀಗಳಾದ ಸದಾನಂದ ಅಪ್ಪಗಳು, ರುದ್ರಮುನಿ ಶಿವಾಚಾರ್ಯರು, ಕಸ್ತೂರಿಬಾಯಿ ತಾಯಿ ಆಶೀರ್ವಚನ ನೀಡಿದರು. ಪ್ರಮುಖರಾದ ವಿಠ್ಠಲರೆಡ್ಡಿ ಮಾಲಿಪಾಟೀಲ್, ಪ್ರಭಾವತಿ ತಾಯಿ, ಮಲ್ಲಮ್ಮ ತಾಯಿ, ಬಸಮ್ಮ ತಾಯಿ, ಮೈತ್ರಾದೇವಿ, ನೀಲಮ್ಮ ತಾಯಿ, ಬಸವಂತಪ್ಪ ಲವಾರೆ, ಶಿವರಾಜ ರಾಜೋಳೆ ಉಪಸ್ಥಿತರಿದ್ದರು. ರಮೇಶ ರಾಜೋಳೆ ಸ್ವಾಗತಿಸಿ, ನಿರೂಪಿಸಿದರು.

ದಿನಾಂಕ 2-10-12 ಮಂಗಳವಾರ ವಿಜಯವಾಣಿ ದಿನಪತ್ರಿಕೆ.

Scanned by CamScanner

# ನೆಮ್ಮದಿ ಜೀವನಕ್ಕೆ ಬೇಕು ಸಂಗೀತ: ರುದ್ರಮುನಿ ಶ್ರೀ

**ಬಸವಕಲ್ಯಾಣ:** ಸಾಕಷ್ಟು ಆಸ್ತಿ-ಐಶ್ವರ್ಯ ಸಂಪಾದಿಸಿದರೂ ಜೀವನದಲ್ಲಿ ಶಾಂತಿ-ನೆಮ್ಮದಿ ಇಲ್ಲದಾಗಿದೆ. ಒತ್ತಡ ಬದುಕಿನಲ್ಲಿ ನೆಮ್ಮದಿ ಜೀವನಕ್ಕಾಗಿ ಪ್ರತಿಯೊಬ್ಬರು ಸಂಗೀತಕ್ಕೆ ಮೊರೆ ಹೋಗಬೇಕು ಎಂದು ತ್ರಿಪುರಾಂತದ ಶ್ರೀ ರುದ್ರಮುನಿ ಶಿವಾಚಾರ್ಯರು ಅಭಿಮತ ವ್ಯಕ್ತಪಡಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಯುವ ಸೌರಭ ಯೋಜನೆಯಡಿ ಪರ್ತಾಪುರದ ವಿರಭದ್ರೇಶ್ವರ ದೇವಸ್ಥಾನದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ, ಪ್ರತಿಯೊಬ್ಬರು ಸಂಗೀತಾಸಕ್ತಿ ಬೆಳೆಸಿಕೊಳ್ಳಬೇಕು ಎಂದರು. ಪ್ರಭುಲಿಂಗಯ್ಯ ಟಂಕಸಾಲಿಮಠ ಮಾತನಾಡಿ, ಮನುಷ್ಯನಿಗೆ ಬರುವ ಹಲವು ರೋಗಗಳನ್ನು ನಿವಾರಿಸುವ ಅದ್ಭುತ ಶಕ್ತಿ ಸಂಗೀತಕ್ಕಿದೆ. ಮನುಷ್ಯನಿಗಷ್ಟೇ ಅಲ್ಲದೇ ಜೀವ ಸಂಕುಲದ ಮೇಲೂ ಪರಿಣಾಮ ಬೀರುವ ಶಕ್ತಿ ಅದಕ್ಕಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಗ್ರಾಪಂ ಅಧ್ಯಕ್ಷ ಖುರ್ಷಿದ್ ಅಹ್ಮದ್, ಗ್ರಾಮದಲ್ಲಿ ಇಲಾಖೆ ಆಯೋಜಿಸಿದ ಈ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಉಪನ್ಯಾಸಕಿ ಪ್ರೊ.ಲೀಲಾ ಸನಕಳ್ಳಿ, ದೇವಸ್ಥಾನ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ಅಷ್ಟಗೆ ಮಾತನಾಡಿದರು. ಮಲ್ಲಿಕಾರ್ಜುನ ಮಠಪತಿ, ಶರಣಪ್ಪ ಮಹಾಜನ್, ಮೋನಪ್ಪ ಪಂಚಾಳ, ಮಲ್ಲಿಕಾರ್ಜುನ ಶೀಲವಂತ, ಸಂತೋಷ ಮಡಿವಾಳ, ಸವಿತಾ ಬೇಲೂರೆ ಉಪಸ್ಥಿತರಿದ್ದರು.



ಪರ್ತಾಪುರದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಶ್ರೀ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು. ಖುರ್ಷಿದ್ ಅಹ್ಮದ್, ಪ್ರಭುಲಿಂಗಯ್ಯ ಟಂಕಸಾಲಿಮಠ, ಮಲ್ಲಿಕಾರ್ಜುನ ಅಷ್ಟಗೆ, ಲೀಲಾ ಸನಕಳ್ಳಿ ಉಪಸ್ಥಿತರಿದ್ದರು.

ಅಭಿಷೇಕ ಶೀಲವಂತ ಪ್ರಾರ್ಥಿಸಿದರು. ಸುಭಾಷ ರಗಟೆ ನಿರೂಪಿಸಿದರು. ಮಹಾದೇವಪ್ಪ ಬೇಲೂರ ವಂದಿಸಿದರು. ತ್ರಿವೇಣಿ ಮಠಪತಿ ಶಾಸ್ತ್ರೀಯ ಹಾಗೂ ಸುಗಮ ಸಂಗೀತ ಗಮನಸೆಳೆಯಿತು. ರಾಜಶೇಖರ ಶೀಲವಂತ ವಚನ ಗಾಯನ, ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಕಲಾವಿದ ಗುರುಶಾಂತಯ್ಯ ಸ್ಥಾವರಮಠ ಹಾರ್ಮೋನಿಯಂ ಹಾಗೂ ಲೋಕನಾಥ ಚಾಂಗಲೇರಾ ತಬಲಾ ಸಾಥ್ ನೀಡಿದರು.

ದಿನಾಂಕ 8-10-12 ಸೋಮವಾರ ವಿಜಯವಾಣಿ ದಿನಪತ್ರಿಕೆ.

# ನುಡಿದಂತೆ ನಡೆಯುವದು ಅವಶ್ಯಕ

**ಬಸವಕಲ್ಯಾಣ:** ನುಡಿದಂತೆ ನಡೆಯಬೇಕು. ಯಾವುದನ್ನು ಹೇಳುತ್ತೇವೊ ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ವಚನ ಭ್ರಷ್ಟರಾಗಬಾರದು ಎಂದು ತ್ರಿಪುರಾಂತನ ರುದ್ರಮುನಿ ಶಿವಾಚಾರ್ಯರು ನುಡಿದರು.

ಶಿವಪುರನಲ್ಲಿ ಇಷ್ಟಲಿಂಗ ಯೋಗ ಮಂದಿರದ ಲಿಂಗವಂತ ಮಕ್ಕಳ ಉಚಿತ ವಸತಿ ಗೃಹದಲ್ಲಿ ಆಯೋಜಿಸಲಾಗಿದ್ದ ಶರಣ ಹಡಪದ ಅಪ್ಪಣ್ಣ ಹಾಗೂ ಶರಣೆ ಲಿಂಗಮ್ಮ ತಾಯಿ ಅವರ ಜಯಂತಿ ಹಾಗೂ ಇಷ್ಟಲಿಂಗ ದೀಕ್ಷೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ, ನಡೆ-ನುಡಿ ಒಂದಾಗಿರಬೇಕು ಎಂದರು.

ಕಸಾಪ ತಾಲೂಕು ಅಧ್ಯಕ್ಷ ಚಂದ್ರಕಾಂತ ಸ್ವಾಮಿ, ಉಪನ್ಯಾಸಕ ಡಾ.ಚಿತ್ರಶೇಖರ ಚಿರಳ್ಳಿ, ಪ್ರಮುಖರಾದ ಮಲ್ಲಿಕಾರ್ಜುನ ಬಿರಾದಾರ್, ಸಮಾಜ ಸಂಘಟನೆ ಅಧ್ಯಕ್ಷ ಕಾಶಿನಾಥ ಹತ್ತರಗಾ, ರಾಮಣ್ಣ ಹಡಪದ, ಬಸವರಾಜ ಕರಹರಿ, ಪಂಚಾಕ್ಷರಿ ಹಿರೇಮಠ, ದತ್ತಾತ್ರೇಯ ಮೂಲಗೆ, ಶಾಂತಕುಮಾರ, ವೀರಶೆಟ್ಟೆಪ್ಪ ಮಾತನಾಡಿದರು.

ಬಸವರಾಜ ಒಡೆಯರ್, ವೀರಪ್ಪಣ್ಣ ಬಿರಾದಾರ, ರುದ್ರೇಶ ಪಾಟೀಲ್, ದಿಗಂಬರ ಬೊಕ್ಕೆ, ಪರಮೇಶ್ವರ ಮಠಪತಿ, ಸಂತೋಷ, ಕಿರಣ ಹಳಿಜೋಳ, ವಿಜಯಕುಮಾರ, ಶ್ರೀಶೈಲ್ ಬಂಡಿ, ಪ್ರವೀಣಕುಮಾರ ಉಪಸ್ಥಿತರಿದ್ದರು.



ಬಸವಕಲ್ಯಾಣದಲ್ಲಿ ನಡೆದ ಹಡಪದ ಅಪ್ಪಣ್ಣ ಹಾಗೂ ಲಿಂಗಮ್ಮ ತಾಯಿ ಅವರ ಜಯಂತಿ ಕಾರ್ಯಕ್ರಮದಲ್ಲಿ ರುದ್ರಮುನಿ ಶಿವಾಚಾರ್ಯರು, ಬಸವರಾಜ ಪಂಡಿತ, ವೀರಪ್ಪಣ್ಣ ಬಿರಾದಾರ್ ಉಪಸ್ಥಿತರಿದ್ದರು.

ದಿನಾಂಕ 8-10-12 ಸೋಮವಾರ ವಿಜಯವಾಣಿ

# ಬಸವಜ್ಯೋತಿ ಸಂದೇಶ ಯಾತ್ರೆಗೆ ಇಂದು ಚಾಲನೆ

**ಬಸವಕಲ್ಯಾಣ:** ಹಿರೇಮಠ ಸಂಸ್ಥಾನ ಭಾಲ್ಕಿ, ಮಹಾರಾಷ್ಟ್ರ ಬಸವ ಪರಿಷತ್ ಆಶ್ರಯದಲ್ಲಿ ಬಸವ ಜಯಂತಿ ಶತಮಾನೋತ್ಸವ ನಿಮಿತ್ತ ಅಖಂಡ ಮಹಾರಾಷ್ಟ್ರದಲ್ಲಿ ಬಸವಜ್ಯೋತಿ ಸಂದೇಶ ಯಾತ್ರೆಗೆ ಬಸವ ಭೂಮಿ ಬಸವಕಲ್ಯಾಣದಿಂದ ಗುರುವಾರ ಚಾಲನೆ ನೀಡಲಾಗುತ್ತಿದೆ.

ನವೆಂಬರ್ 29ರವರೆಗೆ ಅಖಂಡ ಮಹಾರಾಷ್ಟ್ರದಲ್ಲಿ ಬಸವ ಜಯಂತಿ ಶತಮಾನೋತ್ಸವ ನಿಮಿತ್ತ ಬಸವತತ್ವ ಪ್ರಚಾರ ಹಾಗೂ ಪ್ರಸಾರಕ್ಕಾಗಿ ಭಾಲ್ಕಿಯ ಡಾ.ಬಸವಲಿಂಗ ಪಟ್ಟದ್ದೇವರ ನೇತೃತ್ವದಲ್ಲಿ ಹಮ್ಮಿಕೊಂಡಿರುವ ಯಾತ್ರೆಗೆ ನಗರದ ಬಸವೇಶ್ವರ ದೇವಸ್ಥಾನದಲ್ಲಿ ಬೆಳಗ್ಗೆ 9ಕ್ಕೆ ಹಾರಕೂಡದ ಶ್ರೀ ಚನ್ನವೀರ ಶಿವಾಚಾರ್ಯರು ಚಾಲನೆ ನೀಡುವರು. ಶ್ರೀ ಸಿದ್ದರಾಮ ಶರಣರು ಬೆಲ್ದಾಳ ಬಸವಗುರು ಪೂಜೆ ನೆರವೇರಿಸುವರು.

ಶ್ರೀಗಳಾದ ಶಿವಾನಂದ ಮಹಾಸ್ವಾಮಿ, ರಾಜೇಶ್ವರ ಶಿವಾಚಾರ್ಯರು, ಪ್ರಣವಾನಂದ ಮಹಾಸ್ವಾಮಿ, ಘನಲಿಂಗ ರುದ್ರಮುನಿ ಶಿವಾಚಾರ್ಯರು, ಸಿದ್ದರಾಮಣ್ಣ ಶರಣರು, ಮಾತೆ ಅಕ್ಕ ಅನ್ನಪೂರ್ಣ ನೇತೃತ್ವ, ಮಹಾರಾಷ್ಟ್ರ ಬಸವ ಪರಿಷತ್ ಕಾರ್ಯಾಧ್ಯಕ್ಷ ಅಮರನಾಥ ಸೋಲಪೂರೆ ಅಧ್ಯಕ್ಷತೆ ವಹಿಸುವರು.

ಡಾ.ಬಸವಲಿಂಗ ಪಟ್ಟದ್ದೇವರು ವಿರಚಿತ ಗುರು, ಲಿಂಗ, ಜಂಗಮ, ವಿಭೂತಿ ಕೃತಿಯನ್ನು ಬೆಂಗಳೂರು ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಬಿಡುಗಡೆ ಮಾಡುವರು. ದೇವಸ್ಥಾನ ಪಂಚ ಕಮಿಟಿ ಅಧ್ಯಕ್ಷ ಅನೀಲಕುಮಾರ ರಗಟೆ ಮೊದಲಾದವರು ಉಪಸ್ಥಿತರಿದ್ದರು.

ದಿನಾಂಕ 25-9-2012 ಗುರುವಾರ ವಿಜಯವಾಣಿ ದಿನಪತ್ರಿಕೆ.

Scanned by CamScanner

# ಹಡಪದ ಅಪ್ಪಣ್ಣ ಶರಣೆ ಲಿಂಗಮ್ಮ ಜಯಂತಿ

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣ ತಾಲ್ಲೂಕಿನ ಶಿವಪುರದಲ್ಲಿ ಈಚೆಗೆ ನಡೆದ ಹಡಪದ ಅಪ್ಪಣ್ಣ ಮತ್ತು ಶರಣೆ ಲಿಂಗಮ್ಮನವರ ಜಯಂತಿಯನ್ನು ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು. ಡಾ.ಬಸವರಾಜ ಪಂಡಿತ, ಚಂದ್ರಕಾಂತ ಸ್ವಾಮಿ ನಾರಾಯಣಪುರ, ಕಾಶಿನಾಥ ಹತ್ತಗಾರ್, ಪಂಚಾಕ್ಷರಿ ಹಿರೇಮಠ ಪಾಲ್ಗೊಂಡಿದ್ದರು

ಬಸವಕಲ್ಯಾಣ: ತಾಲ್ಲೂಕಿನ ಶಿವಪುರದ ಇಷ್ಟಲಿಂಗ ಯೋಗ ಮಂದಿರ ಮತ್ತು ಉಚಿತ ವಸತಿ ಶಾಲೆಯಲ್ಲಿ ಈಚೆಗೆ 12 ನೇ ಶತಮಾನದ ಪ್ರಮುಖ ಶರಣ ಹಡಪದ ಅಪ್ಪಣ್ಣ ಮತ್ತು ಶರಣೆ ಲಿಂಗಮ್ಮನವರ ಜಯಂತ್ಯುತ್ಸವ ಹಮ್ಮಿಕೊಳ್ಳಲಾಗಿತ್ತು.

ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟನೆ ನೆರವೇರಿಸಿ ಮಾತನಾಡಿ ಶರಣತತ್ವದಲ್ಲಿ ಸಾರಿರುವಂತೆ ಎಲ್ಲರೂ ನುಡಿದಂತೆ ನಡೆಯಬೇಕು. ವಚನಭ್ರಷ್ಟ ಆಗಬಾರದು ಎಂದರು. ಬೇರೆ ಕಡೆಯಿಂದ ಆಗಮಿಸಿದ ಕೆಲವರು ಶರಣರ ನಾಡಿನಲ್ಲಿ ಉತ್ತಮ ಕಾರ್ಯ ಮಾಡುತ್ತಿದ್ದಾರೆ. ಆದರೆ ಕೆಲ ಜನರು ಏನೂ ಮಾಡದಿದ್ದರೂ ತಾವೇ ಎಲ್ಲ ಮಾಡಿದ್ದೇವೆ ಎಂದು ಹೇಳುತ್ತಿರುವುದು ಸರಿಯಲ್ಲ ಎಂದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಚಂದ್ರಕಾಂತಸ್ವಾಮಿ ನಾರಾಯಣಪುರ ಮಾತನಾಡಿ ಇಷ್ಟಲಿಂಗದ ಮಹತ್ವ ತಿಳಿಸಿದರು. ಬಸವಾದಿ ಶರಣರು ವಚನಗಳನ್ನು ರಚಿಸಿ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ ಕೊಟ್ಟಿದ್ದಾರೆ ಎಂದರು.

ಡಾ.ಚಿತ್ರಶೇಖರ ಚಿರಳ್ಳಿ ಮಾತನಾಡಿ ಬಸವಣ್ಣನವರು ಕಾಯಕ ತತ್ವ ಬೋಧಿಸಿದ್ದಾರೆ. ಅಸ್ಪೃಶ್ಯತೆ ಹೊಗಲಾಡಿಸಲು ಪ್ರಯತ್ನಿಸಿದ್ದಾರೆ. ಆ ನಿಟ್ಟಿನಲ್ಲಿ ನಾವೂ ಪ್ರಯತ್ನಿಸಬೇಕು ಎಂದರು.

ಡಾ.ಬಸವರಾಜ ಪಂಡಿತ್, ಮಲ್ಲಿಕಾರ್ಜುನ ಬಿರಾದಾರ, ಹಡಪದ ಸಮಾಜದ ಅಧ್ಯಕ್ಷ ಕಾಶಿನಾಥ ಹತ್ತಗಾರ್, ನಿವೃತ್ತ ಶಿಕ್ಷಕ ಪಂಚಾಕ್ಷರಿ ಹಿರೇಮಠ, ರಾಮಣ್ಣ ಹಡಪದ, ಬಸವರಾಜ ಕರಹರಿ, ದತ್ತಾತ್ರಿ ಮೂಲಗೆ, ಶಾಂತಕುಮಾರ, ದತ್ತಾತ್ರಿ ಬಾಂದೇಕರ್, ವೀರಶೆಟ್ಟಿ, ಮಲ್ಲಶೆಟ್ಟೆಪ್ಪ ಬೇಲೂರ ಮಾತನಾಡಿದರು.

ಎಬಿವಿಪಿ ರಾಜ್ಯ ಸಮಿತಿ ಸದಸ್ಯ ರುದ್ರೇಶ ಪಾಟೀಲ, ವೀರಪಣ್ಣ ಬಿರಾದಾರ, ಬಸವರಾಜ ಒಡೆಯರ, ದಿಗಂಬರ ಬೊಕ್ಕೆ, ಪರಮೇಶ್ವರ ಮಠಪತಿ ಸಂತೋಷ ಮುಳೆ, ಕಿರಣ, ವಿಜಯಕುಮಾರ ಆಳಂದ, ಶ್ರೀಶೈಲ ಬಂಡಿ, ಪ್ರವೀಣಕುಮಾರ ಪಾಲ್ಗೊಂಡಿದ್ದರು.

ದಿನಾಂಕ 9-10-12 ಮಂಗಳವಾರ ಪ್ರಜಾವಾಣಿ ದಿನಪತ್ರಿಕೆ

# ಬಸವ ತತ್ವ ಪ್ರಚಾರಕ್ಕೆ ಚಾಲನೆ

■ ಏಕ ಸುದ್ದಿಲೋಕ ಬಸವಕಲ್ಯಾಣ



ಹಿರೇಮಠ ಸಂಸ್ಥಾನ ಭಾಲ್ಕಿ, ಮಹಾರಾಷ್ಟ್ರ ಬಸವ ಪರಿಷತ್ ಆಶ್ರಯದಲ್ಲಿ ಬಸವ ಜಯಂತಿ ಶತಮಾನೋತ್ಸವ ನಿಮಿತ್ತ ಮಹಾರಾಷ್ಟ್ರದಲ್ಲಿ ಸಂಚರಿಸುವ ಬಸವಜ್ಯೋತಿ ಸಂದೇಶ ಯಾತ್ರೆಗೆ ಬಸವಕಲ್ಯಾಣದ ಬಸವೇಶ್ವರ ದೇವಸ್ಥಾನದಲ್ಲಿ ಗುರುವಾರ ಚಾಲನೆ ನೀಡಲಾಯಿತು.

ಮಹಾರಾಷ್ಟ್ರದ ಎಲ್ಲ ಜಿಲ್ಲೆಗಳಲ್ಲಿ ಬಸವ ತತ್ವ ಪ್ರಚಾರ ಮಾಡುವುದಕ್ಕಾಗಿ ಬಸವ ಸಂದೇಶ ಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಭಾಲ್ಕಿಯ ಬಸವಲಿಂಗ ಪಟ್ಟದ್ದೇವರು ಹೇಳಿದರು.

ಇಲ್ಲಿನ ಬಸವೇಶ್ವರ ದೇವಸ್ಥಾನದಲ್ಲಿ ಗುರುವಾರ ಹಿರೇಮಠ ಸಂಸ್ಥಾನ ಭಾಲ್ಕಿ, ಮಹಾರಾಷ್ಟ್ರ ಬಸವ ಪರಿಷತ್ ಆಶ್ರಯದಲ್ಲಿ ನಡೆದ ಬಸವ ಜಯಂತಿ ಶತಮಾನೋತ್ಸವ ಸಂದೇಶ ಯಾತ್ರೆಯ ರಥಕ್ಕೆ ಚಾಲನೆ ನೀಡಿ ಮಾತನಾಡಿದರು.

ಸಮಾನತೆಯ ಉದಾತ್ತ ಭಾವನೆ ಹೊಂದಿರುವ ಶರಣ ತತ್ವ ಜಗತ್ತಿನೆಲ್ಲೆಡೆ ಹರಡುವುದು ಅವಶ್ಯಕ ಎಂದರು.

ಉದ್ಘಾಟನೆ ಮಾಡಿದ ಹಾರಕೂಡದ ಚೆನ್ನವೀರ ಶಿವಾಚಾರ್ಯರು ಮಾತನಾಡಿ, ಬಸವತತ್ವಕ್ಕಾಗಿ ಭಾಲ್ಕಿ ಮಠ ಕಂಕಣಬದ್ಧವಾಗಿದೆ. ಬಸವಲಿಂಗ ಪಟ್ಟದ್ದೇವರು ಮಹಾರಾಷ್ಟ್ರದಲ್ಲಿ ತತ್ವ ಪ್ರಸಾರಕ್ಕಾಗಿ ಯಾತ್ರೆ ಕೈಗೊಂಡಿರುವುದು ಅಭಿನಂದನಾರ್ಹ ಎಂದರು.

ಹುಲಸೂರಿನ ಶಿವಾನಂದ ಸ್ವಾಮಿ, ಅಕ್ಕ ಅನ್ನಪೂರ್ಣ ಬೀದರ್, ಮುಚಳಂಬದ ಪ್ರಣವಾನಂದ ಸ್ವಾಮಿ, ಬೆಲ್ದಾಳದ ಸಿದ್ಧರಾಮ ಶರಣರು, ತ್ರಿಪುರಾಂತದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ. ಗಂಗಾಂಬಿಕಾ ಪಾಟೀಲ, ಅರವಿಂದ ಜತ್ತಿ, ಡಾ.ಅಮರನಾಥ ಸೋಲಪುರೆ ಮಾತನಾಡಿದರು.

ಮರಾಠಿಯಲ್ಲಿ ಅನುವಾದಿಸಿದ ವಚನಗಳ ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು.

ಜಿ.ಪಂ. ಉಪಾಧ್ಯಕ್ಷೆ ಲತಾ ಶಾಂತಕುಮಾರ ಹಾರಕೂಡೆ, ಮಾಜಿ ಶಾಸಕರಾದ ಎಂ.ಜಿ.ಮುಳೆ, ಮಲ್ಲಿಕಾರ್ಜುನ ಖೂಬಾ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಆನಂದ ದೇವಪ್ಪ, ಶಿವರಾಜ ನರಶೆಟ್ಟೆ, ಕಾಶಪ್ಪ ಬಾಲಕಿಲೆ, ಶಶಿ ಕಾಂತ ದುರ್ಗೆ, ನಾಗಯ್ಯ ಸ್ವಾಮಿ ಇದ್ದರು. ಅನಿಲಕುಮಾರ ರಗಟೆ ಸ್ವಾಗತಿಸಿದರು. ಭೀಮಾಶಂಕರ ಬಿರಾದಾರ ನಿರೂಪಿಸಿದರು.

ಬಸವಣ್ಣನವರ ಅರಿವಿನ ಮನೆಯಲ್ಲಿ ಜ್ಯೋತಿ ಪ್ರಜ್ವಲಿಸಿ ತರಲಾಯಿತು. ನಂತರ ಬಸವೇಶ್ವರ ದೇವಸ್ಥಾನದಿಂದ ರಥದಲ್ಲಿಟ್ಟು ಕೊಂಡೊಯ್ಯಲಾಯಿತು.

ದಿನಾಂಕ 26-10-12 ಶುಕ್ರವಾರ ವಿಜಯವಾಣಿ



ಬಸವಕಲ್ಯಾಣ ತಾಲ್ಲೂಕಿನ ಪ್ರತಾಪುರದ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶನಿವಾರ ಸಂಜೆ ಹಮ್ಮಿಕೊಂಡ ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಸಂಗೀತಗಾರ ರಾಜಶೇಖರ ಶೀಲವಂತ ದೀಪ ಬೆಳಗಿಸಿದರು. ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯರು, ಖುರ್ಷಿದ್ ಅಹ್ಮದ್ ಖಾನ, ಲೀಲಾವತಿ ಸಂಕಳ್ಳಿ, ಪ್ರಭುಲಿಂಗಯ್ಯ ಟಂಕಸಾಲಿಮಠ ಪಾಲ್ಗೊಂಡಿದ್ದರು

# ಹೈ- ಕ ಭಾಗದವರು ಛಲಗಾರರು: ಲೀಲಾವತಿ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಹೈದರಾಬಾದ ಕರ್ನಾಟಕ ಭಾಗ ಹಿಂದುಳಿದಿದೆ ಎಂದು ಹೇಳಲಾಗುತ್ತಿದ್ದರೂ ಇಲ್ಲಿನವರು ಈಚೆಗೆ ಪ್ರತಿ ಕ್ಷೇತ್ರದಲ್ಲಿ ತಮ್ಮ ಛಲ ಪ್ರದರ್ಶಿಸುತ್ತಿದ್ದಾರೆ. ಆದರೆ ಇವರ ಛಲಕ್ಕೆ ಬೆಲೆ ಬರುತ್ತಿಲ್ಲ ಅಷ್ಟೇ ಎಂದು ಇಲ್ಲಿನ ಎಸ್‌ಎಸ್‌ಕೆಬಿ ಕಾಲೇಜಿನ ಉಪನ್ಯಾಸಕಿ ಲೀಲಾವತಿ ಸಂಕಳ್ಳಿ ನುಡಿದರು.

ತಾಲ್ಲೂಕಿನ ಪ್ರತಾಪುರ ಗ್ರಾಮದ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶನಿವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ಹಮ್ಮಿಕೊಂಡ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಾತನಾಡಿದರು.

ಈ ನೆಲದಲ್ಲಿ ಉತ್ತಮ ಕವಿ, ಕಲಾವಿದರು, ಹಾಡುಗಾರರು ಇದ್ದಾರೆ. ಅವರ ಪ್ರತಿಭೆಯನ್ನು ನಾವೆಲ್ಲ ಬೆಳಕಿಗೆ ತರಬೇಕಾಗಿದೆ ಎಂದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಖುರ್ಷಿದ್ ಅಹ್ಮದ್ ಖಾನ್ ಮಾತನಾಡಿ ಇಂಥ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪಂಚಾಯಿತಿಯಿಂದ ಸಹಾಯ ಕೊಡಲಾಗುವುದು ಎಂದು ತಿಳಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ ಮಾತನಾಡಿ ಯುವ ಗಾಯಕರಿಗೆ ಗ್ರಾಮೀಣ ಭಾಗದಲ್ಲಿ ತಮ್ಮ ಪ್ರತಿಭೆ ಪ್ರದರ್ಶನಕ್ಕೆ ಸರ್ಕಾರ ಅವಕಾಶ ಕೊಡಬೇಕು ಎಂದರು.

ನೇತೃತ್ವ ವಹಿಸಿದ್ದ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಸಂಗೀತ ಮನುಷ್ಯನಿಗೆ ಅಷ್ಟೇ ಅಲ್ಲ; ಸಸ್ಯಗಳಿಗೂ ಇಷ್ಟವಾಗುತ್ತದೆ. ಅವೂ ಸಂಗೀತಕ್ಕೆ ತಲೆಯಾಡಿಸಿ ಆನಂದಿಸುತ್ತವೆ ಎಂದರು. ಪಂಚಾಯಿತಿ ಮಾಜಿ ಅಧ್ಯಕ್ಷ ಮಹಾದೇವ ಲಾಂಡಗೆ ಮಾತನಾಡಿದರು.

ದೇವಸ್ಥಾನ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ಅಪ್ಪಗೆ ಉಪಸ್ಥಿತರಿದ್ದರು. ಗುರುಕುಮಾರೇಶ್ವರ ಸಂಗೀತ ವಿದ್ಯಾಲಯದ ಮುಖ್ಯಸ್ಥ ರಾಜಶೇಖರ ಶಿಲವಂತ, ತ್ರಿವೇಣಿ ಮಠಪತಿ,, ಅಭಿಷೇಕ ಶೀಲವಂತ ಅವರು ವಚನ, ಮೀರಾ ಭಜನೆ, ಸುಗಮ ಸಂಗೀತ, ಭಾವಗೀತೆ ಹಾಡಿ ಮನರಂಜಿಸಿದರು.

ಗುರುಶಾಂತಯ್ಯ ಸ್ಥಾವರಮಠ ಹಾರ್ಮೋನಿಯಂ ಸಾಥ ನೀಡಿದರೆ ಲೋಕನಾಥ ತಬಲಾ ಸಾಥ ಕೊಟ್ಟರು. ಗಣಪತಿ ಕಾಸ್ತೆ ಸ್ವಾಗತಿಸಿದರು. ಸುಭಾಷ ರಗಟೆ ನಿರೂಪಿಸಿದರು. ಮಹಾದೇವಪ್ಪ ಬೇಲೂರೆ ವಂದಿಸಿದರು.

ದಿನಾಂಕ 8-10-12 ಸೋಮವಾರ ಪ್ರಜಾವಾಣಿ ದಿನಪತ್ರಿಕೆ

Scanned by CamScanner

# 'ಬಸವ ಸಂದೇಶ ಯಾತ್ರೆ' ಆರಂಭ

**ಪ್ರಜಾವಾಣಿ ವಾರ್ತೆ**

ಬಸವಕಲ್ಯಾಣ: ಬಸವಣ್ಣನವರ ಜಯಂತ್ಯುತ್ಸವದ ಶತಮಾನೋತ್ಸವ ಅಂಗವಾಗಿ ಭಾಲ್ಕಿ ಹಿರೇಮಠ ಸಂಸ್ಥಾನ ಮತ್ತು ಮಹಾರಾಷ್ಟ್ರ ಬಸವ ಪರಿಷತ್ ವತಿಯಿಂದ ಹಮ್ಮಿಕೊಂಡ 'ಬಸವ ಸಂದೇಶ ಯಾತ್ರೆ'ಯ ರಥಕ್ಕೆ ಗುರುವಾರ ಇಲ್ಲಿ ಚಾಲನೆ ಕೊಡಲಾಯಿತು.

ಇಲ್ಲಿನ ಬಸವಣ್ಣನವರ ಅರಿವಿನ ಮನೆಯಲ್ಲಿ ಬೆಳಿಗ್ಗೆ ಪೂಜೆ ಸಲ್ಲಿಸಿ ಜ್ಯೋತಿ ಹೊತ್ತಿಸಿಕೊಳ್ಳಲಾಯಿತು. ನಂತರ ಬಸವೇಶ್ವರ ದೇವಸ್ಥಾನದವರೆಗೆ ತೆಗೆದು ಕೊಂಡು ಬರಲಾಯಿತು.

ಇಲ್ಲಿ ಬಿದರಿ ಕಲೆಯಂತೆ ಕುಸುರಿ ಕೆಲಸ ಮಾಡಿ ಐಕ್ಯ ಮಂಟಪದ ಆಕಾರದಲ್ಲಿ ಆಕರ್ಷಕವಾಗಿ ನಿರ್ಮಿಸಿದ ಮಂಟಪವಿರುವ ರಥದಲ್ಲಿ ಅದನ್ನು ಇಡಲಾಯಿತು.

ಯಾತ್ರೆ ನವೆಂಬರ್ 29ರ ವರೆಗೆ ಮಹಾರಾಷ್ಟ್ರದ 36 ಜಿಲ್ಲೆಗಳಲ್ಲಿ ಸಂಚರಿಸಲಿದೆ. ರಥದ ಜತೆಗೆ ಸಂಚಾರಿ ಪುಸ್ತಕಾಲಯವೂ ಇದ್ದು ಅದರಲ್ಲಿ ಶರಣರ ಗ್ರಂಥಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಯಾತ್ರೆ ತೆರಳಿದ ಸ್ಥಳಗಳಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆ, ಬಹಿರಂಗ ಸಭೆ, ಚರ್ಚೆ ನಡೆಸಲಾಗುತ್ತದೆ. ವಚನ ಸಾಹಿತ್ಯದ ಗ್ರಂಥ, ಸಿ.ಡಿ. ಮಾರಾಟ ಮಾಡಲಾಗುತ್ತದೆ. ಇಲ್ಲಿಂದ ಆರಂಭಗೊಂಡ ಯಾತ್ರೆ ಪ್ರಥಮವಾಗಿ ಲಾತೂರ್‌ಗೆ ತಲುಪಲಿದೆ.



ಬಸವಕಲ್ಯಾಣದಲ್ಲಿ ಗುರುವಾರ ಮಹಾರಾಷ್ಟ್ರದಲ್ಲಿ ಬಸವತತ್ವ ಪ್ರಚಾರಕ್ಕಾಗಿ ಹೊರಟಿರುವ ರಥಕ್ಕೆ ಚಾಲನೆ ಕೊಡಲಾಯಿತು. ಭಾಲ್ಕಿ ಬಸವಲಿಂಗ ಪಟ್ಟದ್ದೇವರು, ಅಕ್ಕ ಅನ್ನಪೂರ್ಣ, ಬೆಲ್ದಾಳ ಸಿದ್ಧರಾಮ ಶರಣರು, ಹುಲಸೂರ ಶಿವಾನಂದ ಸ್ವಾಮೀಜಿ, ಮುಚಳಂಬ ಪ್ರಣವಾನಂದ ಸ್ವಾಮೀಜಿ ಪಾಲ್ಗೊಂಡಿದ್ದರು

ಹಾರಕೂಡ ಚೆನ್ನವೀರ ಶಿವಾಚಾರ್ಯರು ಕಾರ್ಯಕ್ರಮ ಉದ್ಘಾಟಿಸಿದರು. ಬೀದರ್ ಬಸವಸೇವಾ ಪ್ರತಿಷ್ಠಾನದ ಅಕ್ಕ ಅನ್ನಪೂರ್ಣ ರಥಕ್ಕೆ ಪೂಜೆ ಸಲ್ಲಿಸಿದರು. ಭಾಲ್ಕಿ ಬಸವಲಿಂಗ ಪಟ್ಟದ್ದೇವರು, ಬೆಲ್ದಾಳ ಸಿದ್ಧರಾಮ ಶರಣರು, ಹುಲಸೂರ ಶಿವಾನಂದ ಸ್ವಾಮೀಜಿ, ಮುಚಳಂಬ ಪ್ರಣವಾನಂದ ಸ್ವಾಮೀಜಿ, ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯರು, ಗುರುಬಸವ ದೇವರು, ಅರವಿಂದ ಜತ್ತಿ, ಡಾ.ಅಮರನಾಥ ಸೊಲಪುರೆ, ಡಾ.ಗಂಗಾಂಬಿಕಾ ಪಾಟೀಲ, ದೇವಸ್ಥಾನ ಸಮಿತಿ ಅಧ್ಯಕ್ಷ ಅನಿಲಕುಮಾರ ರಗಟೆ, ವೀರಶೈವ ಮಹಾಸಭೆ ಅಧ್ಯಕ್ಷ ಶಶಿಕಾಂತ ದುರ್ಗೆ ಪಾಲ್ಗೊಂಡಿದ್ದರು.

ದಿನಾಂಕ 26-9-2012 ಗುರುವಾರ ಪ್ರಜಾವಾಣಿ ದಿನಪತ್ರಿಕೆ.

# 'ಮಹಾರಾಷ್ಟ್ರದಲ್ಲಿ 1 ಕೋಟಿ ಬಸವಭಕ್ತರು'

**ಪ್ರಜಾವಾಣಿ ವಾರ್ತೆ**

ಬಸವಕಲ್ಯಾಣ: ಮಹಾರಾಷ್ಟ್ರದಲ್ಲಿ 1 ಕೋಟಿಗಿಂತಲೂ ಹೆಚ್ಚಿನ ಬಸವ ಭಕ್ತರಿದ್ದಾರೆ ಎಂದು ಮಹಾರಾಷ್ಟ್ರ ಬಸವ ಪರಿಷತ್‌ನ ಅಧ್ಯಕ್ಷ ಡಾ.ಅಮರನಾಥ ಸೊಲಪುರೆ ತಿಳಿಸಿದರು.

ಇಲ್ಲಿನ ಬಸವೇಶ್ವರ ದೇವಸ್ಥಾನದಲ್ಲಿ ಗುರುವಾರ ಹಮ್ಮಿಕೊಂಡ ಬಸವಣ್ಣನವರ ಜಯಂತ್ಯುತ್ಸವದ ಶತಮಾನೋತ್ಸವ ಅಂಗವಾಗಿ ಭಾಲ್ಕಿ ಹಿರೇಮಠ ಸಂಸ್ಥಾನ ವತಿಯಿಂದ ಹಮ್ಮಿಕೊಂಡ ಮಹಾರಾಷ್ಟ್ರದಲ್ಲಿ ಸಂಚರಿಸಲಿರುವ 'ಬಸವ ಸಂದೇಶ ಯಾತ್ರೆ'ಯ ರಥಕ್ಕೆ ಚಾಲನೆ ಕೊಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಹಾರಾಷ್ಟ್ರದಲ್ಲಿ ಈಗಾಗಲೇ 7 ಬಸವತತ್ವ ಅಧಿವೇಶನಗಳನ್ನು ನಡೆಸಲಾಗಿದ್ದು, ಅಲ್ಲಿ ಬಸವ ಭಕ್ತರು ಸಾಕಷ್ಟು ಸಂಖ್ಯೆಯಲ್ಲಿದ್ದರೂ ಶರಣತತ್ವ ಸರಿಯಾಗಿ ತಿಳಿದುಕೊಂಡಿಲ್ಲ. ಆದ್ದರಿಂದ ಈ ಯಾತ್ರೆ ಹಮ್ಮಿಕೊಳ್ಳಲಾಗಿದೆ. ಅಲ್ಲಿನ 36 ಜಿಲ್ಲಾ ಕೇಂದ್ರಗಳಲ್ಲಿ ಸಮಾರಂಭ ನಡೆಸಲಾಗುತ್ತದೆ ಎಂದರು.



ಬಸವಕಲ್ಯಾಣದಲ್ಲಿ ಗುರುವಾರ ನಡೆದ ಮಹಾರಾಷ್ಟ್ರದಲ್ಲಿ ಬಸವತತ್ವ ಪ್ರಚಾರಕ್ಕಾಗಿ ಹೊರಟಿರುವ ರಥಕ್ಕೆ ಚಾಲನೆ ಕೊಡುವ ಸಮಾರಂಭದಲ್ಲಿ ಹಾರಕೂಡ ಚೆನ್ನವೀರ ಶಿವಾಚಾರ್ಯರು ಮಾತನಾಡಿದರು. ಭಾಲ್ಕಿ ಬಸವಲಿಂಗ ಪಟ್ಟದ್ದೇವರು, ಅಕ್ಕ ಅನ್ನಪೂರ್ಣ, ಬೆಲ್ದಾಳ ಸಿದ್ಧರಾಮ ಶರಣರು, ಹುಲಸೂರ ಶಿವಾನಂದ ಸ್ವಾಮೀಜಿ, ಮುಚಳಂಬ ಪ್ರಣವಾನಂದ ಸ್ವಾಮೀಜಿ ಪಾಲ್ಗೊಂಡಿದ್ದರು

ಉದ್ಘಾಟನೆ ನೆರವೇರಿಸಿದ ಹಾರಕೂಡ ಚೆನ್ನವೀರ ಶಿವಾಚಾರ್ಯರು ಮಾತನಾಡಿ ಭಾಲ್ಕಿ ಮಠದಿಂದ ಶರಣ ತತ್ವ ಪ್ರಸಾರಕ್ಕಾಗಿ ಯಾತ್ರೆ ಹಮ್ಮಿಕೊಂಡಿರುವುದು 'ಮಾದರಿ ಕಾರ್ಯವಾಗಿದೆ ಎಂದರು.

ಹುಲಸೂರ ಶಿವಾನಂದ ಸ್ವಾಮೀಜಿ ಸಹ ಈಚೆಗೆ ತತ್ವ ಪ್ರಚಾರಕ್ಕಾಗಿ 9 ಸಾವಿರ ಕಿ.ಮೀ. ಪಾದಯಾತ್ರೆ ನಡೆಸಿದ್ದಾರೆ ಎಂದು ನೆನಪಿಸಿಕೊಂಡರು.

ಭಾಲ್ಕಿ ಬಸವಲಿಂಗ ಪಟ್ಟದ್ದೇವರು, ಬೀದರ ಬಸವಸೇವಾ ಪ್ರತಿಷ್ಠಾನದ ಅಕ್ಕ ಅನ್ನಪೂರ್ಣ, ಬೆಲ್ದಾಳ ಸಿದ್ಧರಾಮ ಶರಣರು, ಹುಲಸೂರ ಶಿವಾನಂದ ಸ್ವಾಮೀಜಿ, ಮುಚಳಂಬ ಪ್ರಣವಾನಂದ ಸ್ವಾಮೀಜಿ, ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯರು. ಅರವಿಂದ ಜತ್ತಿ ಮಾತನಾಡಿದರು. ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷೆ ಲತಾ ಹಾರಕೂಡೆ ಭಾವಚಿತ್ರದ ಪೂಜೆ ನೆರವೇರಿಸಿದರು.

ಡಾ.ಗಂಗಾಂಬಿಕಾ ಪಾಟೀಲ, ಗುರುಬಸವ ದೇವರು, ಮಾಜಿ ಶಾಸಕರಾದ ಎಂ.ಜಿ.ಮುಳೆ, ಮಲ್ಲಿಕಾರ್ಜುನ ಖೂಬಾ, ಮುಖಂಡರಾದ ಧನರಾಜ ತಾಳಂಪಳ್ಳಿ, ಶಿವರಾಜ ನರಶೆಟ್ಟಿ, ಆನಂದ ದೇವಪ್ಪ, ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕಾಶಪ್ಪ ಬಾಲಿಕಿಲೆ, ವೀರಶೈವ ಮಹಾಸಭೆ ತಾಲ್ಲೂಕು ಅಧ್ಯಕ್ಷ ಶಶಿಕಾಂತ ದುರ್ಗೆ, ಬಸವರಾಜ ಕಾಮಶೆಟ್ಟಿ, ನಾಗಯ್ಯ ಸ್ವಾಮಿ, ಕಾಶಪ್ಪ ಸಕ್ಕರಬಾವಿ, ಮಲ್ಲಿಕಾರ್ಜುನ ನಾಗರಾಳೆ, ವಿಜಯಲಕ್ಷ್ಮಿ ಗಡ್ಡೆ ಮುಂತಾದವರು ಉಪಸ್ಥಿತರಿದ್ದರು. ದೇವಸ್ಥಾನ ಸಮಿತಿ ಅಧ್ಯಕ್ಷ ಅನಿಲಕುಮಾರ ರಗಟೆ ಸ್ವಾಗತಿಸಿದರು. ಭೀಮಾಶಂಕರ ಬಿರದಾರ ನಿರೂಪಿಸಿದರು.

ದಿನಾಂಕ 26-9-2012 ಗುರುವಾರ ಪ್ರಜಾವಾಣಿ ದಿನಪತ್ರಿಕೆ

Scanned by CamScanner

■ ಡಾ.ಬಸವಲಿಂಗ ಪಟ್ಟದ್ದೇವರ ನೇತೃತ್ವದಲ್ಲಿ ಅಖಂಡ ಮಹಾರಾಷ್ಟ್ರದಲ್ಲಿ ಸಂಚಾ

# ಬಸವ ಭೂಮಿಯಿಂದ ಬಸವ ಜ್ಯೋತಿ ಸ

**ಬಸವಕಲ್ಯಾಣ:** ಭಾಲ್ಕಿ ಹಿರೇಮಠ ಸಂಸ್ಥಾನ ಸಂಚಾಲಿತ ಮಹಾರಾಷ್ಟ್ರ ಬಸವ ಪರಿಷತ್ ಸಹಯೋಗದೊಂದಿಗೆ ಬಸವ ಜಯಂತಿ ಆಚರಣೆ ಶತಮಾನೋತ್ಸವ ನಿಮಿತ್ತ ಭಾಲ್ಕಿಯ ಡಾ.ಬಸವಲಿಂಗ ಪಟ್ಟದ್ದೇವರ ನೇತೃತ್ವದಲ್ಲಿ ಒಂದು ತಿಂಗಳ ಬಸವ ಜ್ಯೋತಿ ಸಂದೇಶ ರಥ ಯಾತ್ರೆ ಗುರುವಾರ ಆರಂಭವಾಯಿತು.

ಬಸವಣ್ಣನವರ ಕರ್ಮಭೂಮಿ ನಗರದಿಂದ ಶುರುವಾಗಿ ನ.29ರವರೆಗೆ ಮಹಾರಾಷ್ಟ್ರದ 36 ಜಿಲ್ಲೆಗಳಲ್ಲಿ ಸಂಚರಿಸಲಿರುವ ಯಾತ್ರೆಗೆ ಅರವಿನ ಮನೆಯಲ್ಲಿ ಜೈಘೋಷಗಳ ಮಧ್ಯೆ ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಲಾಯಿತು.

ಜ್ಯೋತಿ ಬೆಳಗಿಸಿ ಆಶೀರ್ವಚನ ನೀಡಿದ ಹಾರಕೂಡದ ಶ್ರೀ ಚನ್ನವೀರ ಶಿವಾಚಾರ್ಯರು, ಬಸವ ತತ್ವವನ್ನು ನಾಡಿಗೆ ಪರಿಚಯಿಸುವ ಕೆಲಸವನ್ನು ಲಿಂಗೈಕ್ಯ ಡಾ.ಚನ್ನಬಸವ ಪಟ್ಟದ್ದೇವರು ಮಾಡಿದ್ದಾರೆ. ಅದೇ ದಾರಿಯಲ್ಲಿ ಸಾಗಿರುವ ಡಾ.ಬಸವಲಿಂಗ ಪಟ್ಟದ್ದೇವರು ಬಸವ ತತ್ವ ಪ್ರಚಾರ-ಪ್ರಸಾರದ ಆಶೋತ್ತರಗಳೊಂದಿಗೆ ಯಾತ್ರೆ ಆರಂಭಿಸಿದ್ದಾರೆ ಎಂದರು.

ಬಸವ ಜ್ಯೋತಿ ಸಾಮಾನ್ಯವಾದುದಲ್ಲ. ಇದು ಸೂರ್ಯ-ಚಂದ್ರ ಇರುವವರೆಗೆ ಬೆಳಗುವ ಶಾಶ್ವತ ಜ್ಯೋತಿಯಾಗಿದೆ. ಮನುಕುಲಕ್ಕೆ ಬೆಳಕು ನೀಡುವ ಜ್ಯೋತಿಯಾಗಿದೆ. ಪರಿಶುದ್ಧ ಮನಸ್ಸಿನಿಂದ ಮಾಡುವ ಕೆಲಸ ಯಶಸ್ವಿಯಾಗುತ್ತದೆ. ಭಾಲ್ಕಿ ಶ್ರೀಗಳ ಯಾತ್ರೆ ಯಶಸ್ವಿಯಾಗಿ ಬಸವ ಜ್ಯೋತಿಯ ಬೆಳಕು ಎಲ್ಲೆಡೆ ಬೆಳಗಲಿ ಎಂದು ಸದಾಶಯ ವ್ಯಕ್ತಪಡಿಸಿದರು.

ನೇತೃತ್ವ ವಹಿಸಿದ್ದ ಕೌಠಾದ ಶ್ರೀ ಸಿದ್ದರಾಮ ಶರಣರು ಬೆಲ್ದಾಳ, ಅರಿವಿನ ಮನೆ ಪ್ರಪಂಚಕ್ಕೆ ಅರಿವು ನೀಡಿದ ಪವಿತ್ರ ಸ್ಥಳ. ಇಲ್ಲಿಂದ ಯಾತ್ರೆ ಆರಂಭಿಸುವ ಮೂಲಕ ಭಾಲ್ಕಿ ಪಟ್ಟದ್ದೇವರು ಜನರ ಮನದಲ್ಲಿ ಅಜ್ಞಾನವನ್ನು ಕಳೆದು ಅರಿವಿನ ಜ್ಯೋತಿ ಹೊತ್ತಿಸಲು ಹೊರಟಿರುವುದು ಮಹತ್ತರ ಕಾರ್ಯ ಎಂದು ಶ್ಲಾಘಿಸಿದರು.



ಡಾ.ಬಸವಲಿಂಗ ಪಟ್ಟದ್ದೇವರ ನೇತೃತ್ವದ ಬಸವ ಜ್ಯೋತಿ ಸಂದೇಶ ರಥ ಯಾತ್ರೆ ಸಮಾರಂಭವನ್ನು ಶ್ರೀ ಚನ್ನವೀರ ಶಿವಾಚಾರ್ಯರು ಬಸವಕಲ್ಯಾಣದಲ್ಲಿ ಉದ್ಘಾಟಿಸಿದರು. ಶ್ರೀಗಳಾದ ಶಿವಾನಂದ ಸ್ವಾಮೀಜಿ, ಪ್ರಣವಾನಂದ ಸ್ವಾಮೀಜಿ, ತ್ರಿಪುರಾಂತ ಸ್ವಾಮೀಜಿ, ಅರವಿಂದ ಜತ್ತಿ, ಅಕ್ಕ ಅನ್ನಪೂರ್ಣ, ಅನೀಲಕುಮಾರ ರಗಟೆ, ಲತಾ ಶಾಂತಕುಮಾರ, ಡಾ.ಗಂಗಾಂಬಿಕಾ ಪಾಟೀಲ್ ಇದ್ದರು.

ಕೃತಿಗಳನ್ನು ಬಿಡುಗಡೆ ಮಾಡಿದ ಬೆಂಗಳೂರು ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ, ಅಖಂಡ ಮಹಾರಾಷ್ಟ್ರದಲ್ಲಿ ಸಂಚರಿಸಲಿರುವ ಯಾತ್ರೆ ಭಾಲ್ಕಿ ಶ್ರೀಗಳ ಅದ್ಭುತ ಕಲ್ಪನೆ. ಬಸವ ತತ್ವ ಲಿಂಗಾಯತರಿಗೆ ಮಾತ್ರ ಸೀಮಿತವಲ್ಲ. ಅದು ಮನುಕುಲದ ತತ್ವ. ಮಹಾರಾಷ್ಟ್ರದಲ್ಲಿ ಪ್ರತಿಯೊಬ್ಬರು ಬಸವ ಭಕ್ತರಾಗಬೇಕು ಎಂದು ಶುಭ ಹಾರೈಸಿದರು.

ಸಾನ್ನಿಧ್ಯ ವಹಿಸಿದ್ದ ಡಾ.ಬಸವಲಿಂಗ ಪಟ್ಟದ್ದೇವರು, ಬಸವ ಜ್ಯೋತಿ ಸಂದೇಶ ಯಾತ್ರೆಯ ಉದ್ದೇಶ ತಿಳಿಸಿದರು. 15 ಲಕ್ಷ ಮೌಲ್ಯದ ಪುಸ್ತಕಗಳನ್ನು ಒಳಗೊಂಡ ವಾಹನದೊಂದಿಗೆ ಹೊರಟಿರುವ ಯಾತ್ರೆಯಲ್ಲಿ ನಾಟಕ-ರೂಪಕಗಳ ಮೂಲಕ ಬಸವ ತತ್ವ ಪ್ರಚಾರ-ಪ್ರಸಾರ ಮಾಡಲಾಗುವುದು ಎಂದರು.

ಅಧ್ಯಕ್ಷತೆ ವಹಿಸಿದ್ದ ಮಹಾರಾಷ್ಟ್ರ ಬಸವ ಪರಿಷತ್ ಕಾರ್ಯಾಧ್ಯಕ್ಷ ಡಾ.ಅಮರನಾಥ ಸೋಲಪೂರೆ, ಸಮ್ಮುಖ ವಹಿಸಿದ್ದ ಹುಲಸೂರಿನ ಶ್ರೀ ಶಿವಾನಂದ ಮಹಾಸ್ವಾಮಿ, ಮುಚಳಂಬದ ಶ್ರೀ ಪ್ರಣವಾನಂದ ಮಹಾಸ್ವಾಮಿ, ಬೀದರ್‌ನ ಅಕ್ಕ ಅನ್ನಪೂರ್ಣ, ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ ಯಾತ್ರೆಗೆ ಶುಭ ಹಾರೈಸಿದರು.

ಬಸವ ಸೇವಾ ಪ್ರತಿಷ್ಠಾನದ ಡಾ.ಗಂಗಾಂಬಿಕಾ ಪಾಟೀಲ್, ಶ್ರೀ ಶಿವಕುಮಾರ ದೇವರು, ಶಂಕರಲಿಂಗ ಸ್ವಾಮೀಜಿ, ಗುರುಬಸವ ಸ್ವಾಮೀಜಿ, ಮಾಜಿ ಶಾಸಕರಾದ ಎಂ.ಜಿ.ಮುಳೆ, ಮಲ್ಲಿಕಾರ್ಜುನ ಖೂಬಾ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕಾಶಪ್ಪ ಬಾಲಕಿಲೆ, ವೀರಶೈವ ಮಹಾಸಭೆ ಅಧ್ಯಕ್ಷ ಶಶಿಕಾಂತ ದುರ್ಗೆ, ಬಿಇಟಿ ಉಪಾಧ್ಯಕ್ಷ ದಿಲೀಪಕುಮಾರ ತಾಳಂಪಳ್ಳಿ, ಜಿಪಂ ಉಪಾಧ್ಯಕ್ಷೆ ಲತಾ ಶಾಂತಕುಮಾರ, ಪ್ರಮುಖರಾದ ಆನಂದ ದೇವಪ್ಪ, ಶಿವರಾಜ ನರಶೆಟ್ಟಿ, ನಾಗಯ್ಯ ಸ್ವಾಮಿ, ಸುಭಾಷ ಹೊಳಕುಂದೆ, ಮಲ್ಲಿಕಾರ್ಜುನ ಚಿರಡೆ, ಮಲ್ಲಿಕಾರ್ಜುನ ಕುರಕೋಟೆ, ಕಾಶಪ್ಪ ಬಾಲಕಿಲೆ, ಪ್ರೊ.ವಿಜಯಲಕ್ಷ್ಮೀ ಗಡ್ಡೆ ಭಾಗವಹಿಸಿದ್ದರು.

ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ ಅಧ್ಯಕ್ಷ ಅನೀಲಕುಮಾರ ರಗಟೆ ಸ್ವಾಗತಿಸಿದರು. ಭೀಮಾಶಂಕರ ಬಿರಾದಾರ ನಿರೂಪಿಸಿದರು.

ದಿನಾಂಕ 26-9-2012 ಬುಧವಾರ ಉದಯವಾಣಿ ದಿನಪತ್ರಿಕೆ.

# ನೆಮ್ಮದಿ ಬದುಕಿಗೆ ಸಂಗೀತ ಅವಶ್ಯ

ಬಸವಕಲ್ಯಾಣ : ಜೀವನದಲ್ಲಿ ಶಾಂತಿ ನೆಮ್ಮದಿ ಬದುಕಿಗಾಗಿ ಪ್ರತಿಯೊಬ್ಬರು ಸಂಗೀತಕ್ಕೆ ಮೊರೆಹೋಗಲೇಬೇಕು ಎಂದು ತ್ರಿಪುರಾಂತದ ಘನಲಿಂಗ ರುದ್ರಮುನಿ ಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಯುವ ಸೌರಭ ಯೋಜನೆ ಅಡಿಯಲ್ಲಿ ತಾಲೂಕಿನ ಪರತಾಪೂರ ಗ್ರಾಮದ ವೀರಭದ್ರೇಶ್ವರ ದೇವಸ್ಥಾನದಲ್ಲಿ ನಡೆದ ಸಂಗೀತ ಕಾರ್ಯಕ್ರಮ ಉದ್ಘಾಟಿ ಮಾತನಾಡಿದ ಅವರು ಜೀವನದಲ್ಲಿ ಶಾಂತಿ ನೆಮ್ಮದಿ ಪಡೆಯಲು ಪ್ರಿಯೊಬ್ಬರು ಸಮಗೀತ ಕಲೆಯಬೇಕು ಎಂದು ತಿಳಿಸಿದ ಶ್ರೀಗಳು ಕಲೆ, ಸಾಹಿತ್ಯ, ಕಲಾವಿದರನ್ನು ಪ್ರೋತ್ಸಾಹಿಸಬೇಕೆಂದು

ರುದ್ರಮುನಿ ಶಿವಾಚಾರ್ಯರು ಕರೆ ನೀಡಿದರು.

ಶ್ರೀ ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರಭುಲಿಂಗಯ್ಯ ಟಂಕಸಾಲೀಮಠ ಮಾತನಾಡಿ ಸಂಗೀತದಿಂದ ಅನೇಕ ಮಾನಸೀಕ ರೋಗಗಳು ದೂರವಾಗುತ್ತವೆ ಎಂದರು. ಅಧ್ಯಕ್ಷತೆ ವಹಿಸಿದ ಗ್ರಾಮ ಪಂಚಾಯತ ಅಧ್ಯಕ್ಷ ಖುರುಸಿದ್ದ ಅಹಮದ್ ಮಾತನಾಡಿ ಹಳ್ಳಿಗಳಲ್ಲಿ ಭಜನೆ ಕೀರ್ತನೆ ಮಾಡುವ ಸಂಧರ್ಭಗಳಲ್ಲಿ ರಾಗ ಬದ್ದವಾಗಿ ಸಂಗಿತವನ್ನು ಹಾಡುವದು ಕಲಿಯಬೇಕು ಎಂದರು.ಕನ್ನಡ ಮತ್ತು ಸಂಸ್ಕೃತ ಇಲಾಖೆಯಿಂದ ಗಡಿಗ್ರಾಮವಾದ ಪರತಾಪೂರದಲ್ಲಿ ಇಂತಹ ಕಾರ್ಯಕ್ರಮ ಹಮ್ಮಿಕೊಂಡಿದ್ದು ಸ್ವಾಗತಾರ್ಹವಾಗಿದೆ ಎಂದರು. ಎಸ್ ಎಸ್ ಕೆ ಬಿ ಕಾಲೇಜಿನ ಹಿಂದಿ ಉಪನ್ಯಾಸಕಿಯಾದ ಪ್ರೋ ಲೀಲಾ ಸನಕಳ್ಳಿ ದೇವಸ್ಥಾನ ಸಮೀತ ಅಧ್ಯಕ್ಷ ಮಲ್ಲಿಕಾರ್ಜುನ ಅಷ್ಟಗೆ ಮುಂತಾದವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಮಲ್ಲಿಕಾರ್ಜುನ ಮಠಪತಿ, ಶರಣಪ್ಪಾ ಮಾಹಾಜನ್, ಮೊನಪ್ಪ ಪಂಚಾಳ, ಮಲ್ಲಿಕಾರ್ಜುನ ಶೀಲವಂತ, ಸಂತೋಷ ಮಡಿವಾಳ ಶ್ರೀಮತಿ ಸವಿತಾ ಬಸವರಾಜ ಬೇಲೂರೆ, ಉಪಸ್ಥಿತರಿದ್ದರು. ಸುಭಾಷ ರಗಟೆ ನಿರೂಪಿಸಿದರು ಮಾಹಾದೇವಪ್ಪ ಬೇಲೂರೆ ವಂದಿಸಿದರು. ಅಭಿಷೇಕ ಶೀಲವಂತ ಪ್ರಾರ್ಥಿಸಿದರು.

ದಿನಾಂಕ 14-10-12 ರವಿವಾರ
ಉತ್ತರಂಗ ಸುದ್ದಿ ದಿನಪತ್ರಿಕೆ

Scanned by CamScanner



ಬಸವ ಜ್ಯೋತಿ ಸಂದೇಶ ರಥಯಾತ್ರೆಗೆ ಬಸವಕಲ್ಯಾಣದಲ್ಲಿ ಚಾಲನೆ ನೀಡಲಾಯಿತು.

## ಶರಣು ಶರಣಾರ್ಥಿ ಶಬ್ದಕ್ಕೆ ಚೈತನ್ಯ ತುಂಬುವ ಶಕ್ತಿ ಇದೆ

**ಬಸವಕಲ್ಯಾಣ:** ಶರಣು-ಶರಣಾರ್ಥಿ ಶಬ್ದಕ್ಕೆ ಜೀವ ಚೈತನ್ಯ ತುಂಬುವ ಅದ್ಭುತ ಶಕ್ತಿ ಇದೆ ಎಂದು ಬೀದರ್ ಬಸವ ಸೇವಾ ಪ್ರತಿಷ್ಠಾನದ ಪೂಜ್ಯ ಅಕ್ಕ ಅನ್ನಪೂರ್ಣ ನುಡಿದರು. ಜ್ಯೋತಿ ಯಾತ್ರೆಯು ಮಹಾರಾಷ್ಟ್ರದ ಮನೆ-ಮನಗಳಲ್ಲಿ ಬೆಳಗಲಿ, ಅಲ್ಲಿ ಬಸವ ಮಹಾಮನೆ ನಿರ್ಮಾಣವಾಗಲಿ ಎಂದು ಆಶಯ ವ್ಯಕ್ತಪಡಿಸಿದರು. ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಮಾತನಾಡಿ, ಶರಣು-ಶರಣಾರ್ಥಿ ಪದವನ್ನು ಬಸವ ಭೂಮಿಯಲ್ಲಿ ನಾವು ಎಷ್ಟರ ಮಟ್ಟಿಗೆ ಪಾಲನೆ ಮಾಡುತ್ತಿದ್ದೇವೆ ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ ಎಂದರು. ಡಾ.ಅಮರನಾಥ ಸೋಲಪೂರೆ ಮಾತನಾಡಿ, ಭಾಲ್ಕಿ ಶ್ರೀಗಳ ಯಾತ್ರೆ ಮಹಾತ್ಮ ಗಾಂಧೀಜಿ ನಡೆಸಿದ ದಂಡಿ ಯಾತ್ರೆಯನ್ನು ನೆನಪಿಗೆ ತರುತ್ತಿದೆ ಎಂದರು.



ಬಸವಕಲ್ಯಾಣದ ಅರಿವಿನ ಮನೆಯಲ್ಲಿ ರಥ ಯಾತ್ರೆಯ ಜ್ಯೋತಿ ಬೆಳಗಿಸಲಾಯಿತು. ಭಾಲ್ಕಿ ಶ್ರೀ, ಶಿವಾನಂದ ಶ್ರೀ, ಪ್ರಣವಾನಂದ ಶ್ರೀ, ಅರವಿಂದ ಜತ್ತಿ, ತ್ರಿಪುರಾಂತ ಶ್ರೀ, ಅಕ್ಕ ಅನ್ನಪೂರ್ಣ, ಅನೀಲಕುಮಾರ ರಗಟೆ, ಆನಂದ ದೇವಪ್ಪ ಚಂದ್ರಕಾಂತ ಸ್ವಾಮಿ, ಪ್ರಭುಲಿಂಗಯ್ಯ ಟಂಕಸಾಲಿಮಠ ಇದ್ದರು.

## ಕನ್ನಡವೆಂದರೆ ಬಸವಣ್ಣ

**ಬಸವಕಲ್ಯಾಣ:** ಕನ್ನಡವೆಂದರೆ ಬಸವಣ್ಣ, ಬಸವಣ್ಣನೆಂದರೆ ಕನ್ನಡ. ಬಸವ ತತ್ವ ಪ್ರಚಾರ ಮಾಡುವಲ್ಲಿ ಮಹತ್ವದ ಕೊಡುಗೆ ನೀಡುತ್ತಿರುವ ಭಾಲ್ಕಿ ಮಠವನ್ನು ಕನ್ನಡದ ಮಠ ಎಂದೇ ಗುರುತಿಸಲಾಗುತ್ತದೆ ಎಂದು ಹುಲಸೂರಿನ ಶ್ರೀ ಶಿವಾನಂದ ಮಹಾಸ್ವಾಮಿ ನುಡಿದರು. ವಚನ ಸಾಹಿತ್ಯದ ಮೇಲೆ ನಡೆದಷ್ಟು ಗಧಾಪ್ರಹಾರ ವಿಶ್ವದ ಬೇರೆ ಯಾವುದೇ ಸಾಹಿತ್ಯದ ಮೇಲೆ ನಡೆದಿಲ್ಲ ಎಂದ ಶ್ರೀಗಳು, ಕೆಲವರು ವಚನಗಳಿಗೆ ಕಲಬೆರಕೆ ಮಾಡಿದರೆ, ಮತ್ತೆ ಕೆಲವರು ವಚನಾಂಕಿತ ತಿರುಚುತ್ತಾರೆ ಎಂದು ಖೇದ ವ್ಯಕ್ತಪಡಿಸಿದರು. ಮುಚಳಂಬದ ಶ್ರೀ ಪ್ರಣವಾನಂದ ಮಹಾಸ್ವಾಮಿ ಮಾತನಾಡಿ, ಎಲ್ಲೆಡೆ ಕವಿದಿರುವ ಅಜ್ಞಾನ ಮತ್ತು ಭ್ರಷ್ಟಾಚಾರದ ಕತ್ತಲೆಯನ್ನು ನಾಶ ಮಾಡುವ ಶಕ್ತಿ ಬಸವತತ್ತ್ವಕ್ಕೆ ಇದೆ. ತತ್ವ ಪ್ರಚಾರ-ಪ್ರಸಾರಕ್ಕಾಗಿ ನಡೆಯುತ್ತಿರುವ ಬಸವಜ್ಯೋತಿ ಯಾತ್ರೆ ಎಲ್ಲಡೆ ಅರಿವಿನ ಬೆಳಕು ಮೂಡಿಸಲಿ ಎಂದು ಹಾರೈಸಿದರು. ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ಅರಿವಿನ ಮನೆಯಿಂದ ಬೆಳಗಿಸಿರುವ ಜ್ಯೋತಿ ಯಾತ್ರೆ ಜನ ಮನದಲ್ಲಿ ಅರಿವು ಮೂಡಿಸಲಿ ಎಂದರು.

ದಿನಾಂಕ 26-9-12 [illegible]

# ವೃತ್ತಿ ಕೌಶಲ್ಯ ಹೆಚ್ಚಳಕ್ಕೆ ಬೋಧನಾ ವಿಧಾನದಲ್ಲಿ ಬದಲಾವಣೆ ಬೇಕು

**ಬಸವಕಲ್ಯಾಣ:** ವೃತ್ತಿ ಕೌಶಲ್ಯ ಹೆಚ್ಚಳಕ್ಕೆ ಬೋಧನಾ ವಿಧಾನದಲ್ಲಿ ಬದಲಾವಣೆ ಅವಶ್ಯಕವಾಗಿದೆ ಎಂದು ಕನ್ನಡ ಭಾಷಾ ಬೋಧಕರ ವೇದಿಕೆ ಜಿಲ್ಲಾ ಅಧ್ಯಕ್ಷ, ವಿಷಯ ಪರೀವಿಕ್ಷಕ ಟಿ.ಆರ್.ದೊಡ್ಡೆ ಅಭಿಮತ ವ್ಯಕ್ತಪಡಿಸಿದರು.

ತ್ರಿಪುರಾಂತನ ಪುಣ್ಯಕೋಟಿ ಪದವಿ ಪೂರ್ವ ಕಾಲೇಜಿನಲ್ಲಿ ಕನ್ನಡ ಭಾಷಾ ಬೋಧಕರ ತಾಲೂಕು ವೇದಿಕೆ ಉದ್ಘಾಟಿಸಿ ಮಾತನಾಡಿ, ಬೋಧನಾ ವಿಧಾನದಲ್ಲಿ ಬದಲಾವಣೆ ತರುವುದಕ್ಕಾಗಿಯೇ ವೇದಿಕೆ ರಚಿಸಲಾಗಿದೆ ಎಂದರು.

ತ್ರಿಪುರಾಂತನ ರುದ್ರಮುನಿ ಶಿವಾಚಾರ್ಯರರು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ಕನ್ನಡವು ಕೇವಲ ಭಾಷೆಯಷ್ಟೇ ಅಲ್ಲ, ಇದು ಸಂಸ್ಕೃತಿ. ಕನ್ನಡ ಉಳಿಸಿ-ಬೆಳೆಸುವಲ್ಲಿ ಪ್ರತಿಯೊಬ್ಬರಿಗೂ ಅಭಿಮಾನ ಮತ್ತು ಕಾಳಜಿ ಇರಬೇಕಾದದ್ದು ಅತ್ಯಾವಶ್ಯಕ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಗಂಗಣ್ಣ ಸ್ವಾಮಿ ಮಾತನಾಡಿ, ಪರಿಣಾಮಕಾರಿ ಬೋಧನೆಗೆ ಬೋಧನಾ ಕೌಶಲ್ಯ ಅವಶ್ಯಕವಾಗಿದ್ದು, ಕನ್ನಡ ಭಾಷಾ ಬೆಳವಣಿಗೆಗಳಿಗೆ ಪೂರಕ ವಾಗುವಂತಹ ಎಲ್ಲ ಕಾರ್ಯ ಚಟುವಟಿಕೆಗಳಿಗೆ ಸಹಕರಿಸುವದಾಗಿ ತಿಳಿಸಿದರು.

ಪ್ರಾಚಾರ್ಯ ಪ್ರೊ. ಸೂರ್ಯಕಾಂತ ಶೀಲವಂತ ಅಧ್ಯಕ್ಷತೆ ವಹಿಸಿದ್ದರು. ಕವಡಿಯಾಳ(ಆರ್) ಸರ್ಕಾರಿ ಪ್ರೌಢಶಾಲೆ ಮುಖ್ಯಗುರು ವಿಶ್ವನಾಥ ಬಿರಾದಾರ, ಬಾಬುರಾವ ರಾಜೋಳೆ ವಿಶೇಷ ಉಪನ್ಯಾಸ ನೀಡಿದರು.

ಪ್ರತಿಭಾ ಮಿಂಚ್, ಸಂಜುಕುಮಾರ ನಡುಕರ್, ವಿ.ಎಸ್.ಮಠ್, ನಿಂಗಪ್ಪ ಕಾಂಬಳೆ, ನೀಲಕಂಠ ಇಸ್ಲಾಂಪುರ, ಗೌರಿಬಾಯಿ ಅಗರವಾಲ್, ತಾಲೂಕಿನ ಸರ್ಕಾರಿ, ಅನುದಾನಿತ, ಅನುದಾನ ರಹಿತ ಪ್ರೌಢ ಶಾಲೆಗಳ ಕನ್ನಡ ಭಾಷಾ ಶಿಕ್ಷಕರು ಭಾಗವಹಿಸಿದ್ದರು.

ಶಿವಲಿಂಗ ಪ್ರಾಸ್ತಾವಿಕ ಮಾತನಾಡಿದರು. ಸುಭಾಷ ಪಾಟೀಲ್ ಸ್ವಾಗತಿಸಿದರು. ರಮೇಶ ರಾಜೋಳೆ ನಿರೂಪಿಸಿದರು. ರವೀಂದ್ರ ಬಿರಾದಾರ್ ವಂದಿಸಿದರು.

**ಪದಾಧಿಕಾರಿಗಳು:** ಕನ್ನಡ ಭಾಷಾ ಬೋಧಕರ ವೇದಿಕೆ ತಾಲೂಕು ಘಟಕದ ಅಧ್ಯಕ್ಷರಾಗಿ ರಮೇಶ ರಾಜೋಳೆ, ಗೌರವಾಧ್ಯಕ್ಷರಾಗಿ ವಿಶ್ವನಾಥ ಬಿರಾದಾರ್ ಅವರರನ್ನು ಆಯ್ಕೆ ಮಾಡಲಾಯಿತು.



ಬಸವಕಲ್ಯಾಣದ ಪುಣ್ಯಕೋಟಿ ಕಾಲೇಜಿನಲ್ಲಿ ನಡೆದ ಕನ್ನಡ ಭಾಷಾ ಬೋಧಕರ ವೇದಿಕೆ ಉದ್ಘಾಟನೆ ಹಾಗೂ ಭಾಷಾ ಉತ್ತೇಜಕ ಕಾರ್ಯಕ್ರಮದಲ್ಲಿ ರುದ್ರಮುನಿ ಶಿವಾಚಾರ್ಯರು, ಟಿ.ಆರ್.ದೊಡ್ಡೆ, ಗಂಗಣ್ಣ ಸ್ವಾಮಿ, ಸೂರ್ಯಕಾಂತ ಶೀಲವಂತ ಉಪಸ್ಥಿತರಿದ್ದರು.

ದಿನಾಂಕ 7-11-12 ಬುಧವಾರ [illegible]

Scanned by CamScanner

■ ನಾರಾಯಣಪೂರ ವಲಯ ಕನ್ನಡ ಸಾಹಿತ್ಯ ಸಮ್ಮೇಳನ...

# ಗಡಿಯಲ್ಲಿ ಕನ್ನಡಾಭಿಮಾನ ಮೂಡಿಸುವ ಕಾರ್ಯ ನಡೆಯಲಿ

**ಬಸವಕಲ್ಯಾಣ:** ರಾಜ್ಯದ ಗಡಿ ಭಾಗದಲ್ಲಿ ಕನ್ನಡಾಭಿಮಾನ ಮೂಡಿಸಿ, ಕನ್ನಡಮಯ ವಾತಾವರಣ ನಿರ್ಮಿಸಬೇಕಾದ ಅವಶ್ಯಕತೆ ಇದೆ ಎಂದು ತ್ರಿಪುರಾಂತನ ರುದ್ರಮುನಿ ಶಿವಾಚಾರ್ಯರು ನುಡಿದರು.

ತಾಲೂಕಿನ ನಾರಾಯಣಪುರ ಗ್ರಾಮದಲ್ಲಿ ನಡೆದ ದ್ವಿತೀಯ ವಲಯ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ನೇತೃತ್ವ ವಹಿಸಿ ಆಶೀರ್ವಚನ ನೀಡಿ, ಕನ್ನಡವನ್ನು ಉಳಿಸಿ-ಬೆಳೆಸಬೇಕಾದ ಜವಾಬ್ದಾರಿ ಎಲ್ಲರ ಮೇಲೂ ಇದೆ ಎಂದರು.

ಜಿಪಂ ಸದಸ್ಯ ಸಂಜು ಕಾಳೇಕರ್ ಮಾತನಾಡಿ, ಕನ್ನಡ ನೆಲದಲ್ಲಿ ವಾಸಿಸುವ ಪ್ರತಿಯೊಬ್ಬರು ಕನ್ನಡ, ನಾಡು-ನುಡಿ, ಸಂಸ್ಕೃತಿಯ ಬಗ್ಗೆ ಅಭಿಮಾನವನ್ನು ಬೆಳೆಸಿಕೊಳ್ಳಬೇಕು ಎಂದರು.

ರಾಜೇಶ್ವರ ಶ್ರೀಗಳು ಆಶೀರ್ವಚನ ನೀಡಿ, ಗ್ರಾಮೀಣ ಪ್ರದೇಶ ಸಾಹಿತ್ಯ ಸಂಸ್ಕೃತಿ ಬಿಂಬಿಸುವಲ್ಲಿ ಇಂಥ ವಲಯ ಸಮ್ಮೇಳನಗಳು ಸಹಕಾರಿಯಾಗುತ್ತವೆ ಎಂದರು.

ಸಮ್ಮೇಳನದ ಸರ್ವಾಧ್ಯಕ್ಷ ವೆಂಕಟರೆಡ್ಡಿ ರಾಮರೆಡ್ಡಿ ಅಧ್ಯಕ್ಷೀಯ ಭಾಷಣ ಮಾಡಿದರು. ಉಪನ್ಯಾಸಕ ದೇವೇಂದ್ರ ಮಂಠಾಳಕರ್, ಮಲ್ಲರೆಡ್ಡಿ ಯಡಮಲ್ಲೆ, ರಾಜಕುಮಾರ ಬಿರಾದಾರ್, ವೀರಣ್ಣ ಶೀಲವಂತ, ರಾಜರೆಡ್ಡಿ ಪಾಟೀಲ್, ಕಸಾಪ ವಲಯ ಅಧ್ಯಕ್ಷ ಪ್ರಲ್ಹಾದರೆಡ್ಡಿ ಶೇರಿಕಾರ ಉಪಸ್ಥಿತರಿದ್ದರು.

ಕಸಾಪ ತಾಲೂಕು ಘಟಕದ ಅಧ್ಯಕ್ಷ ಚಂದ್ರಕಾಂತ ಸ್ವಾಮಿ ಸ್ವಾಗತಿಸಿದರು. ಸಂದೀಪ ಬಿರಾದಾರ್ ವಂದಿಸಿದರು. ರಮೇಶ ರಾಜೋಳೆ ನಿರೂಪಿಸಿದರು.

**ಗೋಷ್ಠಿ:** ಮಧ್ಯಾಹ್ನ ನಡೆದ ಗೋಷ್ಠಿಯಲ್ಲಿ ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಗುಂಡಪ್ಪ ಮಡಕೆ ಮಾತನಾಡಿ, ತಾಲೂಕಿನ ಗಡಿ ಭಾಗದಲ್ಲಿರುವ ಕನ್ನಡದ ಶಾಲೆಗಳಿಗೆ ಮೂಲ ಸೌಕರ್ಯ ಕಲ್ಪಿಸಬೇಕು ಎಂದರು. ಡಾ.ರವೀಂದ್ರನಾಥ ಅಧ್ಯಕ್ಷತೆ ವಹಿಸಿ ಮಾತನಾಡಿ, ನಾರಾಯಣಪುರ ಇತಿಹಾಸ ಮತ್ತು ಶಿಲ್ಪ ಕಲೆ ವೈಭವ ಬಿಚ್ಚಿಟ್ಟರು.

ಪ್ರಮುಖರಾದ ಶ್ರೀಕಾಂತ ಬಿರಾದಾರ್, ಚಂದ್ರಕಾಂತ ಕಿವಡೆ ಉಪಸ್ಥಿತರಿದ್ದರು. ವಿಶ್ವನಾಥ ಬನ್ನೂಡೆ ಸ್ವಾಗತಿಸಿದರು. ನಾಗಪ್ಪ ನಿಣ್ಣೆ ವಂದಿಸಿದರು. ಚಂದ್ರಕಾಂತ ಜೋಕಾರೆ ನಿರೂಪಿಸಿದರು.

**ಕವಿ ಗೋಷ್ಠಿ:** ನೀಲಾಂಬಿಕಾ ಕಾಲೇಜ್ ಪ್ರಾಚಾರ್ಯ ಎಂ.ಕೆ.ಗಾದಗೆ ಅಧ್ಯಕ್ಷತೆಯಲ್ಲಿ ನಡೆದ ಕವಿ ಗೋಷ್ಠಿಯಲ್ಲಿ ಉಪನ್ಯಾಸಕರಾದ ನರಸಿಂಗರೆಡ್ಡಿ ಗದಲೇಗಾಂವ, ಮಲ್ಲಿಕಾರ್ಜುನ ಕಾಡಾದಿ ಉಪಸ್ಥಿತರಿದ್ದರು. ವೀರಶೆಟ್ಟಿ ಪಾಟೀಲ್, ಅಶೋಕ ಎಂ.ಬಿ, ಬಿ.ಡಿ.ಜವರೇಗೌಡ, ದೇವೇಂದ್ರ ಬರಗಾಲೆ ಹಾಗೂ ಇತರರು ಕವನ ವಾಚನ ಮಾಡಿದರು.




ನಾರಾಯಣಪುರ ವಲಯ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ತ್ರಿಪುರಾಂತ ಶ್ರೀ, ಸಂಜು ಕಾಳೇಕರ್, ವೆಂಕಟರೆಡ್ಡಿ ದೇವೇಂದ್ರ, ರಾಜಕುಮಾರ ಉಪಸ್ಥಿತರಿದ್ದರು.

ದಿನಾಂಕ 12-11-2012 ಸೋಮವಾರ ಉದಯವಾಣಿ ದಿನಪತ್ರಿಕೆ.



ಬಸವಕಲ್ಯಾಣ ತಾಲೂಕಿನ ನಾರಾಯಣಪೂರದಲ್ಲಿ ನಡೆದ ವಲಯ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಪಿಎಸ್ಐ ಉಮೇಶ ಅವರನ್ನು ಸನ್ಮಾನಿಸಲಾಯಿತು, ತ್ರಿಪುರಾಂತ ಶ್ರೀ, ರಾಜೇಶ್ವರ ಶ್ರೀ, ಸಂಜು ಕಾಳೇಕರ್, ವೆಂಕಟರೆಡ್ಡಿ, ರಾಜಕುಮಾರ ಬಿರಾದಾರ, ಕೃಷ್ಣಾರೆಡ್ಡಿ, ಪ್ರಲ್ಹಾದ ರೆಡ್ಡಿ, ಚಂದ್ರಕಾಂತ ಸ್ವಾಮಿ ಉಪಸ್ಥಿತರಿದ್ದರು.

ದಿನಾಂಕ 12-11-2012 ಬುಧವಾರ ಉದಯವಾಣಿ

# ಶ್ರೀಗಳ ಪಟ್ಟಾಧಿಕಾರ ಯಶಸ್ಸಿಗೆ ಸಹಕಾರ ಕೋರಿಕೆ

**ಹುಮನಾಬಾದ್:** ನ.22ರಂದು ನಡೆಯಲಿರುವ ಹಿರೇಮಠ ಸಂಸ್ಥಾನದ ಶ್ರೀ ಗಂಗಾಧರ ಸ್ವಾಮೀಜಿಯ ಗುರು ಪಟ್ಟಾಧಿಕಾರ ಮಹೋತ್ಸವ ಹಾಗೂ ಧರ್ಮ ಸಮ್ಮೇಳನ ಯಶಸ್ವಿಗೆ ಭಕ್ತರು ಸಹಕರಿಸಬೇಕು ಎಂದು ಸ್ವಾಗತ ಸಮಿತಿ ಅಧ್ಯಕ್ಷರಾದ ಶಾಸಕ ರಾಜಶೇಖರ ಪಾಟೀಲ್ ಮನವಿ ಮಾಡಿದರು.

ಸಂಸ್ಥಾನದಲ್ಲಿ ಶುಕ್ರವಾರ ನಡೆದ ಜಗದ್ಗುರು ರೇಣುಕಾ ವಿಜಯ ಪುರಾಣಕ್ಕೆ ಚಾಲನೆ ನೀಡಿದ ಅವರು, ಹಲವಾರು ವರ್ಷಗಳಿಂದ ಪಟ್ಟಾಧಿಕಾರ ಇಲ್ಲದೆ ಹಿರೇಮಠ ತನ್ನ ಕಳೆ ಕಳೆದುಕೊಂಡಿತ್ತು. ವಿಳಂಬವಾದರೂ ಈಗ ಮಠದ ಪೀಠಕ್ಕೆ ವಿದ್ವಾಂಸರಾದ ಶ್ರೀ ಗಂಗಾಧರ ಸ್ವಾಮೀಜಿ ಪಟ್ಟಾಧಿಕಾರಕ್ಕೆ ಒಪ್ಪಿರುವುದು ಭಕ್ತರಿಗೆ ಸಂತಸ ತಂದಿದೆ. ಇದರಿಂದ ಮಠದಲ್ಲಿ ನಿರಂತರ ಧಾರ್ಮಿಕ ಕಾರ್ಯಗಳಿಂದ ಜನರಿಗೆ ಸನ್ಮಾರ್ಗದ ಜ್ಞಾನ ದೊರೆಯಲಿದೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಷ ಕಲ್ಲೂರ ಮಾತನಾಡಿ, ಕ್ಷಣಿಕ ಸುಖಕ್ಕಾಗಿ ಮನುಷ್ಯ ತನ್ನ ಸುಖ ಶಾಂತಿ ಕಳೆದುಕೊಳ್ಳುತ್ತಿದ್ದಾನೆ. ಹೀಗಾಗಿ ಪ್ರತಿಯೊಬ್ಬರು ಧಾರ್ಮಿಕ ತಳಹದಿಯಲ್ಲಿ ನಡೆಯುವ ಮೂಲಕ ಜೀವನದಲ್ಲಿ ಶಾಂತಿ, ನೆಮ್ಮದಿ ಕಂಡುಕೊಳ್ಳಬೇಕು ಎಂದರು.

ಮುಖಂಡ ಪರಮೇಶ್ವರ್ ಆರ್ಯ ಪ್ರಾಸ್ತಾವಿಕ ಮಾತನಾಡಿದರು. ಬಸವಕಲ್ಯಾಣದ ಶ್ರೀ ಅಭಿನವ ಘನ ರುದ್ರಮುನಿ ಸ್ವಾಮೀಜಿ, ಶ್ರೀ ರಾಜೇಶ್ವರ ಘನಲಿಂಗ ರುದ್ರ ಮುನಿ ಸ್ವಾಮೀಜಿ, ಜಿಪಂ ಸದಸ್ಯ ವೀರಣ್ಣ ಪಾಟೀಲ್, ಜಂಗಮ ಸಮಾಜದ ರಾಜ್ಯಾಧ್ಯಕ್ಷ ರಾಚಯ್ಯ ಸ್ವಾಮಿ, ಪ್ರಭಯ್ಯ ಶಾಸ್ತ್ರಿ ಉಪಸ್ಥಿತರಿದ್ದರು. ಮಲ್ಲಿಕಾರ್ಜುನ ಮಾಶೆಟ್ಟೆ ಸ್ವಾಗತಿಸಿದರು. ಮಲ್ಲಿಕಾರ್ಜುನ ಸೀಗಿ ವಂದಿಸಿದರು.



ಹುಮನಾಬಾದ್ ಹಿರೇಮಠದ ಶ್ರೀ ಗಂಗಾಧರ ಸ್ವಾಮೀಜಿ ಪಟ್ಟಾಧಿಕಾರ ಮಹೋತ್ಸವ ನಿಮಿತ್ತ ಶುಕ್ರವಾರ ರೇಣುಕಾವಿಜಯ ಪುರಾಣಕ್ಕೆ ಶಾಸಕ ರಾಜಶೇಖರ ಪಾಟೀಲ್ ಚಾಲನೆ ನೀಡಿದರು. ಮಾಜಿ ಶಾಸಕ ಸುಭಾಷ ಕಲ್ಲೂರ, ಜಿಪಂ ಸದಸ್ಯ ವೀರಣ್ಣ ಪಾಟೀಲ್ ಇತರರಿದ್ದರು.

ದಿನಾಂಕ 18-11-12 ರವಿವಾರ ಉದಯವಾಣಿ

Scanned by CamScanner

■ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ಬಸವಕಲ್ಯಾಣ ತಾಲೂಕು ಘಟಕ ಉದ್ಘಾಟನೆ...

# ಸರ್ವರಿಗೆ ಬೆಳಕು ತೋರಿದ ವೀರಶೈವ ಧರ್ಮ ಸಂಸ್ಕೃತಿ ಬೆಳೆಯಲಿ



ಬಸವಕಲ್ಯಾಣದಲ್ಲಿ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕ ಮತ್ತು ಧರ್ಮೋತ್ತೇಜನ ಸಮಾರಂಭವನ್ನು ಮಾಜಿ ಸಚಿವ ಭೀಮಣ್ಣ ಖಂಡ್ರೆ ಉದ್ಘಾಟಿಸಿದರು. ರಂಭಾಪುರಿ ಜಗದ್ಗುರುಗಳು ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.



ಸಮಾರಂಭದಲ್ಲಿ ಭಾಗವಹಿಸಲು ಆಗಮಿಸಿದ ರಂಭಾಪುರಿ ಜಗದ್ಗುರುಗಳನ್ನು ಮೆರವಣಿಗೆ ಮೂಲಕ ಕರೆ ತರಲಾಯಿತು.

**ಬಸವಕಲ್ಯಾಣ:** ವೀರಶೈವ ಧರ್ಮದ ಆದರ್ಶ ಸಂಸ್ಕೃತಿ ನಾಡಿನ ಜನತೆಗೆ ಮನವರಿಕೆ ಮಾಡಿಕೊಡಬೇಕಾದ ಅಗತ್ಯವಿದೆ ಎಂದು ಬಾಳೆಹೊನ್ನೂರಿನ ಶ್ರೀಮದ್ ರಂಭಾಪುರಿ ಜಗದ್ಗುರು ಡಾ.ಪ್ರಸನ್ನರೇಣುಕ ವೀರಸೋಮೇಶ್ವರ ಭಗವತ್ಪಾದರು ನುಡಿದರು.

ನಗರದ ಶ್ರೀ ಸದ್ಗುರು ಸದಾನಂದ ಸ್ವಾಮಿ ಮಠದ ಪರಿಸರದಲ್ಲಿ ಬುಧವಾರ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕ ಉದಾದ್ಘಾಟನೆ ಮತ್ತು ಧರ್ಮೋತ್ತೇಜನ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿದ್ದ ಜಗದ್ಗುರುಗಳು, ಎಲ್ಲರ ಬಾಳಿಗೆ ಬೆಳಕನ್ನು ನೀಡಿದ ವೀರಶೈವ ಧರ್ಮ ಸಂಸ್ಕೃತಿ ಬೆಳೆಸುವುದೇ ಸಂಸ್ಥೆಯ ಉದ್ದೇಶ ಎಂದರು.

ವೀರಶೈವ ಧರ್ಮ ಅತ್ಯಂತ ಪ್ರಾಚೀನ ಮತ್ತು ಪವಿತ್ರವಾದುದು. ಇದಕ್ಕೆ 5000 ವರ್ಷಗಳ ಇತಿಹಾಸವಿದ್ದು, ಯಾವಾಗಲೂ ಸಮಷ್ಠಿ ಪ್ರಜ್ಞೆಯನ್ನು ಹೊಂದಿದೆ. ಆದರೆ ವೈಚಾರಿಕ ಯುಗದಲ್ಲಿ ಪ್ರಾಚೀನ ವಿಚಾರ ಮರೆಯುತ್ತಿರುವುದು ಸರಿಯಲ್ಲ, ಸತ್ಯವನ್ನು ಅಲ್ಲಗಳೆಯಲು ಆಗದು ಎಂದು ನುಡಿದರು.

ಗೊತ್ತು ಗುರಿ ಇಲ್ಲದ ಜನರ ಸ್ವಾರ್ಥ ಮತ್ತು ಸಂಕುಚಿತ ಭಾವನೆಯಿಂದಾಗಿ ಆಂತರಿಕ ನೋವುಗಳನ್ನು ಧರ್ಮ ಅನುಭವಿಸಬೇಕಾಗುತ್ತಿದೆ. ಆದ್ದರಿಂದ ವೀರಶೈವ ಬಾಂಧವರಿಗೆ ಈ ಉತ್ಕೃಷ್ಟ ಸಂಸ್ಕೃತಿ ಮತ್ತು ಇದರ ಪರಿಪಾಲನೆಯ ಅರಿವು ಮೂಡಿಸುವ ಉದ್ದೇಶದಿಂದ ವೀರಶೈವ ಸದ್ಬೋಧನ ಸಂಸ್ಥೆ ಜನ್ಮ ತಾಳಿದೆ ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಅಖಿಲ ಭಾರತ ವೀರಶೈವ ಮಹಾಸಭೆ ಮಾಜಿ ಅಧ್ಯಕ್ಷ ಭೀಮಣ್ಣ ಖಂಡ್ರೆ, ಶೈಕ್ಷಣಿಕವಾಗಿ ದೇಶ ಪ್ರಗತಿ ಸಾಧಿಸುತ್ತಿದ್ದರೂ ಧಾರ್ಮಿಕ ಮತ್ತು ನೈತಿಕತೆಯ ಶಿಕ್ಷಣದ ಕೊರತೆಯಿಂದಾಗಿ ಸಂಸ್ಕೃತಿ ಹಾಳಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ದಾರಿ ತಪ್ಪುತ್ತಿರುವ ವ್ಯವಸ್ಥೆಯನ್ನು ಸರಿಪಡಿಸಲು ಧರ್ಮ ಮಾರ್ಗ ಹಾಗೂ ಧರ್ಮ ಗುರುಗಳಿಂದ ಮಾತ್ರ ಸಾಧ್ಯ. ಈ ಕೆಲಸವನ್ನು ರಂಭಾಪುರಿ ಜಗದ್ಗುರುಗಳು ಉತ್ತಮ ರೀತಿಯಿಂದ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ನೇತೃತ್ವ ವಹಿಸಿದ್ದ ಶ್ರೀ ರುದ್ರಮುನಿ ಶಿವಾಚಾರ್ಯರು, ಶ್ರೀ ರಾಜೇಶ್ವರ ಶಿವಾಚಾರ್ಯರು ಆಶೀರ್ವಚನ ನೀಡಿದರು. ಶ್ರೀ ಜೈ ಶಾಂತಲಿಂಗ ಸ್ವಾಮಿ, ಶ್ರೀ ವೀರುಪಾಕ್ಷ ಶಿವಾಚಾರ್ಯರು, ಶ್ರೀ ಸಿದ್ಧಲಿಂಗ ಶಿವಾಚಾರ್ಯರು, ಶ್ರೀ ಹಾವಗಿಲಿಂಗೇಶ್ವರ ಶಿವಾಚಾರ್ಯರು ಸಮ್ಮುಖ ವಹಿಸಿದ್ದರು. ಸೋಮಶಂಕರ ಮಠ ಉಪನ್ಯಾಸ ನೀಡಿದರು.

ಮಾಜಿ ಶಾಸಕ ಎಂ.ಜಿ.ಮುಳೆ, ಪ್ರಮುಖರಾದ ಡಾ.ನಾಗೇಂದ್ರ ಮಸೂತಿ, ಗುಂಡುರೆಡ್ಡಿ, ಆನಂದ ದೇವಪ್ಪ, ಶಿವರಾಜ ನರಶೆಟ್ಟಿ, ಬಾಬುರಾವ ಬಿರಾದಾರ್ ಉಪಸ್ಥಿತರಿದ್ದರು. ವೀರಣ್ಣ ಶೀಲವಂತ ಸ್ವಾಗತಿಸಿದರು. ಪ್ರೊ.ಸೂರ್ಯಕಾಂತ ಶೀಲವಂತ ಪ್ರಾಸ್ತಾವಿಕ ಮಾತನಾಡಿದರು. ರಮೇಶ ರಾಜೋಳೆ ನಿರೂಪಿಸಿದರು.

ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸ್ವಾಗತ ಸಮಿತಿ ಕಾರ್ಯಾಧ್ಯಕ್ಷ ಸುನೀಲ ಪಾಟೀಲ್, ಮಾಣಿಕಪ್ಪ ಬಿರಾದಾರ, ಮಲ್ಲಯ್ಯ ಸ್ವಾಮಿ, ಚಂದ್ರಕಾಂತ ಸ್ವಾಮಿ, ಬಸವಂತಪ್ಪ ಲವಾರೆ, ಪ್ರಭುಲಿಂಗಯ್ಯ ಟಂಕಸಾಲಿಮಠ, ಮಲ್ಲಿಕಾರ್ಜುನ ನಂದಿ, ರೇವಣಸಿದ್ಧಯ್ಯ ಮಠಪತಿ, ಸುಭಾಷ ಕನಾಡೆ ಮೊದಲಾದವರನ್ನು ಸತ್ಕರಿಸಿ ಗುರು ರಕ್ಷೆ ನೀಡಲಾಯಿತು.

ಇದಕ್ಕೂ ಮುನ್ನ ನಗರಕ್ಕೆ ಆಗಮಿಸಿದ ಶ್ರೀಮದ್ ರಂಭಾಪುರಿ ಜಗದ್ಗುರುಗಳನ್ನು ಅಂಬೇಡ್ಕರ್ ವೃತ್ತದ ಬಳಿ ಸ್ವಾಗತಿಸಿ ಸದಾನಂದ ಸ್ವಾಮಿ ಮಠದವರೆಗೆ ಮೆರವಣಿಗೆ ಮೂಲಕ ಬರಮಾಡಿಕೊಳ್ಳಲಾಯಿತು. ತಾಳ-ಮೇಳ ವಾದ್ಯಗಳೊಂದಿಗೆ ನಡೆದ ಮೆರವಣಿಗೆಯಲ್ಲಿ ಸಂಸ್ಥೆ ಪದಾಧಿಕಾರಿಗಳು, ಪ್ರಮುಖರು, ಭಕ್ತರು ಭಾಗವಹಿಸಿದ್ದರು.

ದಿನಾಂಕ 22-11-2012 ಗುರುವಾರ ವಿಜಯವಾಣಿ ದಿನಪತ್ರಿಕೆ.

## ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ಉದ್ಘಾಟನೆ 21ಕ್ಕೆ

**ಬಸವಕಲ್ಯಾಣ:** ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕ ಉದ್ಘಾಟನೆ ಮತ್ತು ಶ್ರೀಮದ್ ರಂಭಾಪುರಿ ಜಗದ್ಗುರುಗಳ ಧರ್ಮೋತ್ತೇಜನ ಸಮಾರಂಭ ನ.21ರಂದು ಸಂಜೆ 4.30ಕ್ಕೆ ನಗರದ ಸದ್ಗುರು ಸದಾನಂದ ಸ್ವಾಮಿ ಮಠದಲ್ಲಿ ಜರುಗಲಿದೆ. ರಂಭಾಪುರಿ ಜಗದ್ಗುರುಗಳು ಸಾನ್ನಿಧ್ಯ, ಶ್ರೀ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸುವರು. ಶ್ರೀ ರಾಜೇಶ್ವರ ಶಿವಾಚಾರ್ಯರಿಂದ ನುಡಿ ಸೇವೆ, ಪ್ರಾಧ್ಯಾಪಕ ಡಾ.ಸೋಮಶಂಕರ ಮಠ ಸದಾಶಯ ಭಾಷಣ ಮಾಡಲಿದ್ದು, ಬಿಡಿಪಿಸಿ ಅಧ್ಯಕ್ಷ ಅನೀಲಕುಮಾರ ರಗಟೆ ಉದ್ಘಾಟಿಸುವರು. ಶಾಸಕ ಬಸವರಾಜ ಪಾಟೀಲ್ ಅಟ್ಟೂರ್ ಅಧ್ಯಕ್ಷತೆ, ಎಂಎಲ್ಸಿ ಬಸವರಾಜ ಪಾಟೀಲ್ ಹುಮನಾಬಾದ್, ಶಾಸಕರಾದ ಈಶ್ವರ ಖಂಡ್ರೆ, ರಾಜಶೇಖರ್ ಪಾಟೀಲ್, ಡಾ.ನಾಗೇಂದ್ರ ಕಸೂತಿ, ಮಾಜಿ ಶಾಸಕರಾದ ಎಂ.ಜಿ.ಮುಳೆ, ಮಲ್ಲಿಕಾರ್ಜುನ ಖೂಬಾ, ಬಿಎಸ್ಎಸ್‌ಕೆ ಅಧ್ಯಕ್ಷ ಸಂಜಯ ಖೇಣಿ, ತಾಪಂ ಅಧ್ಯಕ್ಷ ಗುಂಡುರೆಡ್ಡಿ ಭಾಗವಹಿಸುವರು. ನಾನಾ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಮುಖರನ್ನು ಸತ್ಕರಿಸಿ ಗುರು ರಕ್ಷೆ ನೀಡಲಾಗುತ್ತಿದೆ ಎಂದು ಸ್ವಾಗತ ಸಮಿತಿ ಕಾರ್ಯಾಧ್ಯಕ್ಷ ಸುನೀಲ ಪಾಟೀಲ್, ಸಂಸ್ಥೆ ತಾಲೂಕು ಅಧ್ಯಕ್ಷ ವೀರಣ್ಣ ಶೀಲವಂತ ತಿಳಿಸಿದ್ದಾರೆ.

ದಿನಾಂಕ 18-11-12 ರವಿವಾರ ವಿಜಯವಾಣಿ.



ಮಡಿವಾಳ ಮಾಚಿದೇವರ ಜಾತ್ರೆಯಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಬಸವಕಲ್ಯಾಣ ಗವಿ ಮಠ ಹೊರತಂದಿರುವ 2013ರ ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಎಂ.ಜಿ.ಮುಳೆ, ಬಿ.ನಾರಾಯಣರಾವ್, ಲಿಂಗರಾಜ ಪಾಟೀಲ್ ಅಟ್ಟೂರ್, ಶಿವರಾಜ ನರಶೆಟ್ಟಿ, ಸಂಜು ಕಾಳೇಕರ್ ಇದ್ದರು.

ದಿನಾಂಕ 22-1-2013 ಮಂಗಳವಾರ ವಿಜಯವಾಣಿ

Scanned by CamScanner

# ಆತ್ಮಬಲ ಬೆಳೆಸುವ ಶಿಕ್ಷಣ ಬೇಕಿದೆ: ರಂಭಾಪುರಿ ಶ್ರೀ

**ಬಸವಕಲ್ಯಾಣ:** ಶಿಕ್ಷಣದಿಂದ ಬುದ್ಧಿ, ಧರ್ಮದಿಂದ ಭಾವನೆ ಬೆಳೆಯುತ್ತದೆ. ಬುದ್ಧಿ ಶಕ್ತಿ ಜತೆಗೆ ಭಾವನೆ ಬೆಳೆಸುವ ಶಿಕ್ಷಣ ಸಂಸ್ಥೆಗಳ ಅಗತ್ಯವಿದೆ ಎಂದು ಬಾಳೆಹೊನ್ನೂರಿನ ಶ್ರೀಮದ್ ರಂಭಾಪುರಿ ಜಗದ್ಗುರು ಡಾ.ಪ್ರಸನ್ನರೇಣುಕ ವೀರಸೋಮೇಶ್ವರ ಭಗವತ್ಪಾದರು ನುಡಿದರು.

ಇಲ್ಲಿನ ಪುಣ್ಯಕೋಟಿ ಸ್ವತಂತ್ರ ಪಿಯು ಕಾಲೇಜಿನಲ್ಲಿ ಬುಧವಾರ ಸಂಜೆ ನಡೆದ ಗುರುವಂದನೆ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿದ್ದ ಅವರು, ಬದುಕಿಗೆ ಶಾಂತಿ, ನೆಮ್ಮದಿ ಬೇಕಾದರೆ ಆತ್ಮಬಲ ಬೆಳೆಸುವ ಶಿಕ್ಷಣ ಹಿಂದೆಂದಿಗಿಂತಲೂ ಈಗ ಅಗತ್ಯವಾಗಿದೆ ಎಂದರು.

ಪುಣ್ಯಕೋಟಿ ಶಿಕ್ಷಣ ಟ್ರಸ್ಟ್ ಅಧ್ಯಕ್ಷರೂ ಆದ ಕಾಲೇಜಿನ ಪ್ರಾಚಾರ್ಯ ಸೂರ್ಯಕಾಂತ ಶೀಲವಂತ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಆಡಿದ ಜಗದ್ಗುರುಗಳು, ಶಿಕ್ಷಣ ಸಂಸ್ಥೆ ಹೆಮ್ಮರವಾಗಿ ಬೆಳೆಯಲಿ ಎಂದು ಹಾರೈಸಿದರು. ಅಲ್ಲದೆ ಕಾಲೇಜಿಗೆ ಸ್ವಂತ ಕಟ್ಟಡ ಆರಂಭಿಸಲು ಮುಂದಾದರೆ ಒಂದು ಲಕ್ಷ ರೂ. ಆಶೀರ್ವಾದ ರೂಪದಲ್ಲಿ ನೀಡುವುದಾಗಿ ತಿಳಿಸಿದರು.

ಯುವ ಮುಖಂಡ ಸುನೀಲ ಪಾಟೀಲ್ ಧರ್ಮ ಕಾರ್ಯಗಳಲ್ಲಿ ತೊಡಗಿಸಿಕೊಂಡು ಕೆಲಸ ಮಾಡುತ್ತಿದ್ದಾರೆ. ಇಂಥ ವ್ಯಕ್ತಿಗಳು ರಾಜಕೀಯದಲ್ಲಿ ಬೆಳೆದರೆ ಸಮಾಜಕ್ಕೆ ಹೆಚ್ಚಿನ ಸೇವೆ ಸಿಗಲಿದೆ ಎಂದೂ ಜಗದ್ಗುರುಗಳು ಹೇಳಿದರು.

ನೇತೃತ್ವ ವಹಿಸಿದ್ದ ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು, ಶಿಕ್ಷಣದ ವ್ಯವಸ್ಥೆ ಬದಲಾವಣೆಯಾದಾಗ ಮಾತ್ರ ದೇಶದಲ್ಲಿ ಪರಿವರ್ತನೆಯಾಗಲು ಸಾಧ್ಯವಿದೆ. ಅಜ್ಞಾನವನ್ನು ದೂರ ಮಾಡುವ ಶಿಕ್ಷಣದ ಅವಶ್ಯಕತೆ ಇದೆ. ಧರ್ಮ, ಸಂಸ್ಕೃತಿ, ಸಂಸ್ಕಾರವನ್ನೊಳಗೊಂಡ ಶಿಕ್ಷಣದಿಂದ ಮಾತ್ರ ಬದಲಾವಣೆ ಸಾಧ್ಯ ಎಂದು ಪ್ರತಿಪಾದಿಸಿದರು. ಸಂಗೀತಾ ಸುನೀಲ ಪಾಟೀಲ್ ಕಾರ್ಯಕ್ರಮ ಉದ್ಘಾಟಿಸಿದರು. ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಶಿಕ್ಷಣ ತಜ್ಞ ವೈಜಿನಾಥ ಶೀಲವಂತ ಮಾತನಾಡಿದರು. ಶಿವಣಿಯ ಶ್ರೀ ಹಾವಗಿಲಿಂಗ ಶಿವಾಚಾರ್ಯರು, ಸದಾಪೂರದ ಶ್ರೀ ಸಿದ್ಧಲಿಂಗ ಶಿವಾಚಾರ್ಯರು ಸಮ್ಮುಖ ವಹಿಸಿದ್ದರು. ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ತಾಲೂಕು ಅಧ್ಯಕ್ಷ ವೀರಣ್ಣ ಶೀಲವಂತ, ನಾಗೇಶ ಶೀಲವಂತ, ಶಿವಾನಂದ ಶೀಲವಂತ ಸೇರಿದಂತೆ ಟ್ರಸ್ಟ್‌ನ ಪದಾಧಿಕಾರಿಗಳು ಭಾಗವಹಿಸಿದ್ದರು. ಸಂಸ್ಥೆ ಉಪಾಧ್ಯಕ್ಷ ಸುಭಾಷ್‌ಚಂದ್ರ ಪಾಟೀಲ್ ಸ್ವಾಗತಿಸಿದರು. ಪ್ರಾಚಾರ್ಯ ಸೂರ್ಯಕಾಂತ ಶೀಲವಂತ ಪ್ರಾಸ್ತಾವಿಕ ಮಾತನಾಡಿದರು. ರಮೇಶ ರಾಜೋಳೆ ನಿರೂಪಿಸಿದರು.



ಬಸವಕಲ್ಯಾಣದ ಪೂಣ್ಯಕೋಟಿ ಕಾಲೇಜಿನಲ್ಲಿ ರಂಭಾಪುರಿ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನಡೆದ ಗುರುವಂದನಾ ಕಾರ್ಯಕ್ರಮವನ್ನು ಸಂಗೀತಾ ಎಸ್.ಪಾಟೀಲ್ ಉದ್ಘಾಟಿಸಿದರು. ಶ್ರೀ ರಾಜೇಶ್ವರ ಶಿವಾಚಾರ್ಯರು, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಪ್ರೊ.ಸೂರ್ಯಕಾಂತ ಶೀಲವಂತ ಉಪಸ್ಥಿತರಿದ್ದರು.

ದಿನಾಂಕ 22-11-2012 ಗುರುವಾರ ವಿಜಯವಾಣಿ ದಿನಪತ್ರಿಕೆ.

# 'ಶಿಕ್ಷಕರು ಕಾಳಜಿಯಿಂದ ಶಿಕ್ಷಣ ಕೊಡಲಿ'

ಪ್ರಜಾವಾಣಿ ವಾರ್ತೆ

**ಬಸವಕಲ್ಯಾಣ:** ಶಿಕ್ಷಕರು ಪ್ರೀತಿ ಮತ್ತು ಕಾಳಜಿವಹಿಸಿ ಮಕ್ಕಳಿಗೆ ಶಿಕ್ಷಣ ಕೊಡಬೇಕು ಎಂದು ಮುಖಂಡ ಸುನಿಲ ಪಾಟೀಲ ಹೇಳಿದರು.

ಇಲ್ಲಿನ ಗುರು ಮಹಾಲಿಂಗೇಶ್ವರ ಪ್ರಾಥಮಿಕ ಶಾಲೆಯಿಂದ ಈಚೆಗೆ ಹಮ್ಮಿಕೊಂಡ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಮಾತನಾಡಿದರು.

ಸಾನಿಧ್ಯ ವಹಿಸಿದ್ದ ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣ ಕೊಡಬೇಕು. ಸಂಸ್ಕೃತಿ, ಸಂಸ್ಕಾರದ ಬಗ್ಗೆ ತಿಳಿಹೇಳಬೇಕು ಎಂದರು.

ಡಾ.ಅರ್ಚನಾ ಮಂಡಿ ಮಾತನಾಡಿ ಯಾವುದೇ ಮಗುವಿನಲ್ಲಿ ಅಸಾಮಾನ್ಯ ಶಕ್ತಿ ಅಡಗಿದೆ ಎಂಬುದನ್ನು ತಿಳಿದುಕೊಂಡು ಅವರಲ್ಲಿನ ಸೂಪ್ತ ಪ್ರತಿಭೆ ಹೊರ ಬರುವಂತೆ ಮಾಡಬೇಕು ಎಂದರು.

ಸವಿತಾ ರಮೇಶ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಸುಭದ್ರಾಬಾಯಿ, ಗೀತಾ ಶಿವಣಕರ್, ಪಾರ್ವತಿ ಶಂಕರ, ಬಸವಂತಪ್ಪ ಲವಾರೆ ಉಪಸ್ಥಿತರಿದ್ದರು. ಅಂಬಿಕಾ, ಪ್ರಾರ್ಥನಾಗೀತೆ ಹಾಡಿದರು. ರಮೇಶ ಸ್ವಾಮಿ ಸ್ವಾಗತಿಸಿದರು. ರಮೇಶ ಮಯೂರಿ ರಾಜೋಳೆ ನಿರೂಪಿಸಿದರು. ನಂತರ ಮಕ್ಕಳಿಂದ ಸಾಂಸ್ಕೃತಿಕ ಚಟುವಟಿಕೆಗಳು ನಡೆದವು.



ಬಸವಕಲ್ಯಾಣದ ಗುರು ಮಹಾಲಿಂಗೇಶ್ವರ ಶಾಲೆಯಿಂದ ಹಮ್ಮಿಕೊಂಡ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಸುನಿಲ ಪಾಟೀಲ, ಬಸವಂತಪ್ಪ ಲವಾರೆ, ಸವಿತಾ ರಮೇಶ ಸ್ವಾಮಿ ಪಾಲ್ಗೊಂಡಿದ್ದರು

ಬುಧವಾರ 20ನೇ ಫೆಬ್ರುವರಿ 2013 ಪ್ರಜಾವಾಣಿ

Scanned by CamScanner




ದಿನಾಂಕ 1-12-2012 ಶನಿವಾರ ಉದಯವಾಣಿ ದಿನಪತ್ರಿಕೆ. [illegible] [illegible] with

Scanned by CamScanner

# ತತ್ತ್ವ ಧರ್ಮ ರಕ್ಷಿಸುವ ಕವಚ




**ಬಸವಕಲ್ಯಾಣದ ಸದಾನಂದ ಸ್ವಾಮಿ ಮಠದಲ್ಲಿ ನಡೆದ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆಯ ತಾಲೂಕು ಘಟಕದ ಉದ್ಘಾಟನೆಯನ್ನು ಜಗದ್ಗುರುಗಳ ಸಾನಿಧ್ಯದಲ್ಲಿ ಹಿರಿಯ ಧುರೀಣ ಭೀಮಣ್ಣ ಖಂಡ್ರೆ ಉದ್ಘಾಟಿಸಿದರು.**

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ಸಕಲರ ಬಾಳಿಗೆ ಬೆಳಕನ್ನು ನೀಡಿದ ವೀರಶೈವ ಧರ್ಮ, ಸಂಸ್ಕೃತಿಯನ್ನು ಬೆಳೆಸುವುದೇ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆಯ ಮೂಲ ಗುರಿ ಎಂದು ಬಾಳೆ ಹೊನ್ನೂರು ಶ್ರೀಮದ್ ರಂಭಾಪುರಿ ಜಗದ್ಗುರು ಪ್ರಸನ್ನ ರೇಣುಕಾ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಅಭಿಪ್ರಾಯಪಟ್ಟರು.

ಅವರು ನಗರದ ಸದಾನಂದ ಸ್ವಾಮಿ ಮಠದಲ್ಲಿ ನಡೆದ ತಾಲೂಕು ಘಟಕದ ಉದ್ಘಾಟನಾ ಹಾಗೂ ಧರ್ಮೋತ್ತೇಜಕ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿ, ಶರಣರ ನಾಡಿನಲ್ಲಿ ಆಚಾರ್ಯರು ನೆಲೆನಿಂತು ಮಾರ್ಗದರ್ಶನ ನೀಡಿದಲ್ಲದೆ, ಶರಣರಿಗೆ ಲಿಂಗದೀಕ್ಷೆ ಮಾಡಿದ ಘನಲಿಂಗ ರುದ್ರಮುನಿಗಳು ಬದುಕಿದಂತಹ ಈ ಪವಿತ್ರ ನೆಲದಲ್ಲಿ ಬಸವಣ್ಣನವರು ವೀರಶೈವ ಧರ್ಮಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದಾರೆ ಎಂದರು.

ತತ್ವವೆನ್ನುವುದು ಧರ್ಮವನ್ನು ರಕ್ಷಿಸುವ ಕವಚ. ವೀರಶೈವ ಧರ್ಮದ ಆದರ್ಶ, ಸಂಸ್ಕೃತಿ ನಾಡಿನ ಜನತೆಗೆ ನೀಡುವುದು ಅವಶ್ಯಕತೆಯಿದೆ. ಸಮಾಜದಲ್ಲಿನ ಏರು ಪೇರುಗಳನ್ನು ಸಮನಾಗಿಸುವುದೇ ಗುರು ಪೀಠಗಳ ಕಾರ್ಯ ಎಂದರು.

ತ್ರಿಪುರಾಂತದ ಮರಿದೇವರ ಗುಡ್ಡದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಮಠಾಧೀಶರ ಮೇಲೆ ಮಾತೃವಾತ್ಸಲ್ಯ ನೀಡುತ್ತ ಸದಾಬೆಳೆಸುತ್ತಿರುವ ರಂಭಾಪುರಿ ಶ್ರೀಗಳ ಕಾರ್ಯ ಶ್ಲಾಘನೀಯ ಎಂದು ಹೇಳಿದರು.

ಉದ್ಘಾಟಿಸಿದ ಹಿರಿಯ ಧುರೀಣ ಭೀಮಣ್ಣ ಖಂಡ್ರೆ ಮಾತನಾಡಿ, ಕಳೆದ 56 ವರ್ಷಗಳಿಂದ ನಾನು ಜಗದ್ಗುರುಗಳನ್ನು ಕಂಡಿದ್ದೇನೆ. ಸದಾ ಧಾರ್ಮಿಕ ಚಟುವಟಿಕೆಗಳನ್ನು ನಡೆಸುತ್ತಿರುವ ರಂಭಾಪುರಿ ಪೀಠ ಭಕ್ತರ ಅಭಿವೃದ್ಧಿ ಕಾರ್ಯಗಳಿಗೆ ಸದಾ ಬೆಂಬಲ ನೀಡುತ್ತಾ ಆಶೀರ್ವದಿಸುತ್ತಿದೆ ಎಂದು ತಿಳಿಸಿದರು.

ತಡೋಳಾ ಹಿರೇಮಠದ ರಾಜೇಶ್ವರ ಶಿವಾಚಾರ್ಯರು ಮಾತನಾಡಿ, ಗುರುವಾದವನು ತನ್ನನ್ನು ತಾನು ಸಮಾಜಕ್ಕಾಗಿ ತ್ಯಾಗ ಮಾಡಿಕೊಂಡಿದ್ದೇ ಆದರೇ ಅಧ್ಯಾತ್ಮಿಕವಾಗಿ ಮಾರ್ಗದರ್ಶನ ಮಾಡಲು ಸಾಧ್ಯ ಎಂದು ಹೇಳಿದರು.

ವಿರೂಪಾಕ್ಷ ಶಿವಾಚಾರ್ಯ ಹುಡುಗಿ, ಜಯಶಾಂತಲಿಂಗ ಸ್ವಾಮಿ ಹಿರೇನಾಗಾಂವ, ಹಾವಲಿಂಗೇಶ್ವರ ಶಿವಾಚಾರ್ಯರು ಶಿವಣಿ, ಸಿದ್ಧಲಿಂಗ ಶಿವಾಚಾರ್ಯರು ಸದಲಾಪುರ, ಮಾಜಿ ಶಾಸಕ ಮಾರುತಿರಾವ ಮುಳೆ, ತಾಪಂ ಅಧ್ಯಕ್ಷ ಗುಂಡುರಡ್ಡಿ, ಆನಂದ ದೇವಪ್ಪಾ, ಶಿವರಾಜ ನರಶೆಟ್ಟಿ, ಸುನೀಲ ಪಾಟೀಲ, ಬಸವರಾಜ ವರಕಾಲೆ, ಡಾ ನಾಗೇಂದ್ರ ಮಸೂತಿ ಇದ್ದರು. ವೀರಣ್ಣ ಶೀಲವಂತ ಸ್ವಾಗತಿಸಿದರು. ರಮೇಶ ರಾಜೋಳೆ ನಿರೂಪಿಸಿದರು. ಬಸವಂತಪ್ಪ ಲವಾರೆ ವಂದಿಸಿದರು.

ಪಂಡಿತ್ ಪುಟ್ಟರಾಜ ಗವಾಯಿಗಳ ಸಂಗೀತ ಬಳಗದ ಶಾಂತಯ್ಯ ಮಠಪತಿ, ರಮೇಶ ಗರುಡಕರ್, ಪ್ರವೀಣ ದಾಂಡೇಕರ, ರಾಮಚಂದ್ರ ಕಲ್‌ಹಿಪ್ಪರಗಿ ಇವರಿಂದ ಸಂಗೀತ ಕಾರ್ಯಕ್ರಮ ನಡೆಯಿತು. ಇದಕ್ಕೂ ಮುನ್ನ ಅಂಬೇಡ್ಕರ್ ವೃತ್ತದಿಂದ ಸದಾನಂದ ಮಠದವರೆಗೆ ಮೆರವಣಿಗೆ ಮೂಲಕ ಜಗದ್ಗುರುಗಳನ್ನು ಬರಮಾಡಿ ಕೊಳ್ಳಲಾಯಿತು.

ದಿನಾಂಕ 22-11-12 ಗುರುವಾರ ವಿಜಯವಾಣಿ ಪತ್ರಿಕೆ

Scanned by CamScanner

## ಬೆಂಬಲಿಗರೊಂದಿಗೆ ಬಿ.ಎಸ್.ಯಡಿಯೂರಪ್ಪ ಸಾರಥ್ಯದ ಕೆಜೆಪಿ ಸೇರಲು ಸುನೀಲ್ ಪಾಟೀಲ್ ನಿರ್ಧಾರ...

# ಶಕ್ತಿ ಪ್ರದರ್ಶನಕ್ಕೆ ಬೆಂಬಲಿಗರ ಸಮಾವೇಶ ವೇದಿಕೆ

**ಬಸವಕಲ್ಯಾಣ:** ಗುಂಪು-ಗುಂಪಾಗಿ ವೇದಿಕೆ ಏರಿದ ಯುವಕರು, ಮೊಳಗಿದ ಘೋಷಣೆಗಳು... ಇದು ಇಲ್ಲಿನ ರಥ ಮೈದಾನದಲ್ಲಿ ಸುನೀಲ್ ಪಾಟೀಲ್ ಅಭಿಮಾನಿ ಬಳಗ ಆಯೋಜಿಸಿದ್ದ ಸಮಾವೇಶದಲ್ಲಿ ಕಂಡು ಬಂದ ದೃಶ್ಯ.

ಸಮಾವೇಶದಲ್ಲಿ ವಿವಿಧ ಗ್ರಾಮಗಳಿಂದ ಆಗಮಿಸಿದ ಯುವಕರು, ಪಾಟೀಲ್ ಅವರನ್ನು ಸನ್ಮಾನಿಸಿ ನಿಮಗೆ ನಮ್ಮ ಬೆಂಬಲವಿದೆ ಎಂದು ಭರವಸೆ ನೀಡಿದರು. ಇದೇ ವೇಳೆ ಯಡಿಯೂರಪ್ಪ, ಗುರುಪಾದಪ್ಪ ನಾಗಮಾರಪಳ್ಳಿ ಹಾಗೂ ಸುನೀಲ್ ಪಾಟೀಲ್‌ಗೆ ಜಯವಾಗಲಿ ಎಂದು ಘೋಷಣೆ ಕೂಗಿದರು.

ನಾವು ಸುಮ್ಮನೆ ಬಂದಿಲ್ಲ, ನಿಮ್ಮೊಂದಿಗಿದ್ದೇವೆ ಎಂದು ಹೇಳಲು ಬಂದಿದ್ದೇವೆ. ನಾವೆಲ್ಲರೂ ನಿಮ್ಮ ಜತೆ ಎಂದರೆ, ಮತ್ತೆ ಕೆಲವರು ಯುವಕರಿಗೆ ಆದ್ಯತೆ ಸಿಗಬೇಕು. ಸುನೀಲ್ ಪಾಟೀಲ್‌ರಂಥ ನಾಯಕರಿಗೆ ಅವಕಾಶ ಸಿಗಬೇಕು ಎಂದು ಪ್ರಮುಖರು ಕೋರಿದರು.

ತಾಲೂಕಿನ ಕೆಲ ಗ್ರಾಮ ಪಂಚಾಯಿತಿಗಳಿಗೆ ಎರಡನೇ ಅವಧಿಗೆ ಆಯ್ಕೆಯಾದ ಅಧ್ಯಕ್ಷ-ಉಪಾಧ್ಯಕ್ಷರನ್ನು ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿದವರು ಪಾಟೀಲ್‌ರನ್ನು ಸನ್ಮಾನಿಸಿ ಬೆಂಬಲ ಘೋಷಿಸಿದರು.

ಸಮಾವೇಶ ಉದ್ಘಾಟಿಸಿದ ತ್ರಿಪುರಾಂತದ ಶ್ರೀ ರುದ್ರಮುನಿ ಶಿವಾಚಾರ್ಯರು, ಸುನೀಲ್ ಪಾಟೀಲ್ ಸದಾ ಸಾಮಾಜಿಕ -ಧಾರ್ಮಿಕ ಕಾರ್ಯಕ್ರಮಗಳಿಗೆ ಸಹಕಾರ ನೀಡುವ ಧರ್ಮವಂತರಾಗಿದ್ದಾರೆ. ಜನಸೇವೆಯಲ್ಲಿ ತೊಡಗಿಸಿಕೊಂಡ ಇಂಥವರು ರಾಜಕೀಯದಲ್ಲಿದ್ದರೆ ಒಳ್ಳೆಯದನ್ನು ನಿರೀಕ್ಷಿಸಬಹುದಾಗಿದೆ ಎಂದರು.

ಬಸವಾದಿ ಶರಣರ ಕಾರ್ಯಕ್ಷೇತ್ರ ಬಸವಕಲ್ಯಾಣದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳು ನಡೆಯಬೇಕಿದೆ. ಇದಕ್ಕಾಗಿ ಯುವ ನಾಯಕರ ಅಗತ್ಯವಿದ್ದು, ಪಾಟೀಲರಿಗೆ ನಮ್ಮ-ನಿಮ್ಮೆಲ್ಲರ ಆಶೀರ್ವಾದವಿದೆ ಎಂದರು.

ಗುಲ್ಬರ್ಗ ತಾಪಂ ಅಧ್ಯಕ್ಷ ಚನ್ನವೀರ ಸಲಗರ ಮಾತನಾಡಿ, ಯಡಿಯೂರಪ್ಪನವರು ಅಧಿಕಾರದಲ್ಲಿದ್ದಾಗ ಹಲವು ಜನಪರ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಜನರ ಬಗ್ಗೆ ಕಾಳಜಿ ಇರುವ ನಾಯಕರಾಗಿರುವ ಅವರು, ಮತ್ತೆ ಸಿಎಂ ಆಗಲಿದ್ದಾರೆ ಎಂದು ಭವಿಷ್ಯ ನುಡಿದರು.

ಜಾಜನಮುಗಳಿಯ ಗುಲಾಬರಾವ ಮಹಾಜನ್ ಮಾತನಾಡಿ, ಹಿಂದೆ ಹಿರಿಯ ನಾಯಕರನ್ನು ಬೆಂಬಲಿಸಿದ್ದೇವೆ. ಈಗ ಯುವ ನಾಯಕರನ್ನು ಬೆಂಬಲಿಸೋಣ ಎಂದರು.

ಯೋಗ ಗುರು ಬಾಬಾ ರಾಮದೇವ್, ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ ಗುರೂಜಿಯವರಂಥ ಪೂಜ್ಯರ ಕಾರ್ಯಕ್ರಮಗಳನ್ನು ಬಸವಕಲ್ಯಾಣದಲ್ಲಿ ಆಯೋಜಿಸಿದ ಸುನೀಲ್ ಪಾಟೀಲ್, ಧರ್ಮ, ಅಧ್ಯಾತ್ಮದ ಬಗ್ಗೆ ಆಸಕ್ತಿ ಇರುವ ಸಜ್ಜನ ವ್ಯಕ್ತಿಯಾಗಿದ್ದಾರೆ ಎಂದು ಕೊಂಡಾಡಿದರು.

ಸಿಎಂಎಂ ಬಿಇಡಿ ಕಾಲೇಜ್ ಪ್ರಾಚಾರ್ಯ ಮಲ್ಲಿಕಾರ್ಜುನ ಕೋಹಿನೂರ, ಸಂತೋಷ ಪಾರಾ, ಅಲ್ಲ ಪಟೇಲ್ ಕೋಹಿನೂರ ಪಹಾಡ ಮೊದಲಾದವರು ಮಾತನಾಡಿ, ಸುನೀಲ್ ಪಾಟೀಲ್ ಅವರನ್ನು ಬೆಂಬಲಿಸುವುದಾಗಿ ಹೇಳಿದರು. ಈ ಸಂದರ್ಭದಲ್ಲಿ ಸನ್ಮಾನ ಸ್ವೀಕರಿಸಿ ಸುನೀಲ್ ಪಾಟೀಲ್ ಸಹ ಮಾತನಾಡಿ ಸರ್ವರ ಬೆಂಬಲ ಕೋರಿದರು.

ಪ್ರಮುಖರಾದ ಚಂದ್ರಶೇಖರ ಇಂಗಿನ್, ಶಿವರಾಜ ಪಾಟೀಲ್, ಬಸವರಾಜ ಪಾಟೀಲ್ ಖಂಡಾಳ, ಎಪಿಎಂಸಿ ನಿರ್ದೇಶಕ ಶ್ರೀನಿವಾಸರೆಡ್ಡಿ, ವೀರಣ್ಣ ಶೀಲವಂತ, ನಾಗಮ್ಮ ವಿಠ್ಠಲ್, ದಿಲೀಪಕುಮಾರ ಮಡ್ಡೆ, ಸುರೇಶ ಸ್ವಾಮಿ, ರಮೇಶ ಸ್ವಾಮಿ, ಬದ್ರಿನಾಥ ಪಾಟೀಲ್, ಮಹಾಂತಯ್ಯ ಸ್ವಾಮಿ, ಸುಭಾಷ ಕುದರೆ, ಹಣಮಂತಪ್ಪ ಮಾಶೆಟ್ಟೆ, ಅಹ್ಮದ್ ನಾರಾಯಣಪೂರ ಸೇರಿದಂತೆ ಮಂಠಾಳ, ಕೋಹಿನೂರ, ಹುಲಸೂರ, ಎಕಲೂರ, ಜನವಾಡ, ಲಾಡವಂತಿ, ಯಲದಗುಂಡಿ, ಧನ್ನೂರ್, ಚಿತ್ತಕೋಟಾ, ಕೋಹಿನೂರ ಪಹಾಡ, ಸರಜೋಳಾ, ಹಾರಕೂಡ, ಖೇರ್ಡಾ, ಗದಲೇಗಾಂವ, ಹತ್ಯಾಳ, ಭೋಸಗಾ, ಅಟ್ಟೂರ್, ಆಲಗೂಡ, ಬೇಲೂರ, ಮುಚಳಂಬ, ಗೌರ, ಪರ್ತಾಪೂರ, ಮೋರಖಂಡಿ ಮೊದಲಾದ ಗ್ರಾಮಗಳಿಂದ ಅಭಿಮಾನಿಗಳು ಭಾಗವಹಿಸಿದ್ದರು. ಮಹಿಳೆಯರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿರುವುದು ಗಮನ ಸೆಳೆಯಿತು.

ವಿಕಾಸ್ ಅಕಾಡೆಮಿ ತಾಲೂಕು ಸಂಚಾಲಕ ಬಸವರಾಜ ವರಕಾಲೆ ಸ್ವಾಗತಿಸಿದರು. ದಿಲೀಪಕುಮಾರ ಮಡ್ಡೆ ವಂದಿಸಿದರು. ಪ್ರಾಚಾರ್ಯ ಸೂರ್ಯಕಾಂತ ಶೀಲವಂತ ನಿರೂಪಿಸಿದರು. ಕಲಾವಿದ ದತ್ತರಾಜ ಕಲಶೆಟ್ಟಿ ಬಂದರವಾಡ ಹಾಗೂ ಸಂಗಡಿಗರಿಂದ ಪ್ರಾರ್ಥನೆ ಮತ್ತು ವಚನ ಗಾಯನ ಜರುಗಿತು.

### ಅಟ್ಟೂರ್ ಸಹಕಾರ ಕೋರಿಕೆ

ರಾಜ್ಯದಲ್ಲಿ ಬಿಜೆಪಿ ಕಟ್ಟಿ ಬೆಳೆಸಿ ಅಧಿಕಾರಕ್ಕೆ ತಂದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಬಿಜೆಪಿ ಬಗೆದ ಅನ್ಯಾಯ ವಿರೋಧಿಸಿ ಪಕ್ಷದ ಉಪಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುವುದಾಗಿ ಯುವ ಮುಖಂಡ ಸುನೀಲ ಪಾಟೀಲ್ ತಿಳಿಸಿದರು.

ತಮ್ಮ ಬೆಂಬಲಿಗರೊಂದಿಗೆ ಗುರುಪಾದಪ್ಪ ನಾಗಮಾರಪಳ್ಳಿ ನೇತೃತ್ವದಲ್ಲಿ ಕರ್ನಾಟಕ ಜನತಾ ಪಕ್ಷಕ್ಕೆ ಸೇರ್ಪಡೆಯಾಗುತ್ತಿರುವುದಾಗಿ ಘೋಷಿಸಿದ ಅವರು, ಕಳೆದ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್‌ಗೆ ಪ್ರಯತ್ನಿಸಿದ್ದೆ. ಆದರೆ ಕೊನೆ ಗಳಿಗೆಯಲ್ಲಿ ಹಿರಿಯರಾದ ಬಸವರಾಜ ಪಾಟೀಲ್ ಅಟ್ಟೂರ್‌ಗೆ ಟಿಕೆಟ್ ನೀಡಿದ್ದರೂ ನಾನು ಸಂಪೂರ್ಣ ಸಹಕಾರ ನೀಡಿದ್ದೆ. ಬರುವ ಚುನಾವಣೆಯಲ್ಲಿ ತಮಗೆ ಅಟ್ಟೂರ್ ಸಹಕರಿಸಿ ಹೈಕಮಾಂಡ್ ಆಗಿ ಮಾರ್ಗದರ್ಶನ ಮಾಡಬೇಕು ಎಂದು ಕೋರಿದರು.

ಬಿಎಸ್‌ವೈ ಸಾರಥ್ಯದ ಕೆಜೆಪಿಗೆ ಜನಬೆಂಬಲವಿದೆ. ಕ್ಷೇತ್ರದಿಂದಲೂ ಅವರಿಗೆ ಶಕ್ತಿ ನೀಡಬೇಕಾಗಿದೆ. ತಮ್ಮೆಲ್ಲರ ಆಶೀರ್ವಾದವಿರಲಿ. ನಿಮ್ಮ ಸೇವೆಗೆ ನಾನು ಸದಾ ಬದ್ಧನಿರುವುದಾಗಿ ಭರವಸೆ ನೀಡಿದರು.

ಸಮಾವೇಶದಲ್ಲಿ ಭಾಗವಹಿಸುವವರು ಹೆಸರು ನೋಂದಾಯಿಸಿದರೆ ಹೋಗಲು ವ್ಯವಸ್ಥೆ ಮಾಡುವುದಾಗಿ ಹೇಳಿದರು.

### ರೊಕ್ಕಾ ರುಪ್ಪೆ ನಡೆಲ್ಲ

ರೊಕ್ಕಾ ರುಪ್ಪೈ ನಡೆಲ್ಲ, ಯಡಿಯೂರಪ್ಪ ಹುಟ್ಟು ಹೋರಾಟಗಾರರು. ಅವರಿಗೆ ರಾಜ್ಯದ ಜನರ ಬೆಂಬಲವಿದೆ. ಇಲ್ಲಿ ನಾವು ಸುಮ್ನೆ ಬಂದಿಲ್ಲ, ಯಡಿಯೂರಪ್ಪ ಹಾಗೂ ಸುನೀಲ್ ಪಾಟೀಲ್ ಅವರಿಗೆ ಬೆಂಬಲವಿದೆ ಎಂದು ಹೇಳಿ ಹೋಗಲು ಬಂದಿದ್ದೇವೆ.

– ಸಂತೋಷ ಪಾರಾ





ಯುವ ಮುಖಂಡ ಸುನೀಲ್ ಪಾಟೀಲ್ ಅಭಿಮಾನಿ ಬಳಗದಿಂದ ಬಸವಕಲ್ಯಾಣದ ರಥ ಮೈದಾನದಲ್ಲಿ ಆಯೋಜಿಸಲಾಗಿದ್ದ ನಾವೆಲ್ಲರೂ ನಿಮ್ಮೊಂದಿಗೆ ಎನ್ನುವ ಬೃಹತ್ ಸಮಾವೇಶವನ್ನು ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು. ಸುನೀಲ ಪಾಟೀಲ್, ಶಿವರಾಜ ಪಾಟೀಲ್, ವಿರಣ್ಣ ಶೀಲವಂತ, ಬಸವರಾಜ ವರಕಾಲೆ ಇದ್ದರು.



ದಿನಾಂಕ 8-12-2012 ಶನಿವಾರ [illegible] ದಿನಪತ್ರಿಕೆ


Scanned by CamScanner

ದಿನಾಂಕ 9-12-2012

■ ಬಸವಾದಿ ಶರಣರ ಶಿವಯೋಗ ಚಿಂತನ ಮತ್ತು ಸತ್ಯ-ಶಾಂತಿ ಸಂದೇಶ ಸಮಾರಂಭ...

# ಶಿವಯೋಗ ಸೂತ್ರದಂತೆ ನಡೆಯಲಿ ನಾಡು ಕಟ್ಟುವ ಕೆಲಸ

**ಬಸವಕಲ್ಯಾಣ:** ಬಸವಣ್ಣನವರು ನೀಡಿದ ಶಿವಯೋಗ ಸೂತ್ರದ ಆಧಾರದ ಮೇಲೆ ಸಮಾಜ, ನಾಡು ಕಟ್ಟುವ ಕೆಲಸ ನಡೆಯಬೇಕಿದೆ ಎಂದು ಕೂಡಲಸಂಗಮದ ಶ್ರೀ ಜಗದ್ಗುರು ಬಸವಜಯ ಮೃತ್ಯುಂಜಯ ಮಹಾಸ್ವಾಮಿ ಅಭಿಪ್ರಾಯಪಟ್ಟರು.

ಇಲ್ಲಿನ ಬಸವ ಮಹಾಮನೆ ಟ್ರಸ್ಟ್‌ನಿಂದ ಅನುಭವ ಮಂಟಪ ಪಕ್ಕದಲ್ಲಿ ಶನಿವಾರ ಆಯೋಜಿಸಿದ್ದ ಬಸವಾದಿ ಶರಣರ ಶಿವಯೋಗ ಚಿಂತನ ಮತ್ತು ಸತ್ಯ-ಶಾಂತಿ ಸಂದೇಶ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿದ್ದ ಅವರು, ಬಸವಣ್ಣನವರು ಸಮಾನತೆಯ ಸೂತ್ರ ಇಷ್ಟಲಿಂಗವನ್ನು ಕೊಟ್ಟಿದ್ದಾರೆ ಎಂದರು.

ಇಷ್ಟಲಿಂಗದ ಮೂಲಕ ಸಮಾಜವನ್ನು ಒಂದುಗೂಡಿಸುವ ಕೆಲಸ ಬಸವಣ್ಣನವರು ಮಾಡಿದರು. ಆದರೆ ಲಿಂಗಾಂಗ ಯೋಗ ಅನುಷ್ಠಾನದ ಸೂತ್ರದಲ್ಲಿ ನಾವು ಎಲ್ಲೋ ತಪ್ಪಿದ್ದೇವೆ. ಶಿವಯೋಗದ ರಹಸ್ಯವನ್ನು ಅರಿತು ಅನುಸಂಧಾನ ಮಾಡಬೇಕಾದ ಅಗತ್ಯವಿದೆ ಎಂದು ಪ್ರತಿಪಾದಿಸಿದ ಅವರು, ಇಲ್ಲಿ ಶಿವಯೋಗ ಕೇಂದ್ರ ಸ್ಥಾಪಿಸಲು ಮುಂದಾಗುವ ಮೂಲಕ ಶ್ರೀ ಸಿದ್ಧರಾಮ ಶರಣರು ಬೆಲ್ದಾಳ ಮಹತ್ವದ ಕಾರ್ಯ ಮಾಡುತ್ತಿದ್ದಾರೆ ಎಂದರು.

ಬಸವ ಮಹಾಮನೆ ಟ್ರಸ್ಟ್ ಅಧ್ಯಕ್ಷ ಕೌತಾದ ಶ್ರೀ ಸಿದ್ಧರಾಮ ಶರಣರು ಬೆಲ್ದಾಳ ಮಾತನಾಡಿ, ಇಲ್ಲಿ ಶಿವಯೋಗ ಕೇಂದ್ರ ಆರಂಭಿಸಲಾಗುತ್ತಿದ್ದು, ಏಳು ವರ್ಷದಿಂದ ಶಿವಯೋಗ ಸಾಧನೆ ಮಾಡಿರುವ ಸತ್ಯದೇವಿ ತಾಯಿ ಹಾಗೂ 8 ವರ್ಷದಿಂದ ಶಿವಯೋಗ ಸಾಧನೆಯಲ್ಲಿರುವ ಮಾತೆ ಗಾಯತ್ರಿ ಕೇಂದ್ರವನ್ನು ಮುನ್ನಡೆಸಲಿದ್ದಾರೆ ಎಂದರು.



ಬಸವಕಲ್ಯಾಣದಲ್ಲಿ ಶನಿವಾರ ನಡೆದ ಬಸವಾದಿ ಶರಣರ ಶಿವಯೋಗ ಚಿಂತನ ಸಮಾರಂಭದಲ್ಲಿ ಡಾ.ಬಸವಲಿಂಗ ಪಟ್ಟದೇವರು, ಶ್ರೀ ಜಗದ್ಗುರು ಶಿವಯೋಗೇಶ್ವರ ಮಹಾಸ್ವಾಮಿ, ಶ್ರೀ ಸಿದ್ಧರಾಮ ಶರಣರು, ಶ್ರೀ ಶಿವಾನಂದ ಮಹಾಸ್ವಾಮಿ, ಶ್ರೀ ರಾಜೇಶ್ವರ ಶಿವಾಚಾರ್ಯರು, ಶ್ರೀ ಮಹಾಂತ ಶಿವಾಚಾರ್ಯರು, ಶ್ರೀ ಪ್ರಣವಾನಂದ ಸ್ವಾಮೀಜಿ, ತ್ರಿಪುರಾಂತ ಶ್ರೀಗಳು, ಶಿವರಾಜ ನರಶೆಟ್ಟಿ ಆನಂದ ದೇವಪ್ಪ ಉಪಸ್ಥಿತರಿದ್ದರು.

ಭಾಲ್ಕಿಯ ಡಾ.ಬಸವಲಿಂಗ ಪಟ್ಟದ್ದೇವರು ಮಾತನಾಡಿ, ತಾವು 20 ಎಕರೆ ಸ್ಥಳ ಪಡೆದು ವಚನ ವಿದ್ಯಾಲಯ ಸ್ಥಾಪಿಸುತ್ತಿರುವುದಾಗಿ ತಿಳಿಸಿದರು. ಅಲ್ಲದೆ ಶಿವಯೋಗ ತರಬೇತಿ ಕೇಂದ್ರದ ಅಗತ್ಯವಿದ್ದು, ಬೆಲ್ದಾಳ ಶರಣರು ಶಿವಯೋಗ ಕೇಂದ್ರ ಆರಂಭಿಸಲು ಮುಂದಾಗಿರುವುದು ಖುಷಿ ವಿಚಾರ ಎಂದರು.

ಭಾತಂಬ್ರಾ- ಕೊಡಂಗಲ್‌ನ ಶ್ರೀ ಶಿವಯೋಗೇಶ್ವರ ಮಹಾಸ್ವಾಮಿ ಆಶೀರ್ವಚನ ನೀಡಿ, ವಚನ ಸಾಹಿತ್ಯದಲ್ಲಿ ಶಿವಯೋಗವಿದೆ. ಇದರಿಂದ ಶಿವಜೀವನದ ಆನಂದ ಅನುಭವಿಸಲು ಸಾಧ್ಯ ಎಂದರು. ಗುಲ್ಬರ್ಗದ ಶ್ರೀ ಮಹಾಂತ ಶಿವಾಚಾರ್ಯರು ಆಶೀರ್ವಚನ ನೀಡಿ, ಇಷ್ಟಲಿಂಗದ ಮೂಲಕ ಶಿವಯೋಗ ಮಾಡುವಲ್ಲಿ ಜೀವನದ ನಿಜ ಸುಖ ಅಡಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಹುಲಸೂರಿನ ಶ್ರೀ ಶಿವಾನಂದ ಮಹಾಸ್ವಾಮಿ, ಶಿವಯೋಗ, ಕಾಯಕ, ದಾಸೋಹ ಈ ಮೂರು ಶ್ರೇಷ್ಠ ಸೂತ್ರಗಳನ್ನು ಬಸವಣ್ಣನವರು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಶಿವಯೋಗಿಗಳಾಗಲು ಸಾಧ್ಯ ಎಂದರು.

ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು, ಮುಚಳಂಬದ ಶ್ರೀ ಪ್ರಣವಾನಂದ ಮಹಾಸ್ವಾಮಿ ಆಶೀರ್ವಚನ ನೀಡಿದರು. ಶಿವಯೋಗ ಸುಖಿ ಸತ್ಯದೇವ ತಾಯಿ ಮಾತನಾಡಿ, ಶಿವಯೋಗದ ಮಹತ್ವವನ್ನು ತಿಳಿಸಿದರು. ಬಸವ ಸೇವಾ ಪ್ರತಿಷ್ಠಾನದ ಡಾ.ಗಂಗಾಂಬಿಕಾ ತಾಯಿ ಅನುಭಾವ ನೀಡಿದರು.

ಬಾಗಲಕೋಟದ ಶ್ರೀ ಜಗದ್ಗುರು ಇಮ್ಮಡಿ ಸಿದ್ಧರಾಮ ಮಹಾಸ್ವಾಮಿ, ತಂಗಡಗಿಯ ಶ್ರೀ ಅನ್ನದಾನಿ ಭಾರತಿ ಅಪ್ಪಣ್ಣ ಮಹಾಸ್ವಾಮಿ, ಚಿತ್ರದುರ್ಗದ ಶ್ರೀ ಬಸವ ಕುಂಬಾರ ಗುಂಡಯ್ಯ ಸ್ವಾಮೀಜಿ, ಜೇವರ್ಗಿಯ ಶ್ರೀ ಬಸವಕಬೀರ ಮಹಾಸ್ವಾಮಿ, ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಕೋಡ್ಲಾದ ಶ್ರೀ ನಂಜುಂಡ ಸ್ವಾಮೀಜಿ, ಸಾಯಗಾಂವದ ಶ್ರೀ ಶಿವಾನಂದ ದೇವರು, ಪೂಜ್ಯ ಚಿತ್ರಮ್ಮ ತಾಯಿ ಸೇರಿದಂತೆ ನಾಡಿನ ವಿವಿಧ ಭಾಗಗಳಿಂದ ಆಗಮಿಸಿದ 50ಕ್ಕೂ ಹೆಚ್ಚು ಪೂಜ್ಯರು ಸಮ್ಮುಖ ವಹಿಸಿದ್ದರು.

ಕಾಂಗ್ರೆಸ್ ಮುಖಂಡ ಬಸವರಾಜ ಬುಳ್ಳಾ ಸ್ವಾಗತಿಸಿದರು. ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಆನಂದ ದೇವಪ್ಪ, ಕಾಂಗ್ರೆಸ್ ಮುಖಂಡ ಶಿವರಾಜ ನರಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

## ಯೋಗ ಕೇಂದ್ರದ ಅಗತ್ಯವಿದೆ

ಬಸವಕಲ್ಯಾಣ: ಬದುಕುವುದೇ ಜೀವನದ ಗುರಿ ಅಲ್ಲ, ಜೀವ ಮತ್ತು ಶಿವ ಬೇರೆ ಅಲ್ಲ. ಶಿವನಲ್ಲಿ ಬೆರೆಯುವುದೇ ಯೋಗ. ಆತ್ಮ ಪರಮಾತ್ಮನಲ್ಲಿ ಬೆರೆಯಲು ಯೋಗ ಸಾಧನೆ ಬೇಕು. ಏಕಾಗ್ರತೆಗಾಗಿ ಯೋಗ ಕೇಂದ್ರದ ಅಗತ್ಯವಿದೆ ಎಂದು ಶ್ರೀ ಸಿದ್ಧರಾಮ ಶರಣರು ಬೆಲ್ದಾಳ ಹೇಳಿದರು. ಬಸವಾದಿ ಶರಣರ ಶಿವಯೋಗ ಚಿಂತನ ಸಮಾರಂಭದಲ್ಲಿ ಮಾತನಾಡಿದ ಅವರು, ಶಿವಯೋಗದ ಹಿರಿಮೆ, ಅವಶ್ಯಕತೆ, ಈ ಸಾಧನೆ ಮಾಡುವುದು ಹೇಗೆ ಎಂಬ ಚಿಂತನೆ ಮಾಡುವುದೇ ಈ ಕಾರ್ಯಕ್ರಮದ ಉದ್ದೇಶ ಎಂದರು. ಲಿಂಗವೇ ಪ್ರಾಣ ಎಂದು ಭಾವಿಸಬೇಕು. ಲಿಂಗದ ಮೇಲೆ ದೃಷ್ಟಿ ಇಟ್ಟು ಮನಸ್ಸು ಏಕಾಗ್ರಗೊಳಿಸಿಕೊಳ್ಳಬೇಕು. ಇದಕ್ಕೆ ಮನಸ್ಸು ಶುದ್ಧವಾಗಿರುವುದು ಅವಶ್ಯಕ. ಯೋಗ ಸಾಧನೆಯಿಂದ ದೈವಿಶಕ್ತಿ ವಿಕಾಸಗೊಳ್ಳುತ್ತದೆ. ಆನಂದ, ನಾದ, ಪ್ರಕಾಶ ರೂಪದಲ್ಲಿ ಪರಮಾತ್ಮನ ದರ್ಶನವಾಗುತ್ತದೆ ಎಂದು ಪ್ರತಿಪಾದಿಸಿದರು. ಬಸವಾದಿ ಶರಣರ ಕಾರ್ಯ ಕ್ಷೇತ್ರದಲ್ಲಿ ಶಿವಯೋಗ ಕೇಂದ್ರ ಅಗತ್ಯವಿದ್ದು, ಮಹಿಳೆಯರಿಗಾಗಿ ಶಿವಯೋಗ ಕೇಂದ್ರ ಆರಂಭಿಸಲಾಗುತ್ತಿದೆ. ಇಲ್ಲಿನ ಇಬ್ಬರು ಶ್ರೇಷ್ಠ ಶಿವಯೋಗ ಸಾಧಕಿಯರನ್ನು ಕೇಂದ್ರಕ್ಕೆ ಒಪ್ಪಿಸುತ್ತಿದ್ದು, ತಾವೆಲ್ಲ ಸಹಕರಿಸಬೇಕು ಎಂದು ಭಾವುಕರಾಗಿ ಹೇಳುವಾಗ ಕಣ್ಣಿನಿಂದ ನೀರ್ಹನಿಗಳು ಉದುರಿದವು. ಶಿವಯೋಗ ಸುಖಿ ಸತ್ಯದೇವಿ ತಾಯಿ ಮಾತನಾಡಿ, ಶಿವಯೋಗ ಸಾಧನೆ ಮಹತ್ವ, ಇದನ್ನು ಸಾಧಿಸುವ ವಿಧಾನದ ಬಗ್ಗೆ ಅನುಭಾವ ನೀಡಿದರು.

## ತ್ರಿಪುರಾಂತದ ಶ್ರೀ ರುದ್ರಮುನಿ ಮೂರುತಿಗೆ ರವಿಕಿರಣದಾರುತಿ

**ಬಸವಕಲ್ಯಾಣ:** ತ್ರಿಪುರಾಂತದ ಮರಿದೇವರ ಗುಡ್ಡದಲ್ಲಿರುವ ಐತಿಹಾಸಿಕ ಗವಿಮಠದ ಗವಿಯಲ್ಲಿನ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಮೂರ್ತಿ(ಲಿಂಗ) ಮೇಲೆ ಬೆಳಗ್ಗೆ ರವಿಕಿರಣ ಪಸರಿಸಿದ ಅಪರೂಪ ದೃಶ್ಯ ಭಕ್ತರನ್ನು ಆಕರ್ಷಿಸುತ್ತಿದೆ.



ಹೌದು, ತ್ರಿಪುರಾಂತದ ಕೆರೆ ದಂಡೆಯ ಹಚ್ಚ ಹಸಿರಿನ ನಿಸರ್ಗದ ಒಡಲಿನಲ್ಲಿರುವ ಎರಡು ಕಮಾನು ಬಾಗಿಲುಗಳಿರುವ ಸುಮಾರು 30 ಅಡಿ ಉದ್ದದ ಸುರಂಗ ಮಾರ್ಗದ ಗವಿಯಲ್ಲಿನ ಮೂರ್ತಿ ಮೇಲೆ ಈಗ ಪ್ರತಿದಿನ ಬೆಳಗ್ಗೆ ಸೂರ್ಯನ ಕಿರಣಗಳು ಬೀಳುತ್ತಿರುವುದು ಭಕ್ತರನ್ನು ಪುಳಕಿತಗೊಳಿಸಿದೆ. ಶಿವರಾತ್ರಿಗೆ ಮೊದಲಿನ ಆರು ದಿನಗಳಿಂದ ಶಿವರಾತ್ರಿವರೆಗೆ ಬೆಳಗ್ಗೆ 6.30ರಿಂದ 7.10ರ ಮಧ್ಯೆ ಸೂರ್ಯನ ಕಿರಣಗಳು ಈ ಗವಿಯಲ್ಲಿನ ಮೂರ್ತಿ ಮೇಲೆ ಬೀಳುವುದರಿಂದ ಬೆಳಕಿನಾರುತಿ ನಡೆಯುತ್ತದೆ. ಇದು ಅಪರೂಪದ ವಿದ್ಯಮಾನ ಎಂದೇ ಹೇಳುತ್ತಾರೆ ಭಕ್ತರು. ಭಕ್ತರು ಬೆಳಗ್ಗೆಯೇ ಗವಿಮಠಕ್ಕೆ ಆಗಮಿಸಿ ದರ್ಶನ ಪಡೆಯುತ್ತಿದ್ದು, ಈ ವಿದ್ಯಮಾನದ ಹಿನ್ನೆಲೆಯಲ್ಲಿ ಶ್ರೀಮಠದ ಪೀಠಾಧಿಪತಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಬೆಳಗ್ಗೆ 6ಕ್ಕೂ ಮುನ್ನವೇ ಪೂಜೆ ನೆರವೇರಿಸುತ್ತಿದ್ದಾರೆ. ಸೂರ್ಯ ಉತ್ತರಾರ್ಧ ಗೋಳದಲ್ಲಿ ಬರುವಾಗ ಈ ಅಪರೂಪದ ವಿದ್ಯಮಾನ ಕಂಡು ಬರುತ್ತದೆ. ಪ್ರತಿವರ್ಷ ಶಿವರಾತ್ರಿಗೂ ಕೆಲ ದಿನ ಮುನ್ನ ಇದನ್ನು ಗಮನಿಸುತ್ತಿರುವುದಾಗಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳುತ್ತಾರೆ.

ವಿಜಯವಾಣಿ
ಶನಿವಾರ 9 ಮಾರ್ಚ್ 2013

Scanned by CamScanner

# ಶೇಷಪ್ಪ ಗವಾಯಿ ಪುಣ್ಯ ಸ್ಮರಣೋತ್ಸವ

**ಬಸವಕಲ್ಯಾಣ:** ಲಿಂ.ಶೇಷಪ್ಪ ಗವಾಯಿಗಳ ಪ್ರಥಮ ಪುಣ್ಯಸ್ಮರಣೋತ್ಸವ ನಿಮಿತ್ತ ಇಲ್ಲಿಯ ಶ್ರೀಗುರು ಕುಮಾರೇಶ್ವರ ಸಂಗೀತ ವಿದ್ಯಾಲಯದಿಂದ ಶ್ರೀ ಮೌನೇಶ್ವರ ದೇವಸ್ಥಾನದಲ್ಲಿ ಸಂಗೀತ ಕಾರ್ಯಕ್ರಮ ಜರುಗಿತು.

ಸಾನ್ನಿಧ್ಯ ವಹಿಸಿದ ತ್ರಿಪುರಾಂತನ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ಶೇಷಪ್ಪ ಗವಾಯಿಗಳು ಮಹಾನ್ ಕಲಾವಿದರಾಗಿದ್ದರು. ಈ ಭಾಗದಲ್ಲಿ ಸಂಗೀತಗಾರರನ್ನು ಬೆಳೆಸುವ ಮೂಲಕ ಅವರು ನೀಡಿದ ಕೊಡುಗೆ ಅನನ್ಯ ಎಂದು ಬಣ್ಣಿಸಿದರು.

ಶರಣ ಸಾಹಿತ್ಯ ತಾಲೂಕು ಅಧ್ಯಕ್ಷ ಕಾಶಪ್ಪ ಬಾಲಕಿಲೆ ಮಾತನಾಡಿ, ಈ ಭಾಗದಲ್ಲಿ ಸಂಗೀತ ವಿದ್ಯಾಲಯ ತೆರೆಯುವ ಮೂಲಕ ಉತ್ತಮ ಕಾರ್ಯ ಮಾಡುತ್ತಿರುವ ವಿದ್ಯಾಲಯಕ್ಕೆ ತಾವು ಸದಾ ಸಹಕಾರ ನೀಡುವದಾಗಿ ಭರವಸೆ ನೀಡಿದರು.

ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಚಂದ್ರಕಾಂತ ಸ್ವಾಮಿ, ಪ್ರಮುಖರಾದ ಹರಿಶ್ಚಂದ್ರ ಪಾಂಚಾಳ, ಲೀಲಾ ಸನಕಳ್ಳಿ, ಶ್ರೀಶೈಲ್ ಹುಡೇದ ಉಪಸ್ಥಿತರಿದ್ದರು.

ಡಾ.ಮಾರುತಿ ಪೂಜಾರಿ ಪ್ರಾಸ್ತಾವಿಕ ಮಾತನಾಡಿದರು. ನೀಲಕಂಠಯ್ಯ ಸ್ವಾಗತಿಸಿದರು. ರಾಜಶೇಖರ್ ಶೀಲವಂತ ನಿರೂಪಿಸಿದರು. ವಿದ್ಯಾಲಯ ವಿದ್ಯಾರ್ಥಿಗಳು ಪ್ರಾರ್ಥನಾ ಗೀತೆ ಹಾಡಿದರು.

**ಸಂಗೀತ:** ಸಂಗೀತ ಕಾರ್ಯಕ್ರಮದಲ್ಲಿ ಕಲಾವಿದರಾದ ಗುರುಶಾಂತಯ್ಯ ಸ್ಥಾವರಮಠ, ಹಣಮಂತರಾಯ ಮಳ್ಳಿ, ಧೂಳಪ್ಪ ಮುಡಬಿ, ಮಹಾಲಿಂಗ ಗವಾಯಿ, ತ್ರಿವೇಣಿ ಮಠಪತಿ, ರಾಜಶೇಖರ್ ಶೀಲವಂತ, ನರೇಂದ್ರ ಜಾಧವ, ರಂಜನಾ ಭೂಶೆಟ್ಟೆ, ಸ್ಫೂರ್ತಿ ಮಠಪತಿ, ಸುನೀತಾ ಶೀಲವಂತ, ಅಭಿಷೇಕ ಶೀಲವಂತ, ತಬಲಾವಾದಕರಾದ ಜನಾರ್ಧನ ವಾಘಮಾರೆ ಹಾಗೂ ಲೋಕನಾಥ ಭಾಗವಹಿಸಿದ್ದರು.




ಲಿಂ.ಶೇಷಪ್ಪ ಗವಾಯಿಗಳ ಪ್ರಥಮ ಪೂಣ್ಯ ಸ್ಮರಣೋತ್ಸವದ ನಿಮಿತ್ತ ಬಸವಕಲ್ಯಾಣದಲ್ಲಿ ನಡೆದ ಸಂಗೀತ ಕಾರ್ಯಕ್ರಮದಲ್ಲಿ ಶ್ರೀ ರುದ್ರಮುನಿ ಶಿವಾಚಾರ್ಯರು, ಕಾಶಪ್ಪ ಬಾಲಕಿಲೆ, ಚಂದ್ರಕಾಂತ ಸ್ವಾಮಿ, ಹರಿಶ್ಚಂದ್ರ ಪಾಂಚಾಳ ಇದ್ದರು.

ದಿನಾಂಕ 11-12-2012 ಮಂಗಳವಾರ ವಿಜಯವಾಣಿ.

## ಉದ್ಘಾಟನೆ

ಬಸವಕಲ್ಯಾಣದಲ್ಲಿ ಶುಕ್ರವಾರ ಹಮ್ಮಿಕೊಂಡ ಸುನಿಲ ಪಾಟೀಲ ಅಭಿಮಾನಿ ಬಳಗದ ಸಮಾರಂಭವನ್ನು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ದೀಪ ಬೆಳಗಿಸಿ ಉದ್ಘಾಟಿಸಿದರು



ದಿನಾಂಕ 8-12-12 ಶನಿವಾರ ಪ್ರಜಾವಾಣಿ

# ನಾಗಮಾರಪಳ್ಳಿಗೆ 'ಬೀದರ ಹುಲಿ' ಬಿರುದು

▪ ವಿಕ ಸುದ್ದಿಲೋಕ ಬಸವಕಲ್ಯಾಣ

ಪಟ್ಟಣದ ಅಕ್ಕಮಹಾದೇವಿ ಕಾಲೇಜಿನಲ್ಲಿ ಮಹಾರಾಷ್ಟ್ರದ ಕೊಲ್ಲಾಪುರದ ಸ್ವರ ನೀನಾದ ಕಲಾ ಬಳಗದವರಿಂದ ಜಾಗೋ ಹಿಂದುಸ್ತಾನಿ ಸಾಂಸ್ಕೃತಿಕ ಕಾರ್ಯಕ್ರಮ ಗುರುವಾರ ಜರುಗಿತು.

ಕಾರ್ಯಕ್ರಮದಲ್ಲಿ ಸಾರೆ ಜಹಾಂಸೆ ಅಚ್ಛಾ ಹಿಂದೂಸ್ತಾನ್ ಹಮಾರಾ ಎಂಬ ದೇಶ ಭಕ್ತಿ ಗೀತೆ ಯುವಕರಿಗೆ ಬಡಿದೆಬ್ಬಿಸುವಂತಿತ್ತು. ಸ್ವಾಮಿ ವಿವೇಕಾನಂದರು ಚಿಕಾಗೋದಲ್ಲಿ ಸಾರಿದ ಸಂದೇಶ, ಭಾರತ ದೇಶದ ಸಂಸ್ಕೃತಿ, ಪರಂಪರೆಯ ಮಹತ್ವ, ರಾಷ್ಟ್ರದ ಸೌಹಾರ್ದತೆ ಮತ್ತು ಐಕ್ಯತೆಯನ್ನು ಹೇಳುವ ಹಾಡುಗಳ ಮಧ್ಯೆ ಸಂಭಾಷಣೆಯೂ ವಿಶೇಷವಾಗಿತ್ತು.

ಮಾಜಿ ಸಚಿವ ಗುರುಪಾದಪ್ಪ ನಾಗಮಾರಪಳ್ಳಿ ಅವರಿಗೆ 'ಬೀದರ್ ಹುಲಿ', 'ಸಹಕಾರ ಕ್ಷೇತ್ರದ ರತ್ನ' ಬಿರುದುಗಳನ್ನು ನೀಡಿ, ಖಡ್ಗ ಕೊಟ್ಟು ಕೆಜೆಪಿ ಪಕ್ಷದ ಜಿಲ್ಲಾ ಉಪಾಧ್ಯಕ್ಷ ಸುನೀಲ್ ಪಾಟೀಲ ಸತ್ಕರಿಸಿದರು.

ಹಾರಕೂಡದ ಚನ್ನವೀರ ಶಿವಾಚಾರ್ಯ, ಹುಲಸೂರಿನ ಶಿವಾನಂದ ಮಹಾಸ್ವಾಮಿ, ತಡೋಳಾದ ರಾಜೇಶ್ವರ ಶಿವಾಚಾರ್ಯರು, ಮುಚಳಂಬದ ಪ್ರಣವಾನಂದ ಸ್ವಾಮಿ, ತ್ರಿಪುರಾಂತದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಮಾಜಿ ಶಾಸಕ ಎಮ್.ಜಿ. ಮುಳೆ, ಕರವೇ ವಿಭಾಗೀಯ ಸಂಚಾಲಕ ಶಶಿಧರ ಕೋಸಂಬೆ, ವಿರೂಪಾಕ್ಷ ಗಾದಗಿ, ಬಸವರಾಜ ವರಕಾಲೆ, ಅನಿಲ್ ಕುಲಕರ್ಣಿ, ಸಂಜಯಸಿಂಗ್ ಹಜಾರಿ, ಅರ್ಜುನ ಕನಕ, ಮನೋಹರ ಮೈಸೆ, ದಿಲಿಪ ಮಡ್ಡೆ ಹಾಗೂ ಮತ್ತಿತರರು ಪಾಲ್ಗೊಂಡಿದ್ದರು.



ಬಸವಕಲ್ಯಾಣದ ಅಕ್ಕಮಹಾದೇವಿ ಕಾಲೇಜಿನಲ್ಲಿ ಮಹಾರಾಷ್ಟ್ರದ ಕೊಲ್ಲಾಪುರದ ಸ್ವರ ನೀನಾದ ಕಲಾ ಬಳಗದವರಿಂದ ನಡೆದ ಜಾಗೋ ಹಿಂದುಸ್ತಾನಿ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಗುರುಪಾದಪ್ಪ ನಾಗಮಾರಪಳ್ಳಿಗೆ ಸತ್ಕರಿಸಲಾಯಿತು.

ದಿನಾಂಕ 12-1-13 ಶನಿವಾರ ವಿಜಯಕರ್ನಾಟಕ



ಬಸವಕಲ್ಯಾಣದ ತ್ರಿಪುರಾಂತದ ಮಡಿವಾಳ ಮಾಚಿವದೇವರ ಜಾತ್ರೆಯಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು 2013ರ ದಿನದರ್ಶಿಕೆಯನ್ನು ಬಿಡುಗಡೆ ಮಾಡಿದರು. ಮಾಜಿ ಶಾಸಕ ಎಂ.ಜಿ.ಮುಳೆ ,ಲಿಂಗರಾಜ ಬಿ. ಅಟ್ಟೂರ, ಜಿ.ಪಂ.ಸದಸ್ಯ ಸಂಜು ಕಾಳೆಕರ, ಆನಂದ ದೇವಪ್ಪ, ಶಿವರಾಜ ನರಶೆಟ್ಟಿ, ಅರ್ಜುನ ಕನಕ ಇದ್ದರು.

ದಿನಾಂಕ 19-1-13 ಶನಿವಾರ ವಿಜಯಕರ್ನಾಟಕ

Scanned by CamScanner

# ರಾಷ್ಟ್ರೀಯತೆಗಾಗಿ ವಿವೇಕಾನಂದರ ಪರಿಚಯ



**ಬಸವಕಲ್ಯಾಣ:** ಹಿಂದುತ್ವ ಮತ್ತು ರಾಷ್ಟ್ರೀಯತೆ ಹಿನ್ನೆಲೆಯಲ್ಲಿ ಸ್ವಾಮಿ ವಿವೇಕಾನಂದರನ್ನು ಪರಿಚಯಿಸುವ ಕೆಲಸ ನಡೆಯಬೇಕಿದೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕರ್ನಾಟಕ ಉತ್ತರ ಪ್ರಾಂತ ಸಹ ಬೌದ್ಧಿಕ ಪ್ರಮುಖ ಡಾ.ರವೀಂದ್ರಜಿ ಹೇಳಿದರು.

ಸ್ವಾಮಿ ವಿವೇಕಾನಂದರ 150ನೇ ಜಯಂತಿ ವರ್ಷಾಚರಣೆ ಸಮಿತಿಯಿಂದ ನಗರದ ಶ್ರೀ ಸದ್ಗುರು ಸದಾನಂದ ಸ್ವಾಮಿ ಮಠದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಅವರು, ಮತಾಂತರಕ್ಕೆ ಪರ್ಯಾಯವಾಗಿ ಹಿಂದು ಧರ್ಮವನ್ನು ವಿಶ್ವಕ್ಕೆ ಪರಿಚಯಿಸಿದ ಶ್ರೇಯಸ್ಸು ವಿವೇಕಾನಂದರಿಗೆ ಸಲ್ಲುತ್ತದೆ ಎಂದರು.

ಇತಿಹಾಸ ಮತ್ತು ಮಹಾಪುರುಷರ ಬಗ್ಗೆ ತಿಳಿದುಕೊಳ್ಳುವ ವ್ಯವಸ್ಥೆ ನಮ್ಮ ದೇಶದಲ್ಲಿ ಇಲ್ಲದಿರುವುದರಿಂದ ರಾಜಕಾರಣಿಗಳು ವೈಯಕ್ತಿಕ ಸ್ವಾರ್ಥಕ್ಕಾಗಿ ಇತಿಹಾಸದಿಂದ ದೂರ ಸರಿಯುವ ಕೆಲಸ ನಡೆಯುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಹುಲಸೂರಿನ ಶ್ರೀ ಶಿವಾನಂದ ಮಹಾಸ್ವಾಮೀಜಿ, ದೇಶಭಕ್ತ ಸ್ವಾಮಿ ವಿವೇಕಾನಂದರ ಹೆಸರಿನಲ್ಲಿ ಸರ್ಕಾರ ಎಲ್ಲ ರಾಜ್ಯಗಳಲ್ಲಿಯೂ ತರಬೇತಿ ಕೇಂದ್ರಗಳನ್ನು ಆರಂಭಿಸಬೇಕಲ್ಲದೆ ಉತ್ತಮ ಶಿಕ್ಷಣ ಹಾಗೂ ಸಂಸ್ಕಾರ ನೀಡುವ ಕೆಲಸ ಆಗಬೇಕಾಗಿದೆ ಎಂದರು.

ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಬಾಲಾಜಿ ಖಂಡಾಳೆ ಸ್ವಾಗತಿಸಿದರು. ನ್ಯಾಯವಾದಿ ಎಂ.ಜಿ.ಮಹಾಜನ್ ವಂದಿಸಿದರು. ಭಾರ್ಗವಚಾರಿ ನಿರೂಪಿಸಿದರು.

**ಶೋಭಾಯಾತ್ರೆ:** ಸ್ವಾಮಿ ವಿವೇಕಾನಂದರ ಜಯಂತಿ ನಿಮಿತ್ತ ಅಲಂಕೃತ ವಾಹನದಲ್ಲಿ ಭವ್ಯ ಶೋಭಾಯಾತ್ರೆ ನಡೆಯಿತು. ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿದ ಶೋಭಾಯಾತ್ರೆಗೆ ಮಹಿಳೆಯರು ಆರತಿ ಬೆಳಗಿ, ಪುಷ್ಪವೃಷ್ಟಿ ಮಾಡುವ ಮೂಲಕ ಭವ್ಯ ಸ್ವಾಗತ ಕೋರಿದರು.

ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಪ್ರಮುಖರಾದ ಅನೀಲ ರಗಟೆ, ಎಂ.ಜಿ.ಮಹಾಜನ್, ರವಿ ಚಂದನಕೆರೆ, ಭಾರ್ಗವಚಾರಿ, ಪ್ರಕಾಶ ಮಹಾಲಿಂಗ, ಸುಧೀರ ಕಾಡಾದಿ, ಸೂರ್ಯಕಾಂತ ಚಿಲ್ಲಾಬಟ್ಟೆ, ಶಾಂತಪ್ಪ ಪಾಟೀಲ್, ದೀಪಕ ಗಾಯಕವಾಡ, ಜೈಹಿಂದ್ ಶಿಂಧೆ, ಸಂತೋಷ ಸೋಳಂಕೆ, ರುದ್ರೇಶ ಪಾಟೀಲ್ ಬೇಲೂರ, ಅರವಿಂದ ಮುತ್ತೆ, ಉಜ್ವಲ ಶಾಸ್ತ್ರಿ ಭಾಗವಹಿಸಿದ್ದರು.

ದಿನಾಂಕ 19-1-2013 ಶನಿವಾರ ವಿಜಯವಾಣಿ ದಿನಪತ್ರಿಕೆ.

# ಬಾಲಕಿ ಚಿಕಿತ್ಸೆಗಾಗಿ ಹಣ ಸಂಗ್ರಹ

▪ ವಿಕ ಸುದ್ದಿಲೋಕ ಬಸವಕಲ್ಯಾಣ



ಬಸವಕಲ್ಯಾಣದ ನಗರದ ವಿವಿಧ ಕಾಲೇಜುಗಳಿಗೆ ಎಬಿವಿಪಿ ಕಾರ್ಯಕರ್ತರು ಭೇಟಿ ನೀಡಿ ಸಾಯಗಾಂವದ ಅತ್ಯಾಚಾರ ಪೀಡಿತ ಬಾಲಕಿ ಚಿಕಿತ್ಸೆಗಾಗಿ ಹಣ ಸಂಗ್ರಹಿಸಿದರು.

ಭಾಲ್ಕಿ ತಾಲೂಕಿನ ಸಾಯಗಾಂವ ಗ್ರಾಮದಲ್ಲಿ ಅತ್ಯಾಚಾರಕ್ಕೊಳಗಾದ ಬಾಲಕಿಯ ಚಿಕಿತ್ಸೆಗಾಗಿ ನಿಧಿ ಸಂಗ್ರಹ ಕಾರ್ಯ ತ್ರಿಪುರಾಂತದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ಜರುಗಿತು.

ಪುಣ್ಯಕೋಟಿ ಪಿಯು ಕಾಲೇಜಿನ ಪ್ರಾಚಾರ್ಯ ಸೂರ್ಯಕಾಂತ ಶೀಲವಂತ ಮಾತನಾ ಡಿದರು. ತ್ರಿಪುರಾಂತದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಭಾರತ ಉತ್ತಮ ಸಂಸ್ಕೃತಿ ಪರಂಪರೆಗೆ ಹೆಸರಾದ ದೇಶದಲ್ಲಿ ಅತ್ಯಾಚಾರ ಪ್ರಕರಣ ಹೆಚ್ಚಳವಾಗುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರಕಾರ ಅತ್ಯಾಚಾರ ಪ್ರಕರಣ ತಡೆಗೆ ಸೂಕ್ತ ಕಾನೂನು ತಿದ್ದುಪಡಿಗೆ ಮುಂದಾಗಬೇಕು ಎಂದು ಒತ್ತಾಯಿಸಿದರು.

ಬಸವೇಶ್ವರ ಪಿಯು ಕಾಲೇಜನ ಪ್ರಾಚಾರ್ಯ ನಿರ್ಮಲ ಶೆಟ್ಟಗಾರ್, ಉಪನ್ಯಾಸಕ ಚಂದ್ರಕಾಂತ ಅಕ್ಕಣ್ಣ ಮಾತನಾಡಿದರು. ನಗರದ ಎಸ್ ಎಸ್‌ಕೆಬಿ ಕಾಲೇಜ್, ಎಸ್‌ಬಿಆರ್ ಶಾಲೆ, ಅಕ್ಕಮಹಾದೇವಿ ಕಾಲೇ ಜಿಗೆ ಭೇಟಿ ನಿಡಿ ಹಣ ಸಂಗ್ರಹಿಸ ಲಾಯಿತು.

ಲೊಕೇಶ ಮೋಳಕೆರೆ, ರುದ್ರೇಶ ಪಾಟೀಲ್, ನಾಗೇಶ ಕಲ್ಯಾಣಕರ, ಮಧುಸುಧನ ರೆಡ್ಡಿ, ಅಶೋಕ ಸಿಂಗ್, ಅಂಬರೀಷ ಸ್ವಾಮಿ, ಉಮೇಶ ಅಂಬುಲಗೆ ಇದ್ದರು.

ದಿನಾಂಕ 10-1-2013 ಗುರುವಾರ ವಿಜಯಕರ್ನಾಟಕ

# ಮಡಿವಾಳ ಮುತ್ಯಾಗೆ ತುಲಾಭಾರ ಸೇವೆ

**ಬಸವಕಲ್ಯಾಣ:** ಮಡಿವಾಳ ಮಾಚೀದೇವರ ಹೊಂಡ ಹತ್ತಿರದ ಮಡಿವಾಳ ಮುತ್ಯಾ ಗುಂಪಾದಲ್ಲಿ ಮಡಿವಾಳ ಮುತ್ಯಾ ಅವರ ತುಲಾಭಾರ ಕಾರ್ಯಕ್ರಮ ಭಾನುವಾರ ಭಕ್ತರ ಜೈಘೋಷಗಳ ಮಧ್ಯೆ ಸಡಗರದಿಂದ ಜರುಗಿತು. ನಗರಸಭೆ ಸದಸ್ಯೆ ದಾನಮ್ಮ ಅರುಣಕುಮಾರ ಸ್ವಾಮಿ ಹಾಗೂ ಪರಿವಾರದಿಂದ ತುಲಾಭಾರ ನೆರವೇರಿಸಲಾಯಿತು. ಭಕ್ತರು ಕಾರ್ಯಕ್ರಮಕ್ಕೆ ಸಾಕ್ಷಿಯಾಗುವ ಜತೆಗೆ ಪುಷ್ಪವೃಷ್ಟಿ ಮಾಡಿ ಭಕ್ತಿಸೇವೆ ಸಲ್ಲಿಸಿದರು. ಶ್ರೀ ಶಾಂತವೀರ ಶಿವಾಚಾರ್ಯರು ಆಶೀರ್ವಚನ ನೀಡಿ, ಶ್ರೀಮಂತ ಮಠಗಳ ಜತೆಗೆ ಸತ್ಯ, ಧರ್ಮ, ಆಚಾರ, ನೀತಿ ಇರುವ ಕಡೆಯಲ್ಲಿ ಭಕ್ತರ ನಂಬಿಕೆ ಮತ್ತು ಭಕ್ತಿ ಇರಬೇಕು. ಇಂಥ ಸ್ಥಳಗಳಲ್ಲಿ ಧಾರ್ಮಿಕ ಸಮಾರಂಭ ನಡೆಸಲು ಸಹಕರಿಸಬೇಕು ಎಂದರು. ಶ್ರೀ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಪ್ರಾಂಜಲವಾದ ಶುದ್ಧ ಮನಸ್ಸಿನ ಭಕ್ತಿ ಬೇಕಿದೆ. ಧರ್ಮ ಕಾರ್ಯಗಳಿಗೆ ಸಹಕರಿಸುವ ಮನೋಭಾವ ಎಲ್ಲರಲ್ಲೂ ಬೆಳೆಯಬೇಕಿದೆ ಎಂದರು. ಶ್ರೀ ವಿಜಯಕುಮಾರ ಸ್ವಾಮೀಜಿ ನೇತೃತ್ವ ವಹಿಸಿದ್ದರು. ಮಾತೋಶ್ರೀ ಕಸ್ತೂರಿಬಾಯಿ, ಗುಂಪಾದ ಕಿರಿಯ ಶ್ರೀಗಳು ಸಮ್ಮುಖ ವಹಿಸಿದ್ದರು. ಡಾ.ಬಸವರಾಜ ಸ್ವಾಮಿ ಸ್ವಾಗತಿಸಿದರು. ಬಕ್ಕಯ್ಯ ಸ್ವಾಮಿ ನಿರೂಪಿಸಿದರು.

ದಿನಾಂಕ 7-1-2013
ಸೋಮವಾರ
ವಿಜಯವಾಣಿ

Scanned by CamScanner

# ಬಾಲಕಿ ಚಿಕಿತ್ಸೆಗೆ ಎಬಿವಿಪಿ ನಿಧಿ ಸಂಗ್ರಹ

**ಬಸವಕಲ್ಯಾಣ:** ಅತ್ಯಾಚಾರಪೀಡಿತ ಸಾಯ ಗಾಂವ ಗ್ರಾಮದ ಬಾಲಕಿ ಚಿಕಿತ್ಸೆಗಾಗಿ ನೆರವು ನೀಡಲು ಮುಂದಾಗಿರುವ ಎಬಿವಿಪಿ, ನಗರದ ನಾನಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಂದ ನಿಧಿ ಸಂಗ್ರಹಿಸಿತು.

ತ್ರಿಪುರಾಂತದ ಶ್ರೀ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ಎಬಿವಿಪಿ ನಗರ ಕಾರ್ಯದರ್ಶಿ ಲೋಕೇಶ ಮೊಳಕೇರೆ, ರುದ್ರೇಶ ಪಾಟೀಲ್, ನಾಗೇಶ ಕಲ್ಯಾಣಕರ, ಮಧುಸೂದನರೆಡ್ಡಿ, ಅಶೋಕ ಸಿಂಗ್, ಅಂಬರೀಶ್ ಸ್ವಾಮಿ, ಉಮೇಶ ಅಂಬುಲಗೆ ಮೊದಲಾದವರು ಪುಣ್ಯಕೋಟಿ ಪಿಯು ಕಾಲೇಜು, ಅಲ್ಲಮಪ್ರಭು ಪಿಯು ಕಾಲೇಜು, ಎಸ್‌ಎಸ್‌ಕೆಬಿ ಕಾಲೇಜು, ಎಸ್‌ಬಿಆರ್ ಸ್ಕೂಲ್, ಶ್ರೀ ಬಸವೇಶ್ವರ ಸಂಯುಕ್ತ ಪಿಯು ಕಾಲೇಜು, ಅಕ್ಕಮಹಾದೇವಿ ಮಹಿಳಾ ಮಹಾವಿದ್ಯಾಲಯದಲ್ಲಿ ಹಣ ಸಂಗ್ರಹಿಸಿದರು.

ತ್ರಿಪುರಾಂತ ಶ್ರೀಗಳು ಮಾತನಾಡಿ, ಉತ್ತಮ ಸಂಸ್ಕೃತಿ, ಪರಂಪರೆಗೆ ವಿಶ್ವದಲ್ಲಿಯೇ ಭಾರತ ಹೆಸರಾಗಿದೆ. ಆದರೆ ಅತ್ಯಾಚಾರದಂತಹ ಪ್ರಕರಣ ಹೆಚ್ಚುತ್ತಿರುವುದು ಸಮಾಜ ತಲೆ ತಗ್ಗಿಸುವಂತಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಪುಣ್ಯಕೋಟಿ ಕಾಲೇಜಿನಲ್ಲಿ ಪ್ರಾಚಾರ್ಯ ಸೂರ್ಯಕಾಂತ ಶೀಲವಂತ, ಅಲ್ಲಮಪ್ರಭು ಕಾಲೇಜಿನಲ್ಲಿ ಉಪನ್ಯಾಸಕ ಚಂದ್ರಕಾಂತ ಅಕ್ಕಣ್ಣ, ಬಸವೇಶ್ವರ ಕಾಲೇಜಿನಲ್ಲಿ ಪ್ರಾಚಾರ್ಯ ನಿರ್ಮಲಾ ಶಟಗಾರ ಹಣ ಸಂಗ್ರಹಕ್ಕೆ ಸಹಕಾರ ನೀಡಿದರು.



ಅತ್ಯಾಚಾರಪೀಡಿತ ಸಾಯಗಾಂವದ ಬಾಲಕಿ ಚಿಕಿತ್ಸೆಗಾಗಿ ಎಬಿವಿಪಿಯಿಂದ ಹಣ ಸಂಗ್ರಹಿಸಲಾಯಿತು. ತ್ರಿಪುರಾಂತ ಸ್ವಾಮೀಜಿ, ಸೂರ್ಯಕಾಂತ, ಚಂದ್ರಕಾಂತ, ಲೋಕೇಶ, ರುದ್ರೇಶ, ನಾಗೇಶ ಇದ್ದರು.

ದಿನಾಂಕ 10-1-2013 ಗುರುವಾರ ವಿಜಯವಾಣಿ ದಿನಪತ್ರಿಕೆ.



ಬಸವಕಲ್ಯಾಣದಲ್ಲಿ ಬುಧವಾರ ಹಮ್ಮಿಕೊಂಡ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷ-ಉಪಾಧ್ಯಕ್ಷರ ಮತ್ತು ವಿವಿಧ ಕ್ಷೇತ್ರದ ಗಣ್ಯರ ಸನ್ಮಾನ ಸಮಾರಂಭದಲ್ಲಿ ಶ್ರೀಶೈಲ ಜಗದ್ಗುರು ಡಾ.ಚೆನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯರು ಮಾತನಾಡಿದರು. ಶಿವರಾಜ ನರಶೆಟ್ಟಿ, ಡಾ.ರಾಜಶೇಖರ ಸ್ವಾಮಿ ಗೋರಟಾ, ಶಂಕರರಾವ ಜಮಾದಾರ, ನೀಲಕಂಠ ರಾಠೋಡ ಪಾಲ್ಗೊಂಡಿದ್ದರು.

ದಿನಾಂಕ 17-1-13 ಗುರುವಾರ ಪ್ರಜಾವಾಣಿ



ಬಸವಕಲ್ಯಾಣದ ಶಿವರಾಜ ನರಶೆಟ್ಟಿ ಕಾಂಪ್ಲೆಕ್ಸ್‌ನಲ್ಲಿ ಬುಧವಾರ ಶರಣ ನಿಲಯ ಉದ್ಘಾಟಿಸಿದ ಶ್ರೀಶೈಲ ಜಗದ್ಗುರು ಡಾ.ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯರನ್ನು ಸತ್ಕರಿಸಿ ಗೌರವಿಸಲಾಯಿತು. ಶ್ರೀ ಪ್ರಣವಾನಂದ ಸ್ವಾಮಿ, ಡಾ.ರಾಜಶೇಖರ ಸ್ವಾಮಿ ಗೋರ್ಟಾ, ತ್ರಿಪುರಾಂತ ಶ್ರೀ, ಶಿವರಾಜ ನರಶೆಟ್ಟಿ ಇದ್ದರು.

ದಿನಾಂಕ 18-1-13 ಶುಕ್ರವಾರ ವಿಜಯವಾಣಿ ದಿನಪತ್ರಿಕೆ.



ದಿನಾಂಕ 19-1-2013 ಶನಿವಾರ ಸಂಯುಕ್ತ ಕರ್ನಾಟಕ

Scanned by CamScanner



ಬೇಲೂರು ಗ್ರಾಮದಲ್ಲಿ ಕಲ್ಯಾಣ ಕಟ್ಟಿಮನಿ ಹಿರೇತನ ಮಠದ ಪೀಠಾಧಿಪತಿ ಶ್ರೀ ಲಿಂ.ಸಿದ್ದಲಿಂಗ ಶಿವಚಾರ್ಯರ 28 ನೇ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಚಾರ್ಯಯರು, ಶ್ರೀ ವಿಜಯಕುಮಾರ ಶಿವಯೋಗಿಗಳು ಇದ್ದರು.

# ಸಿದ್ದಲಿಂಗ ಶಿವಾಚಾರ್ಯರ ಪುಣ್ಯಸ್ಮರಣೆ

ಹುಲಸೂರ,4–ಭಕ್ತನ ಭಕ್ತಿಯು ಪರಿಶುದ್ಧ ಮನಸ್ಸಿನಿಂದ ಕೂಡಿದ್ದು ಗುರು ಹಾಕಿಕೊಟ್ಟ ಮಾರ್ಗದಲ್ಲಿ ನಡೆದರೆ ನಾವೆಲ್ಲರೂ ನಮ್ಮ ಜೀವನದಲ್ಲಿ ಸುಧಾರಣೆಯಾಗುತ್ತದೆ ಎಂದು ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಚಾರ್ಯಯರು ಹೇಳಿದರು.

ಅವರು ಬೇಲೂರು ಗ್ರಾಮದಲ್ಲಿ ಕಲ್ಯಾಣ ಕಟ್ಟಿಮನಿ ಹಿರೇತನ ಮಠದ ಪೀಠಾಧಿಪತಿ ಶ್ರೀ ಲಿಂ.ಸಿದ್ದಲಿಂಗ ಶಿವಚಾರ್ಯರ 28 ನೇ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಆಶಿರ್ವಚನ ನೀಡಿದರು.

ಸಾನಿಧ್ಯವಹಿಸಿದ ತಾಂಬೋಳದ ಶ್ರೀ ವಿಜಯಕುಮಾರ ಶಿವಯೋಗಿಗಳು ಆಶೀರ್ವಚನ ನೀಡಿ, ಶ್ರೀಮಠವು ಅನಾದಿಕಾಲದಿಂದ ಗುರುವಿರಕ್ತ ಭೇದ ಮಾಡದೆ ವಿರಕ್ತರೊಂದಿಗೆ ಅನ್ಯೋನ್ಯ ಸಂಬಂಧ ಹೊಂದಿಕೊಂಡು ಬಂದಿದೆ. ಶ್ರೀ ಮಠದಲ್ಲಿನ ಗದ್ದುಗೆಳನ್ನು ನೋಡಿದರೆ ಸಾಕು ಮಠದ ಪುರಾತನಕ್ಕೆ ಪುರಾವೆ ಸಿಗುತ್ತದೆ. ಮಠವು 19–20 ತಲೆಮಾರಿನಷ್ಟು ಹಳೆಯದಾಗಿದ್ದು ಕಳೆದ ವರ್ಷ ಪೂಜ್ಯ ಲಿಂ.ಗುರುಲಿಂಗ ಶಿವಚಾರ್ಯರು ಲಿಂಗೈಕ್ಯ ರಾಗುವುದರೊಂದಿಗೆ ಪೀಠವು ಕಾಲಿಯಾಗಿದೆ ಇದು ಒಳ್ಳೆ ಸಮಾಜದ ಲಕ್ಷಣವಲ್ಲ ಎಂದು ಹೇಳಿದರು.

ಪೀಠಾಧಿಪತಿ ಇಲ್ಲದ ಮಠ ದೇವರಿಲ್ಲದ ದೇವಾಲಯದಂತೆ, ಕಾರಣ ಬೇಗನೆ ಪೀಠಾಧಿಪತಿಗಳನ್ನು ನೇಮಕ ಮಾಡಬೇಕು ಎಂದು ನುಡಿದರು.

ಶರಣಪ್ಪ ಸ್ವಾಮಿ ಸ್ವಾಗತಿಸಿದರು. ರೇವಣಸಿದ್ದಯ್ಯಾ ಪಾಟೀಲ್ ನಿರೂಪಿಸಿದರು. ದೇವೇಂದ್ರ ಬರಗಾಲೆ ವಂದಿಸಿದರು.

ದಿನಾಂಕ 5-1-2013 ಶನಿವಾರ ಸಂಯುಕ್ತ ಕರ್ನಾಟಕ

# ರಾಷ್ಟ್ರ ಧರ್ಮ ಪಾಲನೆಗೆ ಸಲಹೆ

ಬಸವಕಲ್ಯಾಣ: ಎಲ್ಲರೂ ಸಹೋದರ ಪ್ರೇಮ ಕಾಯ್ದುಕೊಳ್ಳುವ ಜತೆಗೆ ರಾಷ್ಟ್ರಧರ್ಮವನ್ನು ಪಾಲಿಸಬೇಕು ಎಂದು ಆರ್‌ಎಸ್‌ಎಸ್ ಉತ್ತರ ಪ್ರಾಂತ ಸಹ ಸಂಚಾಲಕ ಡಾ.ರವೀಂದ್ರಜಿ ಹೇಳಿದರು.

ಇಲ್ಲಿನ ಸದ್ಗುರು ಸದಾನಂದ ಸ್ವಾಮಿ ಮಠದಲ್ಲಿ ಶುಕ್ರವಾರ ಹಮ್ಮಿಕೊಂಡ ಸ್ವಾಮಿ ವಿವೇಕಾನಂದರ ಜಯಂತಿಯಲ್ಲಿ ಪಾಲ್ಗೊಂಡು ಮಾತನಾಡಿದರು.

ಹುಲಸೂರ ಶಿವಾನಂದ ಸ್ವಾಮೀಜಿ, ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ವಕೀಲ ಪ್ರಕಾಶ ಮಹಾಲಿಂಗ, ಅನಿಲಕುಮಾರ ರಗಟೆ, ಚಂದ್ರಕಾಂತ ಲಾತೂರೆ, ರಾಜೀವ ಮಂಠಾಳೆ, ಎಂ.ಜಿ.



ಬಸವಕಲ್ಯಾಣದಲ್ಲಿ ಶುಕ್ರವಾರ ಆರ್‌ಎಸ್‌ಎಸ್ ವತಿಯಿಂದ ಹಮ್ಮಿಕೊಂಡ ಸ್ವಾಮಿ ವಿವೇಕಾನಂದರ ಜಯಂತಿಯಲ್ಲಿ ಡಾ.ರವೀಂದ್ರಜಿ ಮಾತನಾಡಿದರು

ಮಹಾಜನ ಉಪಸ್ಥಿತರಿದ್ದರು. ಬಾಲಾಜಿ ಖಂಡಾಳೆ ಸ್ವಾಗತಿಸಿದರು. ಭಾರ್ಗವ ಬಿರಾದಾರ ನಿರೂಪಿಸಿದರು. ಕಾರ್ಯಕ್ರಮದ ಮೊದಲು ಮುಖ್ಯರಸ್ತೆಯಲ್ಲಿ ಭಾವಚಿತ್ರದ ಮೆರವಣಿಗೆ ನಡೆಸಲಾಯಿತು.

ದಿನಾಂಕ 19-1-2013 ಶನಿವಾರ ಪ್ರಜಾವಾಣಿ

# ಮಡಿವಾಳ ಮಾಚಿದೇವರ ಜಾತ್ರೆ ನಾಳೆಯಿಂದ

• ವಿಕ ಸುದ್ದಿಲೋಕ ಬಸವಕಲ್ಯಾಣ

ನಗರದ ತ್ರಿಪುರಾಂತದಲ್ಲಿ ಮಡಿವಾಳ ಮಾಚಿದೇವರ ಜಾತ್ರಾ ಮಹೋತ್ಸವ ಜ .14 ರಿಂದ 16 ರವರೆಗೆ ನಡೆಯಲಿದೆ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ನೇತೃತ್ವ ಶಾಸಕ ಬಸವರಾಜ ಪಾಟೀಲ ಅಟ್ಟೂರ್ ಉದ್ಘಾಟಿಸಲಿದ್ದಾರೆ. ಮಾಜಿ ಶಾಸಕರಾದ ಮಲ್ಲಿಕಾರ್ಜುನ ಖೂಬಾ, ಮಾರುತಿರಾವ ಮೂಳೆ, ತಾಪಂ ಅಧ್ಯಕ್ಷ ಗುಂಡುರಡ್ಡಿ, ಜಿಪಂ ಸದಸ್ಯ ಸಂಜು ಕಾಳೇಕರ, ಸುನೀಲ ಪಾಟೀಲ್, ಶಿವಶರಣ ಬಿರಾದಾರ, ಆನಂದ ದೇವಪ್ಪ, ಡಾ ಪ್ರಕಾಶ ಪಾಟೀಲ್, ಬಿ.ನಾರಾಯಣ, ಶಿವರಾಜ ನರಶಟ್ಟಿ, ಹಣಮಂತಪ್ಪಾ ಬೊಕ್ಕೆ, ನಗರ ಸಭೆ ಅಧ್ಯಕ್ಷೆ ಮಂಗಲಬಾಯಿ ಉದ್ರೆ, ಚಮಾಬಾಯಿ ಮಾಳಿ, ದಾನಮ್ಮ ಸ್ವಾಮಿ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಜ.14 ರಂದು ರಾತ್ರಿ 8 ಕ್ಕೆ ಪಲ್ಲಕ್ಕಿ ಮೆರವಣಿಗೆ ಜರುಗಲಿದೆ. ಜ.15 ರಂದು ರಾತ್ರಿ 9 ಗಂಟೆಗೆ ಹೈದರಾಬಾದ್ ಅನುಪಮ ಶ್ರೀವಾಸ್ತವ ತಂಡದಿಂದ ಭಕ್ತಿಗೀತೆ, ಸಂಗೀತ ಕಾರ್ಯಕ್ರಮ ಜರುಗಲಿದೆ. ಜ.16 ರಂದು ಬೆಳಗ್ಗೆ ಪಲ್ಲಕ್ಕಿ ಮೆರವಣಿಗೆ ಹಾಗೂ ಅಗ್ನಿ ಪೂಜೆ, ಪ್ರವೇಶ ನಡೆಯಲಿದೆ.

ದಿನಾಂಕ 13-1-2013 ಭಾನುವಾರ ವಿಜಯಕರ್ನಾಟಕ

Scanned by CamScanner

■ ಕೋಹಿನೂರದಲ್ಲಿ ವಲಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ತೆರೆ

# ಗಡಿಯಲ್ಲಿ ನಿರ್ಮಾಣವಾಗಲಿ ಕನ್ನಡಮಯ ವಾತಾವರಣ

**ಬಸವಕಲ್ಯಾಣ:** ಗಡಿ ಭಾಗದಲ್ಲಿ ಕನ್ನಡಮಯ ವಾತಾವರಣ ನಿರ್ಮಾಣಕ್ಕೆ ಸಮ್ಮೇಳನಗಳು ಸಹಕಾರಿಯಾಗುತ್ತವೆ ಎಂದು ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಅಭಿಪ್ರಾಯಪಟ್ಟರು.

ಕೋಹಿನೂರ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಬುಧವಾರ ನಡೆದ ವಲಯ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪದಲ್ಲಿ ಸಾನಿಧ್ಯ ವಹಿಸಿದ್ದ ಅವರು, ಗಡಿ ಭಾಗದಲ್ಲಿ ಇಂಥ ಸಮ್ಮೇಳನಗಳ ಮೂಲಕ ಕನ್ನಡಮಯ ವಾತಾವರಣ ನಿರ್ಮಿಸುವ ಕೆಲಸ ನಡೆಯಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕಸಾಪ ತಾಲೂಕು ಅಧ್ಯಕ್ಷ ಚಂದ್ರಕಾಂತ ಸ್ವಾಮಿ, ತಾಲೂಕಿನ ಎಲ್ಲ ವಲಯಗಳಲ್ಲೂ ಸಮ್ಮೇಳನ ಆಯೋಜಿಸಲಾಗುವುದು. ಮಾರ್ಚ್‌ನಲ್ಲಿ ಬಸವಕಲ್ಯಾಣದಲ್ಲಿ ತಾಲೂಕು ಮಟ್ಟದ ಸಮ್ಮೇಳನ ನಡೆಸಲಾಗುವುದು ಎಂದರು. ಸಮ್ಮೇಳನಾಧ್ಯಕ್ಷ ಡಾ.ವಿಕ್ರಮ ವಿಸಾಜಿ, ಜಿಪಂ ಉಪಾಧ್ಯಕ್ಷೆ ಲತಾ ಶಾಂತಕುಮಾರ ಹಾರಕೂಡೆ, ಕಾಂಗ್ರೆಸ್ ಮುಖಂಡ ಡಾ.ಪ್ರಕಾಶ ಪಾಟೀಲ್, ಸುಭಾಷ ಪಾಟೀಲ್ ಮಾತನಾಡಿದರು.



ಕೋಹಿನೂರದಲ್ಲಿ ನಡೆದ ವಲಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಸಮ್ಮೇಳನಾಧ್ಯಕ್ಷ ಡಾ.ವಿಕ್ರಮ ವಿಸಾಜಿ, ಡಾ.ಅಮರನಾಥ ಜಮಾದಾರ, ಚಂದ್ರಕಾಂತ ಸ್ವಾಮಿ ಇತರರಿದ್ದರು.

ಬಿಜೆಪಿ ತಾಲೂಕು ಅಧ್ಯಕ್ಷ ಸುಧೀರ ಕಾಡಾದಿ, ನಗರ ಘಟಕ ಅಧ್ಯಕ್ಷ ಸೂರ್ಯಕಾಂತ ಚಿಲ್ಲಾಬಟ್ಟೆ, ಪ್ರಮುಖರಾದ ರಾಜಕುಮಾರ ಸಿರಗಾಪುರ, ಸಂಜು ಜಾಧವ್, ಪಿಎಸ್‌ಐ ವಿಠ್ಠಲರಾವ ಗೋಖಲೆ, ಶ್ರೀನಿವಾಸ ಪಾಟೀಲ್ ಉಪಸ್ಥಿತರಿದ್ದರು. ವಲಯ ಅಧ್ಯಕ್ಷ ಶಿವಶರಣಪ್ಪ ಸಂತಾಜಿ ಸ್ವಾಗತಿಸಿದರು. ಕಲ್ಲಪ್ಪ ಹಾರಕೂಡೆ ವಂದಿಸಿದರು. ವೈಜನಾಥ ಪೂಜಾರಿ ನಿರೂಪಿಸಿದರು. ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

**ಗೋಷ್ಠಿ:** ಸಮ್ಮೇಳನದಲ್ಲಿ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಪ್ರೊ.ದೇವೇಂದ್ರ ಮಂಠಾಳಕರ್, ಗ್ರಾಮೀಣ ಪ್ರದೇಶದ ಪ್ರತಿಭಾವಂತ ಲೇಖಕರನ್ನು ಗುರುತಿಸಿ ಪ್ರೋತ್ಸಾಹಿಸುವ ಅಗತ್ಯವಿದೆ. ಸಾಹಿತ್ಯ ರಚನೆಗೆ ಮಕ್ಕಳನ್ನು ಹುರಿದುಂಬಿಸುವ ಕೆಲಸ ನಡೆಯಬೇಕಿದೆ ಎಂದರು. ಬೇಲೂರಿನ ಶ್ರೀ ಪಂಚಾಕ್ಷರಿ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸರಸ್ವತಿ ಪಾಟೀಲ್, ಶರಣಯ್ಯ ಮಠಪತಿ, ಅಂಬಾರಾವ ಗಡ್ಡದ, ಮಚ್ಚೇಂದ್ರ ಲಕಮಾಜಿ ಮಾತನಾಡಿದರು.

ಜಿಲ್ಲೆಯ ಭಾಷಾ ವೈಶಿಷ್ಟ್ಯ ಕುರಿತು ಜವಾಹರ ನವೋದಯ ವಿದ್ಯಾಲಯದ ವಿದ್ಯಾರ್ಥಿನಿ ಕಾವೇರಿ ಎಂ.ಬಿ.ಮಾಡಿದ ಭಾಷಣ ಗಮನ ಸೆಳೆಯಿತು.

**ಕವಿಗೋಷ್ಠಿ:** ಸಮ್ಮೇಳನ ನಿಮಿತ್ತ ನಡೆದ ಕವಿಗೋಷ್ಠಿಯಲ್ಲಿ ಅಧ್ಯಕ್ಷತೆ ವಹಿಸಿದ್ದ ಡಾ.ಅಮರನಾಥ ಜಮಾದಾರ, ಕೋಹಿನೂರ ಗ್ರಾಮದ ಇತಿಹಾಸ, ಪರಂಪರೆ ಮತ್ತು ವೈಶಿಷ್ಟ್ಯವನ್ನು ಬಿಚ್ಚಿಟ್ಟರು.

ಹಣಮಂತರಾವ ವಿಸಾಜಿ, ಅಶೋಕಕುಮಾರ ಎಂ.ಬಿ., ಸುಗ್ರೀವ್ ಬಟಗೇರಾ, ವಿಲಾಸ ಪೂಜಾರಿ, ಸಚಿನ್ ಲೋಖಂಡೆ, ರತಿಕಾಂತ ಸಿರ್ಸಿವಾಡೆ, ಓಂನಾಥ ಇಂಡೆ, ಕವಿತಾ ಮಾಶೆಟ್ಟೆ ಕವನ ವಾಚನ ಮಾಡಿದರು. ಸೂರ್ಯಕಾಂತ ಮಾಡೋಳೆ, ಚಂದ್ರಕಾಂತ ಲಕಮಾಜಿ, ಚನ್ನಮಲ್ಲಪ್ಪ ಲಕಮಾಜಿ, ವೀರಶೆಟ್ಟಿ ಪಾಟೀಲ್ ಉಪಸ್ಥಿತರಿದ್ದರು.

ದಿನಾಂಕ 1-2-2013 ಶುಕ್ರವಾರ ಉದಯವಾಣಿ ದಿನಪತ್ರಿಕೆ

ವಿಜಯವಾಣಿ GULBARGA
ಮಂಗಳವಾರ 29 ಜನವರಿ 2013

# ಶ್ರೀ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ

**ಬಸವಕಲ್ಯಾಣ:** 12ನೇ ಶತಮಾನದಲ್ಲಿ ಬಸವಣ್ಣನವರು ಎಲ್ಲ ಸಮುದಾಯದವರನ್ನು ಒಂದುಗೂಡಿಸಿ ಅನುಭವ ಮಂಟಪದಲ್ಲಿ ಜ್ಞಾನದ ಅರಿವು ನೀಡಿದರು ಎಂದು ಹಿರನಾಗಾಂವದ ಶ್ರೀ ಜಯಶಾಂತಲಿಂಗ ಮಹಾಸ್ವಾಮೀಜಿ ನುಡಿದರು.

ಮುಡಬಿ ವ್ಯಾಪ್ತಿಯ ಮುಖ್ಯ ರಸ್ತೆ ಬಳಿ ಮಹೇಂದ್ರಕರ್ ನಗರದ ಉದ್ಘಾಟನೆ ಹಾಗೂ ನಿಜಶರಣ ಅಂಬಿಗರ ಚೌಡಯ್ಯ ಜಯಂತ್ಯುತ್ಸವ ಉದ್ಘಾಟಿಸಿದ ಅವರು, ಶರಣರು ಸಾರಿದ ಬಸವತತ್ವ ಅನುಷ್ಠಾನಕ್ಕೆ ಬಂದರೆ ಸಮಾಜದ ಎಲ್ಲ ಸಮಸ್ಯೆಗಳಿಗೆ ಪರಿಹಾರ ಕಾಣಲು ಸಾಧ್ಯ ಎಂದರು.

ನೇತೃತ್ವ ವಹಿಸಿದ್ದ ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶರಣರು ಹೇಳಿದ ಪ್ರತಿಯೊಂದು ಮಾತು ವಚನಗಳಾಗಿ ನಮ್ಮೆಲ್ಲರ ಬಾಳಿಗೆ ಬೆಳಕಾಗಿವೆ ಎಂದರು. ಮಾಣಿಕಬಾಯಿ ಬಿ.ಮಹೇಂದ್ರಕರ್ ಅಧ್ಯಕ್ಷತೆ ವಹಿಸಿದ್ದರು. ಎಪಿಎಂಸಿ ಅಧ್ಯಕ್ಷ ಸಿದ್ರಾಮಪ್ಪ ಗುದಗೆ, ಪಿಎಸ್‌ಐ ಶಿವರಾಜ, ಪ್ರಭಾಕರ ಮಹೇಂದ್ರಕರ್, ಮಂಜುಳಾ ಮಾತನಾಡಿದರು.

ಪ್ರಭುಲಿಂಗಯ್ಯ ಟಂಕಸಾಲಿಮಠ ಸ್ವಾಗತಿಸಿದರು. ಡಾ.ಬಸವರಾಜ ಪಂಡಿತ್ ನಿರೂಪಿಸಿದರು. ಗೀತಾ ಮಲಶೆಟ್ಟೆ ವಂದಿಸಿದರು. ಉದ್ಯಮಿ ಫಿರೋಜ್ ಖಾನ್ ಪಠಾಣ ಮಂದಿರ ನಿರ್ಮಾಣಕ್ಕಾಗಿ 51 ಸಾವಿರ ರೂ. ದೇಣಿಗೆ ಚೆಕ್ ನೀಡಿದರು.

ಪ್ರಮುಖರಾದ ವೀರಶೆಟ್ಟಿ ಮಲಶೆಟ್ಟಿ, ದೀಪಕ ರೆಡ್ಡಿ, ಸದಾನಂದ ಯರಂಡಗಿ, ಯಶವಂತ ಗಾಜರೆ, ಈಶ್ವರ ಜಮಾದಾರ, ನಾಗಣ್ಣ ಕಲ್ಲಾ, ಮಚ್ಚೇಂದ್ರ ಬಿರಾದಾರ, ಶಿವಾನಂದ ಮುಡಬಿಕರ್, ಮೋಹನರಾವ ದಂತಕಾಳೆ, ಭರತ ದಶರಥರಾವ ಮಹೇಂದ್ರಕರ್, ದಿಗಂಬರ ಉಪಸ್ಥಿತರಿದ್ದರು.



ಮುಡಬಿ ವ್ಯಾಪ್ತಿಯ ಮಹೇಂದ್ರಕರ್ ನಗರದ ಉದ್ಘಾಟನೆ ಹಾಗೂ ನಿಜಶರಣ ಅಂಬಿಗರ ಚೌಡಯ್ಯ ಜಯಂತ್ಯುತ್ಸವದಲ್ಲಿ ಶ್ರೀ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಶ್ರೀ ಜಯಶಾಂತಲಿಂಗ ಶಿವಾಚಾರ್ಯರು, ಪ್ರಭಾಕರ ಮಹೇಂದ್ರಕರ್ ಇದ್ದರು.

ಪ್ರಜಾವಾಣಿ
ಬುಧವಾರ
23ನೇ ಜನವರಿ 2013
3A G*



## ಬಿಡುಗಡೆ

ಬಸವಕಲ್ಯಾಣದಲ್ಲಿ ಈಚೆಗೆ ತ್ರಿಪುರಾಂತ ಗವಿಮಠದಿಂದ ಪ್ರಕಟಿಸಿದ ದಿನದರ್ಶಿಕೆಯನ್ನು ಬಿಡುಗಡೆ ಮಾಡಲಾಯಿತು. ಅಭಿನವ ರುದ್ರಮುನಿ ಶಿವಾಚಾರ್ಯರು, ಬಿ.ನಾರಾಯಣರಾವ, ಎಂ.ಜಿ.ಮುಳೆ, ಲಿಂಗರಾಜ ಪಾಟೀಲ ಮತ್ತಿತರರು ಇದ್ದರು

Scanned by CamScanner

ಉದಯವಾಣಿ ಗುಲ್ಬರ್ಗ
ಶುಕ್ರವಾರ | ಫೆಬ್ರವರಿ | 1 | 2013

ಆಶೀರ್ವಚನ

# ಬಸವತತ್ವದಿಂದ ಸಮಸ್ಯೆ ಪರಿಹಾರ

ಬಸವಕಲ್ಯಾಣ: 12ನೇ ಶತಮಾನದಲ್ಲಿ ಬಸವಣ್ಣನವರು ಎಲ್ಲ ಸಮುದಾಯವನ್ನು ಒಂದುಗೂಡಿಸಿ ಅನುಭವ ಮಂಟಪದಲ್ಲಿ ಜ್ಞಾನದ ಅರಿವು ನೀಡಿದ್ದರು ಎಂದು ಹಿರನಾಗಾಂವನ ಜಯ ಶಾಂತಲಿಂಗ ಸ್ವಾಮೀಜಿ ಹೇಳಿದರು.

ತಾಲೂಕಿನ ಮುಡಬಿ ಸಮಿಪದ ಖಾನಾಪುರ ಕ್ರಾಸ್ ಮುಖ್ಯರಸ್ತೆ ಬಳಿ ಮಹೇಂದ್ರಕರ್ ನಗರ, ನಿಜಶರಣ ಅಂಬಿಗರ ಚೌಡಯ್ಯನವರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶರಣರು ಸಾರಿದ ಬಸವತತ್ವ ಅನುಷ್ಠಾನಕ್ಕೆ ಬಂದರೆ ಸಮಾಜದಲ್ಲಿನ ಎಲ್ಲ ಸಮಸ್ಯೆಗಳಿಗೆ ಪರಿಹಾರ ಕಾಣಲು ಸಾಧ್ಯವಿದೆ ಎಂದರು.

ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ಶರಣರು ಹೇಳಿದ ಪ್ರತಿಯೊಂದು ಮಾತು ವಚನಗಳಾಗಿ ನಮ್ಮೆಲ್ಲರ ಬಾಳಿಗೆ ಬೆಳಕಾಗಿವೆ ಎಂದರು.

ಎಪಿಎಂಸಿ ಅಧ್ಯಕ್ಷ ಸಿದ್ರಾಮಪ್ಪ ಗುದಗೆ, ಮುಡಬಿ ಠಾಣೆಯ ಪಿಎಸ್ಐ ಶಿವರಾಜ, ಪ್ರಭಾಕರ ಮಹೆಂದ್ರಕರ್, ಮಂಜುಳಾ ಮಾತನಾಡಿದರು. ಮಾಣಿಕಬಾಯಿ ಬಿ. ಮಹೇಂದ್ರಕರ್ ಅಧ್ಯಕ್ಷತೆ ವಹಿಸಿದ್ದರು.

ಉದ್ಯಮಿ ಫಿರೋಜ್‌ಖಾನ ಪಠಾಣ ಮಂದಿರ ನಿರ್ಮಾಣಕ್ಕಾಗಿ 51 ಸಾವಿರ ರೂ. ದೇಣಿಗೆ ನೀಡಿದರು.

ವೀರಶೆಟ್ಟಿ ಮಲಶೆಟ್ಟಿ, ದೀಪಕ ರೆಡ್ಡಿ, ಸದಾನಂದ ಯರಂಡಗಿ, ಯಶವಂತ ಗಾಜರೆ, ಈಶ್ವರ ಜಮಾದಾರ, ನಾಗಣ್ಣ ಕಲ್ಲಾ, ಮಚ್ಚೇಂದ್ರ ಬಿರಾದಾರ, ಶಿವಾನಂದ ಮುಡಬಿಕರ್, ಮೋಹನರಾವ ದಂತಕಾಳೆ, ಭರತ ದಶರಥರಾವ, ಮಹೇಂದ್ರಕರ್ ದಿಗಂಬರ ಹಾಜರಿದ್ದರು.

ಪ್ರಭುಲಿಂಗಯ್ಯಾ ಟಂಕಸಾಲಿಮಠ ಸ್ವಾಗತಿಸಿದರು. ಡಾ। ಬಸವರಾಜ ಪಂಡಿತ ನಿರೂಪಿಸಿದರು. ಗೀತಾ ಮಲಶೆಟ್ಟೆ ವಂದಿಸಿದರು.




ಬಸವಕಲ್ಯಾಣ: ಮುಡಬಿ ಸಮಿಪದ ಖಾನಾಪುರ ಕ್ರಾಸ್ ಮುಖ್ಯರಸ್ತೆ ಬಳಿ ಮಹೇಂದ್ರಕರ್ ನಗರ, ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು.




ಬಸವಕಲ್ಯಾಣ: ಕೋಹಿನೂರನಲ್ಲಿ ನಡೆದ ವಲಯ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

# ಕೋಹಿನೂರ: ಸಾಹಿತ್ಯ ಸಮ್ಮೇಳನಕ್ಕೆ ತೆರೆ

ಬಸವಕಲ್ಯಾಣ: ಗಡಿಭಾಗದಲ್ಲಿ ಸಮ್ಮೇಳನಗಳನ್ನು ಆಯೋಜಿಸುವ ಮೂಲಕ ಸಾಹಿತ್ಯ-ಸಂಸ್ಕೃತಿಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ನಡೆಯಬೇಕಿದೆ ಎಂದು ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ತಾಲೂಕಿನ ಕೋಹಿನೂರ ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಬುಧವಾರ ನಡೆದ ವಲಯ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಕನ್ನಡದ ನೆಲದಲ್ಲಿ ವಾಸಿಸುವ ಪ್ರತಿಯೊಬ್ಬರಲ್ಲಿಯೂ ನಾಡು-ನುಡಿ ಬಗ್ಗೆ ಅಭಿಮಾನವಿರಬೇಕು ಎಂದರು.

ಕಸಾಪ ತಾಲೂಕು ಅಧ್ಯಕ್ಷ ಚಂದ್ರಕಾಂತ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನದ ಸರ್ವಾಧ್ಯಕ್ಷ ಡಾ। ವಿಕ್ರಮ ವಿಸಾಜಿ, ಜಿಪಂ ಉಪಾಧ್ಯಕ್ಷೆ ಲತಾ ಶಾಂತಕುಮಾರ ಹಾರಕೂಡೆ, ಕಾಂಗ್ರೆಸ್ ಮುಖಂಡ ಡಾ। ಪ್ರಕಾಶ ಪಾಟೀಲ, ಸುಭಾಷ ಪಾಟೀಲ ಮಾತನಾಡಿದರು.

ಬಿಜೆಪಿ ತಾಲೂಕು ಅಧ್ಯಕ್ಷ ಸುಧೀರ ಕಾಡಾದಿ, ನಗರ ಘಟಕ ಅಧ್ಯಕ್ಷ ಸೂರ್ಯಕಾಂತ ಚಿಲ್ಲಾಬಟ್ಟೆ, ರಾಜಕುಮಾರ ಪಾಟೀಲ ಸಿರಗಾಪುರ, ಸಂಜು ಜಾಧವ, ಮಂಠಾಳ ಪಿ.ಎಸ್.ಐ ವಿಠ್ಠಲರಾವ ಗೋಖಲೆ, ಶ್ರೀನಿವಾಸ ಪಾಟೀಲ ಹಾಜರಿದ್ದರು. ವಲಯ ಅಧ್ಯಕ್ಷ ಶಿವಶರಣಪ್ಪ ಸಂತಾಜಿ ಸ್ವಾಗತಿಸಿದರು. ಕಲ್ಲಪ್ಪ ಹಾರಕೂಡೆ ವಂದಿಸಿದರು. ವೈಜನಾಥ ಪೂಜಾರಿ ನಿರೂಪಿಸಿದರು.

ಗೋಷ್ಠಿ: ಕೋಹಿನೂರ ವಲಯ ಸಾಹಿತ್ಯ ಸಮ್ಮೇಳನದಲ್ಲಿ ನಡೆದ ಗೋಷ್ಠಿ ಅಧ್ಯಕ್ಷತೆ ವಹಿಸಿದ್ದ ಪ್ರೊ। ದೇವೇಂದ್ರ ಮಂಠಾಳಕರ ಮಾತನಾಡಿ, ಸಮ್ಮೇಳನದ ಮೂಲಕ ಗ್ರಾಮೀಣ ಭಾಗದ ಪ್ರತಿಭೆಗಳನ್ನು ಗುರುತಿಸುವ ಕೆಲಸ ನಡೆಯಬೇಕಿದೆ ಎಂದರು.

ಬೇಲೂರಿನ ಉರಲಿಂಗ ಪೆದ್ದಿಮಠದ ಪಂಚಾಕ್ಷರಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸರಸ್ವತಿ ಪಾಟೀಲ, ಶರಣಯ್ಯ ಮಠಪತಿ, ಅಂಬಾರಾವ ಗಡ್ಡದ, ಮಚೇಂದ್ರ ಲಕ್ಮಾಜಿ ಮಾತನಾಡಿದರು. ಜಿಲ್ಲೆಯ ಭಾಷಾ ವೈಶಿಷ್ಟತೆ ಕುರಿತು ಜವಾಹರ ನವೋದಯ ವಿದ್ಯಾಲಯದ ವಿದ್ಯಾರ್ಥಿನಿ ಕಾವೇರಿ ಎಂ.ಬಿ. ಮಾಡಿದ ಭಾಷಣ ವಿಶೇಷವಾಗಿತ್ತು. ಸಮ್ಮೇಳನದ ನಿಮಿತ್ತ ಕವಿಗೋಷ್ಠಿ ನಡೆಯಿತು. ಡಾ। ಅಮರನಾಥ ಜಮಾದಾರ ಮಾತನಾಡಿದರು.

ಕವಿಗೋಷ್ಠಿಯಲ್ಲಿ ಹಣಮಂತರಾವ ವಿಸಾಜಿ, ಅಶೋಕಕುಮಾರ ಎಂ.ಬಿ., ಸುಗ್ರೀವ ಬಟಗೇರಾ, ವಿಲಾಸ ಪೂಜಾರಿ, ಸಚಿನ ಲೋಖಂಡೆ, ರತಿಕಾಂತ ಸಿರ್ಸಿವಾಡೆ, ಓಂನಾಥ ಇಂಡೆ, ಕವಿತಾ ಮಾಶೆಟ್ಟೆ ಕವನ ವಾಚನ ಮಾಡಿದರು.

ಸೂರ್ಯಕಾಂತ ಮಾಡೋಳೆ, ಚಂದ್ರಕಾಂತ ಲಕ್ಮಾಜಿ, ಚನ್ನಮಲ್ಲಪ್ಪ ಲಕ್ಮಾಜಿ, ವಿರಶೆಟ್ಟಿ ಪಾಟೀಲ ಹಾಜರಿದ್ದರು.

ಉದಯವಾಣಿ ಗುಲ್ಬರ್ಗ
ಶುಕ್ರವಾರ | ಫೆಬ್ರವರಿ | 1 | 2013

Scanned by CamScanner

# ಮಂತಾಳದಲ್ಲಿ ಶಿವಾನುಭವ ಚಿಂತನೆ

**ಬಸವಕಲ್ಯಾಣ:** ಮಂತಾಳದ ಶ್ರೀ ಬುರಾಣಪೂರ ಸಿದ್ದಯ್ಯಪ್ಪ ದೇವಸ್ಥಾನದಲ್ಲಿ ಸಹಸ್ರ ಬಿಲ್ವಾರ್ಚನೆ, ಮಹಾ ರುದ್ರಾಭಿಷೇಕ ಮತ್ತು ಬುರಾಣಪೂರ ಸಿದ್ದಯ್ಯಪ್ಪ ಭಾವಚಿತ್ರದ ಭವ್ಯ ಮೆರವಣಿಗೆ ಜರುಗಿತು. ಗ್ರಾಮದ ಹನುಮಾನ ಮಂದಿರದಿಂದ ಹೊರಟ ಮೆರವಣಿಗೆಯು ಪ್ರಮುಖ ರಸ್ತೆ ಮೂಲಕ ಸಿದ್ದಯ್ಯಪ್ಪ ದೇವಸ್ಥಾನಕ್ಕೆ ಬಂದು ತಲುಪಿತು.

ನಂತರ ನಡೆದ ಶಿವಾನುಭವ ಚಿಂತನ ಕಾರ್ಯಕ್ರಮ ಉದ್ಘಾಟಿಸಿದ ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಭಕ್ತಿ ಮಾರ್ಗದಿಂದ ಮಾತ್ರ ಜೀವನದಲ್ಲಿ ಶಾಂತಿ-ನೆಮ್ಮದಿ ನೆಲೆಸಲು ಸಾಧ್ಯ. ಯುವಕರು ಕ್ರಿಯಾಶೀಲರಾಗಿ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದರು. ಅಧ್ಯಕ್ಷತೆ ವಹಿಸಿದ್ದ ಮಂತಾಳದ ಶ್ರೀ ಗುಹೇಶ್ವರ ಮಹಾಸ್ವಾಮೀಜಿ, ಪರಸ್ಪರ ಪ್ರೀತಿ ವಿಶ್ವಾಸ ಆರೋಗ್ಯಪೂರ್ಣ ಸಮಾಜಕ್ಕೆ ಪೂರಕವಾಗಲಿದೆ ಎಂದರು.

ಕಾಂಬಳೆವಾಡಿ ಮಹಾರಾಜರು, ಮಹಾಗಾಂವ ಮಠದ ಶ್ರೀಗಳು ಆಶೀರ್ವಚನ ನೀಡಿದರು. ಪ್ರಮುಖರಾದ ಗುರುರಾಜ ಬಿರಾದಾರ, ಶಂಕರ ಪಾಟೀಲ್, ಶಿವಾನಂದ ಪಾಟೀಲ್, ರಾಮಲಿಂಗ ಕಿವಡೆ, ಬಂಡೆಪ್ಪ ಮಾಳಿ, ಸಿದ್ರಾಮ ಶಟಗಾರ, ಗಜಾನನ ಪಾಟೀಲ್, ಶಿವಾನಂದ ವಗಶೆಟ್ಟಿ ಧನರಾಜ ಸಾಥ್‌ಭಾಯಿ ಉಪಸ್ಥಿತರಿದ್ದರು.



ಮಂತಾಳದಲ್ಲಿ ನಡೆದ ಶಿವಾನುಭವ ಚಿಂತನ ಕಾರ್ಯಕ್ರಮದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಮಂತಾಳದ ಶ್ರೀ ಗುಹೇಶ್ವರ ಮಹಾಸ್ವಾಮೀಜಿ, ಮಹಾಗಾಂವ ಶ್ರೀ, ಕಾಂಬಳೆವಾಡಿ ಮಹಾರಾಜ ಇದ್ದರು.

ವಿಜಯವಾಣಿ GULBARGA
ಗುರುವಾರ 31 ಜನವರಿ 2013

■ ಶ್ರೀ ಬಸವೇಶ್ವರ ಚಿತ್ರಕಲಾ ಕಾಲೇಜಿನ 19ನೇ ಕಲಾ ಮಹೋತ್ಸವ...

# ಕಲೆಯಲ್ಲಿದೆ ಅದ್ಭುತ ಶಕ್ತಿ: ಮುಳೆ

**ಬಸವಕಲ್ಯಾಣ:** ಸಾಹಿತ್ಯ, ಸಂಗೀತ, ಕಲೆಯಲ್ಲಿ ಅದ್ಭುತ ಶಕ್ತಿ ಇದ್ದು, ಕಲೆ, ಕಲಾವಿದರನ್ನು ಗುರುತಿಸಿ ಪ್ರೋತ್ಸಾಹಿಸುವ ಕಾರ್ಯ ನಡೆಯಬೇಕು ಎಂದು ಮಾಜಿ ಶಾಸಕ ಎಂ.ಜಿ.ಮುಳೆ ಹೇಳಿದರು.

ಇಲ್ಲಿನ ಶ್ರೀ ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯದ 19ನೇ ಕಲಾ ಮಹೋತ್ಸವ ಮತ್ತು ಚಿತ್ರಕಲಾ ಪ್ರದರ್ಶನವನ್ನು ಶನಿವಾರ ಉದ್ಘಾಟಿಸಿದ ಅವರು, ಬಸವಣ್ಣನವರ ಕರ್ಮಭೂಮಿ ಬಸವಕಲ್ಯಾಣ ವಚನ ಸಾಹಿತ್ಯ ರಚನೆಯಾದ ಪವಿತ್ರ ನೆಲವೂ ಆಗಿದೆ. ಸಾಹಿತ್ಯ ಸಂಗೀತ ಕಲೆಗೆ ನೆಲೆ ನೀಡಿದ ಈ ನೆಲದಲ್ಲಿ ಕಾಲೇಜು 18 ವರ್ಷಗಳಿಂದ ಕಲಾವಿದರನ್ನು ಬೆಳೆಸುತ್ತಿರುವುದು ಶ್ಲಾಘನೀಯ ಎಂದರು.

ಸಾನ್ನಿಧ್ಯ ವಹಿಸಿದ್ದ ಹುಲಸೂರಿನ ಶ್ರೀ ಶಿವಾನಂದ ಮಹಾಸ್ವಾಮೀಜಿ, ಕಲಾವಿದನ ಆತ್ಮದ ಭಾವನೆಗಳಿಂದ ಕೂಡಿದ ಕುಂಚದಲ್ಲಿ ಅರಳಿದ ಕಲಾಕೃತಿಗೆ ಬೆಲೆ ಕಟ್ಟಲಾಗದು ಎಂದರು.

ನೇತೃತ್ವ ವಹಿಸಿದ್ದ ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಕಲೆ ಬಲ್ಲ ಮನುಷ್ಯ ಜೀವನದಲ್ಲಿನ ಎಲ್ಲ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸಬಲ್ಲ, ನೊಂದ ಮನಸ್ಸು ಅರಳಿಸುವ, ವ್ಯಕ್ತಿತ್ವವನ್ನು ರೂಪಿಸುವ ಶಕ್ತಿಯೂ ಕಲೆಗಿದೆ ಎಂದರು.

ಸಾಹಿತಿ ಎಚ್.ಕಾಶೀನಾಥರೆಡ್ಡಿ, ಕಸಾಪ ತಾಲೂಕು ಅಧ್ಯಕ್ಷ ಚಂದ್ರಕಾಂತ ಸ್ವಾಮಿ, ಯುವ ಸಾಹಿತಿ ಮಚ್ಚೇಂದ್ರ ಅಣಕಲ್ ಮಾತನಾಡಿದರು. ಕಾಲೇಜಿನ ಪ್ರಾಚಾರ್ಯ ಪ್ರಭುಲಿಂಗಯ್ಯ ಟಂಕಸಾಲಿಮಠ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ರಮೇಶ ರಾಜೋಳೆ ನಿರೂಪಿಸಿದರು.

ಸನ್ಮಾನ: ಚಿತ್ರಕಲಾ ಶಿಕ್ಷಕ ಮಹಾದೇವಯ್ಯ ಮಠ, ಪತ್ರಕರ್ತ ಶಾಂತಲಿಂಗ ವರವಟ್ಟೆ, ಶಿವಪುತ್ರ ಪಾಟೀಲ್, ಉದಯಕುಮಾರ ಮುಳೆ, ಗಾಯಕ ರಾಜಶೇಖರ ಶೀಲವಂತ, ಯುವ ಸಾಹಿತಿ ಮಚ್ಚೇಂದ್ರ ಅಣಕಲ್, ವೀರಣ್ಣ ಶೀಲವಂತ ಅವರನ್ನು ಸತ್ಕರಿಸಲಾಯಿತು. ವಿವಿಧ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ನೀಡಿ ಪ್ರೋತ್ಸಾಹಿಸಲಾಯಿತು.



ಬಸವಕಲ್ಯಾಣದ ಶ್ರೀ ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯದ 19ನೇ ಕಲಾ ಮಹೋತ್ಸವವನ್ನು ಮಾಜಿ ಶಾಸಕ ಎಂ.ಜಿ.ಮುಳೆ ಉದ್ಘಾಟಿಸಿದರು. ಶ್ರೀ ಶಿವಾನಂದ ಮಹಾಸ್ವಾಮೀಜಿ, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಕಾಶೀನಾಥ ರೆಡ್ಡಿ, ಪ್ರಭುಲಿಂಗಯ್ಯ ಟಂಕಸಾಲಿಮಠ, ಚಂದ್ರಕಾಂತ ಸ್ವಾಮಿ ಇದ್ದರು.

ವಿಜಯವಾಣಿ
ಭಾನುವಾರ 10 ಮಾರ್ಚ್ 2013

# ಶಿಕ್ಷಣದೊಂದಿಗೆ ಬೇಕು ಸಂಸ್ಕಾರ

**ಬಸವಕಲ್ಯಾಣ:** ಮಕ್ಕಳಿಗೆ ಗುಣಮಟ್ಟದ ಶಿಕ್ಷಣದೊಂದಿಗೆ ಉತ್ತಮ ಸಂಸ್ಕಾರ ನೀಡಬೇಕಾದ ಅಗತ್ಯವಿದೆ ಎಂದು ಕರ್ನಾಟಕ ಜನತಾ ಪಕ್ಷದ ಜಿಲ್ಲಾ ಉಪಾಧ್ಯಕ್ಷ ಸುನೀಲ್ ಪಾಟೀಲ್ ಅಭಿಮತ ವ್ಯಕ್ತಪಡಿಸಿದರು.

ನಗರದ ಶ್ರೀ ಸದ್ಗುರು ಸದಾನಂದ ಸ್ವಾಮಿ ಮಠದ ಪರಿಸರದಲ್ಲಿ ನಡೆದ ಶ್ರೀಗುರು ಮಹಾಲಿಂಗೇಶ್ವರ ನರ್ಸರಿ ಮತ್ತು ಪ್ರಾಥಮಿಕ ಶಾಲೆ ವಾರ್ಷಿಕ ಸ್ನೇಹ ಸಮ್ಮೇಳನ ಉದ್ಘಾಟಿಸಿದ ಅವರು, ವಿದ್ಯಾರ್ಥಿಗಳಿಗೆ ಉತ್ತಮ ಸಂಸ್ಕಾರದ ಜತೆಗೆ ರಾಷ್ಟ್ರಾಭಿಮಾನ ಮೂಡಿಸುವ ಕೆಲಸ ಮಾಡಬೇಕು ಎಂದರು.

ಸಾನ್ನಿಧ್ಯ ವಹಿಸಿದ್ದ ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಆಸ್ತಿ, ಐಶ್ವರ್ಯ ಮುಖ್ಯವಲ್ಲ, ಮಕ್ಕಳೇ ನಿಜವಾದ ಸಂಪತ್ತು. ಅವರ ಭವಿಷ್ಯ ರೂಪಿಸುವಲ್ಲಿ ಪಾಲಕರು ಕಾಳಜಿ ವಹಿಸಬೇಕು ಎಂದು ಸಲಹೆ ನೀಡಿದರು.

ಡಾ.ಅರ್ಚನಾ ಮಂಡಿ ಮಾತನಾಡಿ, ಸಾಮಾನ್ಯ ಮಗುವಿನಲ್ಲಿಯೂ ಅಸಾಮಾನ್ಯ ಪ್ರತಿಭೆ ಅಡಗಿರುತ್ತದೆ. ಆದರೆ ಇದನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ನಡೆಯಬೇಕು ಎಂದರು.

ಶ್ರೀಗುರು ಎಜುಕೇಶನ್ ಟ್ರಸ್ಟ್ ಅಧ್ಯಕ್ಷೆ ಸುನೀತಾ ರಮೇಶ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ, ವಿಕಾಸ ಅಕಾಡೆಮಿ ಸಂಚಾಲಕ ಬಸವರಾಜ ವರಕಾಲೆ, ಸುಭದ್ರಾಬಾಯಿ ಸ್ವಾಮಿ, ಗೀತಾ ಶಿವರಾಜ, ಪಾರ್ವತಿ ಶಂಕರ ಉಪಸ್ಥಿತರಿದ್ದರು. ರಮೇಶ ಸ್ವಾಮಿ ಸ್ವಾಗತಿಸಿದರು. ರಮೇಶ ರಾಜೋಳೆ ನಿರೂಪಿಸಿದರು. ಶಾಲಾ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ ಗಮನ ಸೆಳೆಯಿತು.



ಬಸವಕಲ್ಯಾಣದ ಶ್ರೀ ಗುರು ಮಹಾಲಿಂಗೇಶ್ವರ ಶಾಲೆ ವಾರ್ಷಿಕೋತ್ಸವವನ್ನು ಕೆಜೆಪಿ ಜಿಲ್ಲಾ ಉಪಾಧ್ಯಕ್ಷ ಸುನೀಲ ಪಾಟೀಲ್ ಉದ್ಘಾಟಿಸಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಸುನೀತಾ ರಮೇಶ ಸ್ವಾಮಿ, ಬಸವಂತಪ್ಪ ಲವಾರೆ, ರಮೇಶ ಸ್ವಾಮಿ ಉಪಸ್ಥಿತರಿದ್ದರು.

ವಿಜಯವಾಣಿ GULBARGA
ಮಂಗಳವಾರ 19 ಫೆಬ್ರವರಿ 2013

Scanned by CamScanner

# 'ಕಾಟಾಚಾರದ ಭಕ್ತಿ ಬೇಡ'

ಬಸವಕಲ್ಯಾಣ,18– ನಮ್ಮ ಭಕ್ತಿ ಅಚಲ ಶುದ್ಧವಾದ ಭಕ್ತಿ ಮಾಡಬೇಕು. ಆದರೆ ಇಂದು ನಾವು ಕಾಟಾಚಾರದ ಭಕ್ತಿ ಮಾಡುತ್ತಿದ್ದೇವೆ ಎಂದು ತ್ರಿಪುರಾಂತದ ಮರಿದೇವರ ಗುಡ್ಡದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ತಿಳಿಸಿದರು.

ತಾಲೂಕಿನ ಸಸ್ತಾಪೂರದಲ್ಲಿ ಶ್ರೀ ಸದ್ಗುರು ಶರಣ ಶಿವಲಿಂಗೇಶ್ವರರ 17ನೇ ಜಾತ್ರಾ ಮಹೋತ್ಸವದ ನಿಮಿತ್ಯವಾಗಿ ಹಮ್ಮಿಕೊಂಡ ಧರ್ಮ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಭಕ್ತಿ ಇಲ್ಲದೇ ಏನ್ನೆಲ್ಲಾ ಮಾಡಿದರೂ ಅದು ವ್ಯರ್ಥವಾಗುವದು ಎಂದರು.

ನೇತೃತ್ವ ವಹಿಸಿದ ತೊಂಡಿ ಕಟ್ಟಿಯ ಅಭಿನವ ವೆಂಕಟೇಶ ಮಹಾರಾಜರು, ಶ್ರೀ ಪ್ರಭುಲಿಂಗ ಶರಣರು ಪರಮ ಡಾ. ಈಶ್ವರಾನಂದ ಮಹಾಸ್ವಾಮಿಗಳು, ಮಾತೋಶ್ರೀ ಪ್ರಭಾವತಿತಾಯಿ ಸಹ ಮಾತನಾಡಿ ಸಜ್ಜನರ ಸಂಘ ಮಾಡಿ ತಮ್ಮ ಜೀವನ ಪಾವನ ಮಾಡಿಕೊಳ್ಳಿ ಎಂದರು. ದಿವ್ಯ ಸಾನಿಧ್ಯವನ್ನು ಹುಣಸಾಳದ ಶ್ರೀ ನಿಜಗುಣ ದೇವರು ವಹಿಸಿ ಜೀವನದ ಭವಸಾಗರದಲ್ಲಿ ಬಿದ್ದು ಒದ್ದಾಡುತ್ತಿದ್ದೇವೆ. ಆದ್ದರಿಂದ ನಾವು ಪೂಜ್ಯರ, ಸಾಧು ಸಂತರ ವಾಣಿ ಕೇಳಿ ತಮ್ಮ ಜೀವನ ಪಾವನ ಮಾಡಿಕೊಳ್ಳಿ, ಒಂದು ದಿನವಾದರೂ ಲೇಸು ಅನ್ನಿಸಿಕೊಳ್ಳಬೇಕು ಎಂದರು. ಕಾರ್ಯಕ್ರಮದ ನೇತೃತ್ವವನ್ನು ಮಠದ ಪೂಜ್ಯ ಶ್ರೀ ಸದಾನಂದ ಅಪ್ಪಾಜಿಯವರು ಹದಿನ್ನೇಳು ವರ್ಷಗಳ ಪರ್ಯಂತರ ಜಾತ್ರೆ ಬಹು ಅದ್ದೂರಿಯಾಗಿ ನಡೆಯುತ್ತಿದೆ. ಅನೇಕ ಪೂಜ್ಯರ ಪಾದಸ್ಪರ್ಶದಿಂದ ಈ ಸ್ಥಳ ಪಾವನ ವಾಗಿದೆ ಎಂದರು.

.ಇದಕ್ಕು ಮುಂಚೆ ಅನೇಕ ಭಕ್ತರ ಮಧ್ಯ ಅದ್ದೂರಿಯಾಗಿ ರಥೋತ್ಸವ ನಡೆಯಿಸು. ಹಾರಕೂಡದ ಶ್ರೀ ಚನ್ನವೀರ ಶಿವಾಚಾರ್ಯರು ಚಾಲನೆ ನೀಡಿದರು.

ವೇದಿಕೆಯಲ್ಲಿ ಕಾರ್ಯನಿರತ ಪತ್ರಕರ್ತರ ಅಧ್ಯಕ್ಷ ರಾಜೇಂದ್ರ ಗೋಖಲೆ, ಪ್ರೌಢ ಶಾಲೆ ಎಸ್.ಡಿ.ಎಮ್.ಸಿ ಅಧ್ಯಕ್ಷ ಮಡೋಳಪ್ಪ ಪಾಟೀಲ, ಮುಖ್ಯ ಗುರು ಮಲ್ಲಿಕಾರ್ಜುನ ಛತ್ರೆ, ನಿವರ್ತಿರೆಡ್ಡಿ ಇನ್ನಿತರರು ಉಪಸ್ಥಿತರಿದ್ದರು. ಸಂಗೀತ ಸೇವೆ ದೇವೇಂದ್ರ ಕುಮಾರ, ರಾಜಶೇಖರಯ್ಯ ಮಠಪತಿ ನಡೆಸಿಕೊಟ್ಟರು.

ಸಿದ್ಧಣ್ಣ ಗೌಡ್ರು ಸ್ವಾಗತಿಸಿದರು, ಅಂಬಾರಾಯ ಸೈದಾಪುರೆ ನಿರೂಪಿಸಿದರು. ಜಗನ್ನಾಥ ಸಂತಾಜಿ ವಂದಿಸಿದರು.



ಬಸವಕಲ್ಯಾಣ ತಾಲೂಕಿನ ಸಸ್ತಾಪೂರದಲ್ಲಿ ಶ್ರೀ ಸದ್ಗುರು ಶರಣ ಶಿವಲಿಂಗೇಶ್ವರರ 17ನೇ ಜಾತ್ರಾ ಮಹೋತ್ಸವದ ನಿಮಿತ್ಯವಾಗಿ ಹಮ್ಮಿಕೊಂಡ ಧರ್ಮ ಸಭೆಯ ಅಧ್ಯಕ್ಷತೆ ವಹಿಸಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಸಂಯುಕ್ತ ಕರ್ನಾಟಕ । ಕಲಬುರ್ಗಿ । ಫೆಬ್ರುವರಿ । 19 । 2013

# ಚಿತ್ರಕಲೆಯಿಂದ ಪರಿವರ್ತನೆ ಸಾಧ್ಯ: ಮುಳೆ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಸಾಹಿತ್ಯ, ಸಂಗೀತ ಮತ್ತು ಚಿತ್ರಕಲೆಯಲ್ಲಿ ಮನುಷ್ಯನಲ್ಲಿ ಪರಿವರ್ತನೆ ತರುವ ಅದ್ಭುತ ಶಕ್ತಿ ಅಡಗಿದೆ ಎಂದು ಮಾಜಿ ಶಾಸಕ ಎಂ.ಜಿ. ಮುಳೆ ಅಭಿಪ್ರಾಯ ವ್ಯಕ್ತಪಡಿಸಿದರು.

ಇಲ್ಲಿನ ಬಸವೇಶ್ವರ ಚಿತ್ರಕಲಾ ಕಾಲೇಜಿನಲ್ಲಿ ಶನಿವಾರ ಸಂಜೆ ಹಮ್ಮಿಕೊಂಡ 19 ನೇ ಕಲಾ ಮಹೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಚಿತ್ರಕಲೆ ಪ್ರತಿಯೊಬ್ಬರ ಮನಸ್ಸಿನ ಮೇಲೆ ಗಾಢ ಪ್ರಭಾವ ಬೀರುತ್ತದೆ. ಸಂತಸ ತುಂಬಿ ಜೀವನೋತ್ಸಾಹ ಚಿಮ್ಮುವಂತೆ ಮಾಡುತ್ತದೆ. ಆದ್ದರಿಂದ ಇಂಥ ಕಲೆಯನ್ನು ಹೇಳಿಕೊಡುವ ಸಂಸ್ಥೆಗಳು ಬೆಳೆಯಬೇಕು. ಶರಣರು ನಡೆದಾಡಿದ ಪವಿತ್ರ ನೆಲದಲ್ಲಿ ಈ ಚಿತ್ರಕಲಾ ಕಾಲೇಜು ತನ್ನದೇಯಾದ ರೀತಿಯಲ್ಲಿ ಸಾಧನೆ ಮಾಡಿರುವುದು ಹೆಮ್ಮೆಯ ಸಂಗತಿ ಎಂದರು.

ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಸಮಸ್ಯೆಗಳ ಪರಿಹಾರಕ್ಕೆ ಕಲೆಯ ಮೂಲಕ ಉತ್ತರ ಕಂಡುಕೊಳ್ಳಬಹುದಾಗಿದೆ. ಆದ್ದರಿಂದ ಕಲೆ ಮತ್ತು ಕಲಾವಿದರನ್ನು ಪ್ರೋತ್ಸಾಹಿಸಬೇಕಾಗಿದ ಎಂದರು.

ಹುಲಸೂರ ಶಿವಾನಂದ ಸ್ವಾಮೀಜಿ ಎಚ್. ಕಾಶಿನಾಥರೆಡ್ಡಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಚಂದ್ರಕಾಂತ ಸ್ವಾಮಿ, ಪ್ರಾಚಾರ್ಯ ಪ್ರಭುಲಿಂಗಯ್ಯ ಟಂಕಸಾಲಿಮಠ ಮಾತನಾಡಿದರು.

ಚಿತ್ರಕಲಾ ಶಿಕ್ಷಕ ಮಹಾದೇವಯ್ಯ ಮಠ, ಕತೆಗಾರ ಮಚೇಂದ್ರ ಅಣಕಲ್, ಪತ್ರಕರ್ತರಾದ ಶಾಂತಲಿಂಗ ಮಠಪತಿ, ಮಾರ್ತಂಡ ಜೋಶಿ, ಶಿವಪುತ್ರ ಪಾಟೀಲ, ಉದಯಕುಮಾರ ಮುಳೆ, ಗಾಯಕ ರಾಜಶೇಖರ ಶೀಲವಂತ, ವೀರಣ್ಣ ಶೀಲವಂತ ಅವರನ್ನು ಸತ್ಕರಿಸಲಾಯಿತು. ರಮೇಶ ರಾಜೋಳೆ ನಿರೂಪಿಸಿದರು.

ಕಲಾ ಮಹೋತ್ಸವ ಅಂಗವಾಗಿ ಕಾಲೇಜಿನ ವಿದ್ಯಾರ್ಥಿಗಳು ಬಿಡಿಸಿದ ಚಿತ್ರಗಳ ಪ್ರದರ್ಶನ ಏರ್ಪಡಿಸಲಾಗಿತ್ತು.




ಬಸವಕಲ್ಯಾಣದ ಬಸವೇಶ್ವರ ಚಿತ್ರಕಲಾ ಕಾಲೇಜಿನಲ್ಲಿ ಶನಿವಾರ ಸಂಜೆ ಹಮ್ಮಿಕೊಂಡ ಕಲಾ ಮಹೋತ್ಸವ ಉದ್ಘಾಟಿಸಿ ಮಾಜಿ ಶಾಸಕ ಎಂ.ಜಿ.ಮುಳೆ ಮಾತನಾಡಿದರು. ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯರು, ಪ್ರಭುಲಿಂಗಯ್ಯ, ಎಚ್. ಕಾಶಿನಾಥರೆಡ್ಡಿ, ಶಿವರಾಜ ರಾಜೋಳೆ ಪಾಲ್ಗೊಂಡಿದ್ದರು

ಸೋಮವಾರ
11ನೇ ಮಾರ್ಚ್ 2013

ಪ್ರಜಾವಾಣಿ

# ನೆರಳು ಬೆಳಕಿನ ಅಪೂರ್ವ ನೋಟ

ವಿಕ ಸುದ್ದಿಲೋಕ ಬಸವಕಲ್ಯಾಣ

ತ್ರಿಪುರಾಂತದ ಮರಿದೇವರ ಗುಡ್ಡದಲ್ಲಿರುವ ಐತಿಹಾಸಿಕ ಗವಿಮಠದ ಸುರಂಗ ಗವಿಯಲ್ಲಿನ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಮೂರ್ತಿ(ಲಿಂಗ) ಮೇಲೆ ಬೆಳಗ್ಗೆ ಸೂರ್ಯನ ಕಿರಣ ಬೀಳುವ ಮೂಲಕ ಭಕ್ತರಲ್ಲಿ ಅಚ್ಚರಿ ಮೂಡಿಸಿದೆ.

ಶಿವರಾತ್ರಿಗಿಂತ ಮುಂಚೆ ಆರು ದಿನ ಪ್ರತಿ ದಿನ ಬೆಳಗ್ಗೆ 6.30ರಿಂದ 7.10ರ ಮಧ್ಯೆ ಸುಮಾರು 20 ನಿಮಿಷದಿಂದ 30 ನಿಮಿಷದ ವರೆಗೆ ಸೂರ್ಯನ ಕಿರಣಗಳು ಈ ಗವಿಯಲ್ಲಿನ ಮೂರ್ತಿಯ ಮೇಲೆ ಬೀಳುತ್ತವೆ. ಬೆಳಗ್ಗೆ ಸೂರ್ಯನ ಕಿರಣಗಳ ಬೆಳಕಿನಾರತಿ ನಡೆಯುತ್ತದೆ ಎಂಬುದು ಇಲ್ಲಿನ ಭಕ್ತರ ನಂಬಿಕೆ.



ಬಸವಕಲ್ಯಾಣದಲ್ಲಿ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಮೂ... ಮೇಲೆ (ಲಿಂಗ) ಸೂರ್ಯನ ಕಿರಣ ಬಿದ್ದಾಗ ಕಂಡು ಬಂದ ಅಪರೂಪದ ದೃಶ್ಯ.

ವಿಜಯ ಕರ್ನಾಟಕ
ಭಾನುವಾರ,10 ಮಾರ್ಚ್ 2013, ಗುಲ್ಬರ್ಗ

Scanned by CamScanner

# ಮಾನಸಿಕ ನೆಮ್ಮದಿ ನೀಡುವ ಶಕ್ತಿ ಸಂಗೀತಕ್ಕಿದೆ: ತ್ರಿಪುರಾಂತ ಶ್ರೀ

**ಬಸವಕಲ್ಯಾಣ:** ಜೀವನದಲ್ಲಿ ಏನೆಲ್ಲ ಸಾಧಿಸಿದರೂ ಶಾಂತಿ ನೆಮ್ಮದಿ ಇಲ್ಲದಾಗಿದೆ. ಬದುಕಿಗೆ ಅವಶ್ಯಕವಾದ ಮಾನಸಿಕ ನೆಮ್ಮದಿ ನೀಡುವ ಶಕ್ತಿ ಸಂಗೀತಕ್ಕಿದೆ ಎಂದು ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಶ್ರೀ ಸೋಮಶೇಖರ್ ಮಠಪತಿ ಅವರ 38ನೇ ಪುಣ್ಯ ಸ್ಮರಣೋತ್ಸವ ನಿಮಿತ್ತ ನಗರದ ಬಿರಾದಾರ ಬಡಾವಣೆಯಲ್ಲಿ ಮಠಪತಿ ಪರಿವಾರದಿಂದ ಆಯೋಜಿಸಿದ ಧರ್ಮ ಸಭೆ, ಸಂಗೀತ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ಸಂಗೀತ ಜೀವನದ ಅವಿಭಾಜ್ಯ ಅಂಗವಾಗಿದೆ ಎಂದರು. ಪುಣ್ಯ ಸ್ಮರಣೋತ್ಸವ ನಿಮಿತ್ತ ಧರ್ಮ ಸಭೆ ಮತ್ತು ಸಂಗೀತ ಕಾರ್ಯಕ್ರಮವನ್ನು ಪ್ರತಿವರ್ಷ ಆಯೋಜಿಸಿ, ಕಲಾವಿದರನ್ನು ಗೌರವಿಸುವ ಕಾರ್ಯವನ್ನು ರೇವಣಸಿದ್ದಯ್ಯ ಮಠಪತಿ ಪರಿವಾರದವರು ಮಾಡುತ್ತಿದ್ದಾರೆ ಎಂದು ಶ್ರೀಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಸಾನ್ನಿಧ್ಯ ವಹಿಸಿದ ಕಲ್ಲೂರ ಹಿರೇಮಠದ ಶ್ರೀ ಮೃತ್ಯುಂಜಯ ದೇವರು ಆಶೀರ್ವಚನ ನೀಡಿ, ಸಂಸ್ಕಾರದ ಕೊರತೆಯಿಂದಾಗಿ ಸಮಾಜ ದಾರಿ ತಪ್ಪುತ್ತಿದೆ ಎಂದು ಕಳವಳ ವ್ಯಕ್ತಪಡಿಸಿ, ಹಿರಿಯರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ನಡೆದಾಗ ಮಾತ್ರ ಸಮಾಜದ ಸ್ವಾಸ್ಥ್ಯ ಕಾಪಾಡಲು ಸಾಧ್ಯವಿದೆ ಎಂದರು.

ಅಧ್ಯಕ್ಷತೆ ವಹಿಸಿದ ನಿವೃತ್ತ ಜಲಾನಯನ ಅಧಿಕಾರಿ ಬಸವಂತಪ್ಪ ಲವಾರೆ ಮಾತನಾಡಿದರು. ಕಸಾಪ ತಾಲೂಕು ಅಧ್ಯಕ್ಷ ಚಂದ್ರಕಾಂತ ಸ್ವಾಮಿ, ಡಾ.ಬಸವರಾಜ ಸ್ವಾಮಿ, ತೀರ್ಥಯ್ಯ ಕಾಡಾದಿ, ನಾಗಯ್ಯ ಸ್ವಾಮಿ, ಬಕ್ಕಯ್ಯ ಸ್ವಾಮಿ, ಬಸಲಿಂಗಯ್ಯ ಶಂಕರಗುಡಿ, ಪ್ರಭುಲಿಂಗಯ್ಯ ಟಂಕಸಾಲಿಮಠ, ಮಠಪತಿ ಪರಿವಾರದವರು ಭಾಗವಹಿಸಿದ್ದರು. ರೇವಣಸಿದ್ಧಯ್ಯ ಮಠಪತಿ ಸ್ವಾಗತಿಸಿದರು. ವಿಶ್ವನಾಥ ಬಿರಾದಾರ ಪ್ರಾಸ್ತಾವಿಕ ಮಾತನಾಡಿದರು. ರಮೇಶ ರಾಜೋಳೆ ನಿರೂಪಿಸಿದರು, ಬಸವರಾಜ ಮಠಪತಿ ವಂದಿಸಿದರು.

**ಸಂಗೀತ:** ಸೋಮವಾರ ರಾತ್ರಿ ಆರಂಭವಾಗಿ ಮಂಗಳವಾರ ಬೆಳಗಿನ ವರೆಗೆ ನಡೆದ ಸಂಗೀತ ಕಾರ್ಯಕ್ರಮದಲ್ಲಿ ಬೀದರ್ ಜಿಲ್ಲೆ ಸೇರಿದಂತೆ ನಾನಾ ಕಡೆಗಳಿಂದ ಆಗಮಿಸಿದ ಕಲಾವಿದರು ಭಾಗವಹಿಸಿದ್ದರು.

ಕಲಾವಿದರು ಶಾಸ್ತ್ರೀಯ ಸಂಗೀತ, ವಚನ ಗಾಯನ, ಜಾನಪದ ಹಾಡುಗಳನ್ನು ಹಾಡುವುದರ ಮೂಲಕ ಸಂಗೀತಾಸಕ್ತರು ತಲೆ ದೂಗುವಂತೆ ಮಾಡಿದರು. ಕಲಾವಿದರಾದ ಅಣವೀರಯ್ಯ ಸ್ವಾಮಿ ಬೆಳಕೋಟಾ, ವೀರಯ್ಯ ಸ್ವಾಮಿ, ಅರವಿಂದ ಸ್ವಾಮಿ ತೆಗನೂರ, ರವಿ ಸ್ವಾಮಿ, ಜ್ಞಾನೇಶ್ವರ ಬೆಳಕೋಟಾ ಭಾಗವಹಿಸಿದ್ದರು.

**ಸನ್ಮಾನ:** ರಾಜ್ಯ ಪ್ರಶಸ್ತಿ ಪುರಸ್ಕೃತ ವಿರುಪಾಕ್ಷಯ್ಯ ಸ್ವಾಮಿ ಗೋರ್ಟಾ, ನಿವೃತ್ತ ಉಪನ್ಯಾಸಕ ಶ್ರೀಶೈಲ್ ಹುಡೆದ್, ಗುರುಲಿಂಗಯ್ಯ ಸ್ವಾಮಿ ಹಿತ್ತಲ ಶಿರೂರ, ಗುರುಶಾಂತಯ್ಯ ಸ್ವಾಮಿ ಸ್ಥಾವರಮಠ, ಲೋಕನಾಥ ವಾಂಗಲೇರಾ, ಮಹಾಂತಯ್ಯ ಸ್ವಾಮಿ ಅವರನ್ನು ಸತ್ಕರಿಸಲಾಯಿತು.



ಬಸವಕಲ್ಯಾಣ ಶ್ರೀ ಸೋಮಶೇಖರ ಮಠಪತಿಯವರ 38ನೇಯ ಪುಣ್ಯ ಸ್ಮರಣೋತ್ಸವ ನಿಮಿತ್ಯ ನಡೆದ ಧರ್ಮ ಸಭೆ ಉದ್ಘಾಟನಾ ಸಮಾರಂಭದಲ್ಲಿ ಮೃತ್ಯುಂಜಯ ದೇವರು, ತ್ರಿಪುರಾಂತ ಶ್ರೀಗಳು, ಬಸವಂತಪ್ಪ ಲವಾರೆ, ರೇವಣಸಿದ್ಧಯ್ಯ ಮಠಪತಿ ಇದ್ದರು.

**ವಿಜಯವಾಣಿ** ಬುಧವಾರ 27 ಫೆಬವರಿ 2013



ಬಸವಕಲ್ಯಾಣದ ಬಿಕೆಡಿಬಿ ಸಭಾ ಭವನದಲ್ಲಿ ಮಂಗಳವಾರ ನಡೆದ 5ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನವನ್ನು ಶ್ರೀ ಚನ್ನವೀರ ಶಿವಾಚಾರ್ಯರು ಉದ್ಘಾಟಿಸಿದರು. ಸಮ್ಮೇಳನಾಧ್ಯಕ್ಷೆ ಡಾ.ನೀಲಾಂಬಿಕಾ ಪೊಲೀಸ್ ಪಾಟೀಲ್, ತ್ರಿಪುರಾಂತ ಶ್ರೀ, ಎಂ.ಜಿ.ಮುಳೆ, ಪ್ರೊ.ಸಿದ್ರಾಮಪ್ಪ ಮಾಸಿಮಾಡೆ, ಡಾ.ಜಯದೇವಿ ಗಾಯಕವಾಡ, ಚಂದ್ರಕಾಂತ ಸ್ವಾಮಿ ಇದ್ದರು.

**ವಿಜಯವಾಣಿ** ಬುಧವಾರ 13 ಮಾರ್ಚ್ 2013

ಪ್ರಶಸ್ತಿ ಪ್ರದಾನ...

ಬಾಳೆ ಹೊನ್ನೂರಿನಲ್ಲಿ ನಡೆದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ, ಯುಗಮಾನೋತ್ಸವದಲ್ಲಿ ಇಲ್ಲಿಯ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ಶಿವಾಚಾರ ದೀಕ್ಷಾ ಸ್ಥಲ ಶ್ರೇಷ್ಠ ಶ್ರೀ ಪ್ರಶಸ್ತಿಯನ್ನು ಶ್ರೀ ರಂಭಾಪುರಿ ಜಗದ್ಗುರುಗಳು ಪ್ರದಾನ ಮಾಡಿ ಆಶೀರ್ವದಿಸಿದರು.

ಶನಿವಾರ 6 ಏಪ್ರಿಲ್ 2013 **ವಿಜಯವಾಣಿ** GULBARGA



# 'ಸಮಸ್ಯೆಗಳಿಗೆ ಸಂಘಟನೆಗಳು ಸ್ಪಂದಿಸಲಿ'

ಪ್ರಜಾವಾಣಿ ವಾರ್ತೆ

**ಬಸವಕಲ್ಯಾಣ:** ಜನರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸಂಘಟನೆಗಳು ಪ್ರಯತ್ನಿಸಬೇಕು. ಯುವಕರು ಸಮಾಜ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಲಹೆ ಕೊಟ್ಟರು.

ತಾಲ್ಲೂಕಿನ ಮೋರಖಂಡಿಯಲ್ಲಿ ಈಚೆಗೆ ಕರ್ನಾಟಕ ರಕ್ಷಣಾ ವೇದಿಕೆ ಗ್ರಾಮ ಘಟಕವನ್ನು ಉದ್ಘಾಟಿಸಿ ಮಾತನಾಡಿದರು.

ನಾಡು- ನುಡಿಯ ಅಭಿವೃದ್ಧಿ, ಬೆಳವಣಿಗೆಗೆ ಶ್ರಮಿಸುವುದೇ ಕನ್ನಡಮ್ಮನ ನಿಜ ಸೇವೆಯಾಗಿದೆ. ನಿಸ್ವಾರ್ಥ ಮತ್ತು ಪ್ರಾಮಾಣಿಕತೆಯಿಂದ ಜನಸೇವೆ ಮಾಡಬೇಕು ಎಂದು ಹೇಳಿದರು.

ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸುಭಾಷ ಕನಾಡೆ ಮಾತನಾಡಿ ಶಾಲಾ ಮಕ್ಕಳಿಗೆ ಸರ್ಕಾರ ಬಟ್ಟೆ, ಬಿಸಿಯೂಟ, ಶಿಷ್ಯವೇತನ ಕೊಡುತ್ತಿದೆ. ಆದ್ದರಿಂದ ಎಲ್ಲರೂ ತಮ್ಮ ಮಕ್ಕಳಿಗೆ ಶಾಲೆಗೆ ಕಳುಹಿಸಬೇಕು ಎಂದು ಕೇಳಿಕೊಂಡರು.

ಶಾಲೆಗಳು ವಿದ್ಯಾಮಂದಿರ ಆಗಿವೆ. ಆದರೆ ತಾಲ್ಲೂಕಿನ ಕೆಲ ಶಾಲೆಗಳಲ್ಲಿನ ವ್ಯವಸ್ಥೆ ಸರಿಯಾಗಿಲ್ಲ. ಅಸ್ವಚ್ಛತೆ ತಾಂಡವಾಡುತ್ತಿದೆ. ಶೌಚಾಲಯಗಳು ಹಾಳಾಗಿವೆ. ಆದ್ದರಿಂದ ಶಿಕ್ಷಕರು ಮತ್ತು ಸಂಬಂಧಿತರು ಶಾಲೆಗಳ ಪರಿಸರದಲ್ಲಿ ಸ್ವಚ್ಛತೆ ಕಾಪಾಡಬೇಕು ಎಂದು ವಿನಂತಿಸಿದರು.

ರಕ್ಷಣಾ ವೇದಿಕೆ ತಾಲ್ಲೂಕು ಅಧ್ಯಕ್ಷ ಲಾಲಪ್ಪ ಬೊಕ್ಕೆ, ವೀರಭದ್ರಯ್ಯ ಸ್ವಾಮಿ, ಗ್ರಾಮ ಪಂಚಾಯಿತಿ ಅಧ್ಯಕ್ಷ ಸಂದೀಪ ಖಿಲಾರೆ, ಪ್ರಮುಖರಾದ ಗುರುನಾಥ ಸೋನಕೆ, ಛಾಯಾ ರಾಜೀವ, ಮಾಧವರಾವ ಟಿಂಡೆ, ಬಸವರಾಜ ಕುಂಟೆಗಾವೆ ಉಪಸ್ಥಿತರಿದ್ದರು.

ಮಿಥುನ್ ನಿಂಗದ್ ಅವರನ್ನು ಗ್ರಾಮ ಘಟಕದ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ಜಗದೀಶ ಕುಂಟೆಗಾವೆ (ಕಾರ್ಯಾಧ್ಯಕ್ಷ) ನಾಗನಾಥ ಖಂಡಾಳೆ (ಉಪಾಧ್ಯಕ್ಷ) ಸಂಗಮೇಶ ಕುಂಟೆಗಾವೆ (ಪ್ರಧಾನ ಕಾರ್ಯದರ್ಶಿ) ವಿಜಯಕುಮಾರ ಭೂಸಾರೆ (ಕಾರ್ಯದರ್ಶಿ) ಧನರಾಜ, ಸಿದ್ರಾಮ ಅವರನ್ನು ಸದಸ್ಯರನ್ನಾಗಿ ನೇಮಿಸಲಾಯಿತು.



ಬಸವಕಲ್ಯಾಣ ತಾಲ್ಲೂಕಿನ ಮೋರಖಂಡಿಯಲ್ಲಿ ಈಚೆಗೆ ಕರ್ನಾಟಕ ರಕ್ಷಣಾ ವೇದಿಕೆ ಗ್ರಾಮ ಘಟಕವನ್ನು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು

**ಪ್ರಜಾವಾಣಿ** 1ನೇ ಏಪ್ರಿಲ್ 2013 ಸೋಮವಾರ

Scanned by CamScanner

ಮಂಗಳವಾರ 18ನೇ ಸೆಪ್ಟೆಂಬರ್ 2012

ಪ್ರಜಾವಾಣಿ

# ಜಗದ್ಗುರುಗಳ ಭವ್ಯ ಮೆರವಣಿಗೆ

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣದಲ್ಲಿ ಸೋಮವಾರ ಭಾವೈಕ್ಯ ಜನಜಾಗೃತಿ ಧರ್ಮಸಭೆಯ ನಿಮಿತ್ತವಾಗಿ ಕೇದಾರ ಜಗದ್ಗುರುಗಳ ರಥದ ಭವ್ಯ ಮೆರವಣಿಗೆ ನಡೆಸಲಾಯಿತು. ಅನೇಕ ಭಕ್ತರು ಪಾಲ್ಗೊಂಡಿದ್ದರು

ಬಸವಕಲ್ಯಾಣ: ಇಲ್ಲಿ ಮೂರು ದಿನ ನಡೆಯುವ ಭಾವೈಕ್ಯ ಜನಜಾಗೃತಿ ಧರ್ಮ ಸಭೆಯ ನಿಮಿತ್ತವಾಗಿ ಸೋಮವಾರ ಸಂಜೆ ಕೇದಾರ ಜಗದ್ಗುರು ಭೀಮಾಶಂಕರಲಿಂಗ ಶಿವಾಚಾರ್ಯ ಭಗವತ್ಪಾದರನ್ನು ಪುಷ್ಪಗಳಿಂದ ಸಿಂಗರಿಸಿದ ಆಕರ್ಷಕವಾದ ರಥದಲ್ಲಿ ಕೂಡಿಸಿ ಭವ್ಯ ಮೆರವಣಿಗೆ ನಡೆಸಲಾಯಿತು.

ಜಗದ್ಗುರುಗಳನ್ನು ಸಸ್ತಾಪುರ ಬಂಗ್ಲಾ ಹತ್ತಿರದಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಹಾರ್ದಿಕವಾಗಿ ಸ್ವಾಗತಿಸಿ ಅಲ್ಲಿಂದ ತ್ರಿಪುರಾಂತದವರೆಗೆ ಬೈಕ್ ಮೆರವಣಿಗೆ ನಡೆಸುತ್ತ ತರಲಾಯಿತು. ನಂತರ ಬಸವೇಶ್ವರ ವೃತ್ತದವರೆಗೆ ರಥದಲ್ಲಿ ತರಲಾಯಿತು.

ಭಗವಾ ಧ್ವಜಗಳು, ಆರತಿ ಹಿಡಿದ ಮತ್ತು ಕುಂಭಗಳನ್ನು ಹೊತ್ತ ಮಹಿಳೆಯರು, ಡೊಳ್ಳು ಕುಣಿತ, ಬ್ಯಾಂಡ ಬಾಜಾ, ಅಕ್ಕನ ಬಳಗ, ಶಿವ ಭಜನೆ, ಹರಿ ಭಜನೆಯ ತಂಡಗಳೊಂದಿಗೆ ಬಾರುದ ಸುಡುತ್ತ ಉತ್ಸಾಹದಿಂದ ಮೆರವಣಿಗೆ ನಡೆಸಲಾಯಿತು. ಕೆಂಪು ಟೊಪ್ಪಿಗೆಗಳನ್ನು ಹಾಕಿ ಪಾಲ್ಗೊಂಡಿದ್ದ ಯುವಕರು 'ಮಾನವ ಧರ್ಮಕ್ಕೆ ಜಯವಾಗಲಿ' 'ಧರ್ಮದಿಂದಲೇ ವಿಶ್ವಕ್ಕೆ ಶಾಂತಿ' ಎಂಬಿತ್ಯಾದಿ ಜಯಘೋಷ ಹಾಕಿದರು.

ತಡೋಳಾ ರಾಜೇಶ್ವರ ಶಿವಾಚಾರ್ಯರು, ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಗಡಿಗೌಡಗಾಂವ ಶಾಂತವೀರ ಶಿವಾಚಾರ್ಯರು, ಕಾರ್ಯಕ್ರಮ ಸಮಿತಿ ಕಾರ್ಯಾಧ್ಯಕ್ಷ ಸುನಿಲ ಪಾಟೀಲ, ಅಧ್ಯಕ್ಷ ಚಂದ್ರಶೇಖರ ಲಾತೂರೆ, ಮುಖಂಡರಾದ ಶಿವರಾಜ ನರಶೆಟ್ಟಿ, ಆನಂದ ದೇವಪ್ಪ, ನಗರಸಭೆ ಮಾಜಿ ಅಧ್ಯಕ್ಷ ರಾಜೀವ ಸುಗೂರೆ, ಎಪಿಎಂ ಮಾಜಿ ಅಧ್ಯಕ್ಷ ಸಿದ್ರಾಮಪ್ಪ ಗುದಗೆ, ಶರಣಪ್ಪ ಬಿರಾದಾರ ತ್ರಿಪುರಾಂತ, ದಿಲೀಪ ಮಡ್ಡೆ, ರಾಜಕುಮಾರ ಮಂಠಾಳೆ, ಹಣಮಂತ ಅಂಬಲಗೆ, ಪ್ರಭು ಕಾಡಾದಿ, ಸೂರ್ಯಕಾಂತ ಶೀಲವಂತ, ಡಾ.ಬಸವರಾಜ ಸ್ವಾಮಿ, ವೀರಣ್ಣ ಶೀಲವಂತ, ಶಿವರಾಜ ರಾಜೋಳೆ, ಬಕ್ಕಯ್ಯ ಸ್ವಾಮಿ, ಬಸವಂತಪ್ಪ ಲವಾರೆ, ಎ.ಬಿ.ಪಾಟೀಲ, ಎಂ.ಕೆ.ನಂದಿ, ರಾಜೀವ ಪಾಟೀಲ ಹಳ್ಳಿ, ಅರ್ಜುನ ಕನಕ, ಮನೋಜ ಮಾಶೆಟ್ಟೆ, ಶೆಷಪ್ಪ ಗುರಣ್ಣ, ಶಾಂತಯ್ಯ ಮಠಪತಿ, ರವಿ ಚಿವಡೆ ಮತ್ತಿತರರು ಇದ್ದರು.



ಬಸವಕಲ್ಯಾಣದಲ್ಲಿ ಸೋಮವಾರ ಭಾವೈಕ್ಯ ಜನಜಾಗೃತಿ ಧರ್ಮಸಭೆಯಲ್ಲಿ ಪಾಲ್ಗೊಳ್ಳಲು ಆಗಮಿಸಿದ ಕೇದಾರ ಜಗದ್ಗುರು ಅವರನ್ನು ರಥದಲ್ಲಿ ಕುಳ್ಳಿರಿಸಿ ಪುಷ್ಪಮಾಲೆ ಹಾಕಿ ಸ್ವಾಗತಿಸಿ ಮೆರವಣಿಗೆ ನಡೆಸಲಾಯಿತು

ವಿಜಯ ಕರ್ನಾಟಕ

ಸೋಮವಾರ, 11 ಮಾರ್ಚ್ 2013, ಗುಲ್ಬರ್ಗ

# 'ಸಂಗೀತ, ಕಲೆಯಲ್ಲಿ ಅದ್ಭುತ ಶಕ್ತಿ'

▪ ವಿಕ ಸುದ್ದಿಲೋಕ ಬಸವಕಲ್ಯಾಣ

ಸಾಹಿತ್ಯ, ಸಂಗೀತ ಮತ್ತು ಕಲೆಗೆ ಅದ್ಭುತ ಶಕ್ತಿ ಇದೆ. ಈ ನಿಟ್ಟಿನಲ್ಲಿ ಕಲೆ ಮತ್ತು ಕಲಾವಿದರನ್ನು ಗುರುತಿಸುವ ಕೆಲಸ ನಡೆಯಬೇಕು ಎಂದು ಹುಲಸೂರಿನ ಶಿವಾನಂದ ಸ್ವಾಮೀಜಿ ಹೇಳಿದರು.

ನಗರದ ಶ್ರೀ ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯದ 19ನೇ ಕಲಾ ಮಹೋತ್ಸವ ಮತ್ತು ಚಿತ್ರಕಲಾ ಪ್ರದರ್ಶನ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು. ಕಲಾವಿದನ ಭಾವನೆಯಿಂದ ಅರಳಿದ ಕಲೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದರು. ಮಾಜಿ ಶಾಸಕ ಎಂ.ಜಿ.ಮುಳೆ ಉದ್ಘಾಟಿಸಿ ಮಾತನಾಡಿ, ಕಲೆ ಉಳಿಯಬೇಕಾದರೆ ಕಲಾವಿದರನ್ನು ಗುರುತಿಸಿ ಪ್ರೋತ್ಸಾಹಿಸಬೇಕಾದ ಅವಶ್ಯಕತೆ ಇದೆ ಎಂದರು.

ನೇತೃತ್ವವಹಿಸಿದ್ದ ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಮನಸನ್ನು ಅರಳಿಸುವ ಶಕ್ತಿ ಕಲೆಗಿದೆ. ಕಲೆಯನ್ನು ಬಲ್ಲ ವ್ಯಕ್ತಿ ಬದುಕಿನಲ್ಲಿ ಎದುರಾಗುವ ಸಮಸ್ಯೆಗಳನ್ನು ಎದುರಿಸಬಲ್ಲ ಎಂದರು. ಸಾಹಿತಿ ಎಚ್.ಕಾಶಿನಾಥ ರೆಡ್ಡಿ, ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಚಂದ್ರಕಾಂತ ಸ್ವಾಮಿ, ಯುವ ಸಾಹಿತಿ ಮಚ್ಚೇಂದ್ರ ಅಣಕಲ್



ಬಸವಕಲ್ಯಾಣದ ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ನಡೆದ 19ನೇ ಕಲಾ ಮಹೋತ್ಸವ ಕಾರ್ಯಕ್ರಮವನ್ನು ಮಾಜಿ ಶಾಸಕ ಎಂ.ಜಿ.ಮುಳೆ ಉದ್ಘಾಟಿಸಿದರು. ಶಿವಾನಂದ ಸ್ವಾಮೀಜಿ, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಕಾಶಿನಾಥ ರೆಡ್ಡಿ, ಪ್ರಭುಲಿಂಗಯ್ಯ ಟಂಕಸಾಲಿಮಠ, ಚಂದ್ರಕಾಂತ ಸ್ವಾಮಿ ಇದ್ದರು.

Scanned by CamScanner

ಪ್ರಜಾವಾಣಿ ಗುರುವಾರ 14ನೇ ಮಾರ್ಚ್ 2013

# 'ಅರಿವಿನ ಬೆಳಕು ಎಲ್ಲರಲ್ಲಿ ಮೂಡಲಿ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಎಲ್ಲರಲ್ಲೂ ಅರಿವಿನ ಬೆಳಕು ಮೂಡಬೇಕು. ಮೂಢನಂಬಿಕೆ ಆಚರಣೆ ನಿಲ್ಲಬೇಕು ಎಂದು ಗುಹೇಶ್ವರ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಮಂಠಾಳದಲ್ಲಿ ಈಚೆಗೆ ಮಹಾ ಶಿವರಾತ್ರಿ ಅಂಗವಾಗಿ ಹಮ್ಮಿಕೊಂಡಿದ್ದ ದೀಪೋತ್ಸವ ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದರು.

ಸದ್ಗುಣ ಸಂಪನ್ನರಾಗಬೇಕು. ದುಶ್ಚಟ ಬಿಟ್ಟು ಉತ್ತಮ ವ್ಯಕ್ತಿತ್ವ ಬೆಳೆಸಿಕೊಂಡು ಅಭಿವೃದ್ಧಿ ಹೊಂದಬೇಕು ಎಂದರು.

ಕಾಂಗ್ರೆಸ್ ಜಿಲ್ಲಾ ಯುವ ಘಟಕದ ಅಧ್ಯಕ್ಷ ಆನಂದ ದೇವಪ್ಪ ಮಾತನಾಡಿ ಪ್ರತಿಯೊಬ್ಬರು ವಿಭೂತಿ ಧಾರಣೆ ಮಾಡಿ ಲಿಂಗಪೂಜೆ ಮಾಡಿಕೊಳ್ಳಬೇಕು. ಇದರಿಂದ ಮನಸ್ಸಿಗೆ ಶಾಂತಿ, ನೆಮ್ಮದಿ ದೊರಕುತ್ತದೆ. ಬಸವೇಶ್ವರರ ತತ್ವದಂತೆ ನಡೆದರೆ ಜೀವನ ಪಾವನ ಆಗುತ್ತದೆ ಎಂದರು.



ಬಸವಕಲ್ಯಾಣ ತಾಲ್ಲೂಕಿನ ಮಂಠಾಳದ ಮಹಾದೇವ ದೇವಸ್ಥಾನದಲ್ಲಿ ಈಚೆಗೆ ಮಹಾಶಿವರಾತ್ರಿ ಅಂಗವಾಗಿ ಹಮ್ಮಿಕೊಂಡ ದೀಪೋತ್ಸವ ಕಾರ್ಯಕ್ರಮದಲ್ಲಿ ಗುಹೇಶ್ವರ ಸ್ವಾಮೀಜಿ, ಅಭಿನವ ರುದ್ರಮುನಿ ಶಿವಾಚಾರ್ಯರು, ಆನಂದ ದೇವಪ್ಪ, ನಾಗೇಶ ಮಾಳಿ, ಮಹಾದೇವ ಪಾಟೀಲ ಪಾಲ್ಗೊಂಡಿದ್ದರು

ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಧಾರ್ಮಿಕ ಗೋಷ್ಠಿಗಳು ನಡೆಯುವುದರಿಂದ ಜನರಲ್ಲಿ ಅರಿವು ಮೂಡುತ್ತದೆ. ಎಲ್ಲೆಡೆ ಶಾಂತಿ ನೆಲೆಸುತ್ತದೆ ಎಂದರು.

ದೇವಸ್ಥಾನ ಸಮಿತಿ ಅಧ್ಯಕ್ಷ ಮಹಾದೇವ ಪಾಟೀಲ, ತಾಲ್ಲೂಕು ಪಂಚಾಯಿತಿ ಸದಸ್ಯ ನಾಗೇಶ ಮಾಳಿ, ಗ್ರಾಮ ಪಂಚಾಯಿತಿ ಅಧ್ಯಕ್ಷ ವೆಂಕಣ್ಣ ಪದ್ಮೆ, ಉಪಾಧ್ಯಕ್ಷೆ ಮಧುಮತಿ ರೆಡ್ಡಿ, ಮನೋಜ ಮಾಶೆಟ್ಟೆ, ಸಂದೀಪ ಬುಯೆ, ಸಿದ್ದು ಕಾಮಣ್ಣ, ನಾಗಶೆಟ್ಟಿ ಕಾಮಶೆಟ್ಟಿ ಮುಂತಾದವರು ಪಾಲ್ಗೊಂಡಿದ್ದರು. ನೀಲಕಂಠ ಸ್ವಾಮಿ ನಿರೂಪಿಸಿದರು.

ಈ ಸಂದರ್ಭದಲ್ಲಿ ದೇವಸ್ಥಾನದ ಸುತ್ತಲು 1001 ಎಣ್ಣೆ ದೀಪಗಳನ್ನು ಹಚ್ಚಲಾಗಿತ್ತು. ರಾತ್ರಿ, ಭಜನೆ, ಜಾಗರಣೆ ನಡೆಯಿತು.

ಪ್ರಜಾವಾಣಿ ಭಾನುವಾರ 17ನೇ ಮಾರ್ಚ್ 2013

# 'ಮಕ್ಕಳಲ್ಲಿ ವಿದ್ಯೆಯ ಶಕ್ತಿ ತುಂಬಬೇಕು'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಮಕ್ಕಳಲ್ಲಿ ವಿದ್ಯೆಯ ಶಕ್ತಿಯನ್ನು ತುಂಬಿ ಅವರು ಉತ್ತಮ ವ್ಯಕ್ತಿಗಳನ್ನಾಗಿ ರೂಪಿಸಬೇಕಾಗಿದೆ ಎಂದು ತಹಸೀಲ್ದಾರ ಡಿ.ಎಂ.ಪಾಣಿ ಹೇಳಿದರು.

ಇಲ್ಲಿನ ಸಸ್ತಾಪುರ ರಸ್ತೆಯಲ್ಲಿನ ಸಮಾಜ ಕಲ್ಯಾಣ ಇಲಾಖೆಯ ಮೊರಾರ್ಜಿ ದೇಸಾಯಿ ಮಾದರಿಯ ವಸತಿ ಶಾಲೆಯಲ್ಲಿ ಈಚೆಗೆ ಹಮ್ಮಿಕೊಂಡ ವಾರ್ಷಿಕೋತ್ಸವದಲ್ಲಿ ಮಾತನಾಡಿದರು.

ಜಗತ್ತಿನಲ್ಲಿ ಪರಿವರ್ತನೆ ತರುವಲ್ಲಿ ಯುವಕರ ಪಾತ್ರ ಮಹತ್ವದ್ದಾಗಿದೆ. ಇಂದಿನ ಮಕ್ಕಳೇ ನಾಳಿನ ಪ್ರಜೆಗಳಾಗಿದ್ದಾರೆ. ಆದ್ದರಿಂದ ಗುಣಾತ್ಮಕ ಮತ್ತು ಮೌಲ್ಯಯುತ ಶಿಕ್ಷಣ ಕೊಡಲು ಶಿಕ್ಷಕರು ಪ್ರಯತ್ನಿಸಬೇಕು ಎಂದರು.

ಸಾನಿಧ್ಯ ವಹಿಸಿದ್ದ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಟ್ಟು ತಂದೆ ತಾಯಿ ಅನ್ನ ಆಸ್ತಿಯ ಆಶೆ ಮಾಡದೆ ಅವರ ಬೆಳವಣಿಗೆಗೆ ಸಹಕರಿಸಬೇಕು ಎಂದರು.





ಬಸವಕಲ್ಯಾಣದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಈಚೆಗೆ ಹಮ್ಮಿಕೊಂಡ ವಾರ್ಷಿಕೋತ್ಸವದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ತಹಸೀಲ್ದಾರ ಡಿ.ಎಂ.ಪಾಣಿ, ಪ್ರೇಮಸಾಗರ ದಾಂಡೇಕರ್ ಪಾಲ್ಗೊಂಡಿದ್ದರು

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಪ್ರೇಮಸಾಗರ ದಾಂಡೇಕರ್ ಮಾತನಾಡಿ ಯಾವುದೇ ಕ್ಷೇತ್ರದಲ್ಲಿ ಸೋಲು ಅನುಭವಿಸಿದರೆ ಪ್ರಯತ್ನ ನಿಲ್ಲಿಸುವುದು ಸರಿಯಲ್ಲ ಎಂದರು. ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ನಿಂಗರಾಜ್ ಅರಸ್, ನಾರಾಯಣ ಹೊನ್ನಾಳಿ ಮಾತನಾಡಿದರು.

ಪ್ರಾಚಾರ್ಯ ಶರಣಬಸಪ್ಪ ದಂಡೆ, ಹಣಮಂತರೆಡ್ಡಿ, ಎಸ್.ಎಂ. ಜನವಾಡಕರ್, ಶೈಲಜಾ ಇಜಾರೆ, ರಾಜಕುಮಾರ ಹೂಗಾರ, ಶಶಿಧರ ಪಾಟೀಲ, ರೇಣುಕಾ ಮಠಪತಿ, ಅನುರಾಧಾರೆಡ್ಡಿ, ನಟರಾಜ ಜಾಂತೆ ಉಪಸ್ಥಿತರಿದ್ದರು. ಧರ್ಮೇಂದ್ರ ಜ್ಯೋತಿಕರ್ ಸ್ವಾಗತಿಸಿದರು. ದಶರಥ ದಂಡಿನ ನಿರೂಪಿಸಿದರು. ಸಂಜಯ ರೋಹಿಲೆ ವಂದಿಸಿದರು. ಕಾರ್ಯಕ್ರಮದ ನಂತರ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

# ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ನಾಳೆ

**ಬಸವಕಲ್ಯಾಣ:** ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಮಹೋತ್ಸವ ಹಾಗೂ ಧರ್ಮ ಸಭೆ ಸೋಮವಾರ ಮಧ್ಯಾಹ್ನ 12.20ಕ್ಕೆ ತ್ರಿಪುರಾಂತನ ಮರಿದೇವರ ಗುಡ್ಡದ ಗವಿಮಠದಲ್ಲಿ ಜರುಗಲಿದೆ.

ಹಾರಕೂಡನ ಶ್ರೀ ಚನ್ನವೀರ ಶಿವಾಚಾರ್ಯರು ಸಾನ್ನಿಧ್ಯ, ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಲಿದ್ದು, ಔಸಾ ಸಂಸ್ಥಾನದ ಶ್ರೀ ಗುರುಬಾಬಾ ಮಹಾರಾಜ ಉದ್ಘಾಟನೆ ನೆರವೇರಿಸುವರು.

ಕೆಜೆಪಿ ಜಿಲ್ಲಾ ಉಪಾಧ್ಯಕ್ಷ ಸುನೀಲ ಪಾಟೀಲ್ ಅಧ್ಯಕ್ಷತೆ ವಹಿಸಲಿದ್ದು, ಮಾಜಿ ಶಾಸಕರಾದ ಬಸವರಾಜ ಪಾಟೀಲ್ ಅಟ್ಟೂರ್, ಎಂ.ಜಿ.ಮುಳೆ, ಮಲ್ಲಿಕಾರ್ಜುನ ಖೂಬಾ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಆನಂದ ದೇವಪ್ಪ, ಕಾಂಗ್ರೆಸ್ ಮುಖಂಡರಾದ ಶಿವರಾಜ ನರಶೆಟ್ಟಿ, ಬಿ.ನಾರಾಯಣರಾವ, ಬಿಜೆಪಿ ತಾಲೂಕು ಅಧ್ಯಕ್ಷ ಸುಧೀರ ಕಾಡಾದಿ, ಹಾಸ್ಯ ಕಲಾವಿದ ವೈಜಿನಾಥ ಸಜ್ಜನಶೆಟ್ಟಿ ಭಾಗವಹಿಸುವರು.

ಇದೇ ಸಂದರ್ಭದಲ್ಲಿ ಗೋರ್ಟಾದ ವೇದಮೂರ್ತಿ ಶ್ರೀ ವಿರೂಪಾಕ್ಷಯ್ಯ ಶಿವಲಿಂಗಯ್ಯ ಮಠಪತಿ ಅವರಿಗೆ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗುವುದು.

ಮೆರವಣಿಗೆ: ಅಂದು ಬೆಳಗ್ಗೆ 8ಕ್ಕೆ ನಗರದ ಶ್ರೀ ಬಸವೇಶ್ವರ ದೇವಸ್ಥಾನದಿಂದ ಮುಖ್ಯರಸ್ತೆ ಮಾರ್ಗವಾಗಿ ತ್ರಿಪುರಾಂತನ ಗವಿಮಠದ ವರೆಗೆ ಶ್ರೀ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರದ ಭವ್ಯ ಮೆರವಣಿಗೆ ಕುಂಭ, ಕಳಸಗಳೊಂದಿಗೆ ಜರುಗಲಿದೆ.

ಹಿರನಾಗಾಂವನ ಶ್ರೀ ಜಯಶಾಂತಲಿಂಗ ಮಹಾಸ್ವಾಮೀಜಿ ಮೆರವಣಿಗೆಗೆ ಚಾಲನೆ ನೀಡುವರು. ಗಡಿಗೌಡಗಾಂವನ ಶ್ರೀ ಶಾಂತವೀರ ಶಿವಾಚಾರ್ಯರು, ಕಿಟ್ಟಾದ ಶ್ರೀ ಸಿದ್ದೇಶ್ವರ ಶಿವಾಚಾರ್ಯರು, ಅಫಜಲಪೂರನ ಶ್ರೀ ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯರು ನೇತೃತ್ವ ವಹಿಸುವರು.

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಮಹೋತ್ಸವ ನಿಮಿತ್ತ ಗವಿಮಠದಲ್ಲಿ ಭಾನುವಾರ ಬೆಳಗ್ಗೆ8ಕ್ಕೆ ಲಿಂಗದೀಕ್ಷೆ, ಅಯ್ಯಾಚಾರ ಕಾರ್ಯಕ್ರಮ ನಡೆಯಲಿದ್ದು, ಶ್ರೀ ಗುರು ಕುಮಾರೇಶ್ವರ ಸಂಗೀತ ವಿದ್ಯಾಲಯದವರಿಂದ ಸಂಗೀತ ಕಾರ್ಯಕ್ರಮ ಜರುಗುವುದು. ರಾತ್ರಿ 9ಕ್ಕೆ ಬೇಲೂರನ ನಾಗಲಿಂಗೇಶ್ವರ ಭಜನಾ ಸಂಘದವರಿಂದ ಭಜನೆ ನಡೆಯಲಿದೆ. ಭಕ್ತಾಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಕೋರಲಾಗಿದೆ.

ವಿಜಯವಾಣಿ ಭಾನುವಾರ 24 ಮಾರ್ಚ್ 2013

Scanned by CamScanner

ವಿಜಯವಾಣಿ
ಮಂಗಳವಾರ
26 ಮಾರ್ಚ್ 2013

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಮಹೋತ್ಸವ

# ದೇವನಾಮ ಸ್ಮರಣೆಯಲ್ಲಿ ಆಧ್ಯಾತ್ಮಕ ಚೈತನ್ಯ

**ಬಸವಕಲ್ಯಾಣ:** ಮನುಷ್ಯ ಒತ್ತಡದಲ್ಲಿ ಸಿಲುಕಿ ಮಾನಸಿಕ ನೆಮ್ಮದಿ ಕಳೆದುಕೊಳ್ಳುತ್ತಿದ್ದು, ಮಾನಸಿಕ ನೆಮ್ಮದಿಗೆ ಶುದ್ಧವಾದ ಆಧ್ಯಾತ್ಮ ಗಾಳಿ ಬೇಕಿದೆ. ದೇವರ ಧ್ಯಾನ, ನಾಮ ಸ್ಮರಣೆಯಲ್ಲಿ ಆಧ್ಯಾತ್ಮಿಕ ಚೈತನ್ಯ ಶಕ್ತಿ ಅಡಗಿದೆ ಎಂದು ಹಾರಕೂಡ ಸಂಸ್ಥಾನ ಹಿರೇಮಠದ ಶ್ರೀ ಚನ್ನವೀರ ಶಿವಾಚಾರ್ಯರು ನುಡಿದರು.

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ನಿಮಿತ್ತ ತ್ರಿಪುರಾಂತ ಗವಿ ಮಠದಲ್ಲಿ ನಡೆದ ಜನಜಾಗೃತಿ ಧರ್ಮ ಸಭೆಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ಯಾವ ದೇವರನ್ನಾದರೂ, ಯಾವುದೇ ರೂಪದಲ್ಲಾದರೂ ಭಕ್ತಿಯಿಂದ ಆರಾಧಿಸಿ ಪೂಜೆ ಮಾಡಿ. ದೇವಸ್ಮರಣೆಯಲ್ಲಿ ವಿಶ್ವ ಚೈತನ್ಯ ಶಕ್ತಿ ಇದೆ ಎಂದರು.

ಮನು ಕುಲಕ್ಕೆ ಬೆಳಕು ತೋರಿಸಿದ ಶ್ರೀಜಗದ್ಗುರು ರೇಣುಕಾಚಾರ್ಯರು ಯಾವುದೇ ಒಂದು . ಸಮಾಜ ಮತ್ತು ಸಮುದಾಯಕ್ಕೆ ಸಿಮೀತರಲ್ಲ, ಅವರು ಇಡೀ ಮಾನವ ಕುಲಕ್ಕೆ ಮಾರ್ಗದರ್ಶನ ನೀಡಿ, ಆಶೀರ್ವದಿಸಿದ ಸತ್ಪುರುಷರಾಗಿದ್ದಾರೆ ಎಂದರು.

ಬಸವಣ್ಣನವರ ಕರ್ಮ ಭೂಮಿ ಪವಿತ್ರ ನೆಲದಲ್ಲಿ ಜಗದ್ಗುರು ರೇಣುಕಾಚಾರ್ಯರ ಜಯಂತಿ ಭಾವಪೂರ್ಣವಾಗಿ ಆಚರಿಸಲಾಗುತ್ತಿದೆ. ಇಲ್ಲಿಯ ಘನಲಿಂಗ ರುದ್ರಮುನಿಗಳಲ್ಲಿ (ಗವಿಮಠದಲ್ಲಿ) ಆಧ್ಯಾತ್ಮದ ಚೈತನ್ಯ ಶಕ್ತಿ ಇದೆ ಎಂದ ಶ್ರೀಗಳು, ತ್ರಿಪುರಾಂತ ಶ್ರೀಗಳ ಕಾರ್ಯವನ್ನು ಶ್ಲಾಘಿಸಿ, ಶ್ರೀಮಠದ ಅಭಿವೃದ್ಧಿಗೆ ಭಕ್ತರು ಕೈಜೋಡಿಸಬೇಕು ಎಂದರು.

ಉದ್ಘಾಟನೆ ನೆರವೇರಿಸಿದ ಔಸಾ ಸಂಸ್ಥಾನದ ಶ್ರೀ ಗುರುಬಾಬಾ ಮಹಾರಾಜ ಆಶೀರ್ವಚನ ನೀಡಿ, ಮನುಷ್ಯ ಜೀವನ ಇದ್ದಲ್ಲಿ ಧರ್ಮ ಪಾಲನೆ ಅತ್ಯಾವಶ್ಯಕ. ಜೀವನದಲ್ಲಿ ಎದುರಾಗುವ ಸಂಕಷ್ಟಗಳ ಪರಿಹಾರಕ್ಕೆ ಧರ್ಮ ಬೇಕು. ಧರ್ಮ ಸಂಸ್ಕಾರ ನೀಡುವ ಕೆಲಸ ಮಠಗಳು ಮಾಡುತ್ತಿವೆ. ಉತ್ತಮ ಸಂಸ್ಕಾರ ನೀಡುವ ಕೆಲಸ ತ್ರಿಪುರಾಂತ ಗವಿಮಠದಿಂದ ನಡೆದಿದೆ ಎಂದರು.

ಅಫಜಲಪುರನ ಶ್ರೀ ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯರು ಆಶೀರ್ವಚನ ನೀಡಿ, ತ್ರಿಪುರಾಂತ ಗವಿ ಮಠದ ಶ್ರೀಗಳು ಚಿಕ್ಕ ವಯಸ್ಸಿನವರಾಗಿದ್ದು, ಸಮಾಜಮುಖಿ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಶ್ರೀಮಠದ ಜೀರ್ಣೋದ್ಧಾರ ಜವಾಬ್ದಾರಿ ಭಕ್ತರ ಮೇಲಿದೆ ಎಂದರು.


ಬಸವಕಲ್ಯಾಣ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ನಿಮಿತ್ತ ಗವಿ ಮಠದಲ್ಲಿ ನಡೆದ ಧರ್ಮ ಸಭೆಯನ್ನು ಶ್ರೀಗುರು ಬಾಬಾ ಮಹಾರಾಜ ಉದ್ಘಾಟಿಸಿದರು. ಶ್ರೀ ಚನ್ನವೀರ ಶಿವಾಚಾರ್ಯರು, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯರು. ಶ್ರೀ ಶಾಂತವೀರ ಶಿವಾಚಾರ್ಯರು, ಕಿಟ್ಟಾ ಶ್ರೀಗಳು, ಎಂ.ಜಿ.ಮುಳೆ ಇದ್ದರು.

ತ್ರಿಪುರಾಂತ ಗವಿ ಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿ ಆಶೀರ್ವಚನ ನೀಡಿದರು. ಗಡಿಗೌಡಗಾಂವನ ಶ್ರೀ ಶಾಂತವೀರ ಶಿವಾಚಾರ್ಯರು, ಕಿಟ್ಟಾದ ಶ್ರೀ ಸಿದ್ಧೇಶ್ವರ ಶಿವಾಚಾರ್ಯರು, ಸದಲಾಪುರನ ಶ್ರೀ ಸಿದ್ಧಲಿಂಗ ಶಿವಾಚಾರ್ಯರು, ಶ್ರೀ ಚನ್ನವೀರ ಸ್ವಾಮೀಜಿ ನೇತೃತ್ವ ವಹಿಸಿದ್ದರು.

ಮಾಜಿ ಶಾಸಕ ಎಂ.ಜಿ.ಮುಳೆ, ಬಿಜೆಪಿ ತಾಲೂಕು ಅಧ್ಯಕ್ಷ ಸುಧೀರ ಕಾಡಾದಿ, ಪ್ರಮುಖರಾದ ಶರಣಪ್ಪ ಬಿರಾದಾರ್, ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಅಧ್ಯಕ್ಷ ಚಂದ್ರಕಾಂತ ಸ್ವಾಮಿ, ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ತಾಲೂಕು ಅಧ್ಯಕ್ಷ ವೀರಣ್ಣ ಶೀಲವಂತ, ಗುರುಶಾಂತಯ್ಯ ಸ್ಥಾವರ ಮಠ ಉಪಸ್ಥಿತರಿದ್ದರು. ಡಾ.ಬಸವರಾಜ ಸ್ವಾಮಿ ಸ್ವಾಗತಿಸಿ, ಪ್ರಸ್ತಾವಿಕ ಮಾತನಾಡಿದರು. ರಮೇಶ ರಾಜೋಳೆ ನಿರೂಪಿಸಿದರು. ಹಾಸ್ಯ ಕಲಾವಿದ ವೈಜಿನಾಥ ಸಜ್ಜನಶೆಟ್ಟಿ ಹಾಸ್ಯ ಚಟಾಕಿಗಳ ಮೂಲಕ ಗಮನ ಸೆಳೆದರು.

## ಅಭಿನವ ಘನಲಿಂಗ ಶ್ರೀ ಪ್ರಶಸ್ತಿ

ಕರ್ನಾಟಕ ಸಂಗೀತ ನೃತ್ಯ ಅಕಾಡೆಮೆಯಿಂದ ಕಲಾಶ್ರೀ ಪ್ರಶಸ್ತಿ ಪುರಸ್ಕೃತ ತಾಲೂಕಿನ ಗೋರ್ಟಾ ಗ್ರಾಮದ ಹಿರಿಯ ಸಂಗೀತ ಕಲಾವಿದ ವಿರೂಪಾಕ್ಷಯ್ಯ ಶಿವಲಿಂಗಯ್ಯ ಮಠಪತಿ ಗೋರ್ಟಾ ಅವರಿಗೆ 2012-13ನೇ ಸಾಲೀನ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು. ತ್ರಿಪುರಾಂತ ಗವಿ ಮಠದಿಂದ ಪ್ರತಿ ವರ್ಷ ನೀಡುವ ಈ ಪ್ರಶಸ್ತಿ 5 ಸಾವಿರ ರೂ. ನಗದು ಮತ್ತು ಪ್ರಶಸ್ತಿ ಫಲಕವನ್ನೊಳಗೊಂಡಿದ್ದು, ಸೋಮವಾರ ನಡೆದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ, ಜನಜಾಗೃತಿ ಧರ್ಮ ಸಭೆಯಲ್ಲಿ ಪ್ರದಾನ ಮಾಡಲಾಗಿತು. ಶ್ರೀ ಚನ್ನವೀರ ಶಿವಾಚಾರ್ಯರು, ಶ್ರೀ ಗುರುಬಾಬಾ ಮಹಾರಾಜ ಔಸಾ, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹಾಗೂ ಪ್ರಮುಖರು ಉಪಸ್ಥಿತರಿದ್ದರು.


ಬಸವಕಲ್ಯಾಣ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ನಿಮಿತ್ತ ಗವಿ ಮಠದಲ್ಲಿ ನಡೆದ ಧರ್ಮ ಸಭೆಯಲ್ಲಿ ವಿರೂಪಾಕ್ಷಯ್ಯ ಮಠಪತಿ ಅವರಿಗೆ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು.ಶ್ರೀ ಚನ್ನವೀರ ಶಿವಾಚಾರ್ಯರು, ಶ್ರೀ ಗುರುಬಾಬಾ ಮಹಾರಾಜ, ಶ್ರೀ ಶಾಂತವೀರ ಶಿವಾಚಾರ್ಯರು, ತ್ರಿಪುರಾಂತ ಶ್ರೀಗಳು, ಅಫಜಲಪೂರ ಶ್ರೀಗಳು, ಎಂ.ಜಿ.ಮುಳೆ, ಸುಧೀರ ಕಾಡಾದಿ ಇದ್ದರು.

# ವೈಭವದ ಸಾಂಸ್ಕೃತಿಕ ಮೆರವಣಿಗೆ


ಬಸವಕಲ್ಯಾಣ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ನಿಮಿತ್ತ ನಗರದಲ್ಲಿ ನಡೆದ ಶ್ರೀ ರೇಣುಕಾಚಾರ್ಯರರ ಭಾವಚಿತ್ರದ ಮೆರವಣಿಗೆಗೆ ಶ್ರೀ ಜೈಶಾಂತಲಿಂಗ ಸ್ವಾಮೀಜಿ ಚಾಲನೆ ನೀಡಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ.ಬಸವರಾಜ ಸ್ವಾಮಿ, ಪ್ರಭುಲಿಂಗಯ್ಯ ಟಂಕ ಸಾಲಿಮಠ ಇದ್ದರು.

**ಬಸವಕಲ್ಯಾಣ:** ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಮಹೋತ್ಸವದ ನಿಮಿತ್ತ ಅಲಂಕೃತ ವಾಹನದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರದ ಭವ್ಯ ಮೆರವಣಿಗೆ ಸಾಂಸ್ಕೃತಿಕ ವೈಭವದೊಂದಿಗೆ ಸೋಮವಾರ ನಗರದಲ್ಲಿ ಜರುಗಿತು.

ನಗರದ ಶ್ರೀ ಬಸವೇಶ್ವರ ದೇವಸ್ಥಾನದಿಂದ ಗಾಂಧಿ ವೃತ್ತ, ಬಸವ ವೃತ್ತ, ಅಂಬೇಡ್ಕರ್ ವೃತ್ತ, ಹರಳಯ್ಯ ವೃತ್ತದ ಮೂಲಕ ತ್ರಿಪುರಾಂತನ ಗವಿ ಮಠದವರೆಗೆ ಜೈಘೋಷಗಳ ಮಧ್ಯೆ ತಾಳ, ಮೇಳ, ವಾದ್ಯಗೊಂದಿಗೆ ನಡೆಯಿತು. ಮೆರವಣಿಗೆಗೆ ದೇವಸ್ಥಾನದಲ್ಲಿ ಹಿರನಾಗಾಂವನ ಶ್ರೀ ಜೈಶಾಂತಲಿಂಗೇಶ್ವರ ಮಹಾಸ್ವಾಮೀಜಿ ಚಾಲನೆ ನೀಡಿದರು. ಗಡಿಗೌಡಗಾಂವನ ಶ್ರೀ ಶಾಂತವೀರ ಶಿವಾಚಾರ್ಯರು, ಶ್ರೀ ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯರು, ತ್ರಿಪುರಾಂತನ ಶ್ರೀ ಅಭಿನವ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿದ್ದರು.

ಶಣರಣಪ್ಪ ಬಿರಾದಾರ, ಮಲ್ಲಯ್ಯ ಹಿರೇಮಠ, ಬಸವರಾಜ ಸ್ವಾಮಿ, ಗುರುಪಾದಪ್ಪ ಪಾಟೀಲ್, ದಯಾನಂದ ಶೀಲವಂತ, ವೀರಣ್ಣ ಶೀಲವಂತ, ಗುರುಲಿಂಗಯ್ಯ ಸ್ವಾಮಿ, ಸೂರ್ಯಕಾಂತ ಶೀಲವಂತ, ಡಾ.ಬಸವರಾಜ ಸ್ವಾಮಿ, ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ನಂದಿ, ರಮೇಶ ಸ್ವಾಮಿ, ಚಂದ್ರಕಾಂತ ಸ್ವಾಮಿ, ಪ್ರಭುಲಿಂಗಯ್ಯ ಟಂಕಸಾಲಿಮಠ, ಶಿವಕುಮಾರ ಮಠಪತಿ, ಬಕ್ಕಯ್ಯ ಸ್ವಾಮಿ, ಡಾ.ವಿ.ಎಸ್.ಮಂಡಿ, ಸದಾನಂದ ಸ್ವಾಮಿ, ರುದ್ರೇಶ್ವರ ಗೋರ್ಟಾ, ರುದ್ರಮುನಿ ಮಠಪತಿ, ಸೋಮನಾಥ ಸ್ವಾಮಿ, ಕಾಶಿನಾಥ ಸ್ವಾಮಿ, ಗುರುಲಿಂಗಯ್ಯ ಸೇರಿದಂತೆ ಪ್ರಮುಖರು ಹಾಗೂ ಮಹಿಳೆಯರು ಭಾಗವಹಿಸಿದ್ದರು.

### ಕೆರೆಗೆ ಜಗದ್ಗುರು ರೇವಣಸಿದ್ಧರ ಹೆಸರಿಡಿ

ಇಲ್ಲಿಯ ಐತಿಹಾಸಿಕ ತ್ರಿಪುರಾಂತ ಕೆರೆಗೆ ಶ್ರೀ ಜಗದ್ಗುರು ರೇವಣಸಿದ್ದೇಶ್ವರರ ಹೆಸರನ್ನು ನಾಮಕರಣಮಾಡಬೇಕು ಎಂದು ಡಾ.ಬಸವರಾಜ ಸ್ವಾಮಿ ಒತ್ತಾಯಿಸಿದರು. ತ್ರಿಪುರಾಂತ ಕೆರೆಯನ್ನು ಶ್ರೀ ರೇವಣಸಿದ್ದೇಶ್ವರರು ನಿರ್ಮಿಸಿದ್ದು, ಕೆರೆಗೆ ಮರು ನಾಮಕರಣಕ್ಕಾಗಿ ಪ್ರಯತ್ನಿಸಬೇಕು ಎಂದು ಮನವಿ ಮಾಡಿದರು.

Scanned by CamScanner

ಸಂಯುಕ್ತ ಕರ್ನಾಟಕ | ಏಪ್ರಿಲ್ | 9 | 2013

# 'ಒತ್ತಡದ ಬದುಕಿನಲ್ಲಿ ಮಾನಸಿಕ ನೆಮ್ಮದಿಯೇ ಇಲ್ಲ'

ಬಸವಕಲ್ಯಾಣ,8- ಮನುಷ್ಯನಿಗೆ ಒತ್ತಡದ ಬದುಕಿನಲ್ಲಿ ಮಾನಸಿಕ ನೆಮ್ಮದಿ ಇಲ್ಲವಂತಾಗಿದೆ ಎಂದು ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಮಳಖೇಡದ ಲಿಂ. ಶ್ರೀಸದ್ಗುರು ಗುರು ಕಾರ್ತಿಕೇಶ್ವರ ಶಿವಯೋಗಿಗಳವರ 11ನೇ ಪುಣ್ಯ ಸ್ಮರಣೋತ್ಸವ ನಿಮಿತ್ತ ತಾಲೂಕಿನ ಜಾಫರ್‌ವಾಡಿಯ ಗ್ರಾಮದ ಮಹಾರಾಜಪ್ಪ ಮುಳೆ ಪರಿವಾರದಿಂದ ಆಯೋಜಿಸಿದ ಪ್ರವಚನ ಹಾಗೂ ಸಂಗೀತ ಸಮಾರಂಭದ ನೇತೃತ್ವ ವಹಿಸಿ ಆಶೀರ್ವಚನ ನೀಡಿದ ಅವರು ಜೀವನದಲ್ಲಿ ಶಾಂತಿ, ನೆಮ್ಮದಿಗಾದಿ ಪ್ರತಿಯೊಬ್ಬರು ಧರ್ಮದ ಮಾರ್ಗದಲ್ಲಿ ನಡೆಯಬೇಕಾಗಿದೆ ಎಂದರು.

ಸಾನ್ನಿಧ್ಯ ವಹಿಸಿದ ಇಟಗಾದ ಶ್ರೀ ಚನ್ನಮಲ್ಲ ತ್ಯಾಗಿಗಳು ಆಶೀರ್ವಚನ ನೀಡಿ, ಲಿಂ. ಶ್ರೀಸದ್ಗುರು ಗುರು ಕಾರ್ತಿಕೇಶ್ವರ ಶಿವಯೋಗಿಗಳು ಸಮಾಜಕ್ಕೆ ಬೆಳಕು ತೋರಿದ ಮಹಾನುಭಾವರು. ಸತ್ಪುರುಷರ ಪುಣ್ಯ ಸ್ಮರಣೋತ್ಸವದ ಮಾಡುವ ಮೂಲಕ ಮುಳೆ ಪರಿವಾರ ಮಾದರಿಯ ಕಾರ್ಯ ಮಾಡುತ್ತಿದೆ ಎಂದು ಶ್ಲಾಘಿಸಿದರು.

ಸಮಾರಂಭದಲ್ಲಿ ಸುಕ್ಷೇತ್ರ ಹಾರಕೂಡ ಸಂಸ್ಥಾನ ಹಿರೇಮಠದ ಶ್ರೀ ಚನ್ನವೀರ ಶಿವಾಚಾರ್ಯರ ತುಲಾಭಾರ ಕಾರ್ಯಕ್ರಮ ಜರುಗಿತು. ಜಿಪಂ ಮಾಜಿ ಸದಸ್ಯ ಜಗನ್ನಾಥ ಪಾಟೀಲ್ ಮಂಠಾಳ, ಪ್ರಮುಖರಾದ ಶಾಂತವಿಜಯ ಪಾಟೀಲ್, ಚನ್ನಪ್ಪಾ ಅಂಬಾಡೆ, ಮಹಾರಾಜಪ್ಪ ಮುಳೆ, ವೀರಣ್ಣ ಮುಳೆ, ಚನ್ನಬಸವಾ ಪೊಲೀಸ್ ಪಾಟೀಲ್, ಶಾಸ್ತ್ರೀ ಬಿರಾದಾರ, ವಿನಾಯಕ ಚಿಟಂಪಲ್ಲೆ, ಶಾಂತಪ್ಪ ಮುಡಬೆ, ದಾನಪ್ಪ ಮುಳೆ, ನಿಜಲಿಂಗಪ್ಪ ಮುಳೆ, ರಾಮಯ್ಯ ಸ್ವಾಮಿ ಅಲ್ಲದೆ ಎಕಲೂರ, ಖಾನಾಪೂರ, ಘಾಟಹಿಪ್ಪರಗಾ, ಗುಂಡೂರ ಗ್ರಾಮಗಳಿಂದ ಸೇರಿದಂತೆ ಮತ್ತಿತರ ಗ್ರಾಮಗಳಿಂದ ಅನೇಕ ಜನರು ಉಪಸ್ಥಿತರಿದ್ದರು.

ಸಂಗೀತ: ಬೆಂಗಳೂರಿನ ಶೃತಿ ಜೋಶಿ, ಅಪರ್ಣಾ ಮಡಿವಾಳೆ, ಭದ್ರಿನಾಥ ಮುಡಬಿ, ಧೋಳಪ್ಪ ಮುಡಬಿ, ರಾಜಕುಮಾರ ಮುಡಬಿ, ಶಿವಶರಣಪ್ಪ ಆಳಂದ, ಧೂಳಯ್ಯ ಸ್ವಾಮಿ, ಶಿವರಾಜ ಎಸ್.ಡಿ ಸೇರಿದಂತೆ ಇತರ ಕಲಾವಿದರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ರುದ್ರಾಭಿಷೇಕ: ಪುಣ್ಯಸ್ಮರಣೋತ್ಸವದ ನಿಮಿತ್ತ ಬೆಳಗ್ಗೆ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ ಸೇರಿದಂತೆ ಇತರ ಕಾರ್ಯಕ್ರಮಗಳು ಸಹ ನಡೆದವು.



ಬಸವಕಲ್ಯಾಣ ಮಳಖೇಡದ ಲಿಂ. ಶ್ರೀಸದ್ಗುರು ಗುರು ಕಾರ್ತಿಕೇಶ್ವರ ಶಿವಯೋಗಿಗಳವರ 11ನೇ ಪುಣ್ಯ ಸ್ಮರಣೋತ್ಸವ ನಿಮಿತ್ತ ತಾಲೂಕಿನ ಜಾಫರ್‌ವಾಡಿಯ ಗ್ರಾಮದ ಮಹಾರಾಜಪ್ಪ ಮುಳೆ ಪರಿವಾರದಿಂದ ಆಯೋಜಿಸಿದ ಪ್ರವಚನ ಹಾಗೂ ಸಂಗೀತ ಸಮಾರಂಭದ ನೇತೃತ್ವ ವಹಿಸಿದ ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು.

---

ಸಂಯುಕ್ತ ಕರ್ನಾಟಕ | ಏಪ್ರಿಲ್ | 6 | 2013



ಬಸವಕಲ್ಯಾಣ ಇತ್ತೀಚೆಗೆ ಬಾಳೆಹೊನ್ನೂರಿನಲ್ಲಿ ನಡೆದ ಸಮಾರಂಭದಲ್ಲಿ ತ್ರಿಪುರಾಂತ ಗವಿಮಠದ ಪೂಜ್ಯರಾದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ರಂಭಾಪುರಿ ಶ್ರೀ ವೀರಸೋಮೇಶ್ವರ ಜಗದ್ಗುರುಗಳು 'ಶಿವಶರಣರ ದೀಕ್ಷಾಸ್ಥಲಶ್ರೇಷ್ಠ ಶ್ರೀ' ಮಂಗಳಕರ ಪ್ರಶಸ್ತಿ ನೀಡಿ ಗೌರವಿಸಲಾಯಿತು.

## ತ್ರಿಪುರಾಂತ ಶ್ರೀಗಳಿಗೆ ಅಭಿನಂದನೆ

ಬಸವಕಲ್ಯಾಣ,5- ಧಾರ್ಮಿಕ, ಸಂಸ್ಕೃತಿಕ, ಜನಜಾಗೃತಿ ಮೂಡಿಸುವ ಮೂಲಕ ಗಣನಿಯ ಸೇವೆ ಸಲ್ಲಿಸಿದ ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ಶಿವಶರಣರ ದೀಕ್ಷಾಸ್ಥಲಶ್ರೇಷ್ಠ ಶ್ರೀ ಮಂಗಳಕರ ಪ್ರಶಸ್ತಿ ಲಭಿಸಿರುವುದಕ್ಕೆ ಇಲ್ಲಿನ ಭಕ್ತ ಸಮೂಹದ ವತಿಯಿಂದ ಸನ್ಮಾನಿಸಿ ಅಭಿನಂದಿಸಲಾಯಿತು. ಕಳೆದ ತಿಂಗಳ 27ರಂದು ಬಾಳೆಹೊನ್ನೂರಲ್ಲಿ ನಡೆದ ರಂಭಾಪುರಿ ಶ್ರೀ ವೀರಸೋಮೇಶ್ವರ ಜಗದ್ಗುರುಗಳು, ಶ್ರಿ ಜಗದ್ಗುರು ರೇಣುಕಾಚಾರ್ಯರ ಜಯಂತಿ ಹಾಗೂ ಯುಗಮಾನೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಶಿವಶರಣಪ್ಪಾ ಬಿರಾದಾರ, ದಯಾನಂದ ಶೀಲವಂತ, ರಮೇಶ ರಾಜೋಳೆ, ಸೂರ್ಯಕಾಂತ ಶೀಲವಂತ, ವೀರಣ್ಣಾ ಶೀಲವಂತ, ಡಾ. ಬಸವರಾಜ ಸ್ವಾಮಿ, ರಾಜಕುಮಾರ ದೇಗಾಂವ ಸೇರಿದಂತೆ ಮತ್ತಿತರು ಉಪಸ್ಥಿತರಿದ್ದರು.

---

# 'ಶೈಕ್ಷಣಿಕ ಸಮಸ್ಯೆ ಬಗೆಹರಿಸಲು ಹೋರಾಟ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ತಾಲ್ಲೂಕಿನ ಗಡಿ ಭಾಗದ ಶಾಲೆಗಳಲ್ಲಿನ ಸಮಸ್ಯೆಗಳನ್ನು ಬಗೆಹರಿಸಲು ರಕ್ಷಣಾ ವೇದಿಕೆಯಿಂದ ಹೋರಾಟ ನಡೆಸಲಾಗುವುದು ಎಂದು ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸುಭಾಷ ಕನಾಡೆ ಹೇಳಿದರು.

ತಾಲ್ಲೂಕಿನ ಗುಂಡೂರನಲ್ಲಿ ಈಚೆಗೆ ಕರ್ನಾಟಕ ರಕ್ಷಣಾ ವೇದಿಕೆಯ ಗ್ರಾಮ ಶಾಖೆಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ಸಾಮಾಜಿಕ ಸಮಸ್ಯೆಗಳನ್ನು ಸಹ ಬಿಡಿಸಲು ಯತ್ನಿಸಲಾಗುವುದು. ನಾಡು ನುಡಿಯ ಬಗ್ಗೆ ಜನರಲ್ಲಿ ಜಾಗೃತಿ ತರುವುದಕ್ಕಾಗಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ತಿಳಿಸಿದರು.



ಬಸವಕಲ್ಯಾಣ ತಾಲ್ಲೂಕಿನ ಗುಂಡೂರನಲ್ಲಿ ಈಚೆಗೆ ಕರ್ನಾಟಕ ರಕ್ಷಣಾ ವೇದಿಕೆ ಗ್ರಾಮ ಶಾಖೆಯನ್ನು ಉದ್ಘಾಟಿಸಿ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ವಿತರಿಸಲಾಯಿತು. ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯರು, ಸುಭಾಷ ಕನಾಡೆ, ಬಾಬುರಾವ ಸೋನಾರ, ಲಾಲಪ್ಪ ಬೊಕ್ಕೆ ಪಾಲ್ಗೊಂಡಿದ್ದರು

ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಗುರಿಯಿಲ್ಲದ ಜೀವನ ವ್ಯರ್ಥ ಎಂದರು. ಬಡವರ, ಶೋಷಿತರ ಪರವಾಗಿ ರಕ್ಷಣಾ ವೇದಿಕೆ ಕೆಲಸ ಮಾಡಬೇಕಾಗಿದೆ ಎಂದರು.

ವೇದಿಕೆ ತಾಲ್ಲೂಕು ಅಧ್ಯಕ್ಷ ಲಾಲಪ್ಪ ಬೊಕ್ಕೆ, ಬಸವರಾಜ ತೊಗಲೆ, ಮಿಥುನ ಮೋರಖಂಡಿ, ತುಕಾರಾಮ ಕೊಪ್ಪೆ ಉಪಸ್ಥಿತರಿದ್ದರು. ಭಾಗ್ಯಶ್ರೀ ಅತ್ಲಾಪುರ ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಬಾಬುರಾವ ಸೋನಾರ ಅವರನ್ನು ಅಧ್ಯಕ್ಷರನ್ನಾಗಿ ಮತ್ತು ಶಾಂತಾಬಾಯಿ ಸಿಂಗಾರೆ ಅವರನ್ನು ಮಹಿಳಾ ಘಟಕದ ಅಧ್ಯಕ್ಷೆಯನ್ನಾಗಿ ನೇಮಿಸಲಾಯಿತು. ಇತರೆ ಪದಾಧಿಕಾರಿಗಳು ಹೀಗಿದ್ದಾರೆ. ಸಚಿನ ಗುಂಡೆ (ಕಾರ್ಯಾಧ್ಯಕ್ಷ) ಸಿದ್ರಾಮ ಬೆಳಮಗೆ (ಉಪಾಧ್ಯಕ್ಷ) ಬಾಲಾಜಿ ಪಾಂಡುರಂಗ, ವಿಜಯಕುಮಾರ ಹಾರಕೂಡೆ (ಸಹ ಕಾರ್ಯದರ್ಶಿ)

ಬುಧವಾರ
17ನೇ ಏಪ್ರಿಲ್ 2013

ಪ್ರಜಾವಾಣಿ

Scanned by CamScanner

ಗುಲ್ಬರ್ಗ ಉದಯವಾಣಿ
ಮಂಗಳವಾರ | ಮಾರ್ಚ್ | 26 | 2013

ಜಯಂತಿ ಮಹೋತ್ಸವ

# ಸಂಕಷ್ಟ ನಿವಾರಣೆಗೆ ಧರ್ಮ ಅಗತ್ಯ

■ ಜೀವನದಲ್ಲಿ ಧರ್ಮ ಪಾಲನೆ ಅವಶ್ಯ: ಗುರುಬಾಬಾ ಮಹಾರಾಜ ■ ಜನಮನ ಸೆಳೆದ ಸಜ್ಜನ ಶೆಟ್ಟಿ ಹಾಸ್ಯೋತ್ಸವ ಕಾರ್ಯಕ್ರಮ

ಬಸವಕಲ್ಯಾಣ: ಮನುಷ್ಯನ ಜೀವನದಲ್ಲಿ ಧರ್ಮ ಪಾಲನೆ ಅವಶ್ಯಕವಾಗಿದ್ದು ಜೀವನದಲ್ಲಿ ಎದುರಾಗುವ ಸಂಕಷ್ಟ ನಿವಾರಣೆಗೆ ಧರ್ಮ ಬೇಕು ಎಂದು ಔಸಾ ಸಂಸ್ಥಾನದ ಶ್ರೀ ಗುರುಬಾಬಾ ಮಹಾರಾಜ ಹೇಳಿದರು.

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವದ ನಿಮಿತ್ತ ತ್ರಿಪುರಾಂತ ಗವಿ ಮಠದಲ್ಲಿ ನಡೆದ ಜನಜಾಗೃತಿ ಧರ್ಮ ಸಭೆ ಉದ್ಘಾಟಿಸಿ ಆಶೀರ್ವಚನ ನೀಡಿದರು.

ಜೀವನದಲ್ಲಿ ಎಲ್ಲವನ್ನೂ ಮಾಡುತ್ತಿದ್ದೇವೆ ಆದರೆ ಮೂಲ ಧರ್ಮ ಮರೆಯುತ್ತಿದ್ದೇವೆ. ಮೂಲ ಕರ್ತವ್ಯ ನೆನಪಿಸುವ ಜೊತೆಗೆ ಮೂಲ ಕರ್ತವ್ಯಕ್ಕೆ ಸ್ಫೂರ್ತಿ ನೀಡುವುದೇ ಸತ್ಪುರುಷರ ಜಯಂತಿ ಮಹೋತ್ಸವ ಆಚರಣೆ ಹಿಂದಿರುವ ಮೂಲ ಉದ್ದೇಶವಾಗಿದೆ ಎಂದರು.

ದೇಶದಲ್ಲಿ ಅನೇಕ ಧರ್ಮ, ಪರಂಪರೆಗಳಿದ್ದು, ಆಚರಣೆಗಳು ಬೇರೆ. ಆದರೆ ಎಲ್ಲ ಆಚರಣೆಯ ಉದ್ದೇಶ ಮನುಕುಲದ ಶಾಂತಿಯಾಗಿದ್ದು ಬಸವಣ್ಣನವರು ಮನು ಕುಲಕ್ಕೆ ಮಾರ್ಗದರ್ಶನ ನೀಡಿದ ಈ ನೆಲ ಪವಿತ್ರವಾದ್ದು, ಸಮಾಜಕ್ಕೆ ಮಾರ್ಗದರ್ಶನ ನೀಡುವ ಜತೆಗೆ ಉತ್ತಮ ಸಂಸ್ಕಾರ ನೀಡುವ ಕೆಲಸ ತ್ರಿಪುರಾಂತನ ಗವಿ ಮಠದಿಂದ ನಡೆಯುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಾನ್ನಿಧ್ಯ ವಹಿಸಿದ್ದ ಹಾರಕೂಡನ ಶ್ರೀ ಚನ್ನವೀರ ಶಿವಾಚಾರ್ಯರು ಆಶೀರ್ವಚನ ನೀಡಿ, ಮನುಷ್ಯ ಮಾನಸಿಕ ನೆಮ್ಮದಿಗೆ ಶುದ್ಧವಾದ ಆಧ್ಯಾತ್ಮ ಗಾಳಿ ಅವಶ್ಯಕತೆ ಇದೆ. ದೇವರ ಪೂಜೆ, ಧ್ಯಾನ, ನಾಮ ಸ್ಮರಣೆಯಲ್ಲಿ ಅಧ್ಯಾತ್ಮಿಕ ಚೈತನ್ಯ ಶಕ್ತಿ ಅಡಗಿದೆ. ಮನು ಕುಲಕ್ಕೆ ಬೆಳಕು ತೋರಿಸಿದ ಶ್ರೀಜಗದ್ಗುರು ರೇಣುಕಾಚಾರ್ಯರು ಯಾವುದೇ ಒಂದು ಸಮಾಜಕ್ಕೆ ಸಿಮೀತರಲ್ಲ, ಅವರು ಇಡೀ ಮಾನವ ಕುಲಕ್ಕೆ ಮಾರ್ಗದರ್ಶನ ನೀಡಿದ್ದಾರೆ ಎಂದರು.

ಅಫ್ಜಲಪುರನ ಶ್ರೀ ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯರು ಆಶೀರ್ವಚನ ನೀಡಿದರು. ತ್ರಿಪುರಾಂತ ಗವಿ ಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಗಡಿಗೌಡಗಾಂವನ ಶ್ರೀ ಶಾಂತವೀರ ಶಿವಾಚಾರ್ಯರು, ಕಿಟ್ಟಾದ ಶ್ರೀ ಸಿದ್ಧೇಶ್ವರ ಶಿವಾಚಾರ್ಯರು, ಸದಲಾಪುರನ ಶ್ರೀ ಸಿದ್ಧಲಿಂಗ ಶಿವಾಚಾರ್ಯರು, ಶ್ರೀ ಚನ್ನವೀರ ಸ್ವಾಮೀಜಿ ನೇತೃತ್ವ ವಹಿಸಿದ್ದರು.

ಮಾಜಿ ಶಾಸಕ ಎಂ.ಜಿ.ಮುಳೆ, ಬಿಜೆಪಿ ತಾಲೂಕಾಧ್ಯಕ್ಷ ಸುಧೀರ ಕಾಡಾದಿ, ಶರಣಪ್ಪ ಬಿರಾದಾರ, ಕಸಾಪ ತಾಲೂಕಾಧ್ಯಕ್ಷ ಚಂದ್ರಕಾಂತ ಸ್ವಾಮಿ, ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ತಾಲೂಕಾಧ್ಯಕ್ಷ ವೀರಣ್ಣ ಶೀಲವಂತ, ಗುರುಶಾಂತಯ್ಯ ಸ್ಥಾವರ ಮಠ ಉಪಸ್ಥಿತರಿದ್ದರು. ಡಾ। ಬಸವರಾಜ ಸ್ವಾಮಿ ಪ್ರಸ್ತಾವಿಕವಾಗಿ ಮಾತನಾಡಿದರು. ರಮೇಶ ರಾಜೋಳೆ ನಿರೂಪಿಸಿದರು. ಹಾಸ್ಯ ಕಲಾವಿದ ವೈಜಿನಾಥ ಸಜ್ಜನಶೆಟ್ಟಿ ತಮ್ಮ ಹಾಸ್ಯ ಚಟಾಕಿಗಳ ಮೂಲಕ ಗಮನ ಸೆಳೆದರು.

ಇದೇ ಸಂದರ್ಭದಲ್ಲಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯಿಂದ ಕಲಾಶ್ರೀ ಪ್ರಶಸ್ತಿ ಪುರಸ್ಕೃತರಾದ ತಾಲೂಕಿನ ಗೋರ್ಟಾ ಗ್ರಾಮದ ಹಿರಿಯ ಸಂಗೀತ ಕಲಾವಿದ ವಿರೂಪಾಕ್ಷಯ್ಯ ಶಿವಲಿಂಗಯ್ಯ ಮಠಪತಿ ಗೋರ್ಟಾ ಅವರಿಗೆ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ನೀಡಿ ಪುರಸ್ಕರಿಸಲಾಯಿತು.

ಇದಕ್ಕೂ ಮೊದಲು ರೇಣುಕಾಚಾರ್ಯರ ಭಾವಚಿತ್ರದ ಭವ್ಯ ಮೆರವಣಿಗೆಗೆ ಹಿರನಾಗಾಂವನ ಶ್ರೀ ಜೈಶಾಂತಲಿಂಗೇಶ್ವರ ಸ್ವಾಮೀಜಿ ಚಾಲನೆ ನೀಡಿದರು.




ಬಸವಕಲ್ಯಾಣ: ಜಗದ್ಗುರು ರೇಣುಕಾಚಾರ್ಯ ಜಯಂತಿ ನಿಮಿತ್ತ ಗವಿ ಮಠದಲ್ಲಿ ನಡೆದ ಧರ್ಮ ಸಭೆಯಲ್ಲಿ ಗೋರ್ಟಾದ ವಿರೂಪಾಕ್ಷಯ್ಯ ಮಠಪತಿ ಅವರಿಗೆ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು.



## ಜಯಂತಿ

ಬಸವಕಲ್ಯಾಣದಲ್ಲಿ ಸೋಮವಾರ ನಡೆದ ರೇಣುಕಾಚಾರ್ಯರ ಜಯಂತಿಯಲ್ಲಿ ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯರು ಮಾತನಾಡಿದರು. ಹಾರಕೂಡ ಚನ್ನವೀರ ಶಿವಾಚಾರ್ಯರು, ಔಸಾ ಗುರುಬಾಬಾ ಮಹಾರಾಜ, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶಾಂತವೀರ ಶಿವಾಚಾರ್ಯರು ಪಾಲ್ಗೊಂಡಿದ್ದರು

ಪ್ರಜಾವಾಣಿ ಮಂಗಳವಾರ
26ನೇ ಮಾರ್ಚ್ 2013



ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವ ನಿಮಿತ್ತವಾಗಿ ಬಸವಕಲ್ಯಾಣದ ಶ್ರೀ ಬಸವೇಶ್ವರ ದೇವಸ್ಥಾನದಿಂದ ತ್ರಿಪುರಾಂತದ ಗವಿಮಠದ ವರೆಗೆ ರೇಣುಕಾಚಾರ್ಯರ ಭಾವಚಿತ್ರ ಭವ್ಯ ಮೆರವಣಿಗೆ ನಡೆಸಲಾಯಿತು. ಹಿರನಾಗಾಂವದ ಪೂಜ್ಯ ಶ್ರೀ ಜಯಶಾಂತಲಿಂಗ ಮಹಾಸ್ವಾಮಿಗಳು ಚಾಲನೆ ನೀಡಿದರು.

ಸಂಯುಕ್ತ ಕರ್ನಾಟಕ । ಮಾರ್ಚ್ । 26 । 2013

Scanned by CamScanner

ವಿಜಯವಾಣಿ ಬುಧವಾರ 24 ಏಪ್ರಿಲ್ 2013




ಬಸವಕಲ್ಯಾಣ ತಾಲೂಕಿನ ಗೌರದಲ್ಲಿ ಶ್ರೀ ಮಹಾದೇವ ದೇವಸ್ಥಾನದ ಉದ್ಘಾಟನೆ ಹಾಗೂ ಕಳಸಾರೋಹಣ ನಿಮಿತ್ತ ನಡೆದ ಧರ್ಮ ಸಭೆಯಲ್ಲಿ ಶ್ರೀ ಚನ್ನವೀರ ಶಿವಾಚಾರ್ಯರು ಆಶೀರ್ವಚನ ನೀಡಿದರು. ಶ್ರೀ ಜಯಶಾಂತಲಿಂಗ ಸ್ವಾಮೀಜಿ, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಬೀರದೇವ ಸ್ವಾಮೀಜಿ, ಶ್ರೀ ಶಾಂತವೀರ ಶಿವಾಚಾರ್ಯರು, ಸೂರ್ಯಕಾಂತ ಚೆಲ್ಲಾಬಟ್ಟೆ ಉಪಸ್ಥಿತರಿದ್ದರು.

ವಿಜಯವಾಣಿ ಭಾನುವಾರ 26 ಮೇ 2013

# ಜ್ಯಾಂತಿ: ಶ್ರೀ ಮಹಾಲಕ್ಷ್ಮೀ ದೇವಸ್ಥಾನದ ಕಳಸಾರೋಹಣ

**ಬೀದರ್:** ಭಾಲ್ಕಿ ತಾಲೂಕಿನ ಜ್ಯಾಂತಿ ಗ್ರಾಮದಲ್ಲಿ ಶ್ರೀ ಮಹಾಲಕ್ಷ್ಮಿ ದೇವಸ್ಥಾನದ ಉದ್ಘಾಟನೆ ಹಾಗೂ ಕಳಸಾರೋಹಣ ಶನಿವಾರ ವಿಜೃಂಭಣೆಯಿಂದ ನಡೆಯಿತು.

ಬೆಳಗ್ಗೆ 8ಕ್ಕೆ ಕಳಸದ ಮೆರವಣಿಗೆ ಭಜನೆ, ಡೊಳ್ಳು ಕುಣಿತದೊಂದಿಗೆ ಗ್ರಾಮದ ಮಲ್ಲಿಕಾರ್ಜುನ ದೇಸ್ಥಾನದಿಂದ ಮಹಾಲಕ್ಷ್ಮಿ ದೇವಸ್ಥಾನದವರೆಗೆ ವೈಭವದಿಂದ ಜರುಗಿತು.

ಬಸವಕಲ್ಯಾಣದ ಶ್ರೀ ರುದ್ರಮುನಿ ಶಿವಾಚಾರ್ಯ ಗವಿಮಠ ಅವರು ಮಹಾಲಕ್ಷ್ಮೀ ಮೂರ್ತಿಗೆ ರುದ್ರಾಭಿಷೇಕ ಹಾಗೂ ಸಹಸ್ರ ಉದ್ಘಾಟನೆ ಹಾಗೂ ಕಳಸಾರೋಹಣ ನೆರವೇರಿಸಿದರು. ಈ ವೇಳೆ ಶಿವಶಂಕರ ಬೋಳಶೆಟ್ಟಿ, ದಿಲೀಪ ಬೋಳಶೆಟ್ಟಿ, ಅಶೋಕ ಬೋಳಶೆಟ್ಟಿ, ರೇವಣದಪ್ಪ ಬೋಳಶೆಟ್ಟಿ, ಗಣೇಶ ಪಾಟೀಲ್, ವಿದ್ಯಾಸಾಗರ ಬಿರಾದಾರ, ಗಿರೀಶ ಕುಲಕರ್ಣಿ, ರಮೇಶ ಸುತಾರ, ವೀರಶೆಟ್ಟಿ ಹಾಗೂ ಜ್ಯಾಂತಿ ಗ್ರಾಮಸ್ಥರು ಪಾಲ್ಗೊಂಡಿದ್ದರು.



ಭಾಲ್ಕಿ ತಾಲೂಕಿನ ಜ್ಯಾಂತಿ ಗ್ರಾಮದಲ್ಲಿ ಶ್ರೀ ಮಹಾಲಕ್ಷ್ಮಿ ದೇವಸ್ಥಾನದ ಉದ್ಘಾಟನೆ ಹಾಗೂ ಕಳಸಾರೋಹಣ ಶನಿವಾರ ವಿಜೃಂಭಣೆಯಿಂದ ನಡೆಯಿತು.



ಮೈಸಲಗಾದಲ್ಲಿ ಶ್ರೀ ಮಹಾಲಕ್ಷ್ಮೀ ಮಾತೆ ದೇವಸ್ಥಾನ, ಮೂರ್ತಿ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಕಾರ್ಯಕ್ರಮವನ್ನು ರಂಭಾಪುರಿ ಜಗದ್ಗುರು ಶ್ರೀ ಪ್ರಸನ್ನ ರೇಣುಕ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಉದ್ಘಾಟಿಸಿದರು. ಶ್ರೀ ಚನ್ನವೀರ ಶಿವಾಚಾರ್ಯರು, ಶ್ರೀ ಜಯಶಾಂತಲಿಂಗ ಮಹಾಸ್ವಾಮೀಜಿ, ತ್ರಿಪುರಾಂತ ಶ್ರೀ, ಶ್ರೀ ಗುರುಲಿಂಗಯ್ಯ ಸ್ವಾಮಿ, ಗುರುಲಿಂಗಪ್ಪ ಸೈದಾಪೂರೆ, ಚಂದ್ರಶೇಖರ ಬಿರಾದಾರ್ ಇದ್ದರು.

ವಿಜಯವಾಣಿ ಶನಿವಾರ 18 ಮೇ 2013



ಬಸವಕಲ್ಯಾಣ ತಾಲೂಕಿನ ಮಂಠಾಳ ಗ್ರಾಮದ ಮಹಾದೇವ ಮಂದಿರದಲ್ಲಿ ಏರ್ಪಡಿಸಿದ ಶ್ರಾವಣ ಮಾಸದ ಪ್ರಯುಕ್ತ ಪ್ರವಚನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುಣಿ ಶಿವಾಚಾರ್ಯರು ಮಾತನಾಡಿದರು.

ವಿಜಯ ಕರ್ನಾಟಕ
ಶನಿವಾರ,10 ಆಗಸ್ಟ್ 2013, ಗುಲ್ಬರ್ಗ

Scanned by CamScanner

ಸಂಯುಕ್ತ ಕರ್ನಾಟಕ । ಮಾರ್ಚ್ । 26 । 2013

# 'ಬಸವಕಲ್ಯಾಣ ಶ್ರೇಷ್ಠ ಪಾವನ ಭೂಮಿ'

ಬಸವಕಲ್ಯಾಣ, 25– ಇಡಿ ಕರ್ನಾಟಕದಲ್ಲಿರುವ ಪಾವನ ಸ್ಥಳಗಳಲ್ಲಿ ಬಸವಕಲ್ಯಾಣವು ಅತಿ ಶ್ರೇಷ್ಠ ಹಾಗೂ ಪಾವನ ಭೂಮಿಯಾಗಿದೆ. ಇಲ್ಲಿ ನೀಡಲಾಗುವ ಧರ್ಮ ಸಂಸ್ಕೃತಿಯು ಬೇರೆ ಎಲ್ಲಿಯೂ ನೀಡಲಾಗುವುದಿಲ್ಲ ಎಂದು ಔಸಾದ ಶ್ರೀ ಗುರುಬಾಬಾ ಮಹಾರಾಜ ಹೇಳಿದರು.

ಅವರು ನಗರದ ತ್ರಿಪುರಾಂತದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠ (ಮರಿದೇವರ ಗುಡ್ಡ) ದಲ್ಲಿ ನಡೆದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವ ಹಾಗೂ ಧರ್ಮಸಭೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದರು.

ನಾವು ಧರ್ಮಕ್ಕೆ ಉಪಕಾರ ಮಾಡುವುದಿಲ್ಲ. ಧರ್ಮವೇ ನಮಗೆ ಉಪಕಾರ ಮಾಡುತ್ತದೆ. ಇಂದು ಜನರು ಎಲ್ಲಾ ಕೆಲಸಗಳನ್ನು ಮಾಡುತ್ತಿರುತ್ತಾರೆ. ಆದರೆ ಧರ್ಮದ ಕೆಲಸ ಮಾಡುವುದಿಲ್ಲ. ನಮ್ಮ ಮೂಲ ಕರ್ತವ್ಯಗಳನ್ನು ನಾವು ಎಂದು ಮರೆಯಬಾರದು ಎಂದು ಹೇಳಿದರು.

ಸಾನಿಧ್ಯ ವಹಿಸಿದ ತಾಲೂಕಿನ ಸುಕ್ಷೇತ್ರ ಹಾರಕೂಡದ ಪೂಜ್ಯ ಶ್ರೀ ಚನ್ನವೀರ ಶಿವಾಚಾರ್ಯರು ಮಾತನಾಡಿ ಮನುಷ್ಯನಲ್ಲಿನಮಾನಸಿಕರೋಗವುಹೋಗಲಾಡಿಸಬೇಕಾದರೆ ಘನಲಿಂಗ ರುದ್ರಮುನಿಯರ ಗವಿಯಲ್ಲಿ ಕುಳಿತು ಐದು ನಿಮಿಷ ಧ್ಯಾನ ಮಾಡಿದರೆ ವಾಸಿಯಾಗುತ್ತದೆ. ನೂರು ಗುಳಿಗೆಗಳು ಏನು ಕೆಲಸ ಮಾಡುತ್ತವೆಯೋ, ಅದು ಕೇವಲ ಒಂದು ಅಧ್ಯಾತ್ಮವು ಮಾಡುತ್ತದೆ.

ಪರಮಾತ್ಮನನ್ನು ಯಾವ ರೂಪದಲ್ಲಿಯೂ ಪೂಜೆ ಮಾಡಬಹುದು, ಆದರೆ ಪರಮಾತ್ಮ ನೀಡುವ ಆಶಿರ್ವಾದ ಒಂದೇ ರೂಪದಲ್ಲಿ ಇರುತ್ತದೆ ಎಂದು ಹೇಳಿದ ಅವರು ಜನರು ಮಠಗಳಿಗೆ ಸಹಕರಿಸಿದರೆ ಮುಂದಿನ ದಿನಗಳಲ್ಲಿ ಈ ಜಯಂತಿಯಲ್ಲಿ ಹೆಚ್ಚಿನ ಜನ ಭಾಗವಹಿಸಬಹುದು ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಅಫಜಲಪುರದ ಪೂಜ್ಯಶ್ರೀ ಮಹೇಂದ್ರಶಿವಾಚಾರ್ಯರು ಸಹ ಮಾತನಾಡಿ ಜಾತಿಗಿಂತ ನೀತಿ ಮುಖ್ಯ, ಚರಿತ್ರೆಗಿಂತ ಚಾರಿತ್ರ್ಯ ಮುಖ್ಯವೆಂದು ಜಗದ್ಗುರು ರೇಣುಕಾಚಾರ್ಯರು ಹೇಳಿದ್ದಾರೆ ಎಂದು ಅವರು ತಿಳಿಸಿದರು.

ಮಠದ ಪೂಜ್ಯರಾದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿದರು. ಗಡಿಗೌಂಡಗಾಂವದ ಪೂಜ್ಯ ಶ್ರೀ ಶಾಂತವೀರ ಶಿವಾಚಾರ್ಯರು, ಕಿಟ್ಟಾದ ಪೂಜ್ಯ ಶ್ರೀ ಸಿದ್ದೇಶ್ವರ ಶಿವಾಚಾರ್ಯರು, ಸದಲಾಪೂರದ ಪೂಜ್ಯ ಶ್ರೀ ಸಿದ್ಧಲಿಂಗ ಸ್ವಾಮಿ, ಯರಬಾಗದ ಪೂಜ್ಯ ಶ್ರೀ ಚನ್ನವೀರ ಸ್ವಾಮಿ, ಸದ್ಭೋಧನಾ ಸಮಿತಿಯ ಅಧ್ಯಕ್ಷ ವೀರಣ್ಣ ಶೀಲವಂತ, ಮಾಜಿ ಶಾಸಕ ಎಮ್.ಜಿ. ಮುಳೆ, ಕಸಾಪ ಅಧ್ಯಕ್ಷ ಚಂದ್ರಕಾಂತ ಸ್ವಾಮಿ, ದಾಸೋಹಿ ಶರಣಪ್ಪ ಬಿರಾದಾರ, ಬಿಜೆಪಿ ತಾಲೂಕಾ ಅಧ್ಯಕ್ಷ ಸುಧೀರ ಕಾಡಾದಿ ಸೇರಿದಂತೆ ಮತ್ತಿತರು ವೇದಿಕೆ ಮೇಲೆ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಗೋರ್ಟಾ (ಬಿ) ಗ್ರಾಮದ ಹಿರಿಯ ಸಾಹಿತಿಗಳಾದ ಶ್ರೀ ವೇ. ವಿರೂಪಾಕ್ಷಯ್ಯಾ ಶಿವಲಿಂಗಯ್ಯಾ ಮಠಪತಿ ಅವರಿಗೆ "ಅಭಿನವ ಘನಲಿಂಗ ಶ್ರೀ" ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಬೀದರನ ಹಾಸ್ಯ ಕಲಾವಿದ ವೈಜಿನಾಥ ಸಜ್ಜನಶೆಟ್ಟಿ ಅವರು ನಡೆಸಿಕೊಟ್ಟ ಮನೋರಂಜನ ಕಾರ್ಯಕ್ರಮ ಜನರ ಮೆಚ್ಚುಗೆಗೆ ಪಾತ್ರವಾಯಿತು.

ಪ್ರಥಮವಾಗಿ ಗುರುಶಾಂತಯ್ಯಾ ಮಠ ಬಳಗದ ವತಿಯಿಂದ ಭಕ್ತಿಗೀತೆ ಹಾಡಲಾಯಿತು. ವೀರಯ್ಯಾ ಸ್ವಾಮಿ ವೇದ ಘೋಷ ನುಡಿದರು.

ಡಾ. ಬಸವರಾಜ ಸ್ವಾಮಿ ಸ್ವಾಗತಿಸಿದರು. ರಮೇಶ ರಾಜೋಳೆ ನಿರೂಪಿಸಿದರು. ಕಾರ್ಯಕ್ರಮಕ್ಕೂ ಮುನ್ನ ಇಲ್ಲಿನ ಬಸವೇಶ್ವರ ದೇವಸ್ಥಾನದಿಂದ ಗವಿಮಠದ ವರೆಗೆ ಶ್ರೀ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರದ ಮೆರವಣಿಗೆ ನಡೆಸಲಾಯಿತು.



ಬಸವಕಲ್ಯಾಣದ ತ್ರಿಪುರಾಂತದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠ (ಮರಿದೇವರ ಗುಡ್ಡ) ದಲ್ಲಿ ನಡೆದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವ ಹಾಗೂ ಧರ್ಮಸಭೆ ಕಾರ್ಯಕ್ರಮವನ್ನು ಔಸಾದ ಶ್ರೀ ಗುರುಬಾಬಾ ಮಹಾರಾಜರು ಉದ್ಘಾಟಿಸಿದರು. ಪೂಜ್ಯ ಶ್ರೀ ಚನ್ನವೀರ ಶಿವಾಚಾರ್ಯರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಯುವ ಜನಾಂಗಕ್ಕೆ ಮಾನವೀಯ ಗುಣ ಅಗತ್ಯ

**ಬಾಳೆಹೊನ್ನೂರು:** ಯುವ ಜನಾಂಗ ಈ ರಾಷ್ಟ್ರದ ಅಮೂಲ್ಯ ಸಂಪತ್ತು. ಅವರಲ್ಲಿ ಆದರ್ಶ, ಮಾನವೀಯ ಗುಣ ಬೆಳೆಸಬೇಕಿದೆ ಎಂದು ಶ್ರೀ ರಂಭಾಪುರಿ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಅಭಿಪ್ರಾಯಪಟ್ಟರು.

ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಅಂಗವಾಗಿ ಬುಧವಾರ ಆಯೋಜಿಸಿದ್ದ 'ಯುವ ಸಮಾವೇಶ'ದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಬಾಲ್ಯದಲ್ಲಿ ಜ್ಞಾನ, ತಾರುಣ್ಯದಲ್ಲಿ ಸಂಪತ್ತು, ವೃದ್ಧಾಪ್ಯದಲ್ಲಿ ಭಗವಂತನ ಚಿಂತನೆ ಮಾಡಬೇಕು. ಸತ್ಯದ ತಳಹದಿ ಮೇಲೆ ಜೀವನ ರೂಪಿತಗೊಳ್ಳಲಿ. ಹುಟ್ಟು-ಸಾವುಗಳ ಮಧ್ಯೆ ಇರುವ ಜೀವನ ಸಮೃದ್ಧಿಗೊಳ್ಳಲು ಗುರುವಿನ ಜ್ಞಾನ ಬೋಧಾಮೃತ ಅವಶ್ಯಕ. ಯೌವ್ವನ, ಸಂಪತ್ತು, ಅಧಿಕಾರ ಮತ್ತು ಅವಿವೇಕತನ ಇವುಗಳಲ್ಲಿ ಒಂದಿದ್ದರೂ ಮನುಷ್ಯ ನಾಶವಾಗುತ್ತಾನೆ. ಬಹಳ ಎಚ್ಚರಿಕೆಯಿಂದ ಗಟ್ಟಿ ಹೆಜ್ಜೆಯನ್ನಿಟ್ಟು ಬದುಕನ್ನು ಬಂಗಾರ ಮಾಡಿಕೊಳ್ಳಬೇಕು. ಅರಿತು ಬಾಳುವುದೇ ಬದುಕಿನ ಗುಟ್ಟು. ಮರೆತು ಬಾಳುವುದೇ ಜೀವನದ ಅಧಃಪತನಕ್ಕೆ ದಾರಿ ಎಂದು ನುಡಿದರು.

ದಾವಣಗೆರೆ ಶ್ರೀ ಅಭಿನವ ರೇಣುಕ ಮಂದಿರದ ಕಾರ್ಯದರ್ಶಿ ದೇವರಮನೆ ಶಿವಕುಮಾರ ಉದ್ಘಾಟಿಸಿದರು. ಶ್ರೀ ರೇಣುಕಾಚಾರ್ಯ ಗುರುಕುಲದ ಉಪಕುಲಪತಿ ರುದ್ರಮುನಿ ಶಿವಾಚಾರ್ಯರು ಉಪದೇಶಾಮೃತ ನೀಡಿದರು. ಹರಪನಹಳ್ಳಿಯ ಎಂಪಿಎಂ ಶಾಂತವೀರಯ್ಯ ಉಪನ್ಯಾಸ ನೀಡಿದರು. ದಿಣ್ಣೆಕೆರೆ ಡಿ.ಎಂ. ಮಂಜುನಾಥಸ್ವಾಮಿ ಚಿಂತನ ಸ್ಫುರಣ ಮಾಡಿದರು.

ಎಡೆಯೂರಿನ ಶ್ರೀ ರೇಣುಕ ಶಿವಾಚಾರ್ಯರು, ಹೂಲಿ, ಮಳಲಿಮಠ, ಇಂಚಿಗೇರಿ, ಜಕ್ಕಲಿ, ಧನಗೂರ, ಬುಕ್ಕಸಾಗರ, ಸಂಗೊಳ್ಳಿ, ಮೊರಬ, ಕರ್ತಾಳ, ಕಲ್ಲೂರ ಶ್ರೀಗಳು ಸೇರಿದಂತೆ ವಿವಿಧ ಮಠಗಳ ಶಿವಾಚಾರ್ಯರು ವೇದಿಕೆ ಮೇಲೆ ಉಪಸ್ಥಿತರಿದ್ದರು.

**ಗುರುರಕ್ಷೆ:** ನಾಗತಾಣ ಹಿರೇಮಠದ ಶ್ರೀ ಚನ್ನಮಲ್ಲಿಕಾರ್ಜುನ ಶಿವಾಚಾರ್ಯರು, ಕೂಡಲಸಂಗಮ ಸಾರಂಗಮಠದ ಶ್ರೀ ಅಭಿನವ ಜಾತವೇದಮುನಿ ಶಿವಾಚಾರ್ಯರು, ಬಸವಕಲ್ಯಾಣ ತ್ರಿಪುರಾಂತಕಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ನಾಗರಹಳ್ಳಿಯ ದಯಾನಂದ ಹಿರೇಮಠರಿಗೆ ರಂಭಾಪುರಿ ಶ್ರೀಗಳು ಗುರುರಕ್ಷೆ ನೀಡಿದರು.

ಸಂಜೆ ಶ್ರೀ ರಂಭಾಪುರಿ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಬಸವನಕೋವಿಯಲ್ಲಿ ಕೆಂಡಾರ್ಚನೆ ನಡೆಯಿತು.



ಬಾಳೆಹೊನ್ನೂರು ಮಠದಲ್ಲಿ ಬುಧವಾರ ಆಯೋಜಿಸಿದ್ದ 'ಯುವ ಸಮಾವೇಶ'ವನ್ನು ದಾವಣಗೆರೆ ಶ್ರೀ ಅಭಿನವ ರೇಣುಕ ಮಂದಿರದ ಕಾರ್ಯದರ್ಶಿ ದೇವರಮನೆ ಶಿವಕುಮಾರ ಉದ್ಘಾಟಿಸಿದರು. ರಂಭಾಪುರಿ ಶ್ರೀಗಳು ಉಪಸ್ಥಿತರಿದ್ದರು.

ವಿಜಯವಾಣಿ ಗುರುವಾರ 28 ಮಾರ್ಚ್ 2013

Scanned by CamScanner

# ‘ಬಸವ ಸಂದೇಶಕ್ಕೆ ಸೀಮಾತೀತ ವ್ಯಾಪ್ತಿ’



ಬಸವಕಲ್ಯಾಣದ ಗವಿಮಠದಲ್ಲಿ ನಡೆದ ಜಗದ್ಗುರು ರೇಣುಕಾಚಾರ್ಯರ ಜಯಂತಿ ಯುಗಮಾನೋತ್ಸವ ಹಾಗೂ ಧರ್ಮ ಸಭೆ ಕಾರ್ಯಕ್ರಮದಲ್ಲಿ ಹಾರಕೂಡದ ಚನ್ನವೀರ ಶಿವಾಚಾರ್ಯರು ಮಾತನಾಡಿದರು.

▪ ವಿಕ ಸುದ್ದಿಲೋಕ ಬಸವಕಲ್ಯಾಣ

ವಿಶ್ವದ ಯಾವುದೇ ಮೂಲೆಯತ್ತ ಹೋದರು ಬವಣ್ಣನವರ ವಚನ ಸಾಹಿತ್ಯದಲ್ಲಿರುವ ಅಧ್ಯಾತ್ಮದ ಚೈತನ್ಯ ಎಲ್ಲೆಡೆ ಪ್ರಾಮುಖ್ಯತೆ ಪಡೆದಿದೆ ಎಂದು ಹಾರಕೂಡದ ಚನ್ನವೀರ ಶಿವಾ ಚಾರ್ಯರು ಹೇಳಿದರು.

ನಗರದ ಮರಿದೇವರ ಗುಡ್ಡದ ಘನಲಿಂಗ ರುದ್ರಮುನಿ ಗವಿಮಠದಲ್ಲಿ ನಡೆದ ಜಗದ್ಗುರು ರೇಣುಕಾಚಾರ್ಯರ ಜಯಂತಿ ಯುಗಮಾನೋತ್ಸವ ಹಾಗೂ ಧರ್ಮಸಭೆಯಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದರು. ಮಹಾರಾಷ್ಟ್ರದ ಔಸಾ ಸಂಸ್ಥಾನದ ಗುರುಬಾಬಾ ಉದ್ಘಾಟಿಸಿ ಮಾತನಾಡಿ, ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದ ಆಚಾರ್ಯ ಪರಂಪರೆಯಲ್ಲಿರುವ ಅಧ್ಯಾತ್ಮದ ಅರಿವನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ನೇತೃತ್ವ ವಹಿಸಿದ್ದ ತ್ರಿಪುರಾಂತದ ಗವಿ ಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಅಫಜಲಪುರದ ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯ, ಗಡಿ ಗೌಡಗಾಂವನ ಶಾಂತವೀರ ಶಿವಾಚಾರ್ಯ, ಕಿಟ್ಟಾದ ಸಿದ್ಧೇಶ್ವರ ಶಿವಾಚಾರ್ಯ, ಸದಲಾಪುರದ ಸಿದ್ಧಲಿಂಗ ಶಿವಾಚಾರ್ಯ, ಯರಬಾಗನ ಚನ್ನವೀರಯ್ಯ ಸ್ವಾಮೀಜಿ ಪಾಲ್ಗೊಂಡಿದ್ದರು. ಮಾಜಿ ಶಾಸಕ ಮಾರುತಿರಾವ ಮುಳೆ, ಬಿಜೆಪಿ ತಾಲೂಕು ಅಧ್ಯಕ್ಷ ಸುಧೀರ ಕಾಡಾದಿ, ಹಾಸ್ಯ ಕಲಾವಿದ ವೈಜನಾಥ ಸಜ್ಜನಶೆಟ್ಟಿ, ಮದ್ವೀರಶೈವ ಸದ್ಬೋಧನಾ ಸಂಸ್ಥೆಯ ಅಧ್ಯಕ್ಷ ವೀರಣ್ಣ ಶೀಲವಂತ, ತಾಲೂಕು ಕಸಾಪ ಅಧ್ಯಕ್ಷ ಚಂದ್ರಕಾಂತ ಸ್ವಾಮಿ ಇದ್ದರು.

**ಪ್ರಶಸ್ತಿ ಪ್ರದಾನ:** ಇದೇ ವೇಳೆ ಗೋರ್ಟಾದ ಹಿಂದುಸ್ತಾನಿ ಸಂಗೀತಗಾರ ವೇದಮೂರ್ತಿ ವಿರೂಪಾಕ್ಷಯ್ಯ ಶಿವಲಿಂಗ ಮಠಪತಿಯವರಿಗೆ ಅಭಿನವ ಘನಲಿಂಗ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಗುರುಶಾಂತಯ್ಯಾ ಸ್ಥಾವರ ಮಠ, ರಾಜಕುಮಾರ ಪಂಚಾಳ, ತ್ರೀವೇಣಿ ಮಠಪತಿ ಪ್ರಾರ್ಥನೆ ನಡೆಸಿಕೊಟ್ಟರು. ಲೋಕನಾಥ ತಬಲಾ ಸಾಥ್ ನೀಡಿದರು. ಡಾ. ಬಸವರಾಜ ಸ್ವಾಮಿ ಸ್ವಾಗತಿಸಿದರೆ ರಮೇಶ ರಾಜೋಳೆ ನಿರೂಪಿಸಿದರು.

**ಅದ್ದೂರಿ ಮೆರವಣಿಗೆ:** ಇದಕ್ಕೂ ಮುನ್ನ ನಗರದ ಬಸವೇಶ್ವರ ದೇವಸ್ಥಾನದ ಬಳಿ ನಡೆದ ಮೆರವಣಿಗೆಗೆ ಹಿರೇನಾಗಾಂವದ ಜಯಶಾಂತಲಿಂಗ ಸ್ವಾಮೀಜಿ ಚಾಲನೆ ನೀಡಿದರು.

ಗುಲ್ಬರ್ಗ
ಮಂಗಳವಾರ,26 ಮಾರ್ಚ್ 2013, ವಿಜಯ ಕರ್ನಾಟಕ

# ಹೀರೊ ಮೋಟಾರ್ಸ್‌ನ ಉಚಿತ ಸರ್ವಿಸ್ ಕ್ಯಾಂಪ್



ಎಂ.ಬಿ.ಪಾಟೀಲ್ ಮೋಟಾರ್ಸ್‌ನಿಂದ ಮೂರು ದಿನದ ಹೀರೊ ಮೋಟಾರ್ ಸೈಕಲ್‌ನ ಉಚಿತ ಸರ್ವಿಸ್ ಕ್ಯಾಂಪ್‌ಗೆ ಬಸವಕಲ್ಯಾಣದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಚಾಲನೆ ನೀಡಿದರು. ಸುನೀಲ್ ಪಾಟೀಲ್, ಶೈಲೇಶ ಶುಕ್ಲಾ, ಶಿವರಾಜ ಪಾಟೀಲ್, ಲಕ್ಷ್ಮೀಶ, ಪವನ್ ಇದ್ದರು.

**ಬಸವಕಲ್ಯಾಣ:** ಇಲ್ಲಿನ ಎಂ.ಬಿ.ಪಾಟೀಲ್ ಮೋಟಾರ್ಸ್‌ನಿಂದ ಹೀರೊ ಮೋಟಾರ್ ಸೈಕಲ್‌ನ ಮೂರು ದಿನದ ಬೃಹತ್ ಸೇಲ್ಸ್ ಮತ್ತು ಉಚಿತ ಸರ್ವಿಸ್ ಕ್ಯಾಂಪ್‌ಗೆ ನಗರದ ರಥ ಮೈದಾನದಲ್ಲಿ ಶುಕ್ರವಾರ ಆರಂಭವಾಗಿದೆ.

ಉದ್ಘಾಟನೆ ನೆರವೇರಿಸಿದ ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಗ್ರಾಹಕರಿಗೆ ಅನುಕೂಲ ಕಲ್ಪಿಸಲು ಎಂ.ಬಿ.ಪಾಟೀಲ್ ಮೋಟಾರ್ಸ್‌ನವರು ಉಚಿತವಾಗಿ ಈ ಶಿಬಿರ ಆಯೋಜಿಸಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಹೀರೊ ಮೋಟೊಕಾರ್ಪ್ ವಲಯ ಮುಖ್ಯಸ್ಥ ಶೈಲೇಶ ಶುಕ್ಲಾ ಮಾತನಾಡಿ, ಗ್ರಾಹಕರಿಗೆ ಉತ್ತಮ ಸೇವೆ ನೀಡುವುದೇ ಕ್ಯಾಂಪ್‌ನ ಉದ್ದೇಶ. ಗ್ರಾಹಕರು ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಎಂ.ಬಿ.ಪಾಟೀಲ್ ಮೋಟಾರ್ಸ್ ಮಾಲೀಕ ಸುನೀಲ್ ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು. ಶಿವರಾಜ ಪಾಟೀಲ್, ಕಂಪನಿ ಅಧಿಕಾರಿಗಳಾದ ಲಕ್ಷ್ಮೀಶ, ಸರ್ವಿಸ್ ಇಂಜಿನಿಯರ್ ಚಂದ್ರಜೀತ್, ಸೇಲ್ಸ್ ಇಂಜಿನಿಯರ್ ಪವನ್ ಉಪಸ್ಥಿತರಿದ್ದರು.

ಮೂರು ದಿನದ ಕ್ಯಾಂಪ್‌ನಲ್ಲಿ ಬೆಳಗ್ಗೆ 9ರಿಂದ ಸಂಜೆ 6ರವರೆಗೆ ನಡೆಯುವ ಸಾಲ ಮತ್ತು ಎಕ್ಸ್‌ಚೇಂಜ್ ಮೇಳ, ಉಚಿತ ಸರ್ವಿಸಿಂಗ್ ಮಾಡಲಾಗುತ್ತಿದ್ದು, ಬಿಡಿ ಭಾಗಗಳಿಗೆ ಶೇ.5 ರಿಯಾಯ್ತಿ ಇದೆ.

ವಿಜಯವಾಣಿ ಶನಿವಾರ 23 ಮಾರ್ಚ್ 2013

# ಯುವ ಜನಾಂಗಕ್ಕೆ ಮಾನವೀಯ ಗುಣ ಅಗತ್ಯ



ಬಾಳೆಹೊನ್ನೂರು ಮಠದಲ್ಲಿ ಬುಧವಾರ ಆಯೋಜಿಸಿದ್ದ ‘ಯುವ ಸಮಾವೇಶ’ವನ್ನು ದಾವಣಗೆರೆ ಶ್ರೀ ಅಭಿನವ ರೇಣುಕ ಮಂದಿರದ ಕಾರ್ಯದರ್ಶಿ ದೇವರಮನೆ ಶಿವಕುಮಾರ ಉದ್ಘಾಟಿಸಿದರು. ರಂಭಾಪುರಿ ಶ್ರೀಗಳು ಉಪಸ್ಥಿತರಿದ್ದರು.

**ಬಾಳೆಹೊನ್ನೂರು:** ಯುವ ಜನಾಂಗ ಈ ರಾಷ್ಟ್ರದ ಅಮೂಲ್ಯ ಸಂಪತ್ತು. ಅವರಲ್ಲಿ ಆದರ್ಶ, ಮಾನವೀಯ ಗುಣ ಬೆಳೆಸಬೇಕಿದೆ ಎಂದು ಶ್ರೀ ರಂಭಾಪುರಿ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಅಭಿಪ್ರಾಯಪಟ್ಟರು.

ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಅಂಗವಾಗಿ ಬುಧವಾರ ಆಯೋಜಿಸಿದ್ದ ‘ಯುವ ಸಮಾವೇಶ’ದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಬಾಲ್ಯದಲ್ಲಿ ಜ್ಞಾನ, ತಾರುಣ್ಯದಲ್ಲಿ ಸಂಪತ್ತು, ವೃದ್ಧಾಪ್ಯದಲ್ಲಿ ಭಗವಂತನ ಚಿಂತನೆ ಮಾಡಬೇಕು. ಸತ್ಯದ ತಳಹದಿ ಮೇಲೆ ಜೀವನ ರೂಪಿತಗೊಳ್ಳಲಿ. ಹುಟ್ಟು-ಸಾವುಗಳ ಮಧ್ಯೆ ಇರುವ ಜೀವನ ಸಮೃದ್ಧಿಗೊಳ್ಳಲು ಗುರುವಿನ ಜ್ಞಾನ ಬೋಧಾಮೃತ ಅವಶ್ಯಕ. ಯೌವ್ವನ, ಸಂಪತ್ತು, ಅಧಿಕಾರ ಮತ್ತು ಅವಿವೇಕತನ ಇವುಗಳಲ್ಲಿ ಒಂದಿದ್ದರೂ ಮನುಷ್ಯ ನಾಶವಾಗುತ್ತಾನೆ. ಬಹಳ ಎಚ್ಚರಿಕೆಯಿಂದ ಗಟ್ಟಿ ಹೆಜ್ಜೆಯನ್ನಿಟ್ಟು ಬದುಕನ್ನು ಬಂಗಾರ ಮಾಡಿಕೊಳ್ಳಬೇಕು. ಎಂದು ನುಡಿದರು. ದಾವಣಗೆರೆ ಶ್ರೀ ಅಭಿನವ ರೇಣುಕ ಮಂದಿರದ ಕಾರ್ಯದರ್ಶಿ ದೇವರಮನೆ ಶಿವಕುಮಾರ ಉದ್ಘಾಟಿಸಿದರು. ಶ್ರೀ ರೇಣುಕಾಚಾರ್ಯ ಗುರುಕುಲದ ಉಪಕುಲಪತಿ ರುದ್ರಮುನಿ ಶಿವಾಚಾರ್ಯರು ಉಪದೇಶಾಮೃತ ನೀಡಿದರು.

ವಿಜಯವಾಣಿ ಗುರುವಾರ 28 ಮಾರ್ಚ್ 2013

Scanned by CamScanner

ವಿಜಯವಾಣಿ
ಭಾನುವಾರ 23 ಜೂನ್ 2013

■ ಬಸವಕಲ್ಯಾಣದಲ್ಲಿ ವಿಶ್ವಸಂಗೀತ ದಿನಾಚರಣೆ, ಸಂಗೀತ ಸಮ್ಮೇಳನ

# ‘ಮನಸಿಗೆ ಖುಷಿ ಕೊಡುವ ಶಕ್ತಿ ಸಂಗೀತಕ್ಕಿದೆ’

**ಬಸವಕಲ್ಯಾಣ:** ಮನಷ್ಯನಿಗೆ ಖುಷಿ ಕೊಡುವ ಶಕ್ತಿ ಸಂಗೀತಕ್ಕಿದೆ ಎಂದು ಹುಲಸೂರಿನ ಶ್ರೀ ಶಿವಾನಂದ ಮಹಾಸ್ವಾಮೀಜಿ ಪ್ರತಿಪಾದಿಸಿದರು.

ಶ್ರೀ ಗುರುಕುಮಾರೇಶ್ವರ ಕೃಪಾಪೋಷಿತ ಸಂಗೀತ ವಿದ್ಯಾಲಯ ಹಾಗೂ ಶ್ರೀ ಜಗದ್ಗುರು ಬಸವಕುಮಾರೇಶ್ವರ ಪ್ರೌಢಶಾಲೆ ಆಶ್ರಯದಲ್ಲಿ ವಿಶ್ವ ಸಂಗೀತ ದಿನಾಚರಣೆ ನಿಮಿತ್ತ ಇಲ್ಲಿನ ಜೆಬಿಕೆ ಶಾಲೆ ಆವರಣದಲ್ಲಿ ನಡೆದ ಸಂಗೀತ ಸಮ್ಮೇಳನದಲ್ಲಿ ಸಾನ್ನಿಧ್ಯ ವಹಿಸಿದ್ದ ಅವರು, ಮನಸ್ಸು ಹದಗೊಳಿಸುವ ಶಕ್ತಿಯೂ ಸಂಗೀತಕ್ಕಿದೆ. ಸಂಗೀತ ಮತ್ತು ಕಲೆ ಸೀಮಾತೀತ. ಕಲೆ ಮತ್ತು ಕಲಾವಿದರಿಗೆ ಜಾತಿ, ಭಾಷೆ ಮತ್ತು ಗಡಿಯ ಸೀಮೆ ಇಲ್ಲ ಎಂದರು.

ಅನಾದಿಕಾಲದಿಂದಲೂ ಸಂಗೀತಕ್ಕೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ಗುರು-ಶಿಷ್ಯ ಪರಂಪರೆ ಎಲ್ಲಿಯಾದರೂ ಕಾಣಲು ಸಾಧ್ಯವಿದ್ದರೆ ಸಂಗೀತ ಕ್ಷೇತ್ರದಲ್ಲಿ ಮಾತ್ರ. 12ನೇ ಶತಮಾನಕ್ಕೂ ಮುನ್ನ ಅರಮನೆ ಮತ್ತು ಗುರು ಮನೆಗೆ ಸೀಮಿತವಾಗಿದ್ದ ಸಂಗೀತವನ್ನು 12ನೇ ಶತಮಾನದಲ್ಲಿ ಶರಣರು ಸರಳೀಕರಣಗೊಳಿಸಿ ಸಾರ್ವತ್ರಿಕಗೊಳಿಸಿದರು ಎಂದರು. ನೇತೃತ್ವ ವಹಿಸಿದ್ದ ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಕಲುಷಿತಗೊಳ್ಳುತ್ತಿರುವ ಮನಸ್ಸುಗಳನ್ನು ಶುದ್ಧಗೊಳಿಸುವ ಶಕ್ತಿ ಸಂಗೀತಕ್ಕಿದ್ದು, ಜೀವನದಲ್ಲಿ ಮಾನಸಿಕ ನೆಮ್ಮದಿ ಪಡೆಯಲು ಪ್ರತಿಯೊಬ್ಬರು ಸಂಗೀತಕ್ಕೆ ಮೊರೆ ಹೋಗಬೇಕಿದೆ ಎಂದರು.

ಪುಣ್ಯಕೋಟಿ ಪಿಯು ಕಾಲೇಜಿನ ಪ್ರಾಚಾರ್ಯ ಸೂರ್ಯಕಾಂತ ಶೀಲವಂತ ಮಾತನಾಡಿ, ವಿದ್ಯುನ್ಮಾನ ಮಾಧ್ಯಮಗಳಲ್ಲಿ ಬಿತ್ತರಿಸುವ ಪಾಶ್ಚಾತ್ಯ ಸಂಗೀತ ಯುವ ಸಮೂಹದ ಮನಸ್ಸಿನ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಮನಸಿಗೆ ನೆಮ್ಮದಿ ನೀಡುವ ದೇಶಿ ಸಂಗೀತ, ಕಲೆ ಮತ್ತು ಸಾಹಿತ್ಯದ ಕಡೆಗೆ ಯುವಕರು ಆಸಕ್ತಿ ಬೆಳೆಸಿಕೊಳ್ಳಬೇಕಾದ ಅಗತ್ಯವಿದೆ ಎಂದರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ವೇ.ವೀರುಪಾಕ್ಷಯ್ಯ ಮಠಪತಿ ಸಮ್ಮೇಳನ ಉದ್ಘಾಟಿಸಿದರು. ಮೈಸೂರು ಸಂಗೀತ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಡಾ.ಮಾರುತಿ ಪೂಜಾರ, ಶ್ರೀಶೈಲ ಹುಡೇದ, ಕಸಾಪ ಮಾಜಿ ಅಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ ಮಾತನಾಡಿ ದರು.

ಮುಖ್ಯಗುರು ರಾಜೇಂದ್ರ ತಾಂಬೋಳೆ ಅಧ್ಯಕ್ಷತೆ ವಹಿಸಿದ್ದರು. ಸಂಗೀತ ವಿದ್ಯಾಲಯದ ಪ್ರಾಚಾರ್ಯ ರಾಜಶೇಖರ ಶೀಲವಂತ ಸ್ವಾಗತಿ ಸಿದರು. ನೀಲಕಂಠಯ್ಯ ಸ್ವಾಮಿ ವಂದಿಸಿದರು. ಶಾಮು ಚವ್ಹಾಣ್ ನಿರೂಪಿಸಿದರು. ಕಲಾವಿದ ರಾದ ಸಾಧನಾ ಹಂಚಾಟೆ, ತ್ರಿವೇಣಿ ಮಠಪತಿ, ರಾಜಶೇಖರ ಶೀಲವಂತ, ನರೇಂದ್ರ ಜಾಧವ್, ನೀಲಕಂಠಯ್ಯ ಸ್ವಾಮಿ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.


ಬಸವಕಲ್ಯಾಣದ ಜೆಬಿಕೆ ಶಾಲೆಯಲ್ಲಿ ನಡೆದ ಸಂಗೀತ ಸಮ್ಮೇಳನದಲ್ಲಿ ಶಿವಾನಂದ ಶ್ರೀ, ತ್ರಿಪುರಾಂತ ಶ್ರೀ,

## ಮಂಠಾಳದಲ್ಲಿ ಇಂದಿನಿಂದ ಶ್ರಾವಣ ಮಾಸದ ಪುರಾಣ

**ಬಸವಕಲ್ಯಾಣ:** ಶ್ರಾವಣ ಮಾಸ ನಿಮಿತ್ತ ತಾಲೂಕಿನ ಮಂಠಾಳ ಗ್ರಾಮದ ಶ್ರೀ ಮಹಾದೇವ ಮಂದಿರದಲ್ಲಿ ಸೊಲ್ಲಾಪೂರ ಶ್ರೀ ಸಿದ್ರಾಮೇಶ್ವರರ ಚರಿತ್ರೆ ಕುರಿತ ಪುರಾಣ ಕಾರ್ಯಕ್ರಮದ ಉದ್ಘಾಟನೆ ಬುಧವಾರ ಸಂಜೆ 7ಕ್ಕೆ ಜರುಗಲಿದೆ. ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಮಂಠಾಳನ ಶ್ರೀ ಗುಹೇಶ್ವರ ಮಹಾಸ್ವಾಮಿಜಿ ಸಾನ್ನಿಧ್ಯ ವಹಿಸುವರು. ಕಮಿಟಿ ಅಧ್ಯಕ್ಷ ಜಗನ್ನಾಥ ಪಾಟೀಲ್ ಮಂಠಾಳ ಅಧ್ಯಕ್ಷತೆ ವಹಿಸುವರು. ಪ್ರತಿದಿನ ಸಂಜೆ 7ರಿಂದ 8ರ ವರೆಗೆ ಪುರಾಣ ಜರುಗಲಿದೆ. ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಗ್ರಾಮದ ಶ್ರೀ ಬುರಾಣಪುರ ಸಿದ್ಧಯ್ಯಪ್ಪ ಸೇವಾ ಯುವ ಸಂಘದ ಅಧ್ಯಕ್ಷ ಗುರುರಾಜ ಬಿರಾದಾರ್, ಕಾರ್ಯಾಧ್ಯಕ್ಷ ಶಂಕರ ಪಾಟೀಲ್ ಕೋರಿದ್ದಾರೆ.

ವಿಜಯವಾಣಿ
ಭಾನುವಾರ 23 ಜೂನ್ 2013

# ಬಸವಕಲ್ಯಾಣದಲ್ಲಿ ತ್ರಿಪುರಾಂತ ಶ್ರೀಗಳಿಗೆ ಸತ್ಕಾರ

**ಬಸವಕಲ್ಯಾಣ:** ರಂಭಾಪುರಿ ಪೀಠದಿಂದ ಶರಣರ ದೀಕ್ಷಾ ಸ್ಥಳ ಶ್ರೇಷ್ಠ ಶ್ರೀ ಪ್ರಶಸ್ತಿ ಪುರಸ್ಕೃತ ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಅಭಿನಂದನಾ ಸಮಾರಂಭ ನಗರದ ಪುಣ್ಯಕೋಟಿ ಪಿಯು ಕಾಲೇಜಿನಲ್ಲಿ ಜರುಗಿತು.

ಸನ್ಮಾನ ಸ್ವೀಕರಿಸಿದ ಶ್ರೀಗಳು, ರಂಭಾಪುರಿ ಜಗದ್ಗುರುಗಳಿಂದ ಪಡೆದ ಈ ಪ್ರಶಸ್ತಿ ಮತ್ತಷ್ಟು ಜವಾಬ್ದಾರಿ ಹೆಚ್ಚಿಸಿದೆ. ಸಾಮಾಜಿಕ, ಧಾರ್ಮಿಕ ಹಾಗೂ ಕಾರ್ಯಗಳಿಗೆ ಪ್ರೋತ್ಸಾಹ ಮತ್ತು ಪ್ರೇರಣೆ ನೀಡಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಸೂರ್ಯಕಾಂತ ಶೀಲವಂತ, ಶ್ರೀಮಠವು ನಗರದಲ್ಲಿ ಧಾರ್ಮಿಕದೊಂದಿಗೆ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡು ಸಮಾಜಮುಖಿ ಕೆಲಸ ಮಾಡುತ್ತಿದೆ ಎಂದರು.

ಪ್ರಮುಖರಾದ ಶಿವಾನಂದ ಶೀಲವಂತ, ಚಂದ್ರಕಾಂತ ಶೀಲವಂತ, ಶಶಿಕಾಂತ ಶೀಲವಂತ ಉಪಸ್ಥಿತರಿದ್ದರು. ಅಂಕಿತಾ ಸ್ವಾಗತಿಸಿದರು. ಸುರೇಖಾ ಶೀಲವಂತ ವಂದಿಸಿದರು. ಉಪನ್ಯಾಸಕ ರುದ್ರಮುನಿ ಮಠಪತಿ ನಿರೂಪಿಸಿದರು.


ಬಸವಕಲ್ಯಾಣದ ಪುಣ್ಯಕೋಟಿ ಕಾಲೇಜಿನಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸನ್ಮಾನ ಸ್ವೀಕರಿಸಿ ಆಶೀರ್ವಚನ ನೀಡಿದರು. ಪ್ರಾಚಾರ್ಯ ಸೂರ್ಯಕಾಂತ ಶೀಲವಂತ, ಶಿವಾನಂದ ಶೀಲವಂತ, ರುದ್ರಮುನಿ ಮಠಪತಿ ಉಪಸ್ಥಿತರಿದ್ದರು.

ವಿಜಯವಾಣಿ
ಶುಕ್ರವಾರ 21 ಜೂನ್ 2013


ಮೇಹಕರದಲ್ಲಿ ನಡೆದ ಅತಿರುದ್ರಾಭಿಷೇಕ ಮತ್ತು ಜಪಯಜ್ಞ ಸಮಾರೋಪದಲ್ಲಿ ರಂಭಾಪುರಿ ಜಗದ್ಗುರು ಆಶೀರ್ವಚನ ನೀಡಿದರು. ಶ್ರೀ ರಾಜೇಶ್ವರ ಶಿವಾಚಾರ್ಯರು ಇದ್ದರು.

Scanned by CamScanner

ವಿಜಯವಾಣಿ
ಶುಕ್ರವಾರ 26 ಜುಲೈ 2013

■ ರಂಭಾಪುರಿ ಜಗದ್ಗುರುಗಳ ಸಾನ್ನಿಧ್ಯದಲ್ಲಿ ತ್ರಿಪುರಾಂತ ಗವಿ ಮಠದಲ್ಲಿ ಗುರುವಂದನೆ

# ಧಾರ್ಮಿಕ ಮೌಲ್ಯಗಳ ಪುನರುತ್ಥಾನದ ಕೆಲಸ ನಡೆಯಲಿ

**ಬಸವಕಲ್ಯಾಣ:** ಸಮಾಜದ ಸ್ವಾಸ್ಥ್ಯಕ್ಕಾಗಿ ಧಾರ್ಮಿಕ ಮೌಲ್ಯಗಳ ಪುನರುತ್ಥಾನದ ಕೆಲಸ ಎಲ್ಲೆಡೆ ನಡೆಯಬೇಕಾಗಿದೆ ಎಂದು ರಂಭಾಪುರಿ ಜಗದ್ಗುರು ಶ್ರೀ ಪ್ರಸನ್ನರೇಣುಕ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ನುಡಿದರು.

ತ್ರಿಪುರಾಂತದ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿ ಮಠದಲ್ಲಿ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ಸಹಯೋಗದೊಂದಿಗೆ ಗುರುವಾರ ನಡೆದ ಗುರುವಂದನಾ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿದ್ದ ಜಗದ್ಗುರುಗಳು, ಧರ್ಮ-ಸಂಸ್ಕೃತಿಯ ಆಚಾರ ಜೀವನದ ಸುಖ-ಶಾಂತಿ ನೆಲೆಗೆ ಸ್ಫೂರ್ತಿಯಾಗಿದೆ ಎಂದರು.

ವಿಶೇಷವಾಗಿ ಯುವಕರಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಬೆಳೆಸುವ ಕೆಲಸ ಪ್ರಜ್ಞಾವಂತರಿಂದ ನಡೆಯಲಿ ಎಂದ ಅವರು, ಮಾತು ಕೃತಿ ಒಂದಾಗಿ ಆಚರಣೆಯಲ್ಲಿ ತಂದಾಗ ಮಾತ್ರ ಬದುಕು ಸಾರ್ಥಕವಾಗುತ್ತದೆ ಎಂದು ಪ್ರತಿಪಾದಿಸಿದರು.

ವೈಜ್ಞಾನಿಕ ಯುಗದಲ್ಲಿ ಭೌತಿಕ, ಆರ್ಥಿಕವಾಗಿ ಸಬಲರಾದರೂ ಮನಶಾಂತಿ ಮತ್ತು ನೆಮ್ಮದಿ ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲವಾಗಿದೆ. ಧಾರ್ಮಿಕ ಮೌಲ್ಯಗಳನ್ನು ಪುನರುತ್ಥಾನಗೊಳಿಸದಿದ್ದರೆ ಭವಿಷ್ಯದಲ್ಲಿ ಯುವ ಜನಾಂಗ ಆತಂಕದ ದಿನಗಳನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದ ಅವರು, ಬದುಕಿಗೆ ದಿಕ್ಸೂಚಿಯಾದ ಧರ್ಮದಿಂದ ಜೀವನದಲ್ಲಿ ಶ್ರೇಯಸ್ಸು ಸಾಧ್ಯವಾಗಲಿದೆ ಎಂದರು.

ಸೂರ್ಯ ಹಗಲು ಬೆಳಕು ನೀಡಿದರೆ, ಚಂದ್ರ ಬೆಳಗುವುದು ರಾತ್ರಿ. ಆದರೆ ಹಗಲಿರುಳು ಬದುಕಿನ ಉಸಿರಿರುವವರೆಗೆ ಜೀವನದಲ್ಲಿ ಬೆಳಕು ಕೊಡುವುದು ಧರ್ಮ. ಆದರ್ಶ ಸಂಸ್ಕೃತಿ ಬಗ್ಗೆ ಕೆಲವರು ಇಲ್ಲಸಲ್ಲದ ಆರೋಪ ಮಾಡುವ ಮೂಲಕ ಜನರನ್ನು ದಾರಿ ತಪ್ಪಿಸಲು ಯತ್ನಿಸುತ್ತಿರುವುದು ಸರಿಯಲ್ಲ. ಧರ್ಮ-ಸಂಸ್ಕೃತಿ ಸಂರಕ್ಷಿಸುವಲ್ಲಿ ಧರ್ಮಪೀಠ ಮತ್ತು ಮಠಾಧೀಶರ ಮೇಲೆ ಮಹತ್ವದ ಜವಾಬ್ದಾರಿ ಇದೆ ಎಂದರು.



ತ್ರಿಪುರಾಂತ ಮಠದಲ್ಲಿ ಗುರುವಾರ ನಡೆದ ಗುರುವಂದನಾ ಸಮಾರಂಭವನ್ನು ಎಂ.ಬಿ.ಮೋಟಾರ್ಸ್ ಮಾಲೀಕ ಸುನೀಲ ಪಾಟೀಲ್ ಉದ್ಘಾಟಿಸಿದರು. ರಂಭಾಪುರಿ ಜಗದ್ಗುರು ಶ್ರೀ ಪ್ರಸನ್ನರೇಣುಕ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ರಾಜೇಶ್ವರ ಶಿವಾಚಾರ್ಯರು, ಸಾಯಗಾಂವ ಶ್ರೀ, ವೀರಣ್ಣ ಶೀಲವಂತ, ಚಂದ್ರಕಾಂತ ಸ್ವಾಮಿ ಇದ್ದರು.

ಬದುಕು ಬೆಳಗಲು ಗುರುಬೋಧಾಮೃತ ಅವಶ್ಯಕವಾಗಿದೆ. ಅರಿವು ಆಚಾರ ನೀಡಬಲ್ಲಾತನೇ ನಿಜವಾದ ಗುರು. ಗುರುವಿಗೆ ಎಲ್ಲ ಧರ್ಮದಲ್ಲಿಯೂ ಮೊದಲ ಸ್ಥಾನವಿದೆ ಎಂದ ಅವರು, ತ್ರಿಪುರಾಂತ ಗವಿ ಮಠದಿಂದ ನಡೆದಿರುವ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ನೇತೃತ್ವ ವಹಿಸಿದ್ದ ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು, ಗುರು ಪೂರ್ಣತ್ವದ, ಸಮೃದ್ಧತ್ವದ ಸಂಕೇತ. ಗುರುವಿಗೆ ಭಕ್ತಿಯಿಂದ ಸಮರ್ಪಣೆ ಮಾಡಿಕೊಳ್ಳುವ ದಿನವೇ ಗುರುಪೂರ್ಣಿಮೆ. ಗುರುವಿನ ಚರಣದಲ್ಲಿ ಮನಸ್ಸು ಸಮರ್ಪಿಸುವುದರಿಂದ ಜೀವನದಲ್ಲಿ ಸಮೃದ್ಧಿ ಪಡೆಯಬಹುದಾಗಿದೆ ಎಂದರು.

ಸಮ್ಮುಖ ವಹಿಸಿದ್ದ ತ್ರಿಪುರಾಂತ ಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶಾಂತಿ-ನೆಮ್ಮದಿಯ ಜೀವನಕ್ಕೆ ಗುರುವಿನ ಮಾರ್ಗದರ್ಶನ ಅವಶ್ಯಕವಾಗಿದೆ. ಜೀವನದಲ್ಲಿ ಕಷ್ಟ-ಕಾರ್ಪಣ್ಯಗಳ ನಿವಾರಣೆಗೆ ಗುರು ಮಾರ್ಗದರ್ಶನ ಬೇಕೇಬೇಕು ಎಂದರು.

ಎಂ.ಬಿ.ಪಾಟೀಲ್ ಮೋಟಾರ್ಸ್ ಮಾಲೀಕ ಸುನೀಲ ಪಾಟೀಲ್ ಸಮಾರಂಭ ಉದ್ಘಾಟಿಸಿದರು. ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಅಧ್ಯಕ್ಷ ವೀರಣ್ಣ ಶೀಲವಂತ ಅಧ್ಯಕ್ಷತೆ ವಹಿಸಿದ್ದರು. ರಾಜೇಶ್ವರದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಸಾಯಗಾಂವನ ಶ್ರೀ ಶಿವಾನಂದ ದೇವರು, ಹಳ್ಳಿಖೇಡದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು, ಜೇವರ್ಗಿ ಹಿರೇಮಠದ ಸ್ವಾಮೀಜಿ, ಅಚಲೇರಾ ಹಿರೇಮಠದ ಶ್ರೀಗಳು ಸಮ್ಮುಖ ವಹಿಸಿದ್ದರು.

ಪ್ರಮುಖರಾದ ಶರಣಪ್ಪ ಬಿರಾದಾರ, ಮಲ್ಲಯ್ಯ ಸ್ವಾಮಿ ಹಿರೇಮಠ, ಚಂದ್ರಕಾಂತ ಶೀಲವಂತ, ಕಸಾಪ ತಾಲೂಕು ಅಧ್ಯಕ್ಷ ಚಂದ್ರಕಾಂತ ಸ್ವಾಮಿ ಉಪಸ್ಥಿತರಿದ್ದರು. ರಮೇಶ ಸ್ವಾಮಿ ಹಾಗೂ ಮಹಾದೇವ ಕಾಮಶೆಟ್ಟಿ ಅವರನ್ನು ಸನ್ಮಾನಿಸಿ ಗುರು ರಕ್ಷೆ ನೀಡಲಾಯಿತು. ಪ್ರೊ. ಸೂರ್ಯಕಾಂತ ಶೀಲವಂತ ಸ್ವಾಗತಿಸಿದರು. ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ ವಂದಿಸಿದರು. ರಮೇಶ ರಾಜೋಳೆ ನಿರೂಪಿಸಿದರು. ರುದ್ರೇಶ್ವರ ಮಠಪತಿ ಗೋರ್ಟಾ ಪ್ರಾರ್ಥನೆ, ರಾಜಶೇಖರ ಶೀಲವಂತ ಸಂಗೀತ ಸೇವೆ ನಡೆಸಿಕೊಟ್ಟರು.



ಗುರುವಂದನೆಯಲ್ಲಿ ಭಾಗವಹಿಸಿದ ಭಕ್ತಸಮೂಹ.

Scanned by CamScanner




ಸ್ವಾಮಿ ವಿವೇಕಾನಂದರ 150ನೇ ಜನ್ಮ ವರ್ಷಾಚರಣೆ ನಿಮಿತ್ತ ಬಸವಕಲ್ಯಾಣದಲ್ಲಿ ಶುಕ್ರವಾರ ನಡೆದ ಸಮಾವೇಶವನ್ನು ತಾಪಂ ಅಧ್ಯಕ್ಷ ಗುಂಡುರೆಡ್ಡಿ ಉದ್ಘಾಟಿಸಿದರು. ಶ್ರೀ ಸ್ವಾಮಿ ತ್ಯಾಗೀಶ್ವರಾನಂದಜಿ, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಸ್ವಾಮಿ ಜ್ಯೋತಿರ್ಮಯಾನಂದಜಿ, ಸಿದ್ರಾಮಪ್ಪ ಗುದಗೆ, ಅಶೋಕ ತೆಲಂಗ, ತಹಸೀಲ್ದಾರ್ ವೆಂಕಟಯ್ಯ ಇದ್ದರು.



ಬಸವಕಲ್ಯಾಣದಲ್ಲಿ ನಡೆದ ವಿವೇಕ ರಥಯಾತ್ರೆಯಲ್ಲಿ ಸ್ವಾಮಿ ತ್ಯಾಗೀಶ್ವರಾನಂದಜಿ, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಸ್ವಾಮಿ ಜ್ಯೋತಿರ್ಮಯಾನಂದಜಿ, ಶಶೀಲ್ ನಮೋಶಿ, ಸಿದ್ರಾಮಪ್ಪ ಗುದಗೆ, ಅಶೋಕ ತೆಲಂಗ, ಸೂರ್ಯಕಾಂತ ಚಿಲ್ಲಾಬಟ್ಟೆ, ರುದ್ರೇಶ ಪಾಟೀಲ್, ಶಿವಯ್ಯ ಸ್ವಾಮಿ, ವೆಂಕಟಯ್ಯ ಭಾಗವಹಿಸಿದ್ದರು.

■ ಮಳೆಯಲ್ಲಿಯೂ ಮಾರ್ದನಿಸಿದ ವಿವೇಕಾನಂದರ ಸಂದೇಶ

# ಬಸವ ನಾಡಿನಲ್ಲಿ ವಿವೇಕ ರಥಯಾತ್ರೆಗೆ ಭವ್ಯ ಸ್ವಾಗತ

**ಬಸವಕಲ್ಯಾಣ:** ಸ್ವಾಮಿ ವಿವೇಕಾನಂದರ 150ನೇ ಜನ್ಮ ವರ್ಷಾಚರಣೆ ನಿಮಿತ್ತ ಸ್ವಾಮಿ ವಿವೇಕಾನಂದರ ಸಂದೇಶ ಹೊತ್ತು ರಾಜ್ಯವ್ಯಾಪಿ ಸಂಚರಿಸುತ್ತಿರುವ ರಥಯಾತ್ರೆಗೆ ನಗರದಲ್ಲಿ ಶುಕ್ರವಾರ ಭವ್ಯ ಸ್ವಾಗತ ನೀಡಲಾಯಿತು.

ಬೆಂಗಳೂರು ರಾಮಕೃಷ್ಣ ಮಠ ಹಾಗೂ ಬೀದರ್ ರಾಮಕೃಷ್ಣ ವಿವೇಕಾನಂದ ಆಶ್ರಮದ ಸ್ವಾಮೀಜಿಗಳ ಸಾರಥ್ಯದಲ್ಲಿ ಆಗಮಿಸಿದ ರಥ ಯಾತ್ರೆಗೆ ತ್ರಿಪುರಾಂತದ ಮಡಿವಾಳ ಮಾಚಿದೇವರ ವೃತ್ತದ ಬಳಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ತಾಲೂಕು ಆಡಳಿತ ಮತ್ತು ಸಂಘ-ಸಂಸ್ಥೆಗಳಿಂದ ಬರ ಮಾಡಿಕೊಳ್ಳಲಾಯಿತು.

ಅಲ್ಲಿಂದ ಹೊರಟ ವಿವೇಕಾನಂದರ ಭವ್ಯವಾದ ಮೂರ್ತಿಯನ್ನೊಳಗೊಂಡ ರಥಯಾತ್ರೆಯು ಹರಳಯ್ಯ ವೃತ್ತ, ಅಂಬೇಡ್ಕರ್ ವೃತ್ತದ ಮೂಲಕ ಮುಖ್ಯ ರಸ್ತೆ ಮಾರ್ಗವಾಗಿ ಶ್ರೀ ಸದ್ಗುರು ಸದಾನಂದ ಸ್ವಾಮಿ ಮಠದವರೆಗೆ ತೆರಳಿತು. ಸ್ವಾಮಿಜಿಗಳು, ಅಧಿಕಾರಿಗಳು, ಸಂಘ-ಸಂಸ್ಥೆ ಪದಾಧಿಕಾರಿಗಳು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು.

**ಮಾರ್ದನಿಸಿದ ಸಂದೇಶ:** ರಥಯಾತ್ರೆ ನಿಮಿತ್ತ ಸದಾನಂದ ಸ್ವಾಮಿ ಮಠದ ಸಭಾಂಗಣದಲ್ಲಿ ಆಯೋಜಿಸಿದ ವಿದ್ಯಾರ್ಥಿಗಳ ಸಮಾವೇಶದಲ್ಲಿ ಸುರಿಯುತ್ತಿರುವ ಮಳೆಯಲ್ಲೇ ಸ್ವಾಮಿ ವಿವೇಕಾನಂದರ ಸಂದೇಶ ಮಾರ್ದನಿಸಿತು.

ರಥಯಾತ್ರೆ ಮಠದ ಸಮೀಪ ಬರುತ್ತಿದ್ದಂತೆ ಸಣ್ಣದಾಗಿ ಮಳೆ ಶುರುವಾಯಿತು. ಆದರೆ ಅದಾಗಲೇ ಯಾತ್ರೆಯಲ್ಲಿ ಭಾಗವಹಿಸಿದ್ದ ಪ್ರಮುಖರು ಮತ್ತು ವಿದ್ಯಾರ್ಥಿಗಳು ಸಭಾಂಗಣ ತಲುಪಿದ್ದರು. ಕಾರ್ಯಕ್ರಮ ಆರಂಭವಾಗುತ್ತಿದ್ದಂತೆ ಜೋರಾಗಿ ಸುರಿಯಲಾರಂಭಿಸಿತು.

ಇದ್ದಕ್ಕಿದ್ದಂತೆ ಮಳೆ ಜೋರಾಗಿದ್ದರಿಂದ ವಿಚಲಿತರಾದ ವಿದ್ಯಾರ್ಥಿಗಳು, ಅತ್ತಿತ್ತ ಸರಿಯಲಾರಂಭಿಸಿದ್ದರಿಂದ ಕೆಲಕಾಲ ಗೊಂದಲದ ಸ್ಥಿತಿ ನಿರ್ಮಾಣವಾಗಿತ್ತು. ಈ ಮಧ್ಯೆ ರಾಮದುರ್ಗದ ಸ್ವಾಮಿ ಅರ್ಚನಾನಂದಜಿ ಮೈಕ್ ಹಿಡಿದು ಘೋಷಣೆಗಳ ಮೂಲಕ ವಿದ್ಯಾರ್ಥಿಗಳನ್ನು ಶಾಂತಗೊಳಿಸಲು ಪ್ರಯತ್ನಿಸಿದರು.

ಮಳೆ ಮತ್ತಷ್ಟು ಜೋರಾಗುತ್ತಿದ್ದಂತೆ ಪರಿಸ್ಥಿತಿಯನ್ನು ಅರಿತ ಬೆಂಗಳೂರಿನ ಶ್ರೀ ಸ್ವಾಮಿ ತ್ಯಾಗೀಶ್ವರಾನಂದಜಿ ಮಹಾರಾಜ ಮೈಕ್ ಹಿಡಿದು ಸ್ವಾಮಿ ವಿವೇಕಾನಂದ ಸಂದೇಶಗಳನ್ನು ಹೇಳುತ್ತ, ಮಧ್ಯೆ ಮಧ್ಯೆ ವಿದ್ಯಾರ್ಥಿಗಳು ಘೋಷಣೆ ಹಾಕುವಂತೆ ಮನವಿ ಮಾಡಿದರು. ಸ್ವಾಮಿ ವಿವೇಕಾನಂದರ ಸಂದೇಶ, ಆದರ್ಶಗಳನ್ನು ಹೇಳುವುದರೊಂದಿಗೆ ದೃಷ್ಟಾಂತಗಳು, ಕಥೆಗಳನ್ನು ಹೇಳುತ್ತ ವಿದ್ಯಾರ್ಥಿ ಸಮೂಹವನ್ನು ಚಿಂತನೆಗೆ ಹಚ್ಚಿದರು.

ಯಾರ ಬದುಕು ನಿಸ್ವಾರ್ಥ, ಪವಿತ್ರ, ಸತ್ಯಪೂರ್ಣವಾಗಿರುತ್ತದೋ ಅಂಥವರ ಜೀವನ ಚರಿತ್ರೆ ಅಧ್ಯಯನ ಮಾಡುತ್ತೇವೆ. ಅಥವರನ್ನು ಪೂಜಿಸುತ್ತೇವೆ. ಅಂಥವರ ಆದರ್ಶವನ್ನು ಪಾಲಿಸುತ್ತೇವೆ. ಸ್ವಾಮಿ ವಿವೇಕಾನಂದರ ಆದರ್ಶವನ್ನು ಯುವ ಸಮೂಹ ತಿಳಿದುಕೊಂಡು ಅಳವಡಿಸಿಕೊಂಡಾಗ ಮಾತ್ರ ಸಮೃದ್ಧ ಭಾರತ ನಿರ್ಮಾಣ ಸಾಧ್ಯ ಎಂದರು.

ನೇತೃತ್ವವಹಿಸಿದ್ದ ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಸ್ವಾಮಿ ವಿವೇಕಾನಂದರ ಜೀವನಾದರ್ಶಗಳು ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಿವೆ. ಅವರ ಜೀವನ ಚರಿತ್ರೆ ಅಧ್ಯಯನ ಮಾಡುವ ಮೂಲಕ ಪ್ರೇರಣೆ ಪಡೆದು ಒಳ್ಳೆಯದನ್ನು ತಿಳಿದುಕೊಂಡು ಒಳ್ಳೆಯವರಾಗಿ ನಡೆಯಬೇಕಿದೆ ಎಂದರು.

ಬೀದರ್ ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ಸ್ವಾಮಿ ಜ್ಯೋತಿರ್ಮಯಾನಂದಜಿ, ಬೆಂಗಳೂರಿನ ಸ್ವಾಮಿ ಸೌಖ್ಯಾನಂದಜಿ ಮಹಾರಾಜ ನೇತೃತ್ವ ವಹಿಸಿದ್ದರು.

ತಾಪಂ ಅಧ್ಯಕ್ಷ ಗುಂಡುರೆಡ್ಡಿ ಕಾರ್ಯಕ್ರಮ ಉದ್ಘಾಟಿಸಿದರು. ಪ್ರಮುಖರಾದ ಎಪಿಎಂಸಿ ಅಧ್ಯಕ್ಷ ಸಿದ್ರಾಮಪ್ಪ ಗುದಗೆ, ಉಪಾಧ್ಯಕ್ಷ ಅಶೋಕ ತೆಲಂಗ, ತಹಸೀಲ್ದಾರರಾದ ವೆಂಕಟಯ್ಯ, ಡಿ.ಎಂ.ಪಾಣಿ, ತಾಲೂಕು ದೈಹಿಕ ಶಿಕ್ಷಣಾಧಿಕಾರಿ ಪ್ರಕಾಶ ಮೋರೆ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ನಿಂಗರಾಜ ಅರಸ್, ಮಠದ ಪ್ರಬಂಧಕ ಕಮಿಟಿ ಸದಸ್ಯ ಕಿಶೋರ ಗುರ್ಜರ, ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಅಧ್ಯಕ್ಷ ವೀರಣ್ಣ ಶೀಲವಂತ, ಕಸಾಪ ತಾಲೂಕು ಅಧ್ಯಕ್ಷ ಚಂದ್ರಕಾತ ಸ್ವಾಮಿ, ಯುವ ಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿ ಡಾ. ಎಚ್.ಬಿ.ಭರವಶೆಟ್ಟಿ, ಶಿವಯ್ಯ ಸ್ವಾಮಿ, ಓಪ್ರಕಾಶ ರೊಟ್ಟೆ, ಶಿವಕುಮಾರ ಸ್ವಾಮಿ, ಪ್ರೊ.ಸೂರ್ಯಕಾಂತ ಶೀಲವಂತ, ರುದ್ರೇಶ ಪಾಟೀಲ್ ಬೇಲೂರ್, ಮನೋಜ ಮುಡಬಿಕರ್, ಲೋಕೇಶ ಮೋಳಕೆರೆ, ದೇವೇಂದ್ರ ಮಂಠಾಳಕರ್ ಭಾಗವಹಿಸಿದ್ದರು.

ರುದ್ರೇಶ್ವರ ಮಠಪತಿ ಗೋರ್ಟಾ ಪ್ರಾರ್ಥನಾ ಗೀತೆ ಹಾಡಿದರು. ರಮೇಶ ರಾಜೋಳೆ ನಿರೂಪಿಸಿದರು.

**ಬೀಳ್ಕೊಡುಗೆ:** ರಥಯಾತ್ರೆ ಕಳೆದ ಮೂರು ದಿನಗಳಿಂದ ಜಿಲ್ಲೆಯಲ್ಲಿ ಸಂಚರಿಸಿ ಶುಕ್ರವಾರ ನಗರಕ್ಕೆ ಆಗಮಿಸಿತ್ತು. ಇಲ್ಲಿಯ ಶ್ರೀ ಸದ್ಗುರು ಸದಾನಂದ ಸ್ವಾಮಿ ಮಠದಲ್ಲಿ ನಡೆದ ಸಮಾವೇಶದ ನಂತರ ಗುಲ್ಬರ್ಗ ಜಿಲ್ಲೆಗೆ ಭಕ್ತಿ ಭಾವದ ಮಧ್ಯೆ ಬೀಳ್ಕೊಡಲಾಯಿತು.





ಬಸವಕಲ್ಯಾಣ ಹಾಗೂ ಹುಮನಾಬಾದ್ ಕಾರ್ಯಕ್ರಮದಲ್ಲಿ ತದೇಕಚಿತ್ತದಿಂದ ವಿವೇಕ ಸಂದೇಶ ಆಲಿಸುತ್ತಿರುವ ವಿದ್ಯಾರ್ಥಿ ಸಮೂಹ.

Scanned by CamScanner

ವಿಜಯ ಕರ್ನಾಟಕ
ಬುಧವಾರ,31 ಜುಲೈ 2013, ಗುಲ್ಬರ್ಗ

## ಚಿತ್ರ ಸುದ್ದಿ



ಹುಲಸೂರು ಸಮೀಪದ ಬೇಟಬಾಲಕುದಾ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಹಳೆ ವಿದ್ಯಾರ್ಥಿಗಳ ಸ್ನೇಹ ಸಮೇಳನ ನಡೆಯಿತು. ಮೊರಾರ್ಜಿ ದೇಸಾಯಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು.

# ಶ್ರಾವಣ ಮಾಸದ ನಿಮಿತ್ತ ವಿಶೇಷ ಪೂಜೆ

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ನಗರದ ಹೊರವಲಯದಲ್ಲಿರುವ ತ್ರೀಪುರಾಂತದ ಮರಿದೇವರ ಗುಡ್ಡದ ಪವಿತ್ರ ಪತ್ರಿವನದ ಪರಿಸರದಲ್ಲಿರುವ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಕೃತು ಗದ್ದುಗೆಗೆ ಪವಿತ್ರ ಶ್ರಾವಣ ಮಾಸದ ನಿಮಿತ್ತ ಸನಾತನ ಆಚಾರ್ಯ ಪರಂಪರೆಯನ್ವಯ ಪವಿತ್ರ ವೇಧ ಘೋಶಗಳ ಮೂಲಕ ರುದ್ರಾಭಿಷೇಕ ಧಾರ್ಮಿಕ ವಿಧಿ ವಿಧಾನಕ್ಕೆ ಪೀಠಾಧ್ಯಕ್ಷ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಚಾಲನೆ ನೀಡಿದರು.

ಶ್ರಾಮಾಣ ಮಾಸದ ನಿಮಿತ್ತ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗದ್ದುಗೆಗೆ ದಿನಾಲೂ ಬೆಳಿಗ್ಗೆ ಎಂಟು ಗಂಟೆಗೆ ರುದ್ರಾಭಿಷೇಕ ನಡೆಯಲಿದ್ದು, ಮಠದ ಸದ್ಭಕ್ತರು ಈ ಪವಿತ್ರ ಸ್ಥಳಕ್ಕೆ ಆಗಮಿಸಿ ದರ್ಶನಾಶೀರ್ವಾದ ಪಡೆದುಕೊಳ್ಳ 'ಬೇಕೆಂದು ದೇವಸ್ಥಾನದ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಲ್ಲದೆ ಅಕ್ಕಮಹಾದೇವಿ ಭಜನಾ ಮಂಡಳಿ ಸದ್ಭಕ್ತರಿಂದ ತಿಂಗಳ ಪರ್ಯಂತರ ಜಪಯಜ್ಞ ನಡೆಯುತ್ತಿದ್ದು, ಈ ಎಲ್ಲಾ ಕಾರ್ಯಕ್ರಮ ವಿಶ್ವ ಶಾಂತಿಗಾಗಿ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.



ಬಸವಕಲ್ಯಾಣ ನಗರದ ಹೊರವಲಯದಲ್ಲಿರುವ ತ್ರೀಪುರಾಂತದ ಮರಿದೇವರ ಗುಡ್ಡದ ಪವಿತ್ರ ಪತ್ರಿವನದ ಪರಿಸರದಲ್ಲಿರುವ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಕೃರ್ತು ಗದ್ದುಗೆಗೆ ಶ್ರಾವಣ ಮಾಸದ ನಿಮಿತ್ತ ವಿಶೇಷ ರುದ್ರಾಭಿಷೇಕ ಪೂಜೆ ನೆರವೇರಿತು.

ವಿಜಯ ಕರ್ನಾಟಕ
ಶನಿವಾರ,10 ಆಗಸ್ಟ್ 2013, ಗುಲ್ಬರ್ಗ



ಬಸವಕಲ್ಯಾಣದ ಘನಲಿಂಗ ರುದ್ರಮುನಿ ಗವಿಮಠದಲ್ಲಿ ಗುರುವಾರ ಹಮ್ಮಿಕೊಂಡ ಗುರುವಂದನಾ ಸಮಾರಂಭವನ್ನು ಮುಖಂಡ ಸುನೀಲ ಪಾಟೀಲ ಉದ್ಘಾಟಿಸಿದರು. ರಂಭಾಪುರಿ ಜಗದ್ಗುರು ವೀರ ಸೋಮೇಶ್ವರ ಶಿವಾಚಾರ್ಯರು, ತಡೋಳಾ ರಾಜೇಶ್ವರ ಶಿವಾಚಾರ್ಯರು, ರುದ್ರಮುನಿ ಶಿವಾಚಾರ್ಯರು ಇದ್ದರು

# 'ಅರಿವು ಆಚಾರ ನೀಡಬಲ್ಲಾತ ನಿಜಗುರು'

ಪ್ರಜಾವಾಣಿ ವಾರ್ತೆ

**ಬಸವಕಲ್ಯಾಣ:** ಬದುಕನ್ನು ಬೆಳಗಲು ಗುರು ಬೋಧನೆ ಅವಶ್ಯಕ. ಶಿಷ್ಯನಿಗೆ ಅರಿವು ಮತ್ತು ಆಚಾರ ನೀಡಬಲ್ಲಾತನೇ ನಿಜಗುರು ಎಂದು ಬಾಳೆಹೊನ್ನೂರು ರಂಭಾಪುರಿ ಪೀಠದ ಜಗದ್ಗುರು ವೀರ ಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯರು ಹೇಳಿದರು.

ಇಲ್ಲಿನ ತ್ರಿಪುರಾಂತದ ಘನಲಿಂಗ ರುದ್ರಮುನಿ ಗವಿಮಠದಲ್ಲಿ ಗುರುವಾರ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆಯಿಂದ ಹಮ್ಮಿಕೊಂಡ ಗುರುವಂದನಾ ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದರು.

ಮುಖಂಡ ಸುನಿಲ ಪಾಟೀಲ ಉದ್ಘಾಟಿಸಿದರು. ತಡೋಳಾ ರಾಜೇಶ್ವರ ಶಿವಾಚಾರ್ಯರು, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಪ್ರಾಚಾರ್ಯ ಸೂರ್ಯಕಾಂತ ಶೀಲವಂತ ಮಾತನಾಡಿದರು.

ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ತಾಲ್ಲೂಕು ಅಧ್ಯಕ್ಷ ವೀರಣ್ಣ ಶೀಲವಂತ ಅಧ್ಯಕ್ಷತೆ ವಹಿಸಿದ್ದರು. ಶರಣಪ್ಪ ಬಿರಾದಾರ, ದಯಾನಂದ ಶೀಲವಂತ, ಚಂದ್ರಕಾಂತ ಸ್ವಾಮಿ ನಾರಾಯಣಪುರ, ರಮೇಶ ಸ್ವಾಮಿ, ಮಹಾದೇವ ಕಾಮಶೆಟ್ಟಿ, ರುದ್ರೇಶ್ವರ ಗೋರಟಾ ಇದ್ದರು.

ಬುಧವಾರ
31ನೇ ಜುಲೈ 2013

ಪ್ರಜಾವಾಣಿ

# ಚೈತನ್ಯ ಶೀಲರಾಗಲು ಮಕ್ಕಳಿಗೆ ಕಲಾ ಜ್ಞಾನ ನೀಡಿ

■ **ವಿಕ ಸುದ್ದಿಲೋಕ ಬಸವಕಲ್ಯಾಣ**

ನಮ್ಮ ಕಲ್ಯಾಣ ನಾಡು ಐತಿಹಾಸಿಕ ನಗರವಾಗಿದ್ದು ಇಲ್ಲಿ ಅನಾದಿ ಕಾಲದಿಂದಲೂ ಸಂಗೀತ ನೃತ್ಯ ಸಾಹಿತ್ಯಕ್ಕೆ ತುಂಬಾ ಪ್ರಾಸಸ್ತ್ಯ ನೀಡಲಾಗಿದೆ. ನಮ್ಮ ಮಕ್ಕಳು ಚೈತನ್ಯ ಶೀಲರಾಗಿ ಎಲ್ಲಾ ರೀತಿಯಿಂದ ಬೆಳವಣಿಗೆ ಹೊಂದಬೇಕಾದರೆ ಮಕ್ಕಳಿಗೆ ಸಂಗೀತ ನೃತ್ಯ ಕಲೆಗಳಂತ ಜ್ಞಾನ ನೀಡಬೇಕಾಗಿದೆ ಎಂದು ತ್ರಿಪುರಾಂತದ ಮರಿದೇವರ ಗುಡ್ಡದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಶಿವಾಜಿ ನಗರದಲ್ಲಿ ಆರಾಧ್ಯ ಸಂಗೀತ ನೃತ್ಯ ಕೇಂದ್ರದ ಉದ್ಘಾಟನಾ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು ಸಂಗೀತ ನೃತ್ಯ ಶಾಲೆಗಳು ಕೂಡಾ ಕಲ್ಯಾಣದ ತುಂಬೆಲ್ಲಾ ತನ್ನ ವ್ಯಾಪ್ತಿ ಪಸರಿಸಿಕೊಂಡು ಉತ್ತಮ ಮಾರ್ಗದಲ್ಲಿ ನಡೆಯಲಿ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಪ್ರೋ ಎಂ ಕೆ ಗಾದಗೆ ಮಾತನಾಡಿ ಪ್ರಸ್ತುತ ದಿನಗಳಲ್ಲಿ ಮಕ್ಕಳ ಸರ್ವತೋಮುಖ ಬೆಳವಣಿಗೆಯತ್ತ ಪಾಲಕರು ಗಮನ ನೀಡಬೇಕಾಗಿದೆ. ಸಾಹಿತ್ಯ, ಸಂಗೀತ, ನೃತ್ಯ ಕಲೆಗಳು ಮಕ್ಕಳ ಅಭಿವೃದ್ದಿಗೆ ಪೂರಕವಾಗಿವೆ ಎಂದು ಕಿವಿ ಮಾತು ಹೇಳಿದರು.

ವೇದಿಕೆಮೇಲೆ ಬಾಬುಸಿಂಗ್ ಹಜಾರಿ ಉಪಸ್ಥಿತರಿದ್ದರು, ಗೌರಿಶ ದಾಬಕೆ ಅಧ್ಯಕ್ಷತೆ ವಹಿಸಿದರು. ಲಕ್ಷೀಬಾಯಿ ಪ್ರಾರ್ಥನೆ ಹಾಗೂ ಸ್ವಾಗತ ಗೀತೆ ನಡೆಸಿಕೊಟ್ಟರೆ, ರುದ್ರಮಣಿ ಮಠಪತಿ ಗೋರ್ಟಾ ಸ್ವಾಗತಿಸಿದರು, ಬಸವರಾಜ ಖಂಡಾಳೆ ನಿರೂಪಿಸಿದರು, ಪ್ರದೀಪ ಎಂ ಬೇಂದ್ರೆ ವಂದಿಸಿದರು.

ನರೇಂದ್ರ ಜಾಧವ, ರವಿ ಗಂದಗೆ, ಮೋಹನ ವೆಂಕಟರಡ್ಡಿ, ಸಂಗಮೇಶ ಗೌರೆ, ಸಣ್ಣುಕಪ್ಪಾ ದಾಬಕೆ ಸೇರಿದಂತೆ ಇತರರು ಉಪಸ್ಥಿತರಿದ್ದರು.




ಬಸವಕಲ್ಯಾಣ ನಗರದ ಶಿವಾಜಿ ನಗರದಲ್ಲಿ ಆರಾಧ್ಯ ಸಂಗೀತ ನೃತ್ಯ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ತ್ರೀಪುರಾಂತ ಸ್ವಾಮೀಜಿ, ಪ್ರೋ.ಎಂ ಕೆ ಗಾದಗೆ, ಗೌರಿಶ ದಾಬಕೆ, ರುದ್ರಮಣಿ ಗೋರ್ಟಾ ಉಪಸ್ಥಿತರಿದ್ದರು.

ವಿಜಯ ಕರ್ನಾಟಕ
ಮಂಗಳವಾರ,13 ಆಗಸ್ಟ್ 2013, ಗುಲ್ಬರ್ಗ

Scanned by CamScanner

ವಿಜಯವಾಣಿ GULBARGA
ಶನಿವಾರ 10 ಆಗಸ್ಟ್ 2013

### ಮಂಠಾಳದಲ್ಲಿ ಶ್ರೀ ಸಿದ್ರಾಮೇಶ್ವರ ಚರಿತ್ರೆ ಪುರಾಣ ಆರಂಭ

# ಅಧ್ಯಾತ್ಮ ಭಾವನೆ ಬೆಳೆಸಿಕೊಳ್ಳಿ: ತ್ರಿಪುರಾಂತ ಶ್ರೀ



ಮಂಠಾಳದಲ್ಲಿ ಶ್ರೀ ಸಿದ್ರಾಮೇಶ್ವರ ಚರಿತ್ರೆ ಕುರಿತ ಪುರಾಣ ಕಾರ್ಯಕ್ರಮಕ್ಕೆ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಚಾಲನೆ ನೀಡಿದರು. ಶ್ರೀ ಗುಹೇಶ್ವರ ಮಹಾಸ್ವಾಮಿ, ಮಹಾದೇವ ಪಾಟೀಲ್ ಇದ್ದರು.

**ಬಸವಕಲ್ಯಾಣ:** ಧರ್ಮ ನಿಷ್ಠೆ, ಆಧ್ಯಾತ್ಮಿಕ ಮನೋಭಾವವನ್ನು ಎಲ್ಲರೂ ಬೆಳೆಸಿಕೊಳ್ಳಬೇಕು ಎಂದು ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಮಂಠಾಳದ ಶ್ರೀ ಮಹಾದೇವ ಮಂದಿರದಲ್ಲಿ ಶ್ರಾವಣ ಮಾಸದ ನಿಮಿತ್ತ ನಡೆಯಲಿರುವ ಸೊಲ್ಲಾಪುರದ ಶ್ರೀ ಸಿದ್ರಾಮೇಶ್ವರ ಚರಿತ್ರೆ ಕುರಿತ ಪುರಾಣ ಕಾರ್ಯಕ್ರಮ ಉದ್ಘಾಟಿಸಿದ ಅವರು, ಧ್ಯಾನ ಮನಸ್ಸಿಗೆ ಶಾಂತಿ ಕೊಡುತ್ತದೆ. ಪುರಾಣ, ಪ್ರವಚನ ಮನಸ್ಸು ಶುದ್ಧಗೊಳಿಸುವ ಜತೆಗೆ ಮನ ಪರಿವರ್ತನೆಗೆ ಸಹಕಾರಿಯಾಗುತ್ತವೆ ಎಂದರು.

ಸಾನ್ನಿಧ್ಯ ವಹಿಸಿದ್ದ ಮಂಠಾಳದ ಶ್ರೀ ಗುಹೇಶ್ವರ ಮಹಾಸ್ವಾಮೀಜಿ, ಒಳ್ಳೆ ವಿಚಾರಗಳನ್ನು ಶ್ರವಣ ಮಾಡುವ ಈ ಮಾಸ ಪವಿತ್ರವಾದುದು. ಧರ್ಮ-ಅಧ್ಯಾತ್ಮ ಕಾರ್ಯಕ್ರಮಗಳಲ್ಲಿ ಯುವಕರು ಆಸಕ್ತಿ ವಹಿಸಿ ಕೆಲಸ ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಂದಿರ ಪಂಚ ಕಮಿಟಿ ಅಧ್ಯಕ್ಷ ಮಹಾದೇವ ಜಗನ್ನಾಥ ಪಾಟೀಲ್, ಗುರುರಾಜ ಬಿರಾದಾರ, ಧನರಾಜ ತಾತಭಾಯಿ, ಸಂತೋಷ ಸಂಗನಬಟ್ಟೆ, ದಯಾನಂದ ಝಿಂಗೆ, ಶಿವಕುಮಾರ ಸಂಗನಬಟ್ಟೆ, ಗುರುರಾಜ ಮುಕ್ತಾ, ಶಂಕರ ಕುಕ್ಕಾಪಾಟೀಲ್, ಬಸವರಾಜ ಸಂಗನಬಟ್ಟೆ, ಮಹಾದೇವ ಎಸ್ .ಪಾಟೀಲ್ ಉಪಸ್ಥಿತರಿದ್ದರು. ಪ್ರತಿನಿತ್ಯ ಮಂಠಾಳದ ಶ್ರೀ ನೀಲಕಂಠಯ್ಯ ಸ್ವಾಮಿ ಪ್ರವಚನ ನಡೆಸಿಕೊಡುವರು.

### ತ್ರಿಪುರಾಂತ ಮಠದಲ್ಲಿ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ...

# ಎಲ್ಲರೂ ನಡೆಯಲಿ ಧರ್ಮದ ದಾರಿಯಲಿ

**ಬಸವಕಲ್ಯಾಣ:** ಪ್ರತಿಯೊಬ್ಬರು ಧರ್ಮದ ದಾರಿಯಲ್ಲಿ ನಡೆಯುವುದರೊಂದಿಗೆ ಸಾಮಾಜಿಕ ಮೌಲ್ಯಗಳನ್ನು ಬೆಳೆಸಬೇಕಾದ ಅಗತ್ಯವಿದೆ ಎಂದು ಹಿರಿಯ ಜಾನಪದ ಸಾಹಿತಿ ಎಚ್.ಕಾಶೀನಾಥ ರೆಡ್ಡಿ ಪ್ರತಿಪಾದಿಸಿದರು.

ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆಯಿಂದ ಶ್ರಾವಣ ಮಾಸ ನಿಮಿತ್ತ ತ್ರಿಪುರಾಂತದ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ (ಮರಿದೇವರ ಗುಡ್ಡ) ಗವಿ ಮಠದಲ್ಲಿ ಆಯೋಜಿಸಿರುವ ಸಿದ್ಧಾಂತ ಶಿಖಾಮಣಿ ವಿಶೇಷ ಉಪನ್ಯಾಸ ಮಾಲೆಗೆ ಚಾಲನೆ ನೀಡಿದ ಅವರು, ಧರ್ಮ ಎಂದರೆ ಒಗ್ಗಟ್ಟು ಎಂದು ವಿಶ್ಲೇಷಿಸಿದರು. ಸನಾತನವಾದ ವೀರಶೈವ ಧರ್ಮ ಭವ್ಯ ಪರಂಪರೆ



ತ್ರಿಪುರಾಂತ ಮಠದಲ್ಲಿ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ಕೃರ್ತು ಗದ್ದುಗೆಗೆ ವಿಶೇಷ ರುದ್ರಾಭಿಷೇಕ ನಡೆಯಿತು.



ಬಸವಕಲ್ಯಾಣದ ತ್ರಿಪುರಾಂತ ಗವಿ ಮಠದಲ್ಲಿ ಶ್ರಾವಣ ನಿಮಿತ್ತ ನಡೆಯಲಿರುವ ಸಿದ್ಧಾಂತ ಶಿಖಾಮಣಿ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮವನ್ನು ಸಾಹಿತಿ ಎಚ್.ಕಾಶೀನಾಥ ರೆಡ್ಡಿ ಉದ್ಘಾಟಿಸಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ವೀರಣ್ಣ ಶೀಲವಂತ ಇದ್ದರು.

ಹೊಂದಿದೆ. ದೇಶವಷ್ಟೇ ಅಲ್ಲ, ಹೊರದೇಶಗಳಲ್ಲೂ ಪಂಚಾಕ್ಷರಿ ಮಂತ್ರವಿದೆ. ಇಂದಿನ ಆಂಧ್ರ ಪ್ರದೇಶವನ್ನು ತ್ರಿಲಿಂಗ ದೇಶ ಎಂದು ಈ ಹಿಂದೆ ಗ್ರಿಸ್ ದೇಶದ ಪ್ರವಾಸಿಯೊಬ್ಬರು ಹೇಳಿದ್ದಾರೆ ಎಂದು ಪ್ರಸ್ತಾಪಿಸಿ, ತ್ರಿಲಿಂಗವೆಂದರೆ ಶ್ರೀವೀರಸೋಮೇಶ್ವರ ಲಿಂಗ, ಶ್ರೀಶೈಲ ಮಲ್ಲಿಕಾರ್ಜುನ ಲಿಂಗ ಹಾಗೂ ಭೀಮಾಶಂಕರ ಲಿಂಗ ಎಂದು ವಿವರಿಸಿದರು. ಸಾನ್ನಿಧ್ಯ ವಹಿಸಿದ್ದಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ನೆಮ್ಮದಿ ಬದುಕಿಗಾಗಿ ಪ್ರತಿಯೊಬ್ಬರು ಧರ್ಮದ ದಾರಿಯಲ್ಲಿ ನಡೆಯಬೇಕಾದ ಅಗತ್ಯವಿದೆ ಎಂದರು.

ಸದ್ಬೋಧನ ಸಂಸ್ಥೆ ತಾಲೂಕಾಧ್ಯಕ್ಷ ವೀರಣ್ಣ ಶೀಲವಂತ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯ ಪ್ರೊ.ಸೂರ್ಯಕಾಂತ ಶೀಲವಂತ ಪ್ರಾಸ್ತಾವಿಕ ಮಾತನಾಡಿದರು. ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ ಸ್ವಾಗತಿಸಿದರು. ಪ್ರಭುಲಿಂಗಯ್ಯ ಟಂಕಸಾಲಿಮಠ ವಂದಿಸಿದರು. ರುದ್ರೇಶ್ವರ ಮಠಪತಿ ಗೋರ್ಟಾ ನಿರೂಪಿಸಿದರು. ಸವಿತಾ ರಮೇಶ ಪ್ರಾರ್ಥನೆ ನಡೆಸಿಕೊಟ್ಟರು.

**ವಿಶೇಷ ಪೂಜೆ:** ತ್ರಿಪುರಾಂತ ಮರಿದೇವರ ಗುಡ್ಡದಲ್ಲಿರುವ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಕೃರ್ತು ಗದ್ದುಗೆಗೆ ಸನಾತನ ಆಚಾರ್ಯ ಪರಂಪರೆಯಂತೆ ಪವಿತ್ರ ವೇದ-ಘೋಷಗಳ ಮಧ್ಯೆ ರುದ್ರಾಭಿಷೇಕವನ್ನು ಪೀಠಾಧ್ಯಕ್ಷ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನಡೆಸಿಕೊಟ್ಟರು.

ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗದ್ದುಗೆಗೆ ಪ್ರತಿದಿನ ಬೆಳಗ್ಗೆ 8ಕ್ಕೆ ರುದ್ರಾಭಿಷೇಕ ನಡೆಯಲಿದ್ದು, ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದರ್ಶನಾಶೀರ್ವಾದ ಪಡೆದುಕೊಳ್ಳಬೇಕೆಂದು ಕೋರಲಾಗಿದೆ. ಶ್ರಾವಣ ನಿಮಿತ್ತ ಒಂದು ತಿಂಗಳವರೆಗೆ ಅಕ್ಕಮಹಾದೇವಿ ಭಜನಾ ಮಂಡಳಿಯಿಂದ ಜಪಯಜ್ಞ ನಡೆಯಲಿದೆ.

ವಿಜಯವಾಣಿ
ಭಾನುವಾರ
11 ಆಗಸ್ಟ್ 2013

Scanned by CamScanner

ವಿಜಯವಾಣಿ
GULBARGA

ಶನಿವಾರ
17 ಆಗಸ್ಟ್ 2013

■ ತ್ರಿಪುರಾಂತ ಗವಿ ಮಠದಲ್ಲಿ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ

# ಪ್ರಾರ್ಥನೆಯಿಂದ ಮನಸ್ಸು ಪರಿಶುದ್ಧ: ಹಾರಕೂಡ ಶ್ರೀ

ಬಸವಕಲ್ಯಾಣ: ಪೂಜೆ-ಪ್ರಾರ್ಥನೆಯಿಂದ ಮನುಷ್ಯನ ಮನಸ್ಸು ಪರಿಶುದ್ಧಗೊಳ್ಳುವದು. ಆತ್ಮ ತೃಪ್ತಿ ಪಡೆಯಲು ಸಾಧ್ಯವಾಗುತ್ತದೆ ಎಂದು ಹಾರಕೂಡದ ಶ್ರೀ ಚನ್ನವೀರ ಶಿವಾಚಾರ್ಯರು ವಿಶ್ಲೇಷಿಸಿದರು.

ಶ್ರಾವಣ ಮಾಸದ ನಿಮಿತ್ತ ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕದಿಂದ ತ್ರಿಪುರಾಂತನ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರರ ಗವಿ ಮಠದಲ್ಲಿ ಆಯೋಜಿಸಿದ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ಮನಸಿನ ಶಾಂತಿಗಾಗಿ ಪೂಜೆ-ಪ್ರಾರ್ಥನೆ ಅವಶ್ಯಕ ಎಂದರು.

ಜ್ಞಾನ ಆತ್ಮಮೂಲ್ಯವಾದ ಸಂಪತ್ತಾಗಿದೆ. ಇದರ ಅಂತಿಮ ಶಿಖರದ ವರೆಗೆ ತಲುಪಲು ಯಾರಿಗೂ ಸಮಯ ಸಾಲದು ಎಂದು ತರ್ಕ ಬದ್ಧವಾದ ವಿಚಾರವನ್ನು ಮಂಡಿಸಿದ ಅವರು, ಶ್ರಾವಣ ಮಾಸದ ನಿಮಿತ್ತ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ ಕಾರ್ಯಕ್ರಮ ಹಮ್ಮಿಕೊಂಡಿರುವುದಕ್ಕೆ ಶ್ರೀಗಳು ಮೆಚ್ಚುಗೆ ವ್ಯಕ್ತಪಡಿಸಿದರು.



ತ್ರಿಪುರಾಂತ ಗವಿ ಮಠದಲ್ಲಿ ಶ್ರಾವಣ ನಿಮಿತ್ತ ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆಯಿಂದ ನಡೆದ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಶ್ರೀ ಚನ್ನವೀರ ಶಿವಾಚಾರ್ಯರನ್ನು ಸನ್ಮಾನಿಸಲಾಯಿತು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ.ವಿಶ್ವನಾಥ ಮಠ ವೀರಣ್ಣ ಶೀಲವಂತ, ಮಲ್ಲಯ್ಯ ಸ್ವಾಮಿ ಹಿರೇಮಠ ಉಪಸ್ಥಿತರಿದ್ದರು.

ಗುಲ್ಬರ್ಗ ವಿವಿಯ ಇಲ್ಲಿಯ ಕನ್ನಡ ಮತ್ತು ಶರಣ ಸಾಹಿತ್ಯ ವಿಭಾಗದ ಮುಖ್ಯಸ್ಥ ಡಾ.ಸೋಮಶಂಕರ ವಿಶ್ವನಾಥ ಮಠ ವಿಶೇಷ ಉಪನ್ಯಾಸ ನೀಡಿ, ಲಿಂಗ ಧರಿಸುವುದರಿಂದ ಪಾಪಗಳು ನಾಶವಾಗಿ ಪುಣ್ಯ ಲಭಿಸುತ್ತದೆ. ಎಲ್ಲ ಅನಿಷ್ಟಗಳ ನಿವಾರಣೆಯಾಗುತ್ತವೆ ಎಂದು ಶಿವಾಗಮನದಲ್ಲಿ ಉಲ್ಲೇಖವಿದೆ ಎಂದು ವಿಶ್ಲೇಷಿಸಿದರು.

ಪುರುಷಾರ್ಥ ಸಾಧನೆಗೆ ಸಾಧಕ ಮಾಧ್ಯಮವಾಗಿರುವ ಲಿಂಗವು ಶಿವಶಕ್ತಿಯ ಪ್ರತಿರೂಪವಾಗಿ ಅರಿವಿನ ಕುರುಹುವಾಗಿದ್ದು, ಇಂಥ ಮಹತ್ವದ ಹೊಂದಿರುವ ನವಲಿಂಗ ಪಾಲನೆಯಿಂದ ಸಾಧಕನು ಶ್ರೇಯಸ್ಸನ್ನು ಹೊಂದುವನೆಂದು ಸಿದ್ಧಾಂತ ಶಿಖಾಮಣಿ ಪ್ರತಿಪಾದಿಸುತ್ತದೆ ಎಂದ ಅವರು, ಶರಣರು ಲಿಂಗ ಮಹಿಮೆಯನ್ನು ವಚನಗಳಲ್ಲಿ ಕೊಂಡಾಡಿದ್ದಾರೆ ಎಂದರು.

ಡಾ.ಜಿ.ಎಸ್.ಭುರಾಳೆ ಮಾತನಾಡಿ, ವೈದ್ಯರು ಮನುಷ್ಯನ ಶರೀರಕ್ಕೆ ಬರುವ ರೋಗಗಳಿಗೆ ಮದ್ದು ನೀಡುತ್ತಾರೆ. ಆದರೆ ಮನಸ್ಸುಗಳನ್ನು ಶುದ್ಧಗೊಳಿಸಲು ಧರ್ಮ ಮತ್ತು ಧರ್ಮ ಗುರುಗಳ ಮಾರ್ಗದರ್ಶನ ಅವಶ್ಯಕ ಎಂದರು.

ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿ ಆಶೀರ್ವಚನ ನೀಡಿದರು. ಸಂಸ್ಥೆಯ ತಾಲೂಕು ಅಧ್ಯಕ್ಷ ವೀರಣ್ಣ ಶೀಲವಂತ ಅಧ್ಯಕ್ಷತೆ ವಹಿಸಿದ್ದರು. ಕಸಾಪ ತಾಲೂಕು ಅಧ್ಯಕ್ಷ ಚಂದ್ರಕಾಂತ ಸ್ವಾಮಿ ಸ್ವಾಗತಿಸಿದರು. ರಮೇಶ ರಾಜೋಳೆ ನಿರೂಪಿಸಿದರು. ರುದ್ರೇಶ್ವರ ಮಠಪತಿ ಪ್ರಾರ್ಥನೆ ನಡೆಸಿಕೊಟ್ಟರು. ಮಲ್ಲಯ್ಯ ಸ್ವಾಮಿ ಹಿರೇಮಠ, ಡಾ.ಬಸವರಾಜ ಸ್ವಾಮಿ ಉಪಸ್ಥಿತರಿದ್ದರು.



ಬಸವಕಲ್ಯಾಣದಲ್ಲಿ ಬುಧವಾರ ತಾಲ್ಲೂಕು ಕೋಲಿ ಸಮಾಜದಿಂದ ಹಮ್ಮಿಕೊಂಡ ವಾಲ್ಮೀಕಿ ಜಯಂತಿಯ ಉದ್ಘಾಟನೆ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ರಾಜ್ಯ ಕಾರ್ಯದರ್ಶಿ ಬಿ.ನಾರಾಯಣರಾವ, ಶಾಸಕ ಮಲ್ಲಿಕಾರ್ಜುನ ಖೂಬಾ ಇದ್ದರು

■ ಕಲ್ಯಾಣದಲ್ಲಿ ಆರಾಧ್ಯ ಸಂಗೀತ-ನೃತ್ಯ ಕೇಂದ್ರ ಆರಂಭ

# ಸಂಗೀತ-ಕಲಾ ಜ್ಞಾನ ಅಗತ್ಯ



ಬಸವಕಲ್ಯಾಣದ ಶಿವಾಜಿ ನಗರದಲ್ಲಿ ಆರಾಧ್ಯ ಸಂಗೀತ ನೃತ್ಯ ಕೇಂದ್ರವನ್ನು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೆರವೇರಿಸಿದರು. ಡಿಡಿಪಿಯು ಎಂ.ಕೆ.ಗಾದಗೆ, ಗೌರಿಶ ದಾಬಕೆ, ರುದ್ರಮುನಿ ಮಠಪತಿ ಇದ್ದರು.

ಬಸವಕಲ್ಯಾಣ: ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಣದ ಜತೆಗೆ ಸಂಗೀತ, ನೃತ್ಯ, ಕಲೆಯ ಬಗ್ಗೆ ಜ್ಞಾನ ಅತ್ಯಾವಶ್ಯಕವಾಗಿದ್ದು, ಇದರ ಬಗ್ಗೆ ಆಸಕ್ತಿ ಮೂಡಿಸುವ ಕೆಲಸ ನಡೆಯಬೇಕು ಎಂದು ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಇಲ್ಲಿಯ ಶಿವಾಜಿ ನಗರದಲ್ಲಿ ಆರಾಧ್ಯ ಸಂಗೀತ ಮತ್ತು ನೃತ್ಯ ಕೇಂದ್ರದ ಉದ್ಘಾಟನೆ ನೆರವೇರಿಸಿದ ಸ್ವಾಮೀಜಿ, ದೇಶದ ಭವ್ಯ ಸಂಸ್ಕೃತಿ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಮಕ್ಕಳಲ್ಲಿಯ ಕಲಾ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸುವ ಕೆಲಸ ನಡೆಯಬೇಕು ಎಂದರು.

ಸಂಗೀತ, ನೃತ್ಯ, ಸಾಹಿತ್ಯದ ತವರೂರು ಕಲ್ಯಾಣ ನಾಡು. ವಚನ ಸಾಹಿತ್ಯ ರಚನೆಯಾದ ಈ ನೆಲ ಪವಿತ್ರ. ಆದಿ-ಅನಾದಿ ಕಾಲದಿಂದಲೂ ಸಾಹಿತ್ಯ, ಸಂಗೀತದಿಂದ ಸಂಪದ್ಭರಿತವಾಗಿದ್ದು ಈ ಭಾಗದಲ್ಲಿ ಆರಂಭಿಸಿದ ಆರಾಧ್ಯ ಸಂಗೀತ-ನೃತ್ಯ ಕೇಂದ್ರ ಹೆಮ್ಮರವಾಗಿ ಬೆಳೆಯಲಿ ಎಂದು ಹಾರೈಸಿದರು.

ಬೀದರ್ ಡಿಡಿಪಿಯು ಎಂ.ಕೆ.ಗಾದಗೆ ಮಾತನಾಡಿ, ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಪಾಲಕರು ಕಾಳಜಿ ವಹಿಸಬೇಕಿದೆ. ಸಾಹಿತ್ಯ, ಸಂಗೀತ, ನೃತ್ಯ ಹಾಗೂ ಕಲೆ ಮಕ್ಕಳ ಅಭಿವೃದ್ಧಿಗೆ ಪೂರಕವಾಗಿದ್ದು ಈ ನಿಟ್ಟಿನಲ್ಲಿ ಆರಾಧ್ಯ ಸಂಗೀತ-ನೃತ್ಯ ಕೇಂದ್ರ ಶ್ರಮ ವಹಿಸಿ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು. ನಿವೃತ್ತ ಶಿಕ್ಷಕಿ ಲಕ್ಷ್ಮೀಬಾಯಿ ಪಾಟೀಲ್ ಮಾತನಾಡಿದರು.

ಗೌರಿಶಂಕರ ದಾಬಕೆ ಅಧ್ಯಕ್ಷತೆ ವಹಿಸಿದ್ದರು. ರುದ್ರಮುನಿ ಮಠಪತಿ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಪ್ರದೀಪ ಬೇಂದ್ರೆ ವಂದಿಸಿದರು. ಬಸವರಾಜ ಖಂಡಾಳೆ ನಿರೂಪಿಸಿದರು. ಸಂಚಾಲಕರಾದ ನರೇಂದ್ರ ಜಾಧವ, ರವಿ ಗಾದಗೆ, ಮೋಹನ ವೆಂಕಟರೆಡ್ಡಿ, ಸಂಗಮೇಶ ಗೌರೆ, ಷಣ್ಮುಖಪ್ಪ ದಾಬಕೆ ಭಾಗವಹಿಸಿದ್ದರು.

ವಿಜಯವಾಣಿ
GULBARGA

ಶುಕ್ರವಾರ
16 ಆಗಸ್ಟ್ 2013

Scanned by CamScanner

ವಿಜಯ ಕರ್ನಾಟಕ
ಗುರುವಾರ,22 ಆಗಸ್ಟ್ 2013, ಗುಲ್ಬರ್ಗ



ಪಟ್ಟಣದ ತ್ರಿಪುರಾಂತದ ಗವಿಮಠದಲ್ಲಿ ಹಮ್ಮಿಕೊಂಡಿದ್ದ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಪ್ರೊ.ರುದ್ರೇಶ್ವರ ಗೋರ್ಟಾ, ರಾಜೇಶ್ವರ, ಘನಲಿಂಗ ರುದ್ರಮುನಿ ಶಿವಾಚಾರ್ಯ, ಚನ್ನಮಲ್ಲ ದೇವರು, ಶರಣಪ್ಪ ಬಿರಾದಾರ ಉಪಸ್ಥಿತರಿದ್ದರು.

# ಜಂಗಮನೆಂದರೆ ತ್ಯಾಗಮಯಿ

■ **ವಿಕಸುದ್ದಿಲೋಕ ಬಸವಕಲ್ಯಾಣ**

ಶಿವಾಗಮಗಳ ಪ್ರಕಾರ ಶಿವನೇ ಲೋಕೋಪಕಾರಕ್ಕಾಗಿ ಜಂಗಮ ರೂಪದಿಂದ ಸಂಚರಿಸುತ್ತಾನೆ. ಜಂಗಮನೆಂದರೆ ಚರಲಿಂಗ ಸದಾ ಸಂಚಾರ ಶಿಲ ಎಂಬುವುದು. ಜಂಗಮ ತ್ಯಾಗಮಯಿ ಎಂದು ರಾಜೇಶ್ವರ ಸ್ವಾಮೀಜಿ ಹೇಳಿದರು.

ಪಟ್ಟಣದ ತ್ರಿಪುರಾಂತ ಗವಿಮಠದಲ್ಲಿ ಶ್ರಾವಣ ಮಾಸದ ನಿಮಿತ್ತ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕದಿಂದ ವತಿಯಿಂದ ಹಮ್ಮಿಕೊಂಡಿದ್ದ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡಿದರು.

ಜಂಗಮರು ದಿಕ್ಷೆ ಮಾಡುವುದೆಂದರೆ ಆ ಪರ ಶಿವನೇ ಲಿಂಗರೂಪವಾಗಿ ಸಾಧನಾ ಶರೀರದ ಮೇಲೆ ಸದಾ ಸನ್ನಿಹಿತನಾಗಿರುತ್ತಾನೆ. ಪುನಃ ಆತನೆ ಜಂಗಮವಾಗಿ ಜ್ಞಾನ ಪ್ರದೇಶವನ್ನು ಮಾಡಿ ಜೀವಿಗಳನ್ನು ಸಂಸಾರದಿಂದ ಮುಕ್ತರನ್ನಾಗಿ ಮಾಡುತ್ತಾನೆ ಎಂದರು.

ಪ್ರೊ. ರುದ್ರೇಶ್ವರ ಸ್ವಾಮಿ ವಿಶೇಷ ಉಪನ್ಯಾಸ ನೀಡಿದರು. ಹುಡಗಿ ಹಿರೇಮಠದ ಚನ್ನಮಲ್ಲ ದೇವರು, ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಶಿವರಾಜ ನರಶೆಟ್ಟಿ, ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು.

ವಿಶ್ವನಾಥ ಬಿರಾದಾರ, ರಮೇಶ ರಾಜೋಳೆ, ಚಂದ್ರಕಾಂತ ಸ್ವಾಮಿ, ಬಸವಣಪ್ಪ ಲವಾರೆ, ರಾಜಕುಮಾರ ದೇಗಾಂವ, ಜಗದೀಶ ರಾಮಣ್ಣ ಉಪಸ್ಥಿತರಿದ್ದರು.

ವೈಷ್ಣವಿ ರಮೇಶ ಪ್ರಾರ್ಥಿಸಿದರು. ಸರಸ್ವತಿ ಬೆಂಬಳಗೆ ನಿರೂಪಿಸಿದರು. ಪ್ರೊ. ಪ್ರಭುಲಿಂಗಯ್ಯ ಟಂಕ ಸಾಲಿಮಠ ವಂದಿಸಿದರು.

ವಿಜಯವಾಣಿ
ಭಾನುವಾರ
25 ಆಗಸ್ಟ್ 2013

# ವಿಭೂತಿ ಧಾರಣೆಯಿಂದ ದಾರಿದ್ರ್ಯ ನಿವಾರಣೆ



ಬಸವಕಲ್ಯಾಣ ತ್ರಿಪುರಾಂತ ಗವಿ ಮಠದಲ್ಲಿ ನಡೆದ ಸಿದ್ಧಾಂತ ಶಿಖಾಮಣಿ ಕುರಿತ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ರಮೇಶ ರಾಜೋಳೆ ಮಾತನಾಡಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಮಲ್ಲಯ್ಯ ಸ್ವಾಮಿ ಹಿರೇಮಠ, ವೀರಣ್ಣ ಶೀಲವಂತ, ಚಂದ್ರಕಾಂತ ಸ್ವಾಮಿ ಉಪಸ್ಥಿತರಿದ್ದರು.

**ಬಸವಕಲ್ಯಾಣ:** ತತ್ವಜ್ಞಾನ, ಶಾಸ್ತ್ರ ಶ್ರವಣಕ್ಕೆ, ಚಿತ್ತ ಶುದ್ಧಿಗೆ, ದಾರಿದ್ರ್ಯ ನಿವಾರಣೆಗೆ ವಿಭೂತಿ ಧಾರಣೆ ಅವಶ್ಯಕ ಎಂದು ರಾಜೋಳಾ ಸರ್ಕಾರಿ ಪ್ರೌಢ ಶಾಲೆ ಶಿಕ್ಷಕ ರಮೇಶ ರಾಜೋಳೆ ಅಭಿಪ್ರಾಯಪಟ್ಟರು.

ತ್ರಿಪುರಾಂತದ ಶ್ರೀ ಜಗದ್ಗುರು ಘನಲಿಂಗ ರುದ್ರಮನಿ ಶಿವಚಾರ್ಯರ ಗವಿ ಮಠದಲ್ಲಿ ಶ್ರಾವಣ ಮಾಸದ ನಿಮಿತ್ತ ಶ್ರೀ ಮದ್ವೀರಶೈವ ಸದ್ಬೋದನಾ ಸಂಸ್ಥೆ ಆಯೋಜಿಸಿದ ಶ್ರೀ ಸಿದ್ಧಾಂತ ಶಿಖಾಮಣಿ ಕುರಿತ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ವಿಭೂತಿ ಮಹತ್ವ ಕುರಿತು ಉಪನ್ಯಾಸ ನೀಡಿ, ವಿಭೂತಿ ಧಾರಣೆಯಿಂದ ಸಂಪತ್ತು ಮತ್ತು ಜ್ಞಾನ ಸಂಪತ್ತು ಪ್ರಾಪ್ತವಾಗುತ್ತದೆ ಎಂದರು. ಶ್ರೀ ಅಭಿನವ ಘನಲಿಂಗ ರುದ್ರಮನಿ ಶಿವಾಚಾರ್ಯರು ಸಾನ್ನಿಧ್ಯ, ಮಲ್ಲಯ್ಯ ಸ್ವಾಮಿ ಹಿರೇಮಠ ಅಧ್ಯಕ್ಷತೆ ವಹಿಸಿದ್ದರು. ಸದ್ಬೋಧನ ಸಂಸ್ಥೆ ತಾಲೂಕು ಅಧ್ಯಕ್ಷ ವಿರಣ್ಣ ಶೀಲವಂತ ಉಪಸ್ಥಿತರಿದ್ದರು.

ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ ಸ್ವಾಗತಿಸಿದರು. ಪ್ರೊ. ಸೂರ್ಯಕಾಂತ ಶೀಲವಂತ ಪ್ರಾಸ್ತವಿಕ ಮಾತನಾಡಿದರು. ಜಗದೀಶ ರಾಮಣ್ಣ ವಂದಿಸಿದರು. ಕಸಾಪ ತಾಲೂಕು ಅಧ್ಯಕ್ಷ ಚಂದ್ರಕಾಂತ ಸ್ವಾಮಿ ನಿರೂಪಿಸಿದರು.

# ರುದ್ರಾಕ್ಷಿ ಧಾರಣೆಯಿಂದ ಗೋದಾನ ಫಲ

**ಬಸವಕಲ್ಯಾಣ:** ಸರ್ವವಿಧದ ಪಾತಕಗಳಿಂದ ಮನುಷ್ಯನಿಗೆ ಮುಕ್ತಿ ಹಾಗೂ ಎಲ್ಲಾನೋವಿನಲ್ಲಿ ನೆಮ್ಮದಿ ಕೊಡುವ ಶಕ್ತಿ ರುದ್ರಾಕ್ಷಿಗಿದೆ ಎಂದು ಹಿರನಾಗಾಂವದ ಶ್ರೀ ಜಯಶಾಂತಲಿಂಗ ಮಹಾಸ್ವಾಮೀಜಿ ನುಡಿದರು.

ಶ್ರಾವಣದ ನಿಮಿತ್ತ ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆಯು ತ್ರಿಪುರಾಂತದ ಗವಿ ಮಠದಲ್ಲಿ ಆಯೋಜಿಸಿದ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆಯಲ್ಲಿ ಸಾನ್ನಿಧ್ಯ ವಹಿಸಿದ್ದ ಅವರು, ರುದ್ರಾಕ್ಷಿ ಧಾರಣದಿಂದ ಚಿತ್ತಶುದ್ಧಿ, ಸಕಲ ದೋಷ ನಿವಾರಣೆಯಾಗಿ ಸಿದ್ಧಿ ಪ್ರಾಪ್ತಿಯಾಗಲಿದೆ ಎಂದರು.

ನೇತೃತ್ವ ವಹಿಸಿದ್ದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ರುದ್ರನ ವರ ಪ್ರಸಾದವೇ ರುದ್ರಾಕ್ಷಿ. ಇದರ ಧಾರಣೆಯಿಂದ ಕೋಟಿ-ಕೋಟಿ ಮಹಾಪಾತಕಾದಿ ದೋಷ ಗಳು ನಿವಾರಣೆಯಾಗುತ್ತವೆ ಎಂದರು.

ಪ್ರಾಚಾರ್ಯ ಪ್ರಭುಲಿಂಗಯ್ಯ ಟಂಕಸಾಲಿ ಮಠ ವಿಶೇಷ ಉಪನ್ಯಾಸ ನೀಡಿ, ರುದ್ರಾಕ್ಷಿಗಳ ಲ್ಲಿ 38 ಪ್ರಕಾರಗಳಿವೆ. 1ರಿಂದ 14 ಮುಖದ ರುದ್ರಾಕ್ಷಿಗಳಲ್ಲಿ ಯಾವುದನ್ನು ದೇಹದ ಯಾವ ಭಾಗದಲ್ಲಿ ಧರಿಸಬೇಕು? ಏಕಮುಖ ರುದ್ರಾಕ್ಷಿ ವೈಶಿಷ್ಟ್ಯ, 14 ಮುಖದ ರುದ್ರಾಕ್ಷಿ ಮಹಿಮೆಯನ್ನು ವಿಶ್ಲೇಷಿಸಿದರು.



ತ್ರಿಪುರಾಂತ ಗವಿಮಠದಲ್ಲಿ ನಡೆದ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆಯಲ್ಲಿ ಶ್ರೀ ಜಯಶಾಂತಲಿಂಗ ಸ್ವಾಮೀಜಿ ಮಾತನಾಡಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಇದ್ದರು.

ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಪ್ರಾಚಾರ್ಯ ಎಸ್.ಜಿ.ಕಲ್ಯಾಣಿ ಮಾತನಾಡಿದರು. ಸಂಸ್ಥೆ ಅಧ್ಯಕ್ಷ ವೀರಣ್ಣ ಶೀಲವಂತ, ಕಸಾಪ ತಾಲೂಕು ಅಧ್ಯಕ್ಷ ಚಂದ್ರಕಾಂತ ಸ್ವಾಮಿ, ಡಾ.ಬಸವರಾಜ ಸ್ವಾಮಿ, ಜಗದೀಶ ರಾಮಣ್ಣನವರ್, ರಾಜಕುಮಾರ ದೇಗಾಂವೆ, ಅಣವೀರಪ್ಪ ಮಾಣಿಕ ಉಪಸ್ಥಿತರಿದ್ದರು. ಶರಣಪ್ಪ ಬಿರಾದಾರ ಸ್ವಾಗತಿಸಿದರು. ರೇವಣ ಸಿದ್ದಪ್ಪ ಮಠಪತಿ ವಂದಿಸಿ ದರು. ರಮೇಶ ರಾಜೋಳೆ ನಿರೂಪಿಸಿದರು. ಲಕ್ಷ್ಮೀಬಾಯಿ ಇಜಾರೆ ಪ್ರಾರ್ಥನೆ ನಡೆಸಿಕೊಟ್ಟರು.

ಬುಧವಾರ
28 ಆಗಸ್ಟ್ 2013
ವಿಜಯವಾಣಿ

Scanned by CamScanner

# ಕಠಿಣ ಪರಿಶ್ರಮದಿಂದ ಗುರಿ ಮುಟ್ಟಲು ಸಾಧ್ಯ

ವಿಜಯ ಕರ್ನಾಟಕ
ಶುಕ್ರವಾರ,30 ಆಗಸ್ಟ್ 2013, ಗುಲ್ಬರ್ಗ

■ **ವಿಕ ಸುದ್ದಿಲೋಕ ಬಸವಕಲ್ಯಾಣ**

ವಿದ್ಯಾರ್ಥಿಗಳಲ್ಲಿ ನಿದ್ರೆಯಲ್ಲಿಯೂ ಜಾಗೃತೆಯ ಮನೋಭಾವ ಹೊಂದಿರಬೇಕು. ಸತತ ಪ್ರಯತ್ನ ಮತ್ತು ಕಠಿಣ ಪರಿಶ್ರಮದಿಂದ ಮಾತ್ರ ಗುರಿ ಮುಟ್ಟಲು ಸಾಧ್ಯ ಎಂದು ತ್ರಿಪುರಾಂತ ಗವಿ ಮಠದ ಶ್ರೀ ರುದ್ರಮುನಿ ಶಿವಾಚಾರ್ಯ ಅಭಿಪ್ರಾಯ ಪಟ್ಟರು.

ನಗರದ ಶಿವಯೋಗಿ ಸಿದ್ದರಾಮೇಶ್ವರ ಪದವಿಪೂರ್ವ ಕಲಾ ಮತ್ತು ವಿಜ್ಞಾನ ಕಾಲೇಜಿನ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಂದ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಬಕ ಪಕ್ಷಿಯಂತೆ ಧ್ಯಾನ ಮಗ್ನತೆಯ ಮನಸ್ಸಿರಬೇಕು, ಚಂಚಲತೆ ಸಮೀಪವು ಸುಳಿಯದಂತೆ ನೋಡಿಕೊಳ್ಳಬೇಕು ಎಂದರು. ಸಮಯದ ಪರಿಪಾಲನೆ ಮಾಡಿಕೊಂಡು ಅಭ್ಯಾಸದ ಮಾಡಿದರೆ ಮಾತ್ರ ಯಶಸ್ಸು ಕಾಣಬಹುದು ಎಂದರು.

ಭಾಲ್ಕಿ ಸರಕಾರಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಎಂ.ಬಸವರಾಜ ಮಾತನಾಡಿ, ವಿದ್ಯಾರ್ಥಿಗಳು ಕಾಲಕ್ಕನುಗುಣವಾಗಿ ಪರಿವರ್ತನ ಭಾವದಿಂದ ಇರಬೇಕು. ಮತ್ತು ಪರಿಪೂರ್ಣತೆಯಡೆ ನಡೆಯಬೇಕು. ಸದೃಢ ಸಮಾಜ ಹಾಗೂ ಉತ್ತಮ ರಾಷ್ಟ್ರ ನಿರ್ಮಾಣದಲ್ಲಿ ವಿದ್ಯಾರ್ಥಿಗಳ ಪಾತ್ರ ಬಹು ಮುಖ್ಯವಾಗಿದ್ದು, ವಿದ್ಯಾರ್ಥಿಗಳು ಕಾಲಹರಣ ಮಾಡದೇ ಸಮಯಕ್ಕೆ ಮಹತ್ವ ನೀಡಬೇಕು ಎಂದು ಸಲಹೆ ನೀಡಿದರು.



ಬಸವಕಲ್ಯಾಣ ಶಿವಯೋಗಿ ಸಿದ್ದರಾಮೇಶ್ವರ ಪದವಿಪೂರ್ವ ಕಾಲೇಜಿನ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮದಲ್ಲಿ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಪ್ರಾಚಾರ್ಯ ಎಂ.ಬಸವರಾಜ, ಶಾಂತಲಿಂಗ ಮಠಪತಿ, ಶರಣು ದಂಡೆ ಇದ್ದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಶಾಂತಲಿಂಗ ಮಠಪತಿ ಮಾತನಾಡಿ, ವಿದ್ಯಾರ್ಥಿ ಜೀವನ ಸರಳ ಹಾಗೂ ಸೌಜನ್ಯ ಪೂರ್ಣವಾಗಿರಬೇಕು. ಬದುಕಿನಲ್ಲಿ ಕಷ್ಟದ ಜೀವನಕ್ಕೆ ಹೊಂದಿಕೊಳ್ಳುವ ಮನೋಭಾವ, ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ನುಡಿದರು.

ಬೇಟಬಾಲಕುಂದಾ ಮೋರಾರ್ಜಿ ವಸತಿ ಶಾಲೆಯ ಪ್ರಾಚಾರ್ಯ ಶರಣು ದಂಡೆ ಮಾತನಾಡಿ, ಇಂದಿನ ಯುವಕರು ದುಶ್ಚಟಗಳಿಗೆ ಬಲಿಯಾಗದೇ ಉತ್ತಮ ಆರೋಗ್ಯ ಹೊಂದಲು ಆಧ್ಯಾತ್ಮದ ಚಿಂತನೆ ನಡೆಸಬೇಕು ಎಂದು ಹೇಳಿದರು. ರುಬಿನಾ ಸ್ವಾಗತಿಸಿ ನಿರೂಪಿಸಿದರು.

# ‘ವಿಭೂತಿ ಧಾರಣೆಯಿಂದ ದಾರಿದ್ರ್ಯ ನಿವಾರಣೆ’

■ **ವಿಕ ಸುದ್ದಿ ಲೋಕ** ಬಸವಕಲ್ಯಾಣ

ತತ್ವಜ್ಞಾನಕ್ಕೆ ಶಾಸ್ತ್ರ ಶ್ರವಣಕ್ಕೆ ಚಿತ್ತ, ಮನಶುದ್ಧಿಗೆ ಹಾಗೂ ದಾರಿದ್ರ್ಯ ನಿವಾರಣೆಗೆ ವಿಭೂತಿ ಧಾರಣೆ ಬಹು ಮುಖ್ಯವಾಗಿದೆ. ಭಸ್ಮಧಾರಣೆಯಿಂದ ಸಿರಿ ಸಂಪತ್ತು ಒಲಿಯುತ್ತದೆ ಎಂದು ಶಿಕ್ಷಕ ರಮೇಶ ಟಿ. ರಾಜೋಳೆ ಹೇಳಿದರು.

ಇಲ್ಲಿನ ತ್ರಿಪುರಾಂತದ ಜಗದ್ಗುರು ಘನಲಿಂಗ ರುದ್ರಮನಿ ಶಿವಚಾರ್ಯ (ಮರಿದೇವರ ಗುಡ್ಡ) ಗವಿ ಮಠದಲ್ಲಿ ಶ್ರಾವಣ ಮಾಸದ ನಿಮಿತ್ತ ಮದ್ದೀರಶೈವ ಸದ್ಬೋದನಾ ಸಂಸ್ಥೆ ವತಿಯಿಂದ ಹಮ್ಮಿಕೊಂಡಿದ್ದ ಸಿದ್ಧಾಂತ ಶಿಖಾಮಣಿ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

ವಿಭೂತಿ ಧಾರಣೆಯಿಂದ ಭೌತಿಕ ಸಂಪತ್ತು ಮತ್ತು ಜ್ಞಾನ ಸಂಪತ್ತು ಪ್ರಾಪ್ತವಾಗುತ್ತದೆ. ವಿಭೂತಿಗೆ ಭಸಿತ, ಭಸ್ಮಕ್ಷಾರ ಮತ್ತು ರಕ್ಷೆ ಎಂಬ ವಿವಿಧ ಹೆಸರುಗಳಿಂದು ಶಾಸ್ತ್ರೋಕ್ತವಾಗಿ ದೇಹದ 15 ಸ್ಥಾನದಲ್ಲಿ ಧರಿಸಬೇಕು ಎಂದರು.



ಬಸವಕಲ್ಯಾಣದಲ್ಲಿರುವ ತ್ರಿಪುರಾಂತದ ಜಗದ್ಗುರು ಘನಲಿಂಗ ರುದ್ರಮನಿ ಶಿವಚಾರ್ಯ ಗವಿ ಮಠದಲ್ಲಿ ಶ್ರಾವಣ ಮಾಸದ ನಿಮಿತ್ತ ಹಮ್ಮಿಕೊಂಡಿದ್ದ ಸಿದ್ಧಾಂತ ಶಿಖಾಮಣಿ ವಿಶೇಷ ಉಪನ್ಯಾಸ ಮಾಲಿಕೆಯ ಕಾರ್ಯಕ್ರಮದಲ್ಲಿ ರಮೇಶ ರಾಜೋಳೆ ಮಾತನಾಡಿದರು.

ವಿಭೂತಿಯಲ್ಲಿ ಕಲ್ಪ ಭಸ್ಮ, ಅನುಕಲ್ಪ ಭಸ್ಮ, ಉಪಕಲ ಭಸ್ಮ ಮತ್ತು ಅಕಲ್ಪ ಭಸ್ಮ ಎಂಬು 4 ವಿಧಗಳು ಎಲ್ಲದರಲ್ಲಿ ಕಲ್ಪ ಭಸ್ಮ (ಕ್ರಿಯಾ ಭಸ್ಮ) ಸರ್ವಶ್ರೇಷ್ಠ ಭಸ್ಮ ಎಂದು ಹೇಳಿದರು.

ಸಾನ್ನಿಧ್ಯ ವಹಿಸಿದ್ದ ಅಭಿನವ ಘನಲಿಂಗ ರುದ್ರಮನಿ ಶಿವಚಾರ್ಯ ಮಾತನಾಡಿ, ಕ್ರಿಯಾ ಭಸ್ಮ ಧಾರಣೆಯಿಂದ ಕೋಟಿ ಗೊ ಧಾನ ಫಲ, ಭೂತ ಪ್ರೇತ, ಪಿಶಾಚಿ, ಬ್ರಹ್ಮ ರಾಕ್ಷಸ ಅಪಸ್ಮಾರ, ಭವಸ್ಮಾರ ಭಯ ಭೀತಿಯಿಂದ ನಿವಾರಣೆ ಮತ್ತು ಅನೇಕ ರೋಗಕ್ಕೆ ಭಸ್ಮ ದಿವ್ಯ ಔಷಧಿಯಾಗಿದೆ ಎಂದರು.

ವೇದಮೂರ್ತಿ ಮಲ್ಲಯ್ಯ ಸ್ವಾಮಿ ಹಿರೇಮಠ ಅಧ್ಯಕ್ಷತೆ ವಹಿಸಿದ್ದರು. ವೀರಣ್ಣ ಶೀಲವಂತ, ಬಸವಂತಪ್ಪ ಲವಾರೆ, ಪ್ರೊ. ಸೂರ್ಯಕಾಂತ ಶೀಲವಂತ, ಗಣೇಶ ಆರ್. ರಾಜೋಳೆ, ಚಂದ್ರಕಾಂತ ಸ್ವಾಮಿ, ಜಗದೀಶ ರಾಮಣ್ಣಾ, ಮಲ್ಲಿಕಾರ್ಜುನ ನಂದಿ, ವಿಜಯಲಕ್ಷ್ಮೀ ರಾಜೋಳೆ, ಸರಸ್ವತಿ ಬೆಂಬಳಗೆ ಸೇರಿದಂತೆ ನೂರಾರು ಗವಿಮಠದ ಸದ್ಭಕ್ತರು ಭಾಗವಹಿಸಿದರು. ಕೊನೆಯಲ್ಲಿ ಗುರುವಿನ ಪಾದಕ್ಕೆ ಮಂಗಲ ನೇರವೇರಿತು.

ವಿಜಯ ಕರ್ನಾಟಕ
ಭಾನುವಾರ,25 ಆಗಸ್ಟ್ 2013, ಗುಲ್ಬರ್ಗ

Scanned by CamScanner

# ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ

ಬಸವಕಲ್ಯಾಣ: ಶೈವಾಗಮಗಳ ಪ್ರಕಾರ ಶಿವನೇ ಲೋಕ ಕಲ್ಯಾಣಕ್ಕಾಗಿ ಜಂಗಮ ರೂಪದಿಂದ ಸಂಚರಿಸುತ್ತಾನೆ. ಜಂಗಮನೆಂದರೆ ಚರಲಿಂಗ ಸದಾ ಸಂಚಾರಶೀಲ ಎಂಬುದು ಜಂಗಮ ಪದದ ಅರ್ಥ ಎಂದು ರಾಜೇಶ್ವರನ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು ವಿಶ್ಲೇಷಿಸಿದರು.

ಶ್ರಾವಣ ಮಾಸದ ನಿಮಿತ್ತ ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕದಿಂದ ತ್ರಿಪುರಾಂತದ ಗವಿಮಠದಲ್ಲಿ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ್ದರು.

ಪ್ರೊ.ರುದ್ರೇಶ್ವರ ಸ್ವಾಮಿ ಗೋರ್ಟಾ ವಿಶೇಷ ಉಪನ್ಯಾಸ ನೀಡಿದರು. ನೇತೃತ್ವ ವಹಿಸಿದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು.

ಅಧ್ಯಕ್ಷತೆ ವಹಿಸಿದ ಶರಣಪ್ಪ ಬಿರಾದಾರ್, ಕಾಂಗ್ರೆಸ್ ಮುಖಂಡ ಶಿವರಾಜ ನರಶೆಟ್ಟಿ, ಪ್ರೌಢ ಶಾಲೆ ಮುಖ್ಯಗುರು ವಿಶ್ವನಾಥ ಬಿರಾದಾರ್ ಮಾತನಾಡಿದರು. ಕಸಾಪ ತಾಲೂಕು ಅಧ್ಯಕ್ಷ ಚಂದ್ರಕಾಂತ ಸ್ವಾಮಿ, ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ, ರಾಜಕುಮಾರ ದೇಗಾಂವ, ಜಗದೀಶ ರಾಮಣ್ಣ ಉಪಸ್ಥಿತರಿದ್ದರು.

ರಮೇಶ ರಾಜೋಳೆ ಪ್ರಾಸ್ತಾವಿಕ ಮಾತನಾಡಿದರು. ಸಂಸ್ಥೆ ತಾಲೂಕು ಅಧ್ಯಕ್ಷ ವೀರಣ್ಣ ಶೀಲವಂತ ಸ್ವಾಗತಿಸಿದರು. ಸರಸ್ವತಿ ಬೆಂಬಳಿ ನಿರೂಪಿಸಿದರು. ಪ್ರಾಚಾರ್ಯ ಪ್ರಭುಲಿಂಗಯ್ಯ ಟಂಕಸಾಲಿಮಠ ವಂದಿಸಿದರು. ವೈಷ್ಣವಿ ರಮೇಶ ಪ್ರಾರ್ಥನಾ ಗೀತೆ ಹಾಡಿದರು.



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಶ್ರಾವಣ ಮಾಸದ ನಿಮಿತ್ತ ನಡೆದ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ರುದ್ರೇಶ್ವರ ಸ್ವಾಮಿ ಗೋರ್ಟಾ ಮಾತನಾಡಿದರು. ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶಿವರಾಜ ನರಶೆಟ್ಟಿ, ವಿಶ್ವನಾಥ ಬಿರಾದಾರ್ ಇದ್ದರು.

ವಿಜಯವಾಣಿ ಗುರುವಾರ 22 ಆಗಸ್ಟ್ 2013

# ಮಡಿವಾಳ ಮಾಚಿದೇವ ಶರಣ ಉತ್ಸವ ನಾಳೆ

ಬಸವಕಲ್ಯಾಣ: 12ನೇ ಶತಮಾನದ ಶರಣ ಜೀವಿ ಮಡಿವಾಳ ಮಾಚಿದೇವ ಶರಣ ಉತ್ಸವ ಸಮಾರಂಭ ಸೋಮವಾರ ನಗರದಲ್ಲಿ ಆಯೋಜಿಸಲಾಗಿದೆ.



ಬೆಳಗ್ಗೆ 7ಕ್ಕೆ ಶ್ರೀ ಮಡಿವಾಳ ಮಾಚಿದೇವರ ರುದ್ರಾಭಿಷೇಕ ಪೂಜೆ, ನಂತರ ಮಾಚಿದೇವರ ಭಾವಚಿತ್ರಕ್ಕೆ ಪೂಜೆ ಹಾಗೂ ಶ್ರಾವಣ ಮಾಸದ ಕಾರ್ಯಕ್ರಮ ನಡೆಯಲಿವೆ ಎಂದು ಜಿಲ್ಲಾ ಮಡಿವಾಳ ಸಂಘದ ಅಧ್ಯಕ್ಷ ದಿಗಂಬರ ಮಡಿವಾಳ ತಿಳಿಸಿದ್ದಾರೆ. ದಿವ್ಯ ಸಾನ್ನಿಧ್ಯ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಶ್ರೀ ಸಣ್ಣ ಮಡಿವಾಳ ಮುತ್ಯಾ ವಹಿಸುವರು. ಬೆಳವಿಯ ಚರಂತೇಶ್ವರ ಮಠದ ಶ್ರೀ ಶರಣಬಸವ ದೇವರು ಉದ್ಘಾಟಿಸುವರು. ಶಾಸಕ ಮಲ್ಲಿಕಾರ್ಜುನ ಖೂಬಾ ಅಧ್ಯಕ್ಷತೆ ವಹಿಸುವರು. ಉಪನ್ಯಾಸಕ ಎಸ್.ಜಿ. ಹುಗ್ಗೆಪಾಟೀಲ್ ಅನುಭಾವ ಮಂಡಿಸಲಿದ್ದಾರೆ. ಈ ವೇಳೆ ವಿದ್ಯಾಧರ ಗುರೂಜಿ, ಡಾ. ಎ.ದಯಾನಂದ, ಗಂಗಾದೇವಿ ಮಡಿವಾಳ, ಮಲ್ಲಣ್ಣ ಮಡಿವಾಳ ಅವರಿಗೆ ಸನ್ಮಾನ ನಡೆಯಲಿದೆ. ಸಮಾಜದ ಬಾಂಧವರು, ಶರಣ ಜೀವಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಕೋರಿದ್ದಾರೆ.

ವಿಜಯವಾಣಿ ಭಾನುವಾರ 25 ಆಗಸ್ಟ್ 2013

# ಮಂಠಾಳ:ಪುರಾಣ ಪ್ರಾರಂಭ



ಬಸವಕಲ್ಯಾಣ: ಶ್ರಾವಣ ಮಾಸದ ನಿಮಿತ್ಯವಾಗಿ ತಾಲೂಕಿನ ಮಂಠಾಳ ಗ್ರಾಮದ ಮಹಾದೇವ ಮಂದಿರದಲ್ಲಿ ಶ್ರೀ ಸೋಲಾಪೂರ ಸಿದ್ರಾಮೇಶ್ವರ ಅವರ ಚರಿತ್ರೆ ಕುರಿತು ಪುರಾಣ ಕಾರ್ಯಕ್ರಮ ಪ್ರಾರಂಭಿಸಲಾಯಿತು. ಪುರಾಣ ಕಾರ್ಯಕ್ರಮವನ್ನು ಚಾಲನೆ ನೀಡಿದ ಮಾತನಾಡಿದ ತ್ರಿಪುರಾಂತದ ಪೂಜ್ಯ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಶ್ರಾವಣ ಮಾಡದ ಶ್ರವಣ ಮಾಡಬೇಕು. ಕಂಪ್ಯೂಟರ್ ಯೂಗಗಳಲ್ಲಿ ವಿಚಾರ ಸಾಕಷ್ಟು ಹುಟ್ಟಿದರು, ಅಧ್ಯಾತ್ಮಿಕಯಿಂದ ಶ್ರದ್ಧೆ, ನಿಷ್ಠಾವಂತರಾಗಿ ಕಾಯಕದಲ್ಲಿ ತೊಡಬೇಕು. ಅಧ್ಯಾತ್ಮಿಕ ಭಾವನೆ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಸಾನಿಧ್ಯ ವಹಿಸಿದ ವಿರಕ್ತ ಮಠದ ಪೂಜ್ಯ ಶ್ರೀ ಗುಹೇಶ್ವರ ಮಹಾಸ್ವಾಮಿಗಳು ಮಾತನಾಡಿ ಶ್ರಾವಣ ಮಾಸದಲ್ಲಿ ಪ್ರತಿನಿತ್ಯ ಆಧ್ಯಾತ್ಮಿಕ ಜೊತೆಗೆ ಕಾಯಕ ಶ್ರೇಷ್ಠ ಕಾರ್ಯ ತೊಡಗಿಸಿ ಯುವಕರು ಆಸಕ್ತಿಯನ್ನು ತೊಡಿಸಿಕೊಂಡಿದ್ದಾರೆ. ಹಿರಿಯ ಮಾರ್ಗದರ್ಶನ ಯೊಂದಿಗೆ ಕೆಲಸ ಕಾರ್ಯಗಳಿಗೆ ಎಲ್ಲರು ಉತ್ಸಾಹಿಗಳಾಗಿ ಆಧ್ಯಾತ್ಮಿಕ ಕಡೆ ಮನೆಯನ್ನು ಮಾಡಬೇಕು ಎಂದು ತಿಳಿಸಿದರು.

ಶುಕ್ರವಾರ ಆಗಸ್ಟ 09– 2013

ಬಸವಕಲ್ಯಾಣ. ಇಲ್ಲಿನ ಈಶ್ವರ ನಗರದ ರೇವಣಸಿದ್ಧೇಶ್ವರ ಮಂದಿರದಲ್ಲಿ ಪ್ರತಿಷ್ಠಾಪಿಸುತ್ತಿರುವ ರೇಣುಕಾಚಾರ್ಯ ಮೂರ್ತಿಯ ಭವ್ಯ ಮೆರವಣಿಗೆಯಲ್ಲಿ ಮಹಾನಂದಾ ಗಂಗಾಧರ ಸಿದ್ರಾಮಗೋಳ ದಂಪತಿಗಳ ಸಂಕಲ್ಪದಂತೆ ಮೂರ್ತಿ ಪ್ರತಿಷ್ಠಾಪಿಸುತ್ತಿದ್ದು ತ್ರಿಪೂರಾಂತ ಪೂಜ್ಯರಾದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಕಲ್ಯಾಣಪ್ಪಾ ಸಿದ್ರಾಮಗೋಳ, ಮಲ್ಲಿಕಾರ್ಜುನ ಶಾಸ್ತ್ರೀ, ವೀರಣ್ಣ ಶೀಲವಂತ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಸಂಯುಕ್ತ ಕರ್ನಾಟಕ । ಕಲಬುರ್ಗಿ । ಸೆಪ್ಟೆಂಬರ್ । 3 । 2013



ಪತಂಜಲಿ ಯೋಗ ಸಮಿತಿ, ಭಾರತ ಸ್ವಾಭಿಮಾನ ಟ್ರಸ್ಟ್‌ನಿಂದ ಬಸವಕಲ್ಯಾಣದ ಶಿವಯೋಗಿ ಸಿದ್ಧರಾಮೇಶ್ವರ ಕಾಲೇಜಿನಲ್ಲಿ ನಡೆದ ಆರೋಗ್ಯ ಅರಿವು ಕಾರ್ಯಕ್ರಮದಲ್ಲಿ ಆಚಾರ್ಯ ನರೇಂದ್ರಜಿ ಮಾತನಾಡಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ.ಬಸವಾಜ ಸ್ವಾಮಿ, ಶಾಂತಲಿಂಗ ಮಠಪತಿ ಉಪಸ್ಥಿತರಿದ್ದರು.

ಶನಿವಾರ 31 ಆಗಸ್ಟ್ 2013 ವಿಜಯವಾಣಿ

Scanned by CamScanner

ಸೋಮವಾರ 2 ಸೆಪ್ಟೆಂಬರ್ 2013

ವಿಜಯವಾಣಿ

■ ತ್ರಿಪುರಾಂತ ಗವಿ ಮಠದಲ್ಲಿ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ...

# ಸಕಲ ಬ್ರಹ್ಮಾಂಡದ ಉತ್ಪತ್ತಿಗೆ ಶಿವನೇ ಮೂಲ



ತ್ರಿಪುರಾಂತ ಗವಿ ಮಠದಲ್ಲಿ ನಡೆದ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಡಾ.ವಿ.ಎಸ್.ಮಠಪತಿ ಮಾತನಾಡಿದರು. ಶ್ರೀ ವೀರುಪಾಕ್ಷ ಶಿವಾಚಾರ್ಯರು, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ.ಬಸವರಾಜ ಸ್ವಾಮೀಜಿ, ರಮೇಶ ಸ್ವಾಮಿ, ಎ.ಜಿ.ಪಾಟೀಲ್ ಇದ್ದರು.

**ಬಸವಕಲ್ಯಾಣ:** ಸಕಲ ಬ್ರಹ್ಮಾಂಡಗಳ ಉತ್ಪತ್ತಿ ಮತ್ತು ಲಯಗಳಿಗೆ ಶಿವನೇ ಮೂಲಕಾರಣ. ಅವನ ವಾಚಕವಾದ ಈ ಪಂಚಾಕ್ಷರ ಮಹಾಮಂತ್ರವು ಸಕಲ ಮಂತ್ರಗಳಿಗೆ ಅಧಿಕಾರಣವಾಗಿರುತ್ತದೆ ಎಂದು ಹುಡಗಿಯ ಶ್ರೀ ವೀರುಪಾಕ್ಷ ಶಿವಾಚಾರ್ಯರು ವಿಶ್ಲೇಷಿಸಿದರು.

ಶ್ರಾವಣ ಮಾಸದ ನಿಮಿತ್ತ ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆಯು ತ್ರಿಪುರಾಂತದ ಗವಿ ಮಠದಲ್ಲಿ ಆಯೋಜಿಸಿದ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿದ್ದ ಅವರು, ನಮಃ ಎಂಬ ಶಬ್ದವನ್ನು ಮೊದಲು ನುಡಿದು ನಂತರ ಶಿವಾಯ ಎನ್ನಬೇಕು. ಈ ಎರಡು ಶಬ್ದಗಳ ಸಂಯುಕ್ತ ಸ್ವರೂಪವೇ ಪಂಚಾಕ್ಷರ ಮಹಾಮಂತ್ರದ ಸ್ವರೂಪ ಎಂದರು.

ಸಂಜೀವಿನಿ ಆಯುರ್ವೇದ ಆಸ್ಪತ್ರೆಯ ಡಾ.ಬಸವರಾಜ ಸ್ವಾಮಿ ವಿಶೇಷ ಉಪನ್ಯಾಸ ನೀಡಿ, ಲಿಂಗದೊಂದಿಗೆ ಮಾತನಾಡುವುದೇ ಮಂತ್ರ. ಪ್ರತಿಯೊಬ್ಬ ಸಾಧಕರು ತಮ್ಮ ತಮ್ಮ ಸಮರ್ಥ ಗುರುಗಳಿಂದ ಮಂತ್ರ ದೀಕ್ಷೆ ಪಡೆದು ಜಪಾಭ್ಯಾಸ ಪ್ರಾರಂಭಿಸಬೇಕು. ಗುರು ಉಪದೇಶ ಪಡೆಯದೇ ಮಾಡಿದ ಜಪ ಫಲಕಾರಿಯಾಗದು. ಕಾರಣ ವೀರಶೈವ ಸಿದ್ಧಾಂತದಲ್ಲಿ ದೀಕ್ಷಾ ಸಂಸ್ಕಾರ ಬಹು ಮಹತ್ವದ್ದು ಎಂದರು.

ಡಾ.ವಿ.ಎಸ್.ಮಠಪತಿ ಮಾತನಾಡಿ, ಪಂಚಾಕ್ಷರ ಮಹಾಮಂತ್ರದ ಮಹಿಮೆ ಅವರ್ಣನೀಯವಾಗಿದೆ ಎಂದರು. ನೇತೃತ್ವ ವಹಿಸಿದ್ದ ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ರಮೇಶ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಎ.ಜಿ.ಪಾಟೀಲ್, ಶ್ರೀ ರೇವಣಸಿದ್ಧ ಹಿರೇಮಠ, ಪ್ರೊ.ರುದ್ರೇಶ ಮಠಪತಿ, ಪ್ರೊ.ಸೂರ್ಯಕಾಂತ, ಕಸಾಪ ಅಧ್ಯಕ್ಷ ಚಂದ್ರಕಾಂತ ಸ್ವಾಮಿ ಉಪಸ್ಥಿತರಿದ್ದರು. ಸಂಸ್ಥೆ ಅಧ್ಯಕ್ಷ ವೀರಣ್ಣ ಶೀಲವಂತ ಸ್ವಾಗತಿಸಿದರು. ಸವಿತಾ ರಮೇಶ ವಂದಿಸಿದರು. ರಮೇಶ ರಾಜೋಳೆ ನಿರೂಪಿಸಿದರು.



ಹುಮನಾಬಾದ್ ತಾಲೂಕಿನ ಸೆಡೋಳಾಪುರ ಹಿರೇಮಠದಲ್ಲಿ ಶನಿವಾರ ಶ್ರೀ ಸಿದ್ಧಲಿಂಗ ಶಿವಾಚಾರ್ಯರ ಶ್ರಾವಣ ಮಾಸದ ತಪಾನುಷ್ಠಾನ ಮುಕ್ತಾಯ ಹಾಗೂ ಧರ್ಮಸಭೆಯಲ್ಲಿ ಶ್ರೀ ಸಿದ್ಧಲಿಂಗ ಶಿವಾಚಾರ್ಯರು, ಹುಡಗಿ, ಮಹೇಕರ್, ಬಸವಕಲ್ಯಾಣ ಶ್ರೀ ಇದ್ದರು.

ಬುಧವಾರ 4 ಸೆಪ್ಟೆಂಬರ್ 2013

ವಿಜಯವಾಣಿ

# ಅರಿವಿಲ್ಲದೆ ಮನ ಪರಿವರ್ತನೆಯೇ ದೇವರ ಶಕ್ತಿ






ಬಸವಕಲ್ಯಾಣದ ಈಶ್ವರ ನಗರ ಶ್ರೀ ರೇವಣಸಿದ್ಧೇಶ್ವರ ಮಂದಿರದಲ್ಲಿ ಸೋಮವಾರ ಶ್ರೀ ರೇಣುಕಾಚಾರ್ಯ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಶ್ರೀ ಚನ್ನಮಲ್ಲ ಶಿವಯೋಗಿ ಶಿವಾಚಾರ್ಯರು, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಮಹಾನಂದಾ ಗಂಗಾಧರ ಸಿದ್ರಾಮಗೋಳ, ಕಲ್ಯಾಣಪ್ಪ ಸಿದ್ರಾಮಗೋಳ, ಮಲ್ಲಿಕಾರ್ಜುನ ಶಾಸ್ತ್ರಿ ಉಪಸ್ಥಿತರಿದ್ದರು. ಸಾಂಸ್ಕೃತಿಕ ವೈಭವಗಳೊಂದಿಗೆ ಶ್ರೀ ರೇಣುಕಾಚಾರ್ಯರ ಮೂರ್ತಿ ಮೆರವಣಿಗೆ ಜರುಗಿತು.

**ಬಸವಕಲ್ಯಾಣ:** ಮನಸ್ಸಿಗೆ ಶಾಂತಿ-ನೆಮ್ಮದಿ ನೀಡುವ ಪವಿತ್ರ ಸ್ಥಳವೇ ದೇವಾಲಯ. ಇಲ್ಲಿ ಅರಿವಿಗೆ ಬಾರದೇ ಮನ ಪರಿವರ್ತನೆಯಾಗುತ್ತದೆ. ಇದೇ ದೇವರ ಶಕ್ತಿ ಎಂದು ಬಡದಾಳ ತೇರಿನ ಮಠದ ಶ್ರೀ ಚನ್ನಮಲ್ಲ ಶಿವಯೋಗಿ ಶಿವಾಚಾರ್ಯರು ನುಡಿದರು.

ಈಶ್ವರ ನಗರದ ಶ್ರೀ ರೇವಣಸಿದ್ಧೇಶ್ವರ ಮಂದಿರದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮ ನೆರವೇರಿಸಿ ಆಶೀರ್ವಚನ ನೀಡಿದ ಶ್ರೀಗಳು, ಭಕ್ತಿ- ಶ್ರದ್ಧೆಯಿಂದ ನಂಬಿ ನಡೆದಾಗ ಮಾತ್ರ ಶಾಂತಿ-ನೆಮ್ಮದಿಯ ಬದುಕು ಸಾಧ್ಯವಾಗುತ್ತದೆ. ಸಾರ್ಥಕ ಬದುಕಿಗೆ ಗುರುವಿನ ಮಾರ್ಗದರ್ಶನ ಅವಶ್ಯಕ ಎಂದರು.

ಜೀವನದಲ್ಲಿ ದೇವರಿದ್ದಾನೆ ಎನ್ನುವುದು ಹಾಗೂ ಹುಟ್ಟಿದ ಮನುಷ್ಯನಿಗೆ ಸಾವು ನಿಶ್ಚಿತ ಎನ್ನುವ ಸತ್ಯ ಮರೆಯಬಾರದು. ಜತೆಗೆ ಬೇರೆಯವರಿಗೆ ತಾವು ಮಾಡಿದ ಉಪಕಾರ ಮತ್ತು ಬೇರೆಯವರು ತಮಗೆ ಮಾಡಿದ ಅಪಕಾರವನ್ನು ಮರೆತು ಬಿಡಬೇಕು. ಧರ್ಮದ ದಾರಿಯಲ್ಲಿ ನಡೆದು ಸಾರ್ಥಕ ಬದುಕು ಕಂಡುಕೊಳ್ಳಬೇಕು ಎಂದರು.

ನೇತೃತ್ವ ವಹಿಸಿದ್ದ ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ಮನಸು-ಮನಸುಗಳನ್ನು ಜೋಡಿಸುವ ಕೆಲಸ ಧರ್ಮದಿಂದ ಸಾಧ್ಯವಿದ್ದು, ಉತ್ತಮ ಸಂಸ್ಕಾರ ಮೈಗೂಡಿಸಿಕೊಂಡು ಧರ್ಮದ ಮಾರ್ಗದಲ್ಲಿ ಎಲ್ಲರೂ ನಡೆಯಬೇಕಾದ ಅವಶ್ಯಕತೆ ಇದೆ ಎಂದರು.

ಸಾನ್ನಿಧ್ಯ ವಹಿಸಿದ್ದ ಶ್ರೀನಿವಾಸ ಸರಡಗಿಯ ಶ್ರೀ ಗಿರೆಪ್ಪ ಮುತ್ತ್ಯಾ ಮಾತನಾಡಿದರು. ವೇದಮೂರ್ತಿ ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಹಾಗೂ ಬಸವತೀರ್ಥಯ್ಯ ಕಾಡಾದಿ ರುದ್ರಾಭಿಷೇಕ ನೆರವೇರಿಸಿದರು. ಕಲ್ಯಾಣಪ್ಪ ಸಿದ್ರಾಮಗೋಳ, ಷಣ್ಮುಖಪ್ಪ ಕಣಸೂರೆ, ಸಂಗಮೇಶ, ಲಕ್ಷ್ಮೀಕಾಂತ ಸಿದ್ರಾಮಗೋಳ, ಮಹೇಶ ಹಾಲಪ್ಪ, ರಾಜು ಪಿಸ್ತಿ, ಗೌಡಪ್ಪಗೌಡ ಪೊಲೀಸ್ ಪಾಟೀಲ್, ಶರಣಯ್ಯ ಸ್ವಾಮಿ, ಮಲ್ಲಯ್ಯ ಸ್ವಾಮಿ ಹಿರೇಮಠ, ರೇವಣಸಿದ್ದಯ್ಯ ವಸ್ತ್ರದ, ವಿನೋದ ಹುಡಗಿ ಉಪಸ್ಥಿತರಿದ್ದರು.

ಸಂಚಾಲನೆ ಸಂಗಮೇಶ ನಾಗೂರೆ ನೆರವೇರಿಸಿದರು. ಗುಲ್ಬರ್ಗದ ಮಹಾನಂದಾ ಗಂಗಾಧರ ಸಿದ್ರಾಮಗೋಳ ಅವರ ಸಂಕಲ್ಪದಂತೆ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮ ಅದ್ದೂರಿಯಿಂದ ಜರುಗಿತು.

13-9-13

Scanned by CamScanner



ಬಸವಕಲ್ಯಾಣ: ಇಲ್ಲಿಯ ಅಕ್ಕಮಹಾದೇವಿ ಆವರಣದಲ್ಲಿ ಹಮ್ಮಿಕೊಂಡ ಧರ್ಮೋತ್ತೇಜಕ ಧರ್ಮಸಮಾವೇಶದ ಸಮಾರೂಪ ಸಮಾರಂಭದಲ್ಲಿ ಪಾಲ್ಗೊಂಡ ಭಕ್ತ ಸಾಗರವನ್ನು ಕಾಣಬಹುದು.

Scanned by CamScanner




Scanned by CamScanner




Scanned by CamScanner



Scanned by CamScanner




Scanned by CamScanner




Scanned by CamScanner




Scanned by CamScanner









Scanned by CamScanner



Scanned by CamScanner



ಜಗದ್ಗುರು ರೇಣುಕಾಚಾರ್ಯರು ಪರಶಿವನ ಆಜ್ಞಾನುಸಾರವಾಗಿ ಕಾಂಚಿ

Scanned by CamScanner




Scanned by CamScanner